ಇದೆ. ಎರಡನೆಯದಾಗಿ, proceedings ಸಾಗುವಳಿ ಚೀಟಿಯಲ್ಲಿ Issue Register, O.M., Mutation ಯಾವುದಾದರೂ 3 ದಾಖಲೆಗಳಿದ್ದರೆ ಸಾಕು, ಪೋಡಿ ಮಾಡಬಹುದೆಂದು ಹಿಂದಿನ ಸರ್ಕಾರ ಇದ್ದಾಗಲೂ ಕಾನೂನು ಇತ್ತು. ನಮೂನೆ 1 ರಿಂದ 5 ಇರುವುದನ್ನು ಸರಳೀಕರಣಗೊಳಿಸಿ 3 ದಾಖಲೆಗಳಿದ್ದರೆ ಸಾಕು ಎಂದು ಮಾಡಲಾಗಿತ್ತು. ನಂತರ (1) possession ನಲ್ಲಿರಬೇಕು ಮತ್ತು ಸಾಗುವಳಿ ಮಾಡುತ್ತಿರಬೇಕು. (2) ಅವರ ಹೆಸರಿನಲ್ಲಿ ಪಹಣಿಯಾಗಿರಬೇಕು ಮತ್ತು ಖಾತೆ ಇರಬೇಕು ಎಂದು ಅದನ್ನು 2 ಕ್ಕೆ ಸೀಮಿತಗೊಳ್ಳಿಸಿ, ಆ ರೀತಿಯಾಗಿಲ್ಲದಿದ್ದರೆ ಮಿಸ್ಸಿಂಗ್ ರೆಕಾರ್ಡ್ ಕಮಿಟಿಗೆ ಹಾಕಿ ಎಂದು ಡಿ.ಸಿ. ಯವರ ನೇತೃತ್ವದಲ್ಲಿ ಮಿಸ್ಸಿಂಗ್ ರೆಕಾರ್ಡ್ ಕಮಿಟಿಯನ್ನು ರಚಿಸಿ, ಆ ಕಮಿಟಿಗೆ ಕಳುಹಿಸಿ, ಅದರ ಮೂಲಕ ಪೋಡಿ ಮಾಡಲಾಗುತ್ತಿದೆ. ಸುಮಾರು 30 ರಿಂದ 40 ವರ್ಷಗಳ ಹಿಂದೆಯೇ ಮಂಜೂರಾಗಿ ಎಲ್ಲಾ ದಾಖಲೆಗಳು ರೈತರ ಹತ್ತಿರ ಇದೆ. ಹಾಗೆಯೇ ತಾಲ್ಲೂಕು ಕಛೇರಿಗಳಲ್ಲಿ ಅದರ ಕಡತ ಇದ್ದರೂ ಕೂಡ ಆ ರೈತ ಅರ್ಜಿ ಹಾಕಿ ಅದರ ಬಗ್ಗೆ ಮಾಹಿತಿ ಕೇಳಿದರೆ, ಕಡತ ಲಭ್ಯವಿಲ್ಲವೆಂದೂ ಬಹಳಷ್ಟು ರೈತರಿಗೆ ಉತ್ತರ ಕೊಟ್ಟಿದ್ದಾರೆ. ಇದನ್ನು ನೋಡಿದಾಗ ಏನಾಗುತ್ತಿದೆ ಎಂಬುದು ಎಲ್ಲರಿಗೂ ಗೊತ್ತಿದೆ ಅಲ್ಲವೇ? ಅಲ್ಲಿರತಕ್ಕಂಥ ಕೆಲವು ಅಧಿಕಾರಿಗಳಿಗೆ ಏನಾದರೂ ಸ್ವಲ್ಪ ದಕ್ಷಿಣೆ ಕೊಟ್ಟರೆ ಕಡತ ಇದೆ ಎಂದು ಮಾಹಿತಿ ಕೊಡಬಹುದು. ಒಂದು ವೇಳೆ ದಕ್ಷಿಣೆ ಕೊಡಲು ಸಾಧ್ಯವಿಲ್ಲದವರಿಗೆ ಯಾವುದೇ ಮಾಹಿತಿ ಸಿಗದೇ ವಾಪಸ್ಸು ಆಗುವಂಥ ಪದ್ಧತಿ ಎಲ್ಲಾ ಕಡೆ ನಡೆಯುತ್ತಿದೆಯೇ, ಇಲ್ಲವೇ ಎಂಬುದು ನನಗೂ ಸರಿಯಾಗಿ ಗೊತ್ತಿಲ್ಲ. ಆದರೆ, ನಮ್ಮ ಹೊಸಕೋಟೆ ತಾಲ್ಲೂಕಿನಲ್ಲಿ ಬಹಳ ಯಥೇಚ್ಛವಾಗಿ ನಡೆಯುತ್ತಿದೆ. ಅದರಲ್ಲಿಯೂ ಒಂದು ಎಕರೆ, ಎರಡು ಎಕರೆ ಜಮೀನಿಟ್ಟುಕೊಂಡಿರುವ ಬಡವರಿಗೆ ಬಹಳ ಅನ್ಯಾಯವಾಗುತ್ತಿದೆ. ರಾಜಕೀಯ ಬಲ, ಹಣ ಬಲ, ತೋಳ್ಬಲ ಇರುವಂಥವರು ಹೇಗೋ ಕೆಲಸ ಮಾಡಿಸಿಕೊಂಡು ಹೋಗುತ್ತಾರೆ. ಆದರೆ, ಅದ್ಯಾವುದೇ ಶಕ್ತಿಯಿಲ್ಲದೇ ಇರುವಂಥ ಬಡವರಿಗೆ ತಾಲ್ಲೂಕು ಕಛೇರಿಗೆ ಹೋಗಿ ಕೆಲಸ ಮಾಡಿಸುವುದು ಬಹಳ ಕಷ್ಟವಾಗಿದೆ. ಎಷ್ಟರ ಮಟ್ಟಿಗೆ ಕಷ್ಟವಾಗುತ್ತಿದೆ ಎಂದರೆ ಕಣ್ಣೀರಿನಲ್ಲಿಯೇ ಕೈತೊಳೆಯುವಷ್ಟು ಕಷ್ಟವಾಗಿದೆ. ಅವರು ನಮ್ಮ ಹತ್ತಿರ ಅವರ ಸಂಕಷ್ಟವನ್ನು ಹೇಳಿದಾಗ 'ಏನಪ್ಪಾ, ನಿಮ್ಮಗೆಲ್ಲಾ ಇಷ್ಟೆಲ್ಲಾ ಕಷ್ಟವಾಗುತ್ತಿದೆಯೇ?' ಎಂದು ನಮ್ಮ ಕಣ್ಣಿನಲ್ಲಿಯೇ ನೀರು ಬರುತ್ತದೆ. ಕೇವಲ ಒಂದು ಎಕರೆ, ಎರಡು ಎಕರೆ ಜಾಗ ಮಾತ್ರ ಇಟ್ಟುಕೊಂಡಿರುತ್ತಾರೆ. ನೂರಾರು ಎಕರೆ ಜಮೀನು ಇಟ್ಟುಕೊಂಡಿರುವವರ ಕೆಲಸ ಹೇಗೋ ನಡೆದುಕೊಂಡು ಹೋಗುತ್ತದೆ. ಏಕೆಂದರೆ, ಸರ್ವಬಲ ಇಟ್ಟುಕೊಂಡವರ ಕೆಲಸ ಆರಾಮವಾಗಿ ನಡೆಯುತ್ತದೆ. ಯಾವುದೇ ಶಕ್ತಿ ಇಲ್ಲದಂಥ ಬಡವರ ಕೆಲಸವಾಗುತ್ತಿಲ್ಲ ಎಂಬುವುದೇ ನೋವಿನ ಸಂಗತಿಯಾಗಿದೆ. ಪಾಪ ಮಾನ್ಯ ಸಚಿವರು ಒಳ್ಳೆಯವರಾಗಿದ್ದು, ಅವರ ತಂದೆಯೂ ಸಹ ರಾಜಕಾರಣದಲ್ಲಿ ಹೇಗೆ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದ್ದರೂ ಎಂಬುದನ್ನು ಹಿಂದಿನಿಂದಲೂ ನಾವು ನೋಡಿಕೊಂಡು ಬಂದಿದ್ದೇವೆ. ಅದರಂತೆ ಮಾನ್ಯ ಸಚಿವರು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಆದರೆ, ಕೆಲವೊಂದು ವಿಚಾರದ ಕಡೆ ಗಮನಹರಿಸಬೇಕಾಗುತ್ತದೆ. ಆನ್‌ಲೈನ್ ಸಲ್ಲಿಸುವಂಥ ಅರ್ಜಿಗಳೆಲ್ಲವೂ ಕ್ಲಿಯರ್ ಆಗುತ್ತಿಲ್ಲ. ಒಂದು ವೇಳೆ ದಕ್ಷಿಣೆ ಕೊಟ್ಟರೆ ಸ್ವಲ್ಪ ಅರ್ಜಿ ಕ್ಲಿಯರ್ ಆಗುತ್ತಿವೆ. ಇಲ್ಲದಿದ್ದರೆ ಆ ರೈತರಿಗೆ 'ನಾಳೆ ಕಛೇರಿ ಹತ್ತಿರ ಬಾ, ಮನೆ ಹತ್ತಿರ ಬಾ' ಎಂದು ಹೇಳಿ ಪ್ರತಿನಿತ್ಯ ಅಲೆದಾಡಿಸುತ್ತಾರೆ. ದರಖಾಸ್ತು ಪೋಡಿ ದುರಸ್ತಿ ಮಾಡುವಾಗ ಅಕ್ಕಪಕ್ಕದ ರೈತರಿಗೆ ನೋಟಿಸ್ ನೀಡುವುದೇ ಇಲ್ಲ. ಯಾವಾಗಲೋ ಬಂದು ಸರ್ವೆ ಮಾಡಿಕೊಂಡು ಹೋಗಿಬಿಡುತ್ತಾರೆ. ಇದರಿಂದ ಅಕ್ಕಪಕ್ಕದವರಿಗೆ ಗೊತ್ತಾಗುವುದೇ ಇಲ್ಲ. ಸರ್ವೆ ಮಾಡಿ, sketch ಮಾಡಿಕೊಂಡು ಹೋದ ಮೇಲೆ ಅಕ್ಕಪಕ್ಕದವರಿಗೆ ಗೊತ್ತಾಗುತ್ತದೆ. ಸ್ವಾಧೀನ overlap ಆಗುತ್ತದೆ. ಈ ಸ್ವಾಧೀನ ವಿಚಾರಕ್ಕೆ ಅಕ್ಕಪಕ್ಕದವರ ಮಧ್ಯೆ ಗಲಾಟೆಗಳಾಗುತ್ತವೆ. ಅವರು ವಾಸಿಸುವುದೇ ಒಂದು ಕಡೆ, ಇಲಾಖೆಯವರು ಸರ್ವೆ ಮಾಡುವುದೇ ಮತ್ತೊಂದು ಕಡೆ ಇರುತ್ತದೆ ಅಥವಾ ಅವರು possession ನಲ್ಲಿರುವದೇ ಇನ್ನೊಂದು ಕಡೆ ಇರುತ್ತದೆ. ಇದ್ದರಿಂದಾಗಿ ರೈತರು ಹಾಗೂ ಸರ್ವೆ ಮಾಡುವವರ ಮಧ್ಯೆ ಗಲಾಟೆಯಾಗಿ ಪೋಲೀಸ್ ಠಾಣೆವರೆಗೂ ಹೋಗಿ ಪ್ರಕರಣ ದಾಖಲಿಸುವಂಥ ಪ್ರಸಂಗ ಉದ್ಭವಿಸುತ್ತದೆ.

ನಕಲಿ ದಾಖಲೆಗಳನ್ನು ಸೃಷ್ಟಿಸಿಕೊಂಡು ಇ.ಸಿ. ಮಾಡಿಸಿ, ದುರಸ್ತಿಗೊಳಿಸಿದ ಮೇಲೆ ಎಲ್ಲಾ ದಾಖಲೆಗಳಿರುವುದರಿಂದ ಅಂತಹ ಜಾಗಗಳು ಸರಳವಾಗಿ ಪೋಡಿಯಾಗುತ್ತವೆ. ಆದರೆ, ಮೂಲ ದಾಖಲೆ ಇರುವಂಥ ರೈತರ ಜಮೀನಿಗೆ ಪೋಡಿಯಾಗುವುದಿಲ್ಲ. ಬೋಗಸ್ ದಾಖಲೆ ಇರುವಂಥವರು ಪೋಡಿ ಮಾಡಿಕೊಂಡು ಬಿಡುತ್ತಾರೆ. ನಮೂನೆ-53 ರಲ್ಲಿ ಅರ್ಜಿ ಸಲ್ಲಿಸಿ, ಅದೇ possession ನಲ್ಲಿದ್ದುಕೊಂಡು ಸುಮಾರು 10 ವರ್ಷಗಳಿಂದ ಉಳುಮೆ ಮಾಡಿಕೊಂಡು ಬರುತ್ತಿರುವವರ ಜಾಗವೂ ಪೋಡಿಯಾಗುತ್ತಿಲ್ಲ. ಆದರೆ, ನಕಲಿ ದಾಖಲೆ ಇರುವಂಥವರಿಗೆ ನಮೂನೆ-53 ಅರ್ಜಿ ಸೇರಿಸಿ ಹಿಂದಿನ ಯಾವುದೋ ಒಂದು ದಿನಾಂಕವನ್ನು ನಮೂದಿಸಿ, Issue Register ನಲ್ಲಿ ಸೇರಿಸಿ ಬಿಡುತ್ತಾರೆ. ಇದರಿಂದ ಆತನ ಹತ್ತಿರ ಎಲ್ಲಾ ದಾಖಲೆಗಳಿದ್ದು, ರೈತನ ಹತ್ತಿರ ಎರಡು-ಮೂರು ದಾಖಲೆಗಳು ಮಾತ್ರ ಇರುತ್ತವೆ. ಇದರಿಂದ ನಕಲಿ ದಾಖಲೆ ಇರುವವರಿಗೆ ಪೋಡಿ ಮಾಡಿ, ಮೂಲ ದಾಖಲೆ ಇರುವವರ ಪೋಡಿ ಆಗುವುದಿಲ್ಲ. ಇಂತಹ ಬೇಕಾದಷ್ಟು ಪ್ರಕರಣಗಳಿವೆ. ಈ ಸಂಬಂಧ ನಾನು 10 ಅಂಶಗಳನ್ನು ಮಾಡಿಕೊಂಡಿದ್ದು, ಅದರ ಪ್ರತಿಯನ್ನು ಮಾನ್ಯ ಸಚಿವರಿಗೆ ಸಲ್ಲಿಸುತ್ತೇನೆ. ಅದರ ಬಗ್ಗೆ ಸ್ವಲ್ಪ ಪರಿಶೀಲನೆ ಮಾಡಬೇಕು. 100 ಎಕರೆ ಗೋಮಾಳ ಜಮೀನಿನಲ್ಲಿ 50 ಎಕರೆಗೆ ಗ್ರ್ಯಾಂಟ್ ಆಗಿ, ಆ ಪಹಣಿಯಲ್ಲಿ 50 ಎಕರೆ ಬಾಕಿ ಉಳಿದಿರುತ್ತದೆ. ಆದರೆ, 50 ಎಕರೆ ಬಾಕಿ ಇರುವ ಬದಲು 75 ಎಕರೆ ಉಳಿದಿರುತ್ತದೆ. 75 ಎಕರೆ ಗೋಮಾಳ ಜಮೀನು ಇದೆ ಎಂದು ಅರ್ಜಿ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಲ್ಲಿಸುತ್ತಾರೆ. ಆದರೆ, ಅಲ್ಲಿ ಇರುವುದು ಕೇವಲ 50 ಎಕರೆ ಮಾತ್ರ. ಅವರು 3 ರಿಂದ 10ನ್ನು match ಮಾಡಬೇಕು ಆದರೆ ಮಾಡುವುದಿಲ್ಲ.

ಸಭಾಪತಿಯವರು:– ಮಾನ್ಯ ಸಚಿವರೇ, ತಾವು ಉತ್ತರವನ್ನು ನೀಡಿ.

ಶ್ರೀ ಕೃಷ್ಣ ಬೈರೇಗೌಡ (ಕಂದಾಯ ಸಚಿವರು):– ಮಾನ್ಯ ಸಭಾಪತಿಯವರೇ, ಬಹುತೇಕವಾಗಿ ಮಾನ್ಯ ಸದಸ್ಯರು ಹೇಳಿರುವಂಥ ವಿಷಯವು ಸತ್ಯಸಂಗತಿಗಳಿಂದ ಕೂಡಿವೆ. ಕೆಲವೊಂದು ಹಿಂದೆ–ಮುಂದೆ ಆಗಿರಬಹುದು. ಆದರೆ, ಮಾನ್ಯ ಸದಸ್ಯರು ಮಾತನಾಡುವಾಗ ಹಿಂದಿನಿಂದಲೂ ನಡೆದುಕೊಂಡು ಬಂದಿರುವಂಥ ವಿಷಯಗಳನ್ನು ಹೇಳಿದ್ದಾರೆ. ಹಾಗಾಗಿ, ಮಾನ್ಯ ಸದಸ್ಯರ ಅರ್ಥೈಸುವಿಕೆಯನ್ನು ಸ್ವಲ್ಪ ಸರಿಪಡಿಸಲಿಕ್ಕೆ ಬಯಸುತ್ತೇನೆ. ಹಿಂದಿನ ಎರಡು ಸರ್ಕಾರದ ಅವಧಿಯಲ್ಲಿ ಅವರು ಅರ್ಜಿ ಕೊಡಬೇಕಾಗಿದ್ದು, ಅದಕ್ಕೆ 'ಏಕವ್ಯಕ್ತಿ ಪೋಡಿ' ಎಂದು ಕರೆಯಲಾಗುತ್ತಿತ್ತು. ಅಂದರೆ, ಯಾರು ಅರ್ಜಿ ಸಲ್ಲಿಸುತ್ತಾರೆ, ಅಂಥವರ ಜಮೀನು ಮಾತ್ರ ಪೋಡಿಯಾಗುತ್ತಿತ್ತು. ಯಾರಿಗೆ ಅರ್ಜಿ ಕೊಡಲಿಕ್ಕೆ ಸಾಮರ್ಥ್ಯ ಇದೆ, ಯಾರಿಗೆ ಅಲ್ಲಿ ಕೆಲಸ ಮಾಡಿಸುವುದಕ್ಕೆ ಸಾಮರ್ಥ್ಯ ಇದೆ, ಅಂಥವರದು ಮಾತ್ರ ಪೋಡಿಯಾಗುತ್ತಿತ್ತು. ಬೇರೆಯವರದು ಪೋಡಿಯಾಗುತ್ತಿರಲಿಲ್ಲ. ಮಾನ್ಯ ಸದಸ್ಯರು ಹೇಳಿದಂಥ ವಿಷಯದಲ್ಲಿ ಅರ್ಥ ಇದ್ದು, ಸ್ವಲ್ಪ ಸರಿಪಡಿಸಲಿಕ್ಕೆ ಬಯಸುತ್ತೇನೆ. ಈ 'ಏಕವ್ಯಕ್ತಿ ಪೋಡಿ' ಮಾಡುವುದನ್ನು ಸಂಪೂರ್ಣವಾಗಿ ಬಂದ್ ಮಾಡಿದ್ದು, ಈಗ ಅರ್ಜಿಗಾಗಿ ಕಾಯುತ್ತಿಲ್ಲ. ಸರ್ಕಾರವೇ ಎಲ್ಲಾ ಮಂಜೂರಿದಾರರ ದಾಖಲೆಗಳನ್ನು ತಯಾರು ಮಾಡಿ, ಎಲ್ಲರಿಗೂ ಅಭಿಯಾನ ಮಾದರಿಯಲ್ಲಿ ಪೋಡಿ ಮಾಡುವಂಥ ಕೆಲಸ ಮಾಡಿದ್ದು, ಕೆಲಸ ನಡೆದಿದೆ. ಶ್ರೀಮತಿ ಹೇಮಲತಾ ನಾಯಕ್‌ರವರು ರಾಜ್ಯದಲ್ಲಿ ಎಷ್ಟು ಮಂಜೂರುದಾರರಿದ್ದಾರೆ ಎಂದು ಕೇಳಿದ್ದಾರೆ. ಆದರೆ, ಇಲ್ಲಿಯವರೆಗೂ ಕೂಡ ಎಷ್ಟು ಜನಕ್ಕೆ ಮಂಜೂರಿಯಾಗಿದೆ ಎಂಬುವಂಥ ಸರಿಯಾದ ದಾಖಲೆ ಎಲ್ಲಿಯೂ ಇಲ್ಲ. ಸದರಿ ವಿಚಾರಕ್ಕೆ ಸಂಬಂಧಿಸಿದಂತೆ, ಪ್ರತಿ ಅಧಿವೇಶನದಲ್ಲಿ ಪ್ರಶ್ನೆ ಉದ್ಭವಿಸಿದ್ದು, ಸಾವಿರಾರು ಪ್ರಶ್ನೆಗಳಿಗೆ, ಸಾವಿರಾರು ಉತ್ತರಗಳು ಬಂದಿವೆ. ಆ ಸಾವಿರ ಉತ್ತರವನ್ನು ನೋಡಿದಾಗ ಒಂದೊಂದು ಉತ್ತರದಲ್ಲಿಯೂ ಒಂದೊಂದು ಅಂಕಿಸಂಖ್ಯೆಗಳಿರುತ್ತವೆ. ಏಕೆಂದರೆ, ಇಲ್ಲಿಯವರೆಗೂ ಅದರ ಡೇಟಾ ಇರುವುದಿಲ್ಲ. ಆದ್ದರಿಂದ ನಾವು ಏನು ಮಾಡಿದ್ದೇವೆ ಎಂದರೆ, ರಾಜ್ಯದ ಎಲ್ಲಾ ಸರ್ಕಾರಿ ಜಮೀನುಗಳಲ್ಲಿ ಯಾರಿಗೆ ಜಮೀನು ಮಂಜೂರಾಗಿದೆ ಎಂಬುದನ್ನು ನಾವೇ ಆನ್‌ಲೈನ್‌ನಲ್ಲಿ ನಮೂನೆ 1 ರಿಂದ 5 ರವರೆಗೂ ಅರ್ಜಿ ಸಲ್ಲಿಸುವಂತೆ ಮಾಡಿದ್ದೇವೆ. ಹಾಗಾಗಿ, ಸುಮಾರು 73,390 ಸರ್ವೆ ನಂಬರ್‌ಗಳಲ್ಲಿ ಮಂಜೂರಿದಾರರ ಪಟ್ಟಿಯನ್ನು ಮಾಡಿದ್ದು, ಎಷ್ಟು ಮಂಜೂರಿದಾರರಿದ್ದಾರೆ ಎಂದರೆ,

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸುಮಾರು 2,51,000 ಗಳಷ್ಟು ಇದ್ದಾರೆ. ಇನ್ನೂ ನಾವು ಸುಮಾರು 67,000 ಸರ್ವೆ ನಂಬರ್‌ಗೆ ಆನ್‌ಲೈನ್‌ನಲ್ಲಿ ನಮೂನೆ 1 ರಿಂದ 5 ರವರೆಗೂ ಅರ್ಜಿ ಸಲ್ಲಿಸುವಂತೆ ಮಾಡಬೇಕಾಗಿದೆ. ನಮೂನೆ 1 ರಿಂದ 5 ರವರೆಗೆ ಅರ್ಜಿ ಸಲ್ಲಿಸಿದ ಮೇಲೆ ಎಷ್ಟು ಮಂಜೂರಿದಾರರಿದ್ದಾರೆ ಎಂಬುದರ ದಾಖಲೆ ಸಿಗುತ್ತದೆ. ಹಾಗಾಗಿ, ಸುಮಾರು 73,390 ಸರ್ವೆ ನಂಬರ್ ಮಂಜೂರುದಾರರ ಪಟ್ಟಿಯಲ್ಲಿ ಸುಮಾರು 2,51,000 ಮಂಜೂರಿದಾರರಿದ್ದಾರೆ. ಇದರಲ್ಲಿ ಈ ಹಿಂದೆ ಕನಿಷ್ಠ 5 ದಾಖಲೆಗಳಿರಬೇಕು ಎಂದು ಇತ್ತು. ಅದನ್ನು ನಮ್ಮ ನಾವು ಬಂದ ಮೇಲೆ ಒಂದು ವರ್ಷ ಕುಳಿತುಕೊಂಡು, ಆ ದಾಖಲೆಗಳನ್ನು ತಿದ್ದಿ ಕನಿಷ್ಠ 5 ದಾಖಲೆಗಳಿರುವುದನ್ನು 3 ದಾಖಲೆಗೆ ಇಳಿಕೆ ಮಾಡಿದ್ದೇವೆ. ಸುಮಾರು 2,51,000 ದಲ್ಲಿ 3 ದಾಖಲೆಗಳು ಇರುವವರು ಎಷ್ಟಿದ್ದಾರೆ ಎಂದರೆ, ಸುಮಾರು 1,17,639 ಮಂಜೂರಿದಾರರು ಇದ್ದು, ಸುಮಾರು 1,17,639 ಜನರಿಗೂ ಸರ್ಕಾರದ ವತಿಯಿಂದಲೇ ಪೋಡಿ ಮಾಡಲಾಗುತ್ತಿದೆ. ಸುಮಾರು ಎರಡು ತಿಂಗಳೊಳಗೆ ಆ ಪೋಡಿ ಕೆಲಸ ಮುಗಿದು ಹೋಗುತ್ತದೆ. ಇನ್ನು ಬಾಕಿ ಇರುವಂಥ ಸುಮಾರು 1,33,000 ಮಂಜೂರುದಾರರಿಗೆ ಕನಿಷ್ಠ ಮೂಲ ದಾಖಲೆಗಳಿರುವುದಿಲ್ಲ. ಇವೆಲ್ಲವೂ ಸಹ ಆನ್‌ಲೈನ್ ಮುಖಾಂತರ ಮಿಸ್ಸಿಂಗ್ ರೆಕಾರ್ಡ್ ಕಮಿಟಿಗೆ ಹೋಗಿವೆ. ಅದನ್ನು ಕೂಡ ಪ್ರತಿ 15 ದಿನಗಳಿಗೊಮ್ಮೆ ಮಿಸ್ಸಿಂಗ್ ರೆಕಾರ್ಡ್ ಕಮಿಟಿ ಸಭೆ ನಡೆಸಬೇಕೆಂದು ಹೇಳಿದ್ದೇನೆ. 3 ದಾಖಲೆಗಳು ಇಲ್ಲವೆಂದರೆ, ಕೊನೆಪಕ್ಷ 2 ದಾಖಲೆಗಳಿದ್ದರೂ ಪೋಡಿ ಮಾಡಿ ಎಂದು ಹೇಳಿದ್ದೇನೆ. ಸುಮಾರು 1,17,639 ಜಮೀನಿಗೆ ಸರ್ಕಾರದ ವತಿಯಿಂದಲೇ ಕ್ರಮೇಣಬದ್ಧವಾಗಿ ಪೋಡಿಯಾಗುತ್ತಿದ್ದು, ಅದರ ಜೊತೆಗೆ ಇನ್ನೂ ಸುಮಾರು 30,000 ಜಮೀನಿಗೆ ಪೋಡಿ ಮಾಡಲಾಗುತ್ತದೆ. ಅಲ್ಲಿಗೆ out of 2.5 lakhs, ಸುಮಾರು 1,47,000 ಜಮೀನಿಗೆ ನಾವೇ ಪೋಡಿ ಮಾಡಿಕೊಡುತ್ತೇವೆ. ಇದ್ಯಾವುದಕ್ಕೂ ಅರ್ಜಿ ಸ್ವೀಕೃತಿಯಾಗಿಲ್ಲ, ಅರ್ಜಿ ಕೇಳಿಲ್ಲ, ನಮಗೆ ಅರ್ಜಿ ತೆಗೆದುಕೊಂಡಿಲ್ಲ. ಇಷ್ಟು ಜಮೀನಿಗೂ ನಾವೇ ಪೋಡಿ ಮಾಡುವಂಥದ್ದಾಗಿದೆ. ಹಾಗಾಗಿ, 5 ದಾಖಲೆಗಳಿರುವುದನ್ನು 3 ದಾಖಲೆಗಳಿಗೆ ಇಳಿಕೆ ಮಾಡಿದ್ದೇವೆ.

(ಮುಂದು)

(666) 13.08.2025/11.40/ಎಸ್‌ಕೆ-ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)

ಶ್ರೀ ಕೃಷ್ಣ ಭೈರೇಗೌಡ (ಮುಂದು):-

ಮೂರರಲ್ಲಿ ಎರಡು ಇರುವಂತಹ ಪ್ರಕರಣಗಳನ್ನು ಮಾಡಿ ಎಂದು ನಾನು ಜಿಲ್ಲಾಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇನೆ. ಈ ರೀತಿ ಮಾಡುವುದರಿಂದ, ನನ್ನ ಪ್ರಕಾರ ಡಿಸೆಂಬರ್ ತಿಂಗಳೊಳಗೆ ಬಹುಶಃ 2 ಲಕ್ಷ ಮಂಜೂರುದಾರರಿಗೆ ಸರ್ಕಾರದಿಂದ ಪೋಡಿ ಮಾಡಿಕೊಡುತ್ತಿದ್ದೇವೆ. ಈಗ ಇದಕ್ಕೆ comparison ಕೇಳಬಹುದು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

2013 ರಿಂದ 2018ರವರೆಗೆ ನಮ್ಮದೇ ಆದ ಸರ್ಕಾರವಿತ್ತು. ಏಕವ್ಯಕ್ತಿಯಲ್ಲಿ ಎಷ್ಟು ಜನರಿಗೆ ಪೋಡಿ ಆಗಿದೆ ಎಂಬುದು ಗೊತ್ತಿದೆಯಾ? 2013 ರಿಂದ 2018ರವರೆಗೆ 5,800 ಮಂಜೂರುದಾರರಿಗೆ ಪೋಡಿ ಆಗಿದೆ. ನಮ್ಮ ಸರ್ಕಾರವಿದ್ದಾಗ ನಾವು ಮಾಡಿದ್ದೇವೆ ಎಂದು ವಿರೋಧ ಪಕ್ಷದವರು ಹೇಳಬಹುದು. 2018 ರಿಂದ 2023 ರ ನಡುವೆ 8,500 ಮಂಜೂರುದಾರರಿಗೆ ಪೋಡಿಯಾಗಿದೆ. ನಾನು ಕಳೆದ ಡಿಸೆಂಬರ್ ತಿಂಗಳಿನಲ್ಲಿ ಪ್ರಾರಂಭ ಮಾಡಿ, ಈ ಡಿಸೆಂಬರ್ ತಿಂಗಳೊಳಗೆ 2 ಲಕ್ಷ ಮಂಜೂರುದಾರರಿಗೆ ಪೋಡಿ ಮಾಡಿಕೊಡುತ್ತಿದ್ದೇವೆ.

ಮಾನ್ಯ ಸಭಾಪತಿಯವರೇ, ನಾನು ಹೇಳುವ ಸಾರಾಂಶವಿಷ್ಟೆ. ಏನೆಲ್ಲಾ ಪ್ರಯತ್ನ ಮಾಡುವುದಕ್ಕೆ ಸಾಧ್ಯವೋ ಅದೆಲ್ಲವನ್ನು ನಾನು ಮಾಡುತ್ತಿದ್ದೇನೆ. ಕೆಲವರು ಏನೂ ದಾಖಲೆ ಇಲ್ಲದೇ ಇರುವವರು ಇರಬಹುದು. ಮೊದಲು ಯಾರು ಯಾರಿಗೆ ಮಾಡಿಕೊಡುವುದಕ್ಕೆ ಸಾಧ್ಯವಿದೆಯೋ, ಅದೆಲ್ಲವನ್ನೂ ಮಾಡಿಕೊಡುತ್ತೇವೆ. ಆಮೇಲೆ ಮಾಡುವುದಕ್ಕೆ ಬಹಳ ಕಷ್ಟ ಇರುವಂತಹ ಕೆಲಸವನ್ನು ಅದರ ನಂತರ ಇದಕ್ಕೆ ಗಮನ ಕೊಡುತ್ತೇವೆ.

ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- ಮಾನ್ಯ ಸಚಿವರೇ, ವಿವಾದವಿರುವ ಭೂಮಿ ಬಗ್ಗೆ ಹೇಳಿ.

ಶ್ರೀ ಕೃಷ್ಣ ಭೈರೇಗೌಡ:- ಪೋಡಿಯಲ್ಲಿ ವಿವಾದ ಕಡಿಮೆ. ನಾವು ರೆಕಾರ್ಡನ್ನು verify ಮಾಡುತ್ತೇವೆ. ಅವರು ನಿಜವಾದ ಮಂಜೂರುದಾರರಾಗಿದ್ದರೆ...

ಶ್ರೀ ಪ್ರದೀಪ್ ಶೆಟ್ಟರ್:- ಮಾನ್ಯ ಸಚಿವರೇ,....

ಸಭಾಪತಿಯವರು:- ಮಾನ್ಯ ಸದಸ್ಯರೇ ಕುಳಿತುಕೊಳ್ಳಿ. ಮಾನ್ಯ ಸಚಿವರು ಉತ್ತರ ಕೊಡುತ್ತಿದ್ದಾರೆ.

ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು):- ಮಾನ್ಯ ಸಭಾಪತಿಯವರೆ, Column No.3 and 9 mismatch ಇರುತ್ತೆ, excess ಮಂಜೂರಾಗಿದ್ದರೆ, ಅದನ್ನು field ನಲ್ಲಿ ಅಳತೆ ಮಾಡುತ್ತೇವೆ. Record ನೋಡುತ್ತೇವೆ. ಯಾವುದಾದರೂ ಕಡಿಮೆ ಇದ್ದರೆ ಅದನ್ನು ಅವರಿಗೆ ಮಾಡಿಕೊಡುತ್ತೇವೆ. ಮಾನ್ಯ ಸದಸ್ಯರ ಹೇಳಿರುವ ಆಶಯದಂತೆ ನಾವು ಕೆಲಸ ಮಾಡುತ್ತಿದ್ದೇವೆ. ಹಿಂದೆ 5 ವರ್ಷಗಳಲ್ಲಿ 5,000 ರಿಂದ 6,000 ಪೋಡಿಯಾದರೆ, ಈಗ ಒಂದು ವರ್ಷದಲ್ಲಿ 2 ಲಕ್ಷ ಪೋಡಿಯನ್ನು ಮಾಡುವ ಗುರಿಯನ್ನಿಟ್ಟುಕೊಂಡು, ಆ ದಿಕ್ಕಿನಲ್ಲಿ ಈಗಾಗಲೇ 1,17,000 ಪೋಡಿಯನ್ನು ಮಾಡಿದ್ದೇವೆ. ಇನ್ನೂ ಬರುವ ಐದು ತಿಂಗಳಿನಲ್ಲಿ ಪೋಡಿ ಬಾಕಿ ಇರುವುದನ್ನು ಮಾಡಿ ಈಗ ಬರುವ ಡಿಸೆಂಬರ್ ತಿಂಗಳೊಳಗೆ 2 ಲಕ್ಷ ಪೋಡಿ ಮಾಡುತ್ತೇವೆ.

ಶ್ರೀ ಎನ್. ನಾಗರಾಜು (ಎಂ.ಟಿ.ಬಿ) (ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಈ proceedings ಮಾಡುವಾಗ, ಸಾಗುವಳಿ ಚೀಟಿ, issue register, Order (OM) and Mutation ಈ ಐದು ದಾಖಲೆಗಳು ಇರಬೇಕೆಂದು ಇವರು ಕಾನೂನಿನಲ್ಲಿ ಬದಲಾವಣೆಯನ್ನು ತಂದಿದ್ದಾರೆ. ಹಿಂದಿನ ಸರ್ಕಾರವಿದ್ದಾಗ, ಇಡೀ ರಾಜ್ಯದಲ್ಲಿ 224 ತಾಲ್ಲೂಕುಗಳಲ್ಲಿ ಐದೈದು ಗ್ರಾಮಗಳನ್ನು ತೆಗೆದುಕೊಂಡು "ಪೋಡಿ ಮುಕ್ತ ಗ್ರಾಮಗಳು" ಎಂದು ಮಾಡಿದ್ದಾರೆ.

ಶ್ರೀ ಕೃಷ್ಣ ಭೈರೇಗೌಡ:- ಅದು ಹಿಡುವಳಿ ನಂಬರ್‌ಗಳಿಗೆ ಮಾಡಿರುವುದು. ಮಂಜೂರು ನಂಬರ್‌ಗಳಿಗೆ ಅಲ್ಲ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಎನ್. ನಾಗರಾಜು (ಎಂ.ಟಿ.ಬಿ):– ಹಿಡುವಳಿ ನಂಬರ್‌ಗೆ...

ಶ್ರೀ ಕೃಷ್ಣ ಭೈರೇಗೌಡ:– ಇಲ್ಲ. ಅದು ಖಾಸಗೀ ನಂಬರ್‌ಗಳಿಗೆ "ಪೋಡಿ ಮುಕ್ತ ಗ್ರಾಮ ಅಭಿಯಾನ" ಮಾಡಿದ್ದಾರೆ. ಸರ್ಕಾರದಿಂದ ಮಂಜೂರಾದ ನಂಬರ್‌ಗಳಿಗೆ ಅಭಿಯಾನ ಮಾಡಿಲ್ಲ. ನಾವು ಎಲ್ಲವನ್ನೂ ಸೇರಿ ಮಾಡಿದ್ದೇವೆ. ನಾನು ಮಂತ್ರಿಯಾಗಿ ತಮ್ಮ ಕ್ಷೇತ್ರಕ್ಕೆ ಬಂದು ಮಾಡಿದ್ದೇನೆ. ಖಾಸಗಿ ನಂಬರ್‌ಗಳಿಗೆ ಪೋಡಿ ಮುಕ್ತ ಗ್ರಾಮ ಅಭಿಯಾನ ಮಾಡಿದ್ದು. ಅದು ಮಂಜೂರು ನಂಬರ್‌ಗೆ ಅಲ್ಲ, ಸರ್ಕಾರಿ ನಂಬರ್‌ಗೆ ಅಲ್ಲ.

ಶ್ರೀ ಎನ್. ನಾಗರಾಜು (ಎಂ.ಟಿ.ಬಿ):– ಹಿಂದಿನ ಸರ್ಕಾರವಿದ್ದಾಗ ಮಾಡಿದ್ದರು.

ಶ್ರೀ ಕೃಷ್ಣ ಭೈರೇಗೌಡ:– ಮಾಡಿಲ್ಲ.

ಶ್ರೀ ಎನ್. ನಾಗರಾಜು (ಎಂ.ಟಿ.ಬಿ):– ಮಾನ್ಯ ಸಭಾಪತಿಯವರೇ, ನಾನು ಹೇಳುವುದೇನೆಂದರೆ, ತಾಲ್ಲೂಕು ಕಚೇರಿಗಳಲ್ಲಿ ಬಹಳಷ್ಟು ದಾಖಲಾತಿಗಳು missing ದಾಖಲಾತಿಗಳಾಗಿವೆ. ಇವತ್ತಿನ ದಿನ ಕಡತಗಳು missing ಆಗಿವೆ. ನಾವು ಏನಾದರೂ ಕೇಳಿದರೆ, ಕಡತಗಳು ಲಭ್ಯವಿಲ್ಲ ಎಂದು ಹೇಳುತ್ತಾರೆ. ಅವರು ಮಾಡಿದ ನಂತರ ಕಡತಗಳ ಲಭ್ಯವಾಗುತ್ತದೆ. ಮಾನ್ಯ ಸಚಿವರ ಆಡಳಿತದಲ್ಲಿ ತಾಲ್ಲೂಕು ಕಚೇರಿಗಳಲ್ಲಿ ಬಹಳಷ್ಟು ನ್ಯೂನತೆಗಳಿವೆ. ಇದನ್ನು ಸರಿಪಡಿಸಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಹೇಳಬಯಸುತ್ತೇನೆ.

ಶ್ರೀ ಕೃಷ್ಣ ಭೈರೇಗೌಡ:– ಮಾನ್ಯ ಸಭಾಪತಿಯವರೇ, ಕಡತ ಕಾಣೆಯಾಗಿರುವ ಬಗ್ಗೆ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಈಗ ಎಲ್ಲಾ ತಾಲ್ಲೂಕು ಕಚೇರಿಗಳಲ್ಲಿ ಎಷ್ಟು ಮೂಲ ಕಡತಗಳಿವೆ, ಅದನ್ನು A & B Catagory ಎಂದು ಹೇಳುತ್ತೇವೆ. ಅದೆಲ್ಲ ಕಡತವನ್ನು ಒಂದು ಕಡೆಯಿಂದ ಸ್ಕ್ಯಾನ್ ಮಾಡುತ್ತಿದ್ದೇವೆ. ಒಂದು ನೂರು ಕೋಟಿ ಪುಟಗಳ ದಾಖಲೆಗಳನ್ನು ಸ್ಕ್ಯಾನ್ ಮಾಡಬೇಕೆಂಬ ಬಗ್ಗೆ ಅಂದಾಜು ಮಾಡಿ, ಈಗಾಗಲೇ 36 ಕೋಟಿ ಪುಟಗಳ ದಾಖಲೆಗಳನ್ನು ಸ್ಕ್ಯಾನ್ ಮಾಡಿದ್ದೇವೆ. ಬಹುಶಃ ಡಿಸೆಂಬರ್ ತಿಂಗಳಿನಿಂದ ಫೆಬ್ರವರಿಯೊಳಗಡೆ 100 ಕೋಟಿ ಪುಟಗಳ ದಾಖಲೆಗಳನ್ನು ಸ್ಕ್ಯಾನ್ ಮಾಡಿ, ನೀವು ದಾಖಲೆಗಳನ್ನು ಮೊಬೈಲ್‌ನಲ್ಲಿ ಹುಡುಕಿಕೊಳ್ಳಬಹುದು. ದಾಖಲೆ ತೆಗೆದುಕೊಳ್ಳುವುದಕ್ಕೆ ಕಛೇರಿಗೆ ಬರಬೇಕಾಗಿಲ್ಲ. ಇರುವಂತಹ ದಾಖಲೆಯನ್ನು Searchable Mode ನಲ್ಲಿ ನಿಮ್ಮ ಬೆರಳ ತುದಿಯಲ್ಲಿ ಸಿಗುವ ಹಾಗೇ ಮಾಡುತ್ತೇವೆ. ಇಲ್ಲದೇ ಇರುವ ದಾಖಲೆ ನಾನು ಏನೂ ಮಾಡುವುದಕ್ಕಾಗುವುದಿಲ್ಲ. ಇದರಿಂದ ಇನ್ನು ಮುಂದೆ ತಿದ್ದುವುದಕ್ಕೆ ಅವಕಾಶವಾಗುವುದಿಲ್ಲ. ಒಂದು ಬಾರಿ ದಾಖಲೆಗಳನ್ನು ಸ್ಕ್ಯಾನ್ ಮಾಡಿದರೆ, ಮುಂದೆ fraud ಗೂ ಕೂಡ ಕಡಿವಾಣ ಹಾಕಿದಂತಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

. ಪ್ರಶ್ನೆ ಸಂಖ್ಯೆ: 435

ರಾಜ್ಯದಲ್ಲಿ ಅರಣ್ಯ ಜಮೀನುಗಳನ್ನು ಅನಧಿಕೃತ ಸಾಗುವಳಿ ಮಾಡಿರುವ ಕುರಿತು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಗಾಯರಾಣ/ಅರಣ್ಯ ಜಮೀನುಗಳನ್ನು ಈ ಹಿಂದೆ ಅನಧಿಕೃತ ಸಾಗುವಳಿ ಮಾಡುವವರಿಗೆ ಸಕ್ರಮೀಕರಣಗೊಳಿಸಿರುವ ಪ್ರಕರಣಗಳು ಎಷ್ಟು; (ಜಿಲ್ಲಾವಾರು ವಿವರ ಒದಗಿಸುವುದು);	ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.
ಆ)	ಸಕ್ರಮೀಕರಣಗೊಳಿಸಿರುವ ಪ್ರಕರಣಗಳಲ್ಲಿ ತಾತ್ಕಾಲಿಕ ಸಾಗುವಳಿ ಚೀಟಿ ನೀಡಿ ಪಹಣಿ ಪತ್ರಿಕೆಯಲ್ಲಿ ಹೆಸರು ಇಂಡೀಕರಣ ಮಾಡಿರುವ ಪ್ರಕರಣಗಳು ಎಷ್ಟು; ಕೇವಲ ತಾತ್ಕಾಲಿಕ ಸಾಗುವಳಿ ಚೀಟಿ ನೀಡಿ ಪಹಣಿಯಲ್ಲಿ ಹೆಸರು ಇಲ್ಲದೇ ಇರುವ ಪ್ರಕರಣಗಳು ಎಷ್ಟು; (ಜಿಲ್ಲಾವಾರು ಮಾಹಿತಿ ಒದಗಿಸುವುದು)	ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.
ಇ)	ತಾತ್ಕಾಲಿಕ ಸಾಗುವಳಿ ಚೀಟಿ ನೀಡಿ ದಶಕಗಳೇ ಕಳೆದರೂ ಇಲ್ಲಿಯವರೆಗೂ ಕೆಲವು ಜನರಿಗೆ ಗಾಯರಾಣ/ಅರಣ್ಯ ಜಮೀನು ಇರುವ ಕಾರಣಕ್ಕೆ ಪಹಣಿ ಮಾಡಿಕೊಡದೇ ಇರುವುದರಿಂದ ಸಾರ್ವಜನಿಕರು ಕಛೇರಿಗೆ ಅಲೆದಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಮಾಹಿತಿ ಒದಗಿಸುವುದು)	ಬಂದಿದೆ.
ಈ)	ಈ ಸಮಸ್ಯೆಗೆ ಸರ್ಕಾರ ಎಷ್ಟು ಸಮಯದೊಳಗಾಗಿ ಸ್ಪಷ್ಟವಾದ ಹಾಗೂ ಶಾಶ್ವತ ಪರಿಹಾರ ಕೈಗೊಳ್ಳುವುದು (ವಿವರಗಳನ್ನು ಒದಗಿಸುವುದು)?	ಅರಣ್ಯ ಇಲಾಖೆಯು ಸರ್ಕಾರದ ಆದೇಶ ಸಂಖ್ಯೆ: FEE 185 FAF 2011, ದಿನಾಂಕ: 06.03.2025ರಲ್ಲಿ ಅರಣ್ಯ ಹಾಗೂ ಕಂದಾಯ ಇಲಾಖೆಯ ಸಮಸ್ಯೆಗಳನ್ನು ಪರಿಹರಿಸಲು ರಾಜ್ಯ ಮಟ್ಟದ ಹಾಗೂ ಪ್ರಾದೇಶಿಕ ಮಟ್ಟದ ಮತ್ತು ಜಿಲ್ಲಾ ಮಟ್ಟದ ಹಾಗೂ ಕ್ಷೇತ್ರಮಟ್ಟದ ಜಂಟಿ ಇಲಾಖಾ ಸಮಿತಿಗಳನ್ನು ರಚಿಸಲಾಗಿದೆ. ಕಂದಾಯ ಇಲಾಖೆಯು ಸರ್ಕಾರದ ಆದೇಶ ಸಂಖ್ಯೆ:ಕಂಇ 156 ಎಸ್.ಎಸ್.ಎಂ. 2024 ದಿನಾಂಕ:25/11/2024 ರಲ್ಲಿ ಸರ್ಕಾರಿ ಜಮೀನಿನಲ್ಲಿ ಅರಣ್ಯ ಭೂಮಿ ಒಳಗೊಂಡಿದ್ದಲ್ಲಿ ಮತ್ತು ಅರಣ್ಯ ಭೂಮಿಯಲ್ಲಿ ಬಹು ಮಾಲೀಕತ್ವದ ಪಹಣಿಯಾಗಿದ್ದಲ್ಲಿ, ಮೊದಲಿಗೆ ಅರಣ್ಯ ಮತ್ತು ಗೋಮಾಳದ ಗಡಿ ಗುರುತಿಸಿಕೊಂಡು, ಅರಣ್ಯಾಧಿಕಾರಿಗಳಿಂದ ನಕ್ಷೆ ದೃಢೀಕರಿಸಿಕೊಂಡು, ಭಾರತೀಯ/ಕರ್ನಾಟಕ ಅರಣ್ಯ ಕಾಯ್ದೆಗೆ ಧಕ್ಕೆ ಬಾರದಂತೆ, ಉಳಿಕೆ ಸರ್ಕಾರಿ ಜಾಗದಲ್ಲಿ ಅನುಭವದಲ್ಲಿರುವ ಅರ್ಹ ಮಂಜೂರಿದಾರರಿಗೆ ಮಾತ್ರ ಪೋಡಿ ದುರಸ್ತಿ ಕಾರ್ಯ ನಿರ್ವಹಿಸಲು ತಹಶೀಲ್ದಾರರು ಕ್ರಮವಹಿಸುವುದು ಎಂದು ತಿಳಿಸಲಾಗಿದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕ್ರಮ ಸಂಖ್ಯೆ	ಜಿಲ್ಲೆಗಳು	ಅನುಬಂಧ-1 ರಾಜ್ಯದಲ್ಲಿ ಗಾಯರಾಣ/ಗೋಮಾಳ/ಹುಲ್ಲುಬನಿ/ಅರಣ್ಯ ಜಮೀನುಗಳನ್ನು ಈ ಹಿಂದೆ ಅನಧಿಕೃತ ಸಾಗುವಳಿ ಮಾಡುವವರಿಗೆ ಸಕ್ರಮೀಕರಣಗೊಳಿಸಿರುವ ಪ್ರಕರಣಗಳ ಜಿಲ್ಲಾವಾರು ವಿವರ.	ವಿಸ್ತೀರ್ಣ (ಎಕರೆ/ಗುಂಟೆ)	ಸಕ್ರಮೀಕರಣಗೊಳಿಸಿರುವ ಪ್ರಕರಣಗಳಲ್ಲಿ, ತಾತ್ಕಾಲಿಕ ಸಾಗುವಳಿ ಚೀಟಿ ನೀಡಿ ಪಹಣಿ ಪತ್ರಿಕೆಯಲ್ಲಿ ಹೆಸರು ಇಂಡೀಕರಣ ಮಾಡಿರುವ ಪ್ರಕರಣಗಳ ವಿವರ	ವಿಸ್ತೀರ್ಣ (ಎಕರೆ/ಗುಂಟೆ	ತಾತ್ಕಾಲಿಕ ಸಾಗುವಳಿ ಚೀಟಿ ನೀಡಿ ಪಹಣಿಯಲ್ಲಿ ಹೆಸರು ಇಲ್ಲದೇ ಇರುವ ಪ್ರಕರಣಗಳ ವಿವರ.	ವಿಸ್ತೀರ್ಣ (ಎಕರೆ/ಗುಂಟೆ	ಷರಾ
1	ಬೆಂಗಳೂರು ನಗರ	6923	3405-28	6923	3405-28	0	0	ಖಾಯಂ ಸಾಗುವಳಿ ಚೀಟಿಗಳನ್ನು ವಿತರಿಸಲಾಗಿರುತ್ತದೆ.
2	ಬೆಂಗಳೂರು ಗ್ರಾಮಾಂತರ	21915	29945-29	0	0	0	0	ಖಾಯಂ ಸಾಗುವಳಿ ಚೀಟಿಗಳನ್ನು ವಿತರಿಸಲಾಗಿರುತ್ತದೆ.
3	ಚಿಕ್ಕಬಳ್ಳಾಪುರ	28646	52852-11.00	0	0	0	0	ಖಾಯಂ ಸಾಗುವಳಿ ಚೀಟಿಗಳನ್ನು ವಿತರಿಸಲಾಗಿರುತ್ತದೆ.
4	ಚಿತ್ರದುರ್ಗ	18880	53207-05	0	0	0	0	ಖಾಯಂ ಸಾಗುವಳಿ ಚೀಟಿಗಳನ್ನು ವಿತರಿಸಲಾಗಿರುತ್ತದೆ.
6	ಕೋಲಾರ	28	75-24	28	75-24	0	0	28 ಖಾಯಂ ಸಾಗುವಳಿ ಚೀಟಿ ಗಳನ್ನು ವಿತರಿಸಲಾಗಿರುತ್ತದೆ
5	ರಾಮನಗರ	9866	15227-30	0	0	0	0	
7	ಬೆಂಗಳೂರು ದಕ್ಷಿಣ	27417	28559-34	0	0	0	0	
8	ಶಿವಮೊಗ್ಗ	27713	51860	395	738	65	117	
9	ತುಮಕೂರು	116	202.13	116	202.13	0	0	
10	ಚಾಮರಾಜನಗರ	2739	4723.1	0	-	0	-	ತಾತ್ಕಾಲಿಕ ಸಾಗುವಳಿ ಚೀಟಿ ನೀಡಿರುವುದಿಲ್ಲ.
11	ಚಿಕ್ಕಮಗಳೂರು	12631	22835-07	0	0	0	0	0
12	ದಕ್ಷಿಣ ಕನ್ನಡ	94	62.29	0		0		ಮಂಗಳೂರು ಅರಣ್ಯ ವಿಭಾಗಕ್ಕೆ ಸಂಬಂಧಿಸಿದಂತೆ 1996 ರಲ್ಲಿ ಕೇಂದ್ರ ಸರ್ಕಾರ ಅನುಮತಿ ನೀಡಿದ ನಂತರ ಅರಣ್ಯ ಪರಿಸರ ಮತ್ತು ಜೀವಿಪರಿಸ್ಥಿತಿ ಇಲಾಖೆ, ಬೆಂಗಳೂರು ಇವರ ಆದೇಶ ಸಂಖ್ಯೆ ಎಫ್.ಇ.ಇ 5 ಎಫ್.ಜಿ.ಎಲ್ 90 ದಿನಾಂಕ 09-05-1997 ರ ಪ್ರಕಾರ ಸಕ್ರಮಗೊಳಿಸಲು ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ (ಅರಣ್ಯ ಇಲಾಖೆಯಿಂದ ನೀಡಲಾಗಿರುವ 40 ಪ್ರಕರಣಗಳು 1978 ರ ಪೂರ್ವದ ಮಂಜೂರಾದ ಪ್ರಕರಣಗಳಾಗಿರುತ್ತವೆ)
13	ಹಾಸನ	60001	127057-33	0	0	0	0	ಅರಣ್ಯ ಜಮೀನು ಮಂಜೂರಾತಿಯಾದ ಯಾವುದೇ ಪ್ರಕರಣಗಳಿರುವುದಿಲ್ಲ. ಹಾಗೂ ತಾತ್ಕಾಲಿಕ ಸಾಗುವಳಿ ಚೀಟಿ ನೀಡಿರುವ ಪ್ರಕರಣಗಳು ಇರುವುದಿಲ್ಲ.
14	ಕೊಡಗು	45	36.23	45	36.23	0	0	
15	ಮಂಡ್ಯ	30640	69409-19	125	187-28	147	220-08	
16	ಮೈಸೂರು	18693	46317-17.08	18693	0	0	0	ಮೈಸೂರು ಜಿಲ್ಲೆಯಲ್ಲಿ ಮಂಜೂರಾದ ಪ್ರಕರಣಗಳಲ್ಲಿ ಖಾಯಂ ಸಾಗುವಳಿ ಚೀಟಿ ನೀಡಿದ್ದು, ತಾತ್ಕಾಲಿಕ ಸಾಗುವಳಿ ಚೀಟಿ ನೀಡಿರುವ ಪ್ರಕರಣಗಳು ಯಾವುದು ಇರುವುದಿಲ್ಲ.
17	ಉಡುಪಿ	626	624.89	0	0	0	0	ಜಿಲ್ಲೆಯ 626 ಸಕ್ರಮೀಕರಣಗೊಳಿಸಿರುವ ಪ್ರಕರಣಗಳಲ್ಲಿ - 397 ಪ್ರಕರಣಗಳು ಅರಣ್ಯ ಇಲಾಖೆಯ ವ್ಯಾಪ್ತಿಗೆ ಒಳಪಡುವ ಜಮೀನಾಗಿದ್ದು- 515.73 ಎಕರೆ ವಿಸ್ತೀರ್ಣವಾಗಿರುತ್ತದೆ. ಹಾಗೂ ಕಂದಾಯ ಇಲಾಖೆಗೆ ಸಂಬಂಧಿಸಿದಂತೆ (ಫಾರಂ ನಂ 50/53/57 ರಲ್ಲಿ) ಸಕ್ರಮೀಕರಣಗೊಳಿಸಿರುವ ಗೋಮಾಳ ಜಮೀನಿನ ಪ್ರಕರಣಗಳು - 229 , ಒಟ್ಟು ವಿಸ್ತೀರ್ಣ -109.16 ಎಕರೆ
19	ಬಾಗಲಕೋಟೆ	178	404-24	178	404-24	0	0	178 ಪ್ರಕರಣಗಳಲ್ಲಿ ಖಾಯಂ ಸಾಗುವಳಿ ಚೀಟಿ ನೀಡಲಾಗಿರುತ್ತದೆ
18	ಬೆಳಗಾವಿ	876	2089-34	876	2089-34	0	0	
20	ವಿಜಯಪುರ	354	1474-03	230	1035-30	124	438-13	
21	ಧಾರವಾಡ	457	1080-08	457	1080-08	0	0	ಸಾಗುವಳಿ ಚೀಟಿಗಳನ್ನು ನೀಡಿದ್ದು ಇರುತ್ತದೆ.
22	ಗದಗ	10	40-09	0	0	0	0	ಶಾಶ್ವತ ಸಾಗುವಳಿ ಚೀಟಿ ನೀಡಿದ್ದು ಇರುತ್ತದೆ
23	ಹಾವೇರಿ	2019	4898-16	2019	4898-16	0		ಖಾಯಂ ಸಾಗುವಳಿ ಚೀಟಿ ನೀಡಲಾಗಿರುತ್ತದೆ
24	ಉತ್ತರ ಕನ್ನಡ	0	0	0	0	0	0	
25	ಕಲಬುರ್ಗಿ	8824	28838.2	8750	28469.1	78	241-12	
26	ಬೀದರ್	5725	15734.28	5725	15734.28	0	0	
27	ಬಳ್ಳಾರಿ	0	0	0	0	0	0	ಬಳ್ಳಾರಿ ಜಿಲ್ಲೆಯಲ್ಲಿ ಗಾಯರಾಣ/ಗೋಮಾಳ/ಹುಲ್ಲುಬನಿ/ಅರಣ್ಯ ಜಮೀನುಗಳನ್ನು ಈ ಹಿಂದೆ ಅನಧಿಕೃತ ಸಾಗುವಳಿ ಮಾಡಿರುವವರಿಗೆ ಯಾವುದೇ ಪ್ರಕರಣಗಳಲ್ಲಿ ಸಕ್ರಮೀಕರಣ ಗೊಳಿಸಿರುವುದಿಲ್ಲ.
28	ಕೊಪ್ಪಳ	1712	2957-00	1710	2950-00	2	07-00	ಯಲಬುರ್ಗಾ ತಾಲೂಕಿನಲ್ಲಿ ಮಂಜೂರಿಯಾದ ಪ್ರಕರಣಗಳ ಪೈಕಿ 2 ಪ್ರಕರಣಗಳಲ್ಲಿ ಮಾತ್ರ ಪಹಣಿ ಇಂಡೀಕರಣ ಆಗಿರುವುದಿಲ್ಲ. ಸದರಿ ಪ್ರಕರಣಗಳನ್ನು ಸಧ್ಯ ನಮೂನೆ 1 ರಿಂದ 5 ರ ತಂತ್ರಾಶದಲ್ಲಿ ಅಳವಡಿಸಿ ಪಹಣಿ ನೀಡುವ ಕಾರ್ಯ ಪ್ರಗತಿಯಲ್ಲಿರುತ್ತದೆ.
29	ರಾಯಚೂರು	1836	5192-00	0	0	33	73-26	ತಾತ್ಕಾಲಿಕ ಸಾಗುವಳಿ ಚೀಟಿ ನೀಡಿರುವುದಿಲ್ಲ.
30	ಯಾದಗಿರಿ	327	1296-13	327	1296-13	0	0	
31	ವಿಜಯನಗರ	0	0	0	0	0	0	
	ಒಟ್ಟು	289291	570412	46597	62604.33	449	1097-19	

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಮಾನ್ಯ ಸಚಿವರು ನೀಡಿರುವ ಉತ್ತರದಲ್ಲಿರುವ ಅಂಕಿ-ಸಂಖ್ಯೆಗಳು ಮತ್ತು ನಾನು ಕೇಳಿರುವಂತಹ ಜಿಲ್ಲಾವಾರು ಮಾಹಿತಿಗಳಿಗೆ ಸರಿಯಾದ ಉತ್ತರ ದೊರಕಿದೆ. ನಾನು ಕೇಳಿರುವ ಮೂರನೇ ಪ್ರಶ್ನೆಗೆ ತಾತ್ಕಾಲಿಕ ಸಾಗುವಳಿ ಚೀಟಿ ನೀಡಿ ದಶಕಗಳೇ ಕಳೆದರೂ ಇಲ್ಲಿಯವರೆಗೂ ಕೆಲವು ಜನರಿಗೆ ಗ್ರಾಮಠಾಣಾ/ಅರಣ್ಯ ಜಮೀನು ಇರುವ ಕಾರಣಕ್ಕೆ ಪಹಣಿ ಮಾಡಿಕೊಡದೇ ಇರುವುದರಿಂದ ಸಾರ್ವಜನಿಕರು ಕಛೇರಿಗೆ ಅಲೆದಾಡುವಂತಹ ಪರಿಸ್ಥಿತಿ ಬಂದಿದೆ. ಸುಮಾರು 215 ಕ್ಕೂ ಹೆಚ್ಚು ಪ್ರಕರಣಗಳು ನನಗೆ ಕಂಡುಬಂದಿವೆ. ಇದಕ್ಕೆ ಸಮಂಜಸವಾದ ಉತ್ತರವನ್ನು ಕೊಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕೇಳಬಯಸುತ್ತೇನೆ. ಈ ಸಮಸ್ಯೆಗೆ ಸರ್ಕಾರ ಎಷ್ಟು ಸಮಯದೊಳಗಾಗಿ ಸ್ಪಷ್ಟವಾದ ಹಾಗೂ ಶಾಶ್ವತ ಪರಿಹಾರ ಕೊಡುತ್ತೀರಾ ಎಂದು ಕೇಳಿದಾಗ, ಮಾನ್ಯ ಸಚಿವರು ನೀಡಿರುವ ಉತ್ತರ ಸರಿಯಾಗಿದೆ. ಕಳೆದ ಇಪ್ಪತ್ತೈದು-ಮೂವತ್ತು ವರ್ಷಗಳಿಂದ ಪ್ರಕರಣಗಳು ಬಹಳಷ್ಟು ಆಗಿದೆ. ಇಂತಹವರಿಗೆ ಪಹಣಿ ನೀಡದೇ ಇರುವುದು ಬಹಳಷ್ಟು ತೊಂದರೆ ಆಗಿದೆ. ಪಹಣಿಗಳು ನೀಡದೇ ಇರುವುದರಿಂದ, ರೈತರಿಗೆ ಸಾಲ ಸೌಲಭ್ಯಗಳು, ಕೃಷಿ ಉತ್ಪನ್ನದ ಪರಿಕರಗಳಿಗೆ ಸಬ್ಸಿಡಿ ಸಿಗುವಂತಹದ್ದು ಮತ್ತು ಬೆಳೆ ವಿಮೆ, ಗೊಬ್ಬರ ಸಿಗದೇ ಇರುವುದು ಹಾಗೂ ಇನ್ನಿತರ ಸಾಲ ಸೌಲಭ್ಯ ಸಿಗದೇ ಇರುವುದಕ್ಕೆ ಬಹಳ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ವಿಶೇಷವಾಗಿ ಈ ತೊಂದರೆ ಬಹಳಷ್ಟು ಎಸ್.ಸಿ., ಎಸ್.ಟಿ., ಜನಾಂಗಕ್ಕೆ ತಟ್ಟಿದೆ ಎಂದು ನಾನು ಈ ಸಂದರ್ಭದಲ್ಲಿ ತಮ್ಮ ಮೂಲಕ ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ. ಮಾನ್ಯ ಸಚಿವರು ಉತ್ತರ ನೀಡಿದ ನಂತರ ನಾನು ಮುಂದಿನ ಪ್ರಶ್ನೆಯನ್ನು ಕೇಳುತ್ತೇನೆ.

ಶ್ರೀ ಕೃಷ್ಣ ಬೈರೇಗೌಡ (ಕಂದಾಯ ಸಚಿವರು):- ಮಾನ್ಯ ಸಭಾಪತಿಯವರೇ, ಈ ತಾತ್ಕಾಲಿಕ ಸಾಗುವಳಿ ಚೀಟಿ ಎನ್ನುವುದಕ್ಕೆ ಕಾನೂನಿಲ್ಲಿ ಯಾವುದೇ ಅವಕಾಶವಿಲ್ಲ. ಆದರೆ ನಿಜ, ಯಾವುದೇ ಕಾನೂನಿನಲ್ಲಿ ಅವಕಾಶ ಇಲ್ಲದೇ ಹೋದರೂ ಕೆಲವು ಜಿಲ್ಲೆಗಳಲ್ಲಿ ಆ ರೀತಿ ಒಂದು ಪದ್ಧತಿಯನ್ನು ಹಿಂದೆ ಕೆಲವರು ಅಭ್ಯಾಸ ಮಾಡಿಬಿಟ್ಟಿದ್ದಾರೆ. 1942ನೇ ಇಸವಿಯಲ್ಲಿ Grow More Food ಎನ್ನುವ Campaign ಇತ್ತು. ಅದು ಒಂದರಲ್ಲಿ ಮಾತ್ರ ಈ ತರಹ ಸಾಗುವಳಿ ಮಾಡುವುದಕ್ಕೆ ತಾತ್ಕಾಲಿಕ ಸಾಗುವಳಿ ಚೀಟಿ ಕೊಡುವುದಕ್ಕೆ ಅವಕಾಶವಿತ್ತು. ಅದನ್ನು ಕೆಲವರು misinterpreat ಮಾಡಿಕೊಟ್ಟಿದ್ದಾರೆ. ಆದರೂ ಕೂಡ ಅವರೆಲ್ಲರಿಗೂ ನ್ಯಾಯ ಒದಗಿಸುವುದಕ್ಕೆ ಅವರಿಗೊಂದು ಖಾಯಂಮಾತಿ ಮಾಡುವುದಕ್ಕೆ ನಾವು ಹಿಂದೆ ಫಾರಂ, ಫಾರಂ 50, ಫಾರಂ 53 ಮತ್ತು ಫಾರಂ 57ನಲ್ಲಿ ಇವರೆಲ್ಲರಿಗೂ ಅರ್ಜಿ ಹಾಕಿಕೊಳ್ಳುವುದಕ್ಕೆ ಅವಕಾಶವಿತ್ತು. ಆಗ ಅವರಿಗೆಲ್ಲರಿಗೂ ಮಾಡಿಕೊಟ್ಟಿದ್ದೇವೆ. ನನ್ನ ಬಳಿಯಿರುವ ಮಾಹಿತಿಯ ಪ್ರಕಾರ ಉಳಿದಿರುವ ಇಂತಹವರು 449 ಮಾತ್ರ ಎಂಬುದು ಇದೆ. ಇದನ್ನು ಖಚಿತವಾಗಿ ನಾವು ಹೇಳುವುದಕ್ಕೆ ಕಷ್ಟವಾಗುತ್ತದೆ. ಇರುವ ಮಾಹಿತಿಯಲ್ಲಿ 449. ಇದು ನೂರಕ್ಕೆ ನೂರು ಸರಿ ಇದೆ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ತಮ್ಮ ಬಳಿ ಈ ತರಹ ಯಾವುದಾದರೂ ಪ್ರಕರಣಗಳಿದ್ದರೆ, ದಯವಿಟ್ಟು, ತಾವು ಪಟ್ಟಿ ಮಾಡಿ ನನಗೆ ಕಳುಹಿಸಿಕೊಟ್ಟರೆ, ಅದನ್ನು ನಾನು ನಿರ್ದಿಷ್ಟವಾಗಿ examine ಮಾಡಿ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವರಿಗೇನಾದರೂ relief ಕೊಡುವುದಕ್ಕೆ ಸಾಧ್ಯವೇ ಎಂದು ಪರಿಶೀಲಿಸಬಹುದಾಗಿದೆ. ನಾನು ಹೇಳಬೇಕೆಂದರೆ, ಕಾನೂನಿನಲ್ಲಿಯೂ ಇದ್ಯಾವುದಕ್ಕೂ ಕೂಡ ಅವಕಾಶವಿಲ್ಲ. ಫಾರಂ.೫೦, ೫೩, ೫೭ ರಲ್ಲಿ ಹಾಕಿಕೊಂಡು ಸುಮಾರು ಜನರಿಗೆ ಅವರಿಗೆ ಖಾಯಂ ಮಂಜೂರಾತಿ ಮಾಡಿಕೊಟ್ಟಿದ್ದೇವೆ. ಯಾರಾದರೂ ಉಳಿದಿದ್ದರೆ, ತಾವು ಒಂದು ಪಟ್ಟಿ ಕೊಡಿ. ನಾನು ಅದನ್ನು ಚೆಕ್ ಮಾಡುತ್ತೇನೆ.

ಶ್ರೀಮತಿ ಹೇಮಲತಾ ನಾಯಕ್:– ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಸಚಿವರು ಹೇಳಿದಂತೆ, ಈಗಾಗಲೇ ಶಾಶ್ವತ ಸಾಗುವಳಿ ಚೀಟಿ ಪಡೆದುಕೊಂಡವರ ಪಹಣಿಯಲ್ಲಿ ಹೆಸರನ್ನು ನಮೂದಿಸಿಲ್ಲ. ಆ ತರಹ ತೊಂದರೆಗಳು ಬಹಳ ಆಗುತ್ತಿದೆ. ಹೀಗಾಗಿ ಏನಾಗಿದೆ ಎಂದರೆ ಅವರ ತಂದೆ ನಂತರ ಮಕ್ಕಳಿಗೆ ಬರುವಂತಹ ಹಳೆ ಪಹಣಿಗಳನ್ನು ಮುಂದಿಟ್ಟುಕೊಂಡು ಹೋದರೆ, ಅವರಿಗೆ ಸರಿಯಾದಂತಹ ಸೌಲಭ್ಯಗಳು ಸಿಗದೇ ಇರುವ ಕಾರಣ, ಇಂತಹ ಪ್ರಕರಣಗಳು ಬಹಳಷ್ಟು ಜಾಸ್ತಿಯಾಗಿವೆ. ಸರ್ಕಾರ ಕಾನೂನಿನಲ್ಲಿ ಅಗತ್ಯ ತಿದ್ದುಪಡಿ ತಂದು ಅರ್ಹ ಫಲಾನುಭವಿಗಳಿಗೆ ಜಮೀನನ್ನು ಮಂಜೂರು ಮಾಡಲು ಅಥವಾ ಯಾವುದೇ ಪರ್ಯಾಯ ವ್ಯವಸ್ಥೆ ಕಲ್ಪಿಸಬಹುದಾದಂತಹ ಕೆಲಸವನ್ನು ಮಾನ್ಯ ಸಚಿವರು ಮಾಡಿಕೊಡಬೇಕಾಗಿದೆ. ಅದಲ್ಲದೇ ಈ ಒಂದು ಪಹಣಿಯನ್ನು ಅವರ ಹೆಸರಿನಲ್ಲಿ ಮಾಡಿಕೊಡುವಂತಹ ವ್ಯವಸ್ಥೆ ತಕ್ಷಣವೇ ಇದನ್ನು ಜಾರಿಗೆ ತಂದಾಗ ಮಾತ್ರ ಸಾಧ್ಯವಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮಾನ್ಯ ಸಚಿವರಿಂದ ಸ್ಪಷ್ಟವಾದ ಉತ್ತರವನ್ನು ನಿರೀಕ್ಷೆ ಮಾಡುತ್ತೇನೆ. ಏಕೆಂದರೆ, ಈ ಭಾಗದಲ್ಲಿ ಕೆಲವರು ....

ಶ್ರೀ ಕೃಷ್ಣ ಬೈರೇಗೌಡ:– ಮಾನ್ಯ ಸಭಾಪತಿಯವರೇ, ನಾನು ಸ್ಪಷ್ಟವಾಗಿ ಹೇಳಬೇಕೆಂದರೆ, ಇದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ.

ಸಭಾಪತಿಯವರು:– ತಾವು ಹೇಳುವುದು ಸರಿಯಿದೆ.

ಶ್ರೀ ಕೃಷ್ಣ ಬೈರೇಗೌಡ:– ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಹಳ insist ಮಾಡಿದರೆ, ನಾನು ಸ್ಪಷ್ಟವಾಗಿ ಹೇಳುತ್ತೇನೆ. ಆದರೆ ನಾನು ಆ ರೀತಿ ಹೇಳುವುದು ಬೇಡ ಎಂದು ಸ್ವಲ್ಪ ನಿಮಗೆ ಏನಾದರೂ ಇದ್ದರೆ ಕೊಡಿ ಚೆಕ್ ಮಾಡುತ್ತೇನೆ ಎಂದು ಹೇಳಿದೆ. ನೀವು ಸ್ಪಷ್ಟವಾಗಿ ಹೇಳಿ ಎಂದರೆ ಹಂಗಾಮಿ ಸಾಗುವಳಿ ಚೀಟಿಗೆ ಯಾವುದೇ ಕಾನೂನಿನಲ್ಲಿ ಅವಕಾಶವಿಲ್ಲ. ಹಿಂದೆ ಕೆಲವರು ಮಾಡಿಬಿಟ್ಟಿದ್ದಾರೆ. ಅವರಿಗೆ ಫಾರಂ ನಂಬರ್ ೫೦, ೫೩, ೫೭ ನಲ್ಲಿ ಏನೋ ಆಯಿತು; ಕಾಲದಿಂದ ಕಾಲಕ್ಕೆ ಸರ್ಕಾರವೇ ತಪ್ಪು ಮಾಡುತ್ತದೆ. ಜನ ತಪ್ಪು ಮಾಡುತ್ತಾರೆ. ಇದನ್ನೆಲ್ಲಾ ಮನ್ನಾ ಮಾಡುವ ಉದ್ದೇಶಕ್ಕೆ ಮಾಡಿಕೊಟ್ಟಿದ್ದೇವೆ. ಕೆಲವರಿಗೆ ಮಂಜೂರಾಗಿದೆ. ಆದರೆ ಪಹಣಿ ಪತ್ರಿಕೆಯಲ್ಲಿ ಅವರ ಹೆಸರು ನಮೂದಾಗಿಲ್ಲ ಎಂದು ಮಾನ್ಯ ಸದಸ್ಯರು ಎರಡನೇ ವಿಷಯವನ್ನು ಹೇಳಿದ್ದಾರೆ. ಅಂತಹದ್ದನ್ನು ನಾನು Column 1 to 5 ಮಾಡಿದಾಗ, ಈಗಾಗಲೇ ಉತ್ತರ ಕೊಟ್ಟಾಗ, ಅಂತಹದ್ದು ೫,೦೦೦ ಪ್ರಕರಣಗಳು ಕಂಡುಬಂದಿದೆ. ಬಹುಶಃ ಡಿಸೆಂಬರ್ ತಿಂಗಳೊಳಗೆ ಇನ್ನೂ ೫,೦೦೦ ಪ್ರಕರಣಗಳು ಕಂಡುಬರುತ್ತದೆ. ಸುಮಾರು ಹತ್ತು ಸಾವಿರ ಮಂಜೂರುದಾರರಿಗೆ ಮಂಜೂರಾಗಿದೆ. ಆದರೆ ಪಹಣಿ ಪತ್ರಿಕೆಯಲ್ಲಿ ಅವರ ಹೆಸರುಗಳು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಮೂದಾಗಿಲ್ಲ. ಈಗ ಅವರದು ಕೂಡ ನಾನು ಕ್ಲಿಯರ್ ಮಾಡಿಕೊಡುತ್ತಿದ್ದೇನೆ. ಮಂಜೂರಾತಿ ದಾಖಲೆ ಇದ್ದಲ್ಲಿ, ಅವರ ಹೆಸರನ್ನು ಪಹಣಿ ಪತ್ರಿಕೆಯಲ್ಲಿ ನಮೂದಾಗಿಲ್ಲ ಎಂದರೆ, ನಾವೇ ಮೇಲೆ ಹಾಕಿಕೊಂಡು ಅವರ ಹೆಸರನ್ನು ಪಹಣಿ ಪತ್ರಿಕೆಯಲ್ಲಿ ನಮೂದು ಮಾಡಿಕೊಡುತ್ತಿದ್ದೇವೆ. ಇವೆಲ್ಲವನ್ನು ಹೊರತುಪಡಿಸಿ, ಇನ್ನೂ ಏನಾದರೂ ಇದ್ದರೆ ಹೇಳಿ, ಏಕೆಂದರೆ, ನಮ್ಮ ಇಲಾಖೆಯಲ್ಲಿ ಒಂದು ಪ್ರಕರಣವನ್ನು ಇನ್ನೊಂದು ಪ್ರಕರಣಕ್ಕೆ ನಾವು ಹೋಲಿಕೆ ಮಾಡುವುದಕ್ಕಾಗುವುದಿಲ್ಲ. ನಾನು ಏನು ತಿಳಿದುಕೊಂಡು ಉತ್ತರ ಕೊಡುತ್ತೇನೆ, ನಿಮ್ಮ ಮನಸ್ಸಿನಲ್ಲಿ ಏನೋ ಇರುತ್ತದೆ. ಅದಕ್ಕೆ ನಾನು ಹೇಳಿದ್ದೇನೆಂದರೆ, ನೀವು ಕೇಸ್ ಕೊಡಿ ನಾನು examine ಮಾಡುತ್ತೇನೆ.

ಶ್ರೀಮತಿ ಹೇಮಲತಾ ನಾಯಕ್:– ಮಾನ್ಯ ಸಭಾಪತಿಯವರೇ, ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಸಭಾಪತಿಯವರು:– ಮಾನ್ಯ ಎಸ್. ರವಿಯವರ

ಪ್ರಶ್ನೆ ಸಂಖ್ಯೆ 220

(ಮಾನ್ಯ ಸದಸ್ಯರಾದ ಶ್ರೀ ಎಸ್. ರವಿಯವರು ಸದನದಲ್ಲಿ ಹಾಜರಿರಲಿಲ್ಲ)

(ಮುಂದು)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(667) 13.08.2025 12.50 ಬಿಸಿಹೆಚ್-ಆರ್ಎನ್ (ಸಭಾಪತಿಯವರ ಉಪಸ್ಥಿತಿ)

ಪ್ರಶ್ನೆ ಸಂಖ್ಯೆ: 346

ನೋಂದಣಿ (ಕರ್ನಾಟಕ ತಿದ್ದುಪಡಿ) ಕಾಯ್ದೆ, 2023ರ ಬಗ್ಗೆ

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	08-10-2024 ರಂದು ಭಾರತದ ಗೌರವಾನ್ವಿತ ರಾಷ್ಟ್ರಪತಿಗಳ ಒಪ್ಪಿಗೆಯನ್ನು ಪಡೆದ ಮತ್ತು 19-10-2024 ರಂದು ಕರ್ನಾಟಕ ಗೆಜೆಟ್ ಎಕ್ಸ್ಟ್ರಾ-ಆರ್ಡಿನರಿ ಗೆಜೆಟ್‌ನಲ್ಲಿ ಪ್ರಕಟವಾದ ನೋಂದಣಿಗೆ (ಕರ್ನಾಟಕ ತಿದ್ದುಪಡಿ) ಕಾಯ್ದೆ 2023 (ಕರ್ನಾಟಕ ಕಾಯ್ದೆ ಸಂಖ್ಯೆ:47 ಆಫ್ 2024) ಜಾರಿಗೆ ಬಂದಿದೆಯೇ;	The Registration (Karnataka Amendment) Act, 2023 ಕ್ಕೆ ಗೌರವಾನ್ವಿತ ರಾಷ್ಟ್ರಪತಿಯವರ ಅಂಕಿತ ಪಡೆದು, ನೋಂದಣಿ ಕಾಯ್ದೆ 1908ಕ್ಕೆ ತಿದ್ದುಪಡಿ ತರಲು ಕರ್ನಾಟಕ ರಾಜ್ಯಪತ್ರದ ವಿಶೇಷ ರಾಜ್ಯಪತ್ರಿಕೆಯಲ್ಲಿ ಅಧಿಸೂಚನೆ ಸಂಖ್ಯೆ: DPAL 24 SHASANA 2023 ದಿನಾಂಕ:19-10-2024 ರಂದು ಪ್ರಕಟಿಸಲಾಗಿದ್ದು, ಸದರಿ ತಿದ್ದುಪಡಿಗಳನ್ನು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆ ಮೂಲಕ ಗೊತ್ತುಪಡಿಸಬಹುದಾದ ದಿನಾಂಕದಂದು ಜಾರಿಗೆ ಬರತಕ್ಕದ್ದು ಎಂಬ ಅಂಶವಿರುತ್ತದೆ. ಸದರಿ ಅಧಿನಿಯಮದ ತಿದ್ದುಪಡಿಗಳನ್ವಯ ನಿಯಮಾವಳಿಗಳನ್ನು ರಚಿಸಿ, ಜಾರಿಗೆ ತರಲು ಕರ್ನಾಟಕ ನೋಂದಣಿ ನಿಯಮಗಳು 1965 ರಲ್ಲಿನ ನಿಯಮಗಳಿಗೆ ತಿದ್ದುಪಡಿಗಳನ್ನು ತರಬೇಕಾಗಿದ್ದು, ಕರಡು ತಿದ್ದುಪಡಿ ನಿಯಮಗಳನ್ನು ಸಂಬಂಧಪಟ್ಟ ಇಲಾಖೆಗಳ ಸಮಾಲೋಚನೆಯೊಂದಿಗೆ ರಚಿಸಲಾಗುತ್ತಿದೆ. ಕರಡು ನಿಯಮಗಳು ಅಂತಿಮವಾದ ಕೂಡಲೇ The Registration (Karnataka Amendment) Act, 2023 ರಂದು ಜಾರಿಗೆ ತರುವ ಕುರಿತು ದಿನಾಂಕವನ್ನು ಗೊತ್ತುಪಡಿಸಲಾಗುವುದು.
ಆ)	ಇಲ್ಲದಿದ್ದರೆ, ಸಂವಿಧಾನ ಅಥವಾ ಯಾವುದೇ ಕಾನೂನಿನ ಅಡಿಯಲ್ಲಿ ಅಂತಹ ಕ್ರಮಕ್ಕೆ ಅಧಿಕಾರವಿಲ್ಲದಿದ್ದರೂ ಕರ್ನಾಟಕ ಇನ್ಸ್ಪೆಕ್ಟರ್ ಜನರಲ್ ಆಫ್ ರಿಜಿಸ್ಟ್ರೇಷನ್ (ಐಜಿಆರ್) ಸದರಿ ಕಾಯ್ದೆಯನ್ನು ತಡೆಹಿಡಿದ್ದಿದ್ದಾರೆಯೇ;	
ಇ)	ಶಾಸಕಾಂಗವು ಅಂಗೀಕರಿಸಿದ ಮತ್ತು ಭಾರತದ ರಾಷ್ಟ್ರಪತಿಗಳು ಒಪ್ಪಿಗೆ ನೀಡಿದ ಕಾನೂನಿನ ಅನುಷ್ಠಾನವನ್ನು ಐಜಿಆರ್ ಅಥವಾ ರಾಜ್ಯ ಸರ್ಕಾರದ ಯಾವುದೇ ಅಧಿಕಾರಿ ಯಾವ ಕಾನೂನಿನ ಅಧಿಕಾರದ ಅಡಿಯಲ್ಲಿ ತಡೆಹಿಡಿದ್ದಾರೆ;	
ಈ)	ಸದರಿ ತಿದ್ದುಪಡಿ ಕಾಯ್ದೆಯ ಜಾರಿ ದಿನಾಂಕವನ್ನು ಸರ್ಕಾರ ತಕ್ಷಣವೇ ತಿಳಿಸಲು ಮತ್ತು ನೋಂದಣಿ ಇಲಾಖೆಯಿಂದ ಅನುಸರಣೆಯನ್ನು ಖಚಿತಪಡಿಸಿಕೊಳ್ಳಲು ಉದ್ದೇಶಿಸಿದೆಯೇ;	
ಉ)	ಶಾಸಕಾಂಗದ ಇಚ್ಛೆ ಮತ್ತು ಸಾಂವಿಧಾನಿಕ ಪ್ರಕ್ರಿಯೆಯನ್ನು ಅತಿಕ್ರಮಿಸಲು ಅಥವಾ ತಪ್ಪಿಸಲು ಪ್ರಯತ್ನಿಸಿದ ಯಾವುದೇ ಅಧಿಕಾರಿಗಳ ವಿರುದ್ಧ ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ?	ಅನ್ವಯಿಸುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ನಾನು ಕೇಳಿದಂತಹ ಪ್ರಶ್ನೆಗೆ ಮಾನ್ಯ ಕಂದಾಯ ಸಚಿವರು ಉತ್ತರ ಕೊಟ್ಟಿದ್ದಾರೆ. ಶಾಸಕಾಂಗವು ಅಂಗೀಕರಿಸಿದ ಮತ್ತು ಭಾರತದ ರಾಷ್ಟ್ರಪತಿಗಳ ಒಪ್ಪಿಗೆ ಪಡೆದಿರುವ ನೋಂದಣಿ (ಕರ್ನಾಟಕ ತಿದ್ದುಪಡಿ) ಕಾಯ್ದೆ ಇನ್ನೂ ಏಕೆ ಜಾರಿಗೆ ಬಂದಿಲ್ಲ ಎಂದು ಪ್ರಶ್ನೆ ಕೇಳಿದ್ದೆನು. ಅವರ ಉತ್ತರದಲ್ಲಿ "ಕರಡು ತಿದ್ದುಪಡಿ ನಿಯಮಗಳನ್ನು ಸಂಬಂಧಪಟ್ಟ ಇಲಾಖೆಗಳ ಸಮಾಲೋಚನೆಯೊಂದಿಗೆ ರಚಿಸಲಾಗುತ್ತಿದೆ. ಕರುಡು ನಿಯಮಗಳು ಅಂತಿಮವಾದ ಕೂಡಲೇ The Registration (Karnataka Amendment) Act 2023 ರಂದು ಜಾರಿಗೆ ತರುವ ಕುರಿತು ದಿನಾಂಕವನ್ನು ಗೊತ್ತುಪಡಿಸಲಾಗುವುದು" ಎಂದು ಹೇಳಿದ್ದಾರೆ. ಈ ರೀತಿಯಾದಂತಹ ಕಾನೂನನ್ನು ಜಾರಿಗೆ ತರುತ್ತಿರುವುದಕ್ಕೆ ನಾನು ಮಾನ್ಯ ಕಂದಾಯ ಸಚಿವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಇದು ಸ್ವಲ್ಪ urgent ಇದೆ. ಇದನ್ನು ಏಕೆ ಬೇಗ ಮಾಡಬೇಕೆಂದರೆ, ಈ ಒಂದು ಪ್ರಕರಣ ನನ್ನ ಗಮನಕ್ಕೆ ಬಂದಿದೆ. ಒಬ್ಬರು ಹಿರಿಯ ನಾಗರಿಕರು ಒಂದು ಜಮೀನನ್ನು ಇಟ್ಟುಕೊಂಡಿರುತ್ತಾರೆ. ಆದರೆ ಆ ಜಮೀನನ್ನು ತೆಗೆದುಕೊಳ್ಳುವುದಕ್ಕೆ ಒಬ್ಬರು ಪ್ರಭಾವಿ ವ್ಯಕ್ತಿ ಪ್ರಯತ್ನಪಡುತ್ತಾರೆ. ಆದರೆ ಈ ವ್ಯಕ್ತಿ ಜಮೀನನ್ನು ಕೊಡದಿದ್ದಕ್ಕೆ ಅವರು ಒಂದು ನಕಲಿ General Power of Attorney ಅನ್ನು ಸೃಷ್ಟಿ ಮಾಡುತ್ತಾರೆ. ಆ ನಕಲಿ G.P.A ಅನ್ನು ತೆಗೆದುಕೊಂಡು registration ಮಾಡುವುದಕ್ಕೆ ಹೋಗುತ್ತಾರೆ. ಆದರೆ ಹಲವಾರು ನೋಂದಣಿ ಕಚೇರಿಗಳಲ್ಲಿ ಒಪ್ಪುವುದಿಲ್ಲ. ಏಕೆಂದರೆ sale ಮಾಡಿರುವವರ ಸಹಿ ಒಂದೇ handwriting ನಲ್ಲಿ ಇರುತ್ತದೆ. ಸಾಕ್ಷಿಗಳದ್ದು ಕೂಡ ಒಂದೇ ರೀತಿ ಇರುತ್ತದೆ. ಇವೆಲ್ಲವನ್ನೂ ನೋಡಿ ಹಲವಾರು ನೋಂದಣಿ ಕಚೇರಿಗಳಲ್ಲಿ ಒಪ್ಪುವುದಿಲ್ಲ. ಆದರೆ ಒಂದು ನೋಂದಣಿ ಕಚೇರಿಗಳಲ್ಲಿ ಒಪ್ಪಿ registration ಮಾಡುತ್ತಾರೆ. ಆ registration ಮಾಡಿದ ನಂತರ ಖಾತೆ ಕೂಡ ಆಗುತ್ತದೆ. ಖಾತೆ ಆದನಂತರ ನನ್ನ ಜಮೀನನ್ನು ಯಾರೋ ನಕಲಿ ದಾಖಲೆಗಳನ್ನು ಸೃಷ್ಟಿಮಾಡಿ ಈ ರೀತಿ registration ಮಾಡಿದ್ದಾರೆಂದು ಈ ವ್ಯಕ್ತಿಗೆ ಗೊತ್ತಾಗುತ್ತದೆ. ಅದಾದ ನಂತರ ಅವರು ಪಾಪ, ಪೊಲೀಸ್ ಠಾಣೆಗೆ ಹೋಗುತ್ತಾರೆ. ಮತ್ತೆ ಕೋರ್ಟ್‌ಗೂ ಹೋಗುವುದಕ್ಕೆ ಪ್ರಯತ್ನಪಡುತ್ತಾರೆ. ಆದರೆ ಏನು ಮಾಡಿದರೂ ಕೂಡ ಆ ನಿಜವಾದ ಯಾರು ಜಮೀನು ಖಾತೆದಾರರು ಇದ್ದಾರೋ ಅವರ ಹೆಸರಿಗೆ ಇನ್ನೂ ಆಗಿಲ್ಲ. ಆದರೆ ಈ ರೀತಿಯಾದಂತಹ ತೊಂದರೆಗಳನ್ನು ಅನೇಕ ಜನ ಅನುಭವಿಸುತ್ತಿದ್ದಾರೆ. ಈ ರೀತಿ ನಕಲಿ ದಾಖಲೆಗಳನ್ನು ಸೃಷ್ಟಿಸಿಕೊಂಡು ಪ್ರಭಾವ ಬಳಸಿಕೊಂಡು ಈ ರೀತಿ ತೊಂದರೆ ಕೊಡುತ್ತಿದ್ದಾರೆ. ಹಾಗಾಗಿ, ಈ ಕಾನೂನು ಬೇಗ ಜಾರಿಗೆ ಬಂದರೆ ತುಂಬಾ ಅನುಕೂಲವಾಗುತ್ತದೆ. ಮತ್ತೆ ಅವರು ಸದ್ಯದ ಪರಿಸ್ಥಿತಿಯಲ್ಲಿ ಏನು ಮಾಡಬೇಕೆಂದು ತಿಳಿಸಲು ಸನ್ಮಾನ್ಯ ಕಂದಾಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಸಭಾಪತಿಯವರು:- ಮಾನ್ಯ ಕಂದಾಯ ಸಚಿವರೇ, ತಾವು ಉತ್ತರ ಹೇಳಿ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ರಾಮೋಜಿಗೌಡ:– ಮಾನ್ಯ ಸಭಾಪತಿಯವರೇ, ಅದೇ ರೀತಿ ಗೃಹಸಚಿವರು ಕೂಡ ಇದ್ದಾರೆ. ಅವರಿಗೂ ಕೂಡ ಮನವಿ ಮಾಡುತ್ತಿದ್ದೇನೆ.

ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು):– ಮಾನ್ಯ ಸಭಾಪತಿಯವರೇ, ಗೌರವಾನ್ವಿತ ಸದಸ್ಯರು ಹೇಳುವಂಥದ್ದು ಕೂಡ ನಿಜ ಸಂಗತಿಯಾಗಿದೆ. ಈ ನೋಂದಣಿ ಪ್ರಕ್ರಿಯೆಯಲ್ಲಿ ಕಾನೂನುಗಳ ಸಡಿಲತೆಯನ್ನು ದುರುಪಯೋಗ ಮಾಡಿಕೊಂಡು, ಈ ರೀತಿಯಾಗಿ ನಕಲಿ ವ್ಯಕ್ತಿಗಳನ್ನು ಸೃಷ್ಟಿ ಮಾಡುವುದು ಆಗುತ್ತಿದೆ. ಅಂದರೆ impersonation and fraud ಮುಖಾಂತರ ಯಾರದೋ ಆಸ್ತಿಯನ್ನು ಯಾರೋ ಲಪಟಾಯಿಸುವಂಥದ್ದು ವ್ಯವಸ್ಥಿತವಾಗಿ ನಡೆದು ಬಂದಿತ್ತು. ನಾನು ಸಚಿವನಾದ ಕೂಡಲೇ ಇದಕ್ಕೆ ಕಡಿವಾಣ ಹಾಕಬೇಕೆಂದು 2023ನೇ ಇಸವಿ ಜುಲೈನಲ್ಲೇ ಈ ಸದನದಲ್ಲೇ ಕಾಯಿದೆಗೆ ಒಪ್ಪಿಗೆ ತೆಗೆದುಕೊಂಡು ಅದನ್ನು ರಾಷ್ಟ್ರಪತಿಯವರಿಂದ ಕೂಡ ಸಹಮತಿ ಪಡೆಯಬೇಕೆಂದು ಅವರಿಗೆ ಕಳುಹಿಸಿಕೊಟ್ಟೆವು. ಗೌರವಾನ್ವಿತ ರಾಷ್ಟ್ರಪತಿಗಳಿಂದ ಅಂದರೆ ಕೇಂದ್ರ ಸರ್ಕಾರದಿಂದ ಸಹಮತಿ ಬರುವುದಕ್ಕೆ ಬರುವುದಕ್ಕೆ 1 ವರ್ಷ 2 ತಿಂಗಳು ತೆಗೆದುಕೊಂಡಿದೆ. ಆಯಿತು. ಅದಾದನಂತರ ಹೋದವರ್ಷ ಬಂದಿದೆ. ನಮ್ಮ ಕಡೆಯಿಂದ ಕೂಡ ನಿಧಾನವಾಗಿದೆ. ಮಾನ್ಯ ಸದಸ್ಯರು ಕೂಡ ಇದು ಬೇಗ ಆಗಬೇಕೆಂದು ಹೇಳುತ್ತಿದ್ದಾರೆ. ಇದನ್ನು ನಾನು ಒಪ್ಪುತ್ತೇನೆ. ಏಕೆ ಸ್ವಲ್ಪ ನಿಧಾನವಾಯಿತು ಎಂದರೆ, ಇದರಲ್ಲಿ ಗೊತ್ತಿದ್ದು ಕೂಡ fraud and impersonation case ಗೆ ನಮ್ಮ ಅಧಿಕಾರಿಗಳು ಏನಾದರೂ ಗೊತ್ತಿದ್ದೂ ಸಹಕಾರ ಕೊಟ್ಟರೆ ಅವರ ಮೇಲೆ criminal prosecution ಆಗಬೇಕೆನ್ನುವ ಒಂದು ಅಂಶ ಸೇರಿಕೊಂಡಿದೆ. ನಮ್ಮ ಅಧಿಕಾರಿಗಳು ಸ್ವಲ್ಪ ತಕರಾರು ಮಾಡಿದರು. ನಾವು ಏನೋ good faith ನಲ್ಲಿ ಮಾಡಿದಾಗ ನೀವು ನಮ್ಮ ಮೇಲೆ case ಹಾಕಿದರೆ ಹೇಗೆ ಎಂದು ಕೇಳಿದರು. ನಾನು ಅವರಿಗೆ assure ಮಾಡಿದೆನು. ಇಲ್ಲಪ್ಪಾ, ಒಳ್ಳೆಯ ಉದ್ದೇಶದಿಂದ ಮಾಡಿರುವ ಯಾವುದೇ ಕೆಲಸಕ್ಕೆ ನಾವು ನಿಮಗೆ ತೊಂದರೆ ಮಾಡುವುದಿಲ್ಲ. ಆದರೆ ಗೊತ್ತಿದ್ದು ಕೂಡ ಶಾಮೀಲಾಗಿ ಮಾಡಿದಂತಹ ಸಂದರ್ಭದಲ್ಲಿ ನಾವು ಅಧಿಕಾರಿಗಳನ್ನು accountability ಮಾಡಲೇಬೇಕಾಗುತ್ತದೆ ಎಂದು rules draft ಮಾಡುವುದಕ್ಕೆ ನಮಗೆ ಸ್ವಲ್ಪ ಸಮಯ ತೆಗೆದುಕೊಂಡಿದೆ. Rules ಎಲ್ಲಾ ready ಆಗಿದೆ. ಅವರು ಹೇಳಿದರು. ನಕಲಿ ವ್ಯಕ್ತಿಗಳನ್ನು ಸೃಷ್ಟಿ ಮಾಡುವುದು ಅಥವಾ ನಕಲಿ ದಾಖಲೆಗಳನ್ನು ಸೃಷ್ಟಿ ಮಾಡಿದರೆ ಇಷ್ಟು ದಿನ ಏನು ಆಗುತ್ತಿತ್ತು ಎಂದರೆ, ಅದನ್ನು cancel ಮಾಡುವುದಕ್ಕೆ ನೀವು Court ಗೆ ಹೋಗಬೇಕು. ಮೊದಲು ಸಿವಿಲ್ ಕೋರ್ಟ್‌ಗೆ ಹೋಗಬೇಕು. ಆಮೇಲೆ ಹೈಕೋರ್ಟ್‌ಗೆ ಹೋಗಬೇಕು. ಆಮೇಲೆ ಸುಪ್ರೀಂಕೋರ್ಟ್‌ಗೆ ಹೋಗಬೇಕು. ಒಂದುಬಾರಿ ಯಾರಾದರು ನಕಲಿ ಮಾಡಿ registration ಮಾಡಿಬಿಟ್ಟರೆ 20 ವರ್ಷ ಹೋಗುತ್ತದೆ. ಸುಮಾರು 20 ವರ್ಷದಲ್ಲಿ ನಾನೇ ಹೋಗಿ ನನಗೆ ಅರ್ಧ ಜಮೀನು ಕೊಟ್ಟು, ಉಳಿದ ಜಮೀನನ್ನು ನೀವೇ ಇಟ್ಟುಕೊಳ್ಳಿ ಎಂದು ನಾನೇ surrender ಆಗುವುದು ನಡೆದುಕೊಂಡು ಬಂದಿತ್ತು. ಆದರೆ ಈಗ ಈ ರೀತಿ fraud ಆಗಿದ್ದನ್ನು cancel ಮಾಡುವಂತಹ powers ಅನ್ನು ನಮ್ಮ ಜಿಲ್ಲಾ ನೋಂದಣಿ ಅಧಿಕಾರಿಯವರಿಗೆ District Registrar ರವರಿಗೆ ಕೊಡುತ್ತಿದ್ದೇವೆ. ಏಕೆಂದರೆ ಅದರಿಂದ ಒಂದು quick relief ಸಿಗುತ್ತದೆ. ಜನಗಳಿಗೆ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರಳವಾಗಿ ಕೈಗೆಟುಕುವ ದೂರದಲ್ಲಿ where fraud is proven, where impersonation ನಕಲಿತ್ವ ಸಾಬೀತಾದಂತಹ ಸ್ಪಷ್ಟ ಪ್ರಕರಣದಲ್ಲಿ ಅಥವಾ ಕೆಲವರು ಸರ್ಕಾರಿ ಜಮೀನನ್ನು ನೋಂದಣಿ ಮಾಡಿಕೊಟ್ಟಿದ್ದಾರೆ ಮಹಾಭೂಪರು, ಅಂತಹ ಪ್ರಕರಣಗಳಲ್ಲಿ District Registrar ಗೆ cancel ಮಾಡುವುದಕ್ಕೆ powers ಕೊಟ್ಟಿದ್ದೇವೆ. ಅದನ್ನು notify ಮಾಡಿದರೆ ಜನಕ್ಕೆ ಅನುಕೂಲವಾಗುತ್ತದೆ ಎಂದು ಮಾನ್ಯ ಶಾಸಕರು ಒತ್ತಾಯ ಮಾಡುತ್ತಿದ್ದಾರೆ. ಅವರು ಕೇಳುತ್ತಿರುವುದು ಸರಿಯಿದೆ. Draft Rules ready ಇದೆ. ಸ್ವಲ್ಪ careful ಆಗಿ ಮಾಡುವುದಕ್ಕೆ time ತೆಗೆದುಕೊಂಡಿದೆ. ಬೇರೆ ಏನೂ ಉದ್ದೇಶ ಇಲ್ಲ. ಇದನ್ನು ಈ ತಿಂಗಳೊಳಗೆ Draft Notification ಅನ್ನು issue ಮಾಡುತ್ತೇನೆ. ಇದರಿಂದ ಮುಂದೆ ಹೋಗುವಂತಹ ಕೇಸ್‌ಗಳಿಗೆ relief ಸಿಗುತ್ತದೆ. ಅವರು ಈಗ ಒಂದು ಪ್ರಕರಣ ಆಗಿಹೋಗಿದೆ ಎಂದು ಕೇಳುತ್ತಿದ್ದಾರೆ. ಹಾಲಿ ಇರುವಂತಹ ನಿಮ್ಮಗಳ ಕಾನೂನು ಪ್ರಕಾರ ನೀವು ಸಿವಿಲ್ ಕೋರ್ಟ್‌ಗೆ ಹೋಗಬೇಕಾಗುತ್ತದೆ. ಇನ್ನು ಮುಂದೆ ಆಗುವಂತಹ ಈ ರೀತಿಯ fraud ಗೆ District Registrar ರವರ ಹತ್ತಿರವೇ simple ಆಗಿ relief ಕೊಡುವಂತಹ ಒಂದು ಸಾಧನವನ್ನು ಆದಷ್ಟು ಶೀಘ್ರದಲ್ಲಿ ಜಾರಿ ಮಾಡುತ್ತೇವೆ. Draft Rules ಅನ್ನು ಈ ತಿಂಗಳನಲ್ಲಿ notify ಮಾಡುತ್ತೇವೆ.

ಶ್ರೀ ಪಿ.ಹೆಚ್.ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):– ಮಾನ್ಯ ಸಚಿವರೇ, District Registrar ರವರಿಗೆ ಪ್ರಕರಣಗಳನ್ನು ವಿಲೇವಾರಿ ಮಾಡುವುದಕ್ಕೆ ನಿಗದಿಪಡಿಸಿಕೊಡಿ.

ಶ್ರೀ ಎನ್.ನಾಗರಾಜು (ಎಂ.ಟಿ.ಬಿ):– ಮಾನ್ಯ ಸಭಾಪತಿಯವರೇ, Court ಆದೇಶ ಕೊಟ್ಟಂತೆ ಆ time ನಲ್ಲಿ ಅವರು direction ಕೊಡುತ್ತಾರೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಶ್ನೆ ಸಂಖ್ಯೆ: 399

ರಾಜ್ಯದ ದೇವಸ್ಥಾನಗಳಲ್ಲಿ ಪೂಜಾ ಕೈಂಕರ್ಯಗಳನ್ನು ಕಲ್ಪಿಸಲು ಅನುಸರಿಸುತ್ತಿರುವ ಭಾಷಾ ಮಾಧ್ಯಮದ ಬಗ್ಗೆ

ಕ್ರ. ಸಂ.	ಪ್ರಶ್ನೆ	ಉತ್ತರ
(ಅ)	ರಾಜ್ಯದ ದೇವಾಲಯಗಳಲ್ಲಿ ಪೂಜಾ ಕೈಂಕರ್ಯಗಳನ್ನು ಕಲ್ಪಿಸಲು ಆಗಮ ಶಿಕ್ಷಣದಲ್ಲಿ ಅನುಸರಿಸುತ್ತಿರುವ ಭಾಷಾ ಮಾಧ್ಯಮ ಯಾವುದು:	ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997 ರ ಸೆಕ್ಷನ್ 58 ರಲ್ಲಿ ಕಲ್ಪಿಸಿರುವಂತೆ ಧಾರ್ಮಿಕ ಸಂಸ್ಥೆಗೆ ಸೂಕ್ತವಾದ ಸಂಪ್ರದಾಯ, ಆಚರಣೆ, ಸಮಾರಂಭ ಮತ್ತು ಪದ್ಧತಿಗಳಲ್ಲಿ ಹಸ್ತಕ್ಷೇಪವನ್ನು ಮಾಡದೇ ಮತ್ತು ಅವುಗಳನ್ನು ಪಾಲಿಸತಕ್ಕದ್ದರಿಂದ ರಾಜ್ಯದ ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಯಲ್ಲಿ ಬರುವ ದೇವಾಲಯಗಳಲ್ಲಿ ಹಿಂದಿನಿಂದಲೂ ನಡೆದು ಬರುತ್ತಿರುವ ರೂಢಿ, ಸಂಪ್ರದಾಯ ಪದ್ಧತಿಗಳಿಗೆ ಅನುಸಾರವಾಗಿ ಮತ್ತು ರೂಢಿ ಮತ್ತು ಸಂಪ್ರದಾಯಗಳಿಗೆ ಯಾವುದೇ ಭಾದಕ ವಾಗದಂತೆ ಕ್ರಮವಹಿಸ ಬೇಕಾಗಿರುತ್ತದೆ. ಈ ನಿಟ್ಟಿನಲ್ಲಿ ಆಗಮ ಶಿಕ್ಷಣದಲ್ಲಿ ಸಂಸ್ಕೃತ ಭಾಷೆ (ದೇವನಾಗರಿ ಲಿಪಿ) ಯಲ್ಲಿ ಗ್ರಂಥಗಳು ಇರುವುದರಿಂದ ಸಂಸ್ಕೃತ ಭಾಷೆ ಹಾಗೂ ಕನ್ನಡ ಭಾಷೆಯಲ್ಲಿ ಆಗಮ ಶಿಕ್ಷಣ ಪಾಠ ಪ್ರವಚನಗಳನ್ನು ನಡೆಸಿಕೊಂಡು ಬರಲಾಗುತ್ತಿದೆ. ಆಗಮ ಶಿಕ್ಷಣವನ್ನು ಬೋಧಿಸುವ ಸಂದರ್ಭದಲ್ಲಿ ಸಂಸ್ಕೃತ ಪಾಠಶಾಲೆಯ ಬೋಧಕ ವರ್ಗದ ಅಧ್ಯಾಪಕರು/ ಪ್ರಾಧ್ಯಾಪಕರುಗಳು ಆಗಮ ಶಿಕ್ಷಣಾರ್ಥಿಗಳಿಗೆ ಕನ್ನಡದಲ್ಲಿ ಅರ್ಥಗಳನ್ನು ಹೇಳಿ ಬೋಧನೆಯ ಸಂದರ್ಭದಲ್ಲಿ ಕನ್ನಡವನ್ನು ಸಹ ಹೇಳಿ ಕೊಡಲಾಗುತ್ತಿದ್ದು, ವಿದ್ಯಾರ್ಥಿಗಳು ಪರೀಕ್ಷೆಯನ್ನು ಕನ್ನಡ ಮತ್ತು ಸಂಸ್ಕೃತ ಎರಡು ಭಾಷೆಗಳಲ್ಲಿ ಬರೆಯಲು ಅವಕಾಶ ಕಲ್ಪಿಸಲಾಗಿದೆ. ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ರಾಜ್ಯದ ದೇವಾಲಯಗಳಲ್ಲಿ ಪೂಜಾ ಕೈಂಕರ್ಯಗಳನ್ನು ಕಲ್ಪಿಸಲು ಆಗಮ ಶಿಕ್ಷಣದಲ್ಲಿ ಸಂಸ್ಕೃತ ಮತ್ತು ಕನ್ನಡ ಭಾಷಾ ಮಾಧ್ಯಮವನ್ನು ಅನುಸರಿಸಲಾಗುತ್ತಿದೆ
(ಆ)	ಇದನ್ನು ಸಂಪೂರ್ಣವಾಗಿ ಕನ್ನಡದಲ್ಲಿ ಕಲಿಸಲು ಸರ್ಕಾರ ಯಾವ ರೀತಿಯ ಕ್ರಮ ಕೈಗೊಳ್ಳುತ್ತದೆ:	ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿ 2 ಸರ್ಕಾರಿ ಆಗಮ ಪಾಠಶಾಲೆಗಳು ಹಾಗೂ 5 ಅನುದಾನಿತ ಆಗಮ ಪಾಠಶಾಲೆಗಳಿದ್ದು, ವಿವರಗಳು ಈ ಕೆಳಕಂಡಂತಿದೆ ಇದಲ್ಲದೆ ಇಲಾಖೆಯಿಂದ ಮಾನ್ಯತೆ ಪಡೆದಿರುವ ಒಟ್ಟು 28 ಪಾಠಶಾಲೆಗಳಿದ್ದು, ವಿವರಗಳನ್ನು **ಅನುಬಂಧ**ದಲ್ಲಿ ಲಗತ್ತಿಸಿದೆ. ಈ ಪಾಠ ಶಾಲೆಗಳ ಮೂಲಕ ಅರ್ಚನ ವೃತ್ತಿಯನ್ನು ಕೈಗೊಳ್ಳುವುದಕ್ಕೆ ಅಗತ್ಯವಿರುವ ಆಗಮ ಶಿಕ್ಷಣದ ಪಾಠ ಪ್ರವಚನಗಳನ್ನು ವಿದ್ಯಾರ್ಥಿಗಳಿಗೆ ಅರ್ಥ ವಾಗುವಂತೆ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕನ್ನಡದಲ್ಲಿಯೇ ಬೋಧಿಸಲಾಗುತ್ತಿದೆ.

ಕ್ರ. ಸಂ	ಪಾಠಶಾಲೆಗಳ ವಿವರ
	ಸರ್ಕಾರಿ ಪಾಠಶಾಲೆಗಳು
1	ಸರ್ಕಾರಿ ಮಹಾರಾಜ ಸಂಸ್ಕೃತ ಕಾಲೇಜು, ಮೈಸೂರು
2	ಸರ್ಕಾರಿ ಸಂಸ್ಕೃತ ಕಾಲೇಜು, ಮೇಲುಕೋಟೆ.
	ಅನುದಾನಿತ ಪಾಠಶಾಲೆಗಳು
1	ಶ್ರೀ ಕಾಲಭೈರವೇಶ್ವರ ಸಂಸ್ಕೃತ ವೇದ ಆಗಮ ಮಹಾವಿದ್ಯಾಲಯ, ಶ್ರೀ ಆದಿಚುಂಚನಗಿರಿಕ್ಷೇತ್ರ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ.
2	ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿ ಸಂಸ್ಕೃತ ವೇದ ಜ್ಯೋತಿಷ್ಯ ಮತ್ತು ವೀರಶೈವಾಗಮ ಪಾಠಶಾಲೆ, ಎಡೆಯೂರು
3	ಶ್ರೀ ಮಹದೇಶ್ವರ ವೇದ ಮತ್ತು ಆಗಮ ಪಾಠಶಾಲೆ, ಶ್ರೀ ಸಾಲೂರು ಮಠ, ಮಹದೇಶ್ವರ ಬೆಟ್ಟ.
4	ಶ್ರೀ ಮೇಧಾ ದಕ್ಷಿಣಾ ಮೂರ್ತಿ ವೇದ ಭವನ ಸಂಸ್ಕೃತ ಮಹಾವಿದ್ಯಾಲಯ, ಗೋಕರ್ಣ.
5	ಪೂರ್ಣಪ್ರಜ್ಞ ವಿದ್ಯಾಪೀಠ ಸಂಸ್ಕೃತ ಸ್ನಾತಕ ಸ್ನಾತಕೋತ್ತರ ಅಧ್ಯಯನ ಕೇಂದ್ರ, ಬೆಂಗಳೂರು.

ಆಗಮ ಶಿಕ್ಷಣದ ಪಾಠ ಪ್ರವಚನಗಳು ಅರ್ಥವಾಗುವಂತೆ ಕನ್ನಡದಲ್ಲಿಯೇ ಬೋಧಿಸಲಾಗುತ್ತಿರುತ್ತದೆ ಹಾಗೆಯೇ ಪರೀಕ್ಷೆ ಪಡೆಯುವ ವಿದ್ಯಾರ್ಥಿಗಳು ಕನ್ನಡ ಭಾಷೆ / ಕನ್ನಡ ಲಿಪಿಯಲ್ಲಿಯೇ ಉತ್ತರಿಸಲು ಅನುಕೂಲ ವಾಗುವಂತೆ ವ್ಯವಸ್ಥೆ ಕಲ್ಪಿಸಲಾಗಿದೆ. ಶೇಕಡ 90ಕ್ಕೂ ಹೆಚ್ಚು ವಿದ್ಯಾರ್ಥಿಗಳು ಆಗಮ ಪರೀಕ್ಷೆಗಳನ್ನು ಕನ್ನಡದಲ್ಲಿಯೇ ಬರೆಯುತ್ತಾರೆ.

ಸರ್ವಾಗಮ ಪ್ರವರ ಮತ್ತು ಪ್ರವೀಣ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸುವ ಸಲುವಾಗಿ ಸುಮಾರು 18 ವರ್ಷಗಳು ಕಳೆದ ನಂತರ "**ಆಗಮ ಘಟಿಕೋತ್ಸವ**" ಕಾರ್ಯಕ್ರಮವನ್ನು ನಡೆಸಲು ಉದ್ದೇಶಿಸಿ ಪ್ರಥಮ ಹಂತದಲ್ಲಿ 2019-20, 2020-21 ಮತ್ತು 2021-22 ಹಾಗೂ 2022-23 ಮತ್ತು 2023-24ನೇ ಸಾಲುಗಳ ಸರ್ವಾಗಮ ಪ್ರವರ ಮತ್ತು ಪ್ರವೀಣ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸುವ ಸಂಬಂಧ **ದಿನಾಂಕ:21.02.2025**ರಂದು ಮೈಸೂರಿನ ಜಗನ್ ಮೋಹನ ಅರಮನೆಯ ಸಭಾಂಗಣದಲ್ಲಿ ನಡೆಸಿದ **ಘಟಿಕೋತ್ಸವ ಕಾರ್ಯಕ್ರಮವನ್ನು** ಆಯೋಜಿಸಿ ಸುಮಾರು 1700 ವಿದ್ಯಾರ್ಥಿಗಳಿಗೆ ಹಾಗೂ ಈ ಹಿಂದಿನ ಯಾವುದೇ ಸಾಲುಗಳಲ್ಲಿ ಸರ್ವಾಗಮ ಪ್ರವರ / ಪ್ರವೀಣ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಎಲ್ಲಾ ಅರ್ಹ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಲು ಕ್ರಮವಹಿಸಲಾಗಿರುತ್ತದೆ.

ಮುಂದುವರೆದು, ಬೆಂಗಳೂರು ನಗರ, ಬಸವನಗುಡಿಯ ಶ್ರೀ ಕಾರಂಜಿ ಆಂಜನೇಯಸ್ವಾಮಿ ದೇವಾಲಯದ ಆವರಣದಲ್ಲಿರುವ ಶ್ರೀ ಶೃಂಗೇರಿ ಶಾರದಾ ಕಲ್ಯಾಣ ಮಂಟಪದಲ್ಲಿ ದಿನಾಂಕ: 19.07.2025 ರಂದು ನಡೆಸಿದ "**ಆಗಮ ಘಟಿಕೋತ್ಸವ**" ಕಾರ್ಯಕ್ರಮದಲ್ಲಿ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

		ಸುಮಾರು 2602 ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರವನ್ನು ವಿತರಿಸಲು ಕ್ರಮವಹಿಸಲಾಗಿರುತ್ತದೆ. ಈ ರೀತಿಯಾಗಿ ರಾಜ್ಯದ ದೇವಾಲಯಗಳಲ್ಲಿ ಪೂಜಾ ಕೈಂಕರ್ಯಗಳನ್ನು ಕಲ್ಪಿಸಲು ಆಗಮ ಶಿಕ್ಷಣದಲ್ಲಿ ವಿದ್ಯಾರ್ಥಿಗಳು ಕನ್ನಡ ಭಾಷೆಯಲ್ಲಿ ಕಲಿಯಲು ಪ್ರೋತ್ಸಾಹ ನೀಡಲಾಗುತ್ತಿದೆ.
(ಇ)	ರಾಜ್ಯದಲ್ಲಿರುವ ದೇವಾಲಯಗಳ ಒಳಗೆ ಮತ್ತು ಹೊರಗೆ ಪರಿಸರವನ್ನು ಸಂಪೂರ್ಣವಾಗಿ ಸ್ವಚ್ಛವಾಗಿಡಲು ಇಲಾಖೆ ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣ ಮಾಹಿತಿ ಒದಗಿಸುವುದು)	ರಾಜ್ಯದಲ್ಲಿರುವ ಅಧಿಸೂಚಿತ/ಘೋಷಿತ ದೇವಾಲಯ/ಸಂಸ್ಥೆಗಳ ಒಳಗೆ ಮತ್ತು ಹೊರಗೆ ಪರಿಸರವನ್ನು ಸಂಪೂರ್ಣವಾಗಿ ಸ್ವಚ್ಛವಾಗಿಡಲು ಧಾರ್ಮಿಕ ದತ್ತಿ ಇಲಾಖೆ ವತಿಯಿಂದ ಈ ಕೆಳಕಂಡಂತೆ ಕ್ರಮವಹಿಸಲಾಗಿದೆ. 1) ಸ್ವಚ್ಛ ಮಂದಿರ ಅಭಿಯಾನ ಯೋಜನೆಯನ್ನು ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಗೆ ಬರುವ ರಾಜ್ಯದ ಸಮೂಹ 'ಎ', 'ಬಿ' ಮತ್ತು 'ಸಿ' ಪ್ರವರ್ಗದ ದೇವಾಲಯಗಳಲ್ಲಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಸರ್ಕಾರದ ಸುತ್ತೋಲೆ ಸಂಖ್ಯೆ:ಕಂಇ 83 ಮುಐಬಿ 2015, ದಿನಾಂಕ:29.08.2015ರ ಸುತ್ತೋಲೆಯನ್ನು ಹೊರಡಿಸಿರುತ್ತದೆ. 2) ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಗೆ ಬರುವ ಎಲ್ಲಾ ಅಧಿಸೂಚಿತ ಸಂಸ್ಥೆಗಳಲ್ಲಿ ಸ್ವಚ್ಛ ಮಂದಿರ ಅಭಿಯಾನ ಯೋಜನೆಯನ್ನು ಅನುಷ್ಠಾನ ಗೊಳಿಸುವ ಬಗ್ಗೆ, ಧಾರ್ಮಿಕ ದತ್ತಿ ಆಯುಕ್ತರ ಕಛೇರಿಯಿಂದ ಸುತ್ತೋಲೆ ಸಂಖ್ಯೆ:ಎಡಿಎಂ-11 ಸಿಆರ್-219/2014-15 ದಿನಾಂಕ:10.04.2019ರ ಸುತ್ತೋಲೆಯನ್ನು ಹೊರಡಿಸಲಾಗಿದೆ. 3) ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿರುವ ದೇವಾಲಯಗಳಿಂದ, ಭಕ್ತಗಳಿಂದ ಉತ್ಪತ್ತಿಯಾಗುವ ಘನ ತ್ಯಾಜ್ಯಗಳನ್ನು ವೈಜ್ಞಾನಿಕವಾಗಿ ನಿರ್ವಹಣೆ ಮಾಡುವ ಸಂಬಂಧ ಧಾರ್ಮಿಕ ದತ್ತಿ ಆಯುಕ್ತರ ಕಛೇರಿಯಲ್ಲಿ Project management unit (PMU) ಘಟಕವೊಂದನ್ನು ಸ್ಥಾಪಿಸಿ, ತಜ್ಞರನ್ನು ಒಳಗೊಂಡ ತಂಡದಿಂದ ಪ್ರಥಮ ಹಂತದಲ್ಲಿ ಇಲಾಖೆಗೆ ಸೇರಿದ ಪ್ರಮುಖ 25 ದೇವಾಲಯಗಳನ್ನು ಆಯ್ಕೆ ಮಾಡಿಕೊಂಡು ಘನ ಮತ್ತು ದ್ರವ ತ್ಯಾಜ್ಯ ಘಟಕಗಳನ್ನು ಸ್ಥಾಪಿಸಲು ಸ್ಥಳ ಗುರುತಿಸಿಕೊಂಡು ತ್ಯಾಜ್ಯ ವಿಲೇವಾರಿಯನ್ನು ವೈಜ್ಞಾನಿಕವಾಗಿ ನಿರ್ವಹಿಸಲು ಕ್ರಮವಹಿಸಲಾಗಿರುತ್ತದೆ 4) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ 09.06.2025ರಂದು ನಡೆದ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಕಟ್ಟುನಿಟ್ಟಾಗಿ ಸೂಚನೆ ನೀಡಿ ರಾಜ್ಯದ ಧಾರ್ಮಿಕ ದತ್ತಿ ಇಲಾಖಾ ದೇವಸ್ಥಾನಗಳಲ್ಲಿ ನೀರಿನ ಬಾಟಲ್ ಸೇರಿದಂತೆ ಎಲ್ಲಾ ರೀತಿಯ ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣವಾಗಿ 2025ನೇ ಆಗಸ್ಟ್ 15 ರಿಂದ ಕಡ್ಡಾಯವಾಗಿ ನಿಷೇಧಿಸಲು ಸೂಚಿಸಿರುವಂತೆ ಧಾರ್ಮಿಕ ದತ್ತಿ ಆಯುಕ್ತರ ಕಛೇರಿಯಿಂದ ದಿನಾಂಕ:11.06.2025ರ ಸುತ್ತೋಲೆಯನ್ನು ಹೊರಡಿಸಿ ಎಲ್ಲಾ ಅಧಿಕಾರಿಗಳಿಗೆ ಸೂಚನೆ ನೀಡಿದ್ದು, ಅದರಂತೆ ಇಲಾಖೆಯ ದೇವಾಲಯಗಳಲ್ಲಿ ಪ್ಲಾಸ್ಟಿಕ್ ನಿಷೇಧ ಮತ್ತು ಸ್ವಚ್ಛತೆ ನಿರ್ವಹಣೆಗೆ ಕ್ರಮ ಕೈಗೊಳ್ಳಲಾಗುತ್ತಿದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶಿತರು):- ಮಾನ್ಯ ಸಭಾಪತಿಯವರೇ, ಆಗಮ ಶಿಕ್ಷಣದಲ್ಲಿ ಸಂಸ್ಕೃತ ಮತ್ತು ಕನ್ನಡ ಭಾಷಾ ಮಾಧ್ಯಮವನ್ನು ಅನುಸರಿಸುತ್ತಿರುವುದನ್ನು ಕೇಳಿ ನನಗೆ ಬಹಳ ಸಂತೋಷವಾಯಿತು. ನಾನು ಅದನ್ನು ಸ್ವಾಗತ ಮಾಡುತ್ತೇನೆ. ಶೇ.೨೦ಕ್ಕೂ ಹೆಚ್ಚು ವಿದ್ಯಾರ್ಥಿಗಳು ಆಗಮ ಪರೀಕ್ಷೆಗಳನ್ನು ಕನ್ನಡದಲ್ಲಿಯೇ ಬರೆಯುತ್ತಾರೆ ಎಂದು ಉಲ್ಲೇಖ ಮಾಡಿದ್ದಾರೆ.

ಸಭಾಪತಿಯವರು:- ಮಾನ್ಯ ಕಂದಾಯ ಸಚಿವರೇ, ತಾವು ಹೋಗಬಹುದು.

ಶ್ರೀಮತಿ ಭಾರತಿ ಶೆಟ್ಟಿ:- ಮಾನ್ಯ ಸಭಾಪತಿಯವರೇ, ನಾವು ದೇವಾಲಯಗಳಿಗೆ ಹೋದಾಗ ಶ್ಲೋಕಗಳನ್ನೆಲ್ಲಾ ಸಂಸ್ಕೃತದಲ್ಲೇ ಹೇಳುತ್ತಾರೆ. ತಮಿಳುನಾಡಿಗೆ ಹೋದರೆ ಅಲ್ಲಿ ತಮಿಳನಲ್ಲಿಯೇ ಹೇಳುತ್ತಾರೆ. ನಮ್ಮ ಭಕ್ತಾದಿಗಳು ದೇವಸ್ಥಾನಕ್ಕೆ ಹೋದಾಗ ಸಂಸ್ಕೃತ ಎಲ್ಲರಿಗೂ ಬರುವುದಿಲ್ಲ. ಆ ಶ್ಲೋಕಗಳನ್ನು ಕೂಡ ಕನ್ನಡದಲ್ಲಿ ಹೇಳಿದರೆ ಅರ್ಥವಾಗುತ್ತದೆ. ಉದಾಹರಣೆಗೆ ಚಿಕ್ಕಮಗಳೂರಿನಲ್ಲಿ ಶ್ರೀ ಹೀರೆಮಗಳೂರು ಕಣ್ಣನ್ ಎಂಬುವರು ಮಂತ್ರಗಳನ್ನು ಕನ್ನಡದಲ್ಲೇ ಹೇಳುತ್ತಾರೆ. ಬಹಳ ಚೆನ್ನಾಗಿ ಅರ್ಥವಾಗುತ್ತದೆ. ಆ ರೀತಿ ಎಲ್ಲಾ ಕಡೆ ಆದಲ್ಲಿ ಬಹಳ ಒಳ್ಳೆಯದಾಗುತ್ತದೆ ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಆಮೇಲೆ ದಿನಾಂಕ 21.02.2025ರಂದು ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸುವ ಸಂಬಂಧ ಮೈಸೂರಿನ ಜಗನ್ ಮೋಹನ ಅರಮನೆಯ ಸಭಾಂಗಣದಲ್ಲಿ ಘಟಿಕೋತ್ಸವ ಕಾರ್ಯಕ್ರಮವನ್ನು ಮಾಡಿದ್ದೀರಿ. ಉತ್ತರದಲ್ಲಿ ಬರೆದಿರುವುದು Printing mistake ಆಗಿದೆಯೋ ಏನೋ ಗೊತ್ತಿಲ್ಲ. "ಸರ್ವಾಗಮ ಪ್ರವರ/ ಪ್ರವೀಣ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಎಲ್ಲಾ ಅರ್ಹ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಲು ಕ್ರಮವಹಿಸಲಾಗಿರುತ್ತದೆ " ಎಂದು ಹೇಳಿರುವುದು ಸರಿಯಲ್ಲ. ಆದರೆ "ಕ್ರಮವಹಿಸಿ ಪ್ರಮಾಣ ಪತ್ರವನ್ನು ವಿತರಿಸಲಾಗುತ್ತದೆ " ಎಂದು ಬರೆಯಬೇಕಾಗಿತ್ತು. ಆ ರೀತಿ ಬರೆದರೆ ಆ sentence ಸರಿಯಾಗುತ್ತದೆ.

ಆಮೇಲೆ ನಿಮ್ಮ ಉತ್ತರದಲ್ಲಿ ರಾಜ್ಯದಲ್ಲಿರುವ ಅಧಿಸೂಚಿತ/ಘೋಷಿತ ದೇವಾಲಯ ಸಂಸ್ಥೆಗಳ ಒಳಗೆ ಮತ್ತು ಹೊರಗೆ ಪರಿಸರವನ್ನು ಸಂಪೂರ್ಣವಾಗಿ ಸ್ವಚ್ಛವಾಗಿಡಲು ಧಾರ್ಮಿಕ ದತ್ತಿ ಇಲಾಖೆ ವತಿಯಿಂದ ಪ್ಯಾರಾ-1 ರಿಂದ ಪ್ಯಾರ-4 ರವರೆಗೆ ಮಾಹಿತಿಗಳನ್ನು ಕೊಟ್ಟಿದ್ದಾರೆ. ಈ ಮಾಹಿತಿಗಳ ಪ್ರಕಾರ ಈ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆಯುತ್ತದೆಯೇ? ಸ್ವಚ್ಛತೆಯ ಬಗ್ಗೆ ಸರ್ಕಾರಕ್ಕೆ ಸಮಾಧಾನ ಇದೆಯೇ? ಇದು ಸರಿಯಾಗಿ ಅನುಷ್ಠಾನವಾಗುತ್ತಿದೆಯೇ ಎಂದು ನಾನು ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ಕೇಳುವುದಕ್ಕೆ ಬಯಸುತ್ತೇನೆ. ಇಲಾಖೆಯ ದೇವಾಲಯಗಳಲ್ಲಿ 2025ನೇ ಆಗಸ್ಟ್ 15 ರಿಂದ ಕಡ್ಡಾಯವಾಗಿ ಪ್ಲಾಸ್ಟಿಕ್ ನಿಷೇಧ ಮತ್ತು ಸ್ವಚ್ಛತೆ ನಿರ್ವಹಣೆಗೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಹೇಳಿದ್ದೀರಿ. ಆದರೆ ದೇವಾಲಯದ ಆವರಣಗಳಲ್ಲಿ ಬಾಳೆಎಲೆ ಮತ್ತಿತರೆ ವಸ್ತುಗಳು ಅಲಲ್ಲೇ ಬಿದ್ದಿದ್ದು ಸ್ವಚ್ಛತೆಯಾಗಿರುವುದಿಲ್ಲ. ಉದಾಹರಣೆಗೆ ಹೇಳುವುದಾದರೆ, ತಿರುಪತಿಗೆ ಲಕ್ಷಾಂತರ ಭಕ್ತರು ಬಂದರೂ ಕೂಡ ಅಲ್ಲಿ ಸ್ವಚ್ಛತೆ ಬಹಳ ಚೆನ್ನಾಗಿರುತ್ತದೆ. ಆ ರೀತಿ ನಮ್ಮ ಕರ್ನಾಟಕದಲ್ಲೂ ಕೂಡ ಇಲಾಖೆಯ ದೇವಾಲಯಗಳಲ್ಲಿ ನಿರ್ವಹಣೆ ಮಾಡಬಹುದೇ? ಆಮೇಲೆ ಅಧೀಸೂಚಿತವಲ್ಲದ ಶ್ರೀಮಂತ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದೇವಾಲಯಗಳಿರುತ್ತವೆ. ಸರ್ಕಾರ ಹಣವನ್ನು ಆಡಳಿತ ಮಂಡಳಿಯಿಂದ ಕಟ್ಟಿಸಿಕೊಂಡು ಅಲ್ಲಿ ಸ್ವಚ್ಛತೆ ಮಾಡಬೇಕು ಅಥವಾ ಆಡಳಿತ ಮಂಡಳಿಯವರಿಗೆ ಒಂದು ಮಾನದಂಡವನ್ನು ಹಾಕಿ, ನೀವು ಸ್ವಚ್ಛತೆಯನ್ನು ಮಾಡಲೇಬೇಕು ಎಂದು ಹೇಳಿದರೆ ಬಹುಶಃ ಆ ದೇವಾಲಯಗಳ ಪರಿಸರ ಸ್ವಚ್ಛವಾಗಿರುತ್ತದೆ. ಇವತ್ತಿಗೂ ಕೂಡ ಅನೇಕ ದೇವಾಲಯಗಳಿಗೆ ಹೋದಲ್ಲಿ ಅಲ್ಲಲ್ಲೇ ರಾಶಿ ಕಸ ಹಾಕಿರುತ್ತಾರೆ. ಅಲ್ಲಿ ಸೊಳ್ಳೆಗಳು ಮತ್ತು ಇತರೆ ರೋಗರುಜಿನಗಳು ಬರುತ್ತಿದೆ. ಇದರ ಬಗ್ಗೆ ಕೂಡ ಸರ್ಕಾರ ಗಮನವಹಿಸಬೇಕೆಂದು ಕೇಳುತ್ತಿದ್ದೇನೆ. ಮಾನ್ಯ ಸಚಿವರು ಉತ್ತರ ಕೊಟ್ಟಿರುವುದೆಲ್ಲಾ ಸರಿ ಇದೆ. ಆದರೆ ಅದು ಅನುಷ್ಠಾನ ಆಗುತ್ತಿಲ್ಲ.

ಸಭಾಪತಿಯವರು:– ಆಯಿತು, ಅನುಷ್ಟಾನ ಮಾಡಿಸೋಣ.

ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಮತ್ತು ಮುಜರಾಯಿ ಸಚಿವರು):– ಮಾನ್ಯ ಸಭಾಪತಿಯವರೇ, ಆಗಮ ಶಿಕ್ಷಣದ ಬಗ್ಗೆ ಹೇಳುವುದಾದರೆ, 2 ಸರ್ಕಾರಿ ಆಗಮ ಪಾಠಶಾಲೆಗಳು ಹಾಗೂ 5 ಅನುದಾನಿತ ಆಗಮ ಪಾಠಶಾಲೆಗಳಿವೆ ಮತ್ತು ಖಾಸಗಿ 28 ಪಾಠಶಾಲೆಗಳಿವೆ. 19 ವರ್ಷಗಳಿಂದ ಅವರಿಗೆ certificates ಕೊಟ್ಟಿರಲಿಲ್ಲ, ಕೊಟ್ಟಿದ್ದೇವೆ.

ಶ್ರೀಮತಿ ಭಾರತಿ ಶೆಟ್ಟಿ:– ಮಾನ್ಯ ಸಚಿವರೇ, ಬಹಳ ಒಳ್ಳೆಯ ಕೆಲಸ.

ಶ್ರೀ ರಾಮಲಿಂಗಾರೆಡ್ಡಿ:– ಮಾನ್ಯ ಸಭಾಪತಿಯವರೇ, ಫೆಬ್ರವರಿಯಲ್ಲಿ ನಾವು 1700 ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರವನ್ನು ವಿತರಿಸಿದ್ದೇವೆ. ದಿನಾಂಕ 19.07.2025 ರಂದು ನಡೆಸಿದ ಆಗಮ ಘಟಿಕೋತ್ಸವ ಕಾರ್ಯಕ್ರಮದಲ್ಲಿ ಸುಮಾರು 2,200 ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ಕೊಟ್ಟಿದ್ದೇವೆ. ಇನ್ನೂ ಸಾಕಷ್ಟು ವಿದ್ಯಾರ್ಥಿಗಳಿಗೆ ಕೊಡಬೇಕಿದೆ.

ಶ್ರೀಮತಿ ಭಾರತಿ ಶೆಟ್ಟಿ:– ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೇ, ತಮ್ಮ ಉತ್ತರದಲ್ಲಿ "ಎಲ್ಲಾ ಅರ್ಹ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಲು ಕ್ರಮವಹಿಸಲಾಗಿರುತ್ತದೆ" ಎಂದು ಹೇಳಿದ್ದೀರಿ, ಇದು ತಪ್ಪಾಗಿದೆ. ಕ್ರಮವಹಿಸಿ ವಿತರಿಸಲಾಗಿದೆ ಎಂದು ಬರೆಯಬೇಕಾಗಿತ್ತು.

ಶ್ರೀ ರಾಮಲಿಂಗಾರೆಡ್ಡಿ:– ಮಾನ್ಯ ಸಭಾಪತಿಯವರೇ, ಆಯಿತು mistake ಆಗಿದೆ. ಇನ್ನೂ ಎಲ್ಲರಿಗೂ ಕೂಡ ಡಿಸೆಂಬರ್‌ನಲ್ಲಿ ಕೊಡುತ್ತೇವೆ. ಅಂದರೆ ಒಂದೇ ವರ್ಷದಲ್ಲಿ 3 ಘಟಿಕೋತ್ಸವ ಕಾರ್ಯಕ್ರಮಗಳನ್ನು ಮಾಡಿ ಅವರಿಗೆ certificate ಕೊಡುವ ಕೆಲಸ ಮಾಡುತ್ತೇವೆ. ಎರಡನೆಯದಾಗಿ, ಸಂಸ್ಕೃತದ ಮಂತ್ರಗಳನ್ನು ಕನ್ನಡದಲ್ಲಿ ಹೇಳುವುದನ್ನು ನಾನು ಕೂಡ ಕೇಳಿದ್ದೇನೆ. ಆ ರೀತಿ practice ಮಾಡುವುದಕ್ಕೆ ಹೇಳಲಾಗುವುದು. ಏಕೆಂದರೆ ಸಂಸ್ಕೃತದಲ್ಲಿ ಮಂತ್ರ ಹೇಳಿದರೆ ಬಹಳಷ್ಟು ಜನಕ್ಕೆ ಅರ್ಥವಾಗುವುದಿಲ್ಲ. ಅದನ್ನೇ ಕನ್ನಡದಲ್ಲಿ ಹೇಳಿದರೆ ಸಹಜವಾಗಿ ಎಲ್ಲರಿಗೂ ಅರ್ಥವಾಗಿ ಸಂತೋಷದ ಭಾವನೆ ಮೂಡುತ್ತದೆ. ಅವರು ಏನು ಹೇಳುತ್ತಿದ್ದಾರೆಂದು ನಮಗೂ ಕೂಡ ಅರ್ಥವಾಗುತ್ತದೆ. ಇನ್ನು 2025ನೇ ಆಗಸ್ಟ್ 15 ರಿಂದ ಕಡ್ಡಾಯವಾಗಿ ಪ್ಲಾಸ್ಟಿಕ್ ನಿಷೇಧ ಮಾಡುತ್ತೇವೆ. ಕಟ್ಟುನಿಟ್ಟಾಗಿ ಪ್ಲಾಸ್ಟಿಕ್ ನಿಷೇಧ ಮಾಡುವುದಲ್ಲದೇ ಅಲ್ಲಿ ಸ್ವಚ್ಛತೆಗೂ ಕೂಡ ಆದ್ಯತೆ ಕೊಡಬೇಕು. ನಾನು ದಕ್ಷಿಣ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕನ್ನಡ ಮತ್ತು ಉಡುಪಿಗೆ ಹೋಗಿದ್ದೆನು. ಅಲ್ಲಿ ಸ್ವಚ್ಛತೆಗೆ ಬಹಳ ಆದ್ಯತೆ ಕೊಡುತ್ತಾರೆ. ಅದೇ ರೀತಿ ಬೇರೆ ಕಡೆ ಕೂಡ ಇರಬೇಕು, ಅದಕ್ಕೆ ನಾನು ಪ್ರಯತ್ನ ಮಾಡುತ್ತೇವೆ.

ಪ್ರಶ್ನೆ ಸಂಖ್ಯೆ.443

ಸಭಾಪತಿಯವರು:– ಹೆಚ್.ಎಸ್.ಗೋಪಿನಾಥ್‌ರವರೇ, ತಮ್ಮ ಪ್ರಶ್ನೆ ವರ್ಗಾವಣೆಯಾಗಿದೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(668)13.8.2025/12.00/ಎಂ.ಎಂ-ವಿ.ಕೆ (ಸಭಾಪತಿಯವರ ಉಪಸ್ಥಿತಿ)

ಪ್ರಶ್ನೆ ಸಂಖ್ಯೆ: 354

ದೇವಸ್ಥಾನಗಳಲ್ಲಿ ನೀರಿನ ಬಾಟಲ್ ಸೇರಿದಂತೆ ಪ್ಲಾಸ್ಟಿಕ್ ಉತ್ಪನ್ನಗಳ ನಿಷೇಧ ಕುರಿತು

	ಪ್ರಶ್ನೆ	ಉತ್ತರ
ಅ)	ರಾಜ್ಯದ ದೇವಸ್ಥಾನಗಳಲ್ಲಿ ನೀರಿನ ಬಾಟಲ್ ಸೇರಿದಂತೆ ಎಲ್ಲಾ ರೀತಿಯ ಪ್ಲಾಸ್ಟಿಕ್ ಉತ್ಪನ್ನಗಳ ಬಳಕೆಯನ್ನು ನಿಷೇಧಿಸಲು ಸರ್ಕಾರ ಉದ್ದೇಶಿಸಿದೆಯೇ ಇದ್ದಲ್ಲಿ ಈ ಆದೇಶ ಎಂದಿನಿಂದ ಜಾರಿಗೆ ಬರಲಿದೆ.	➢ ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ:09.06.2025ರಂದು ನಡೆದ ಸಭೆಯಲ್ಲಿ ಧಾರ್ಮಿಕ ದತ್ತಿ ಇಲಾಖೆಯ ಅಧಿಸೂಚಿತ/ ಘೋಷಿತ ದೇವಾಲಯ/ಸಂಸ್ಥೆಗಳ ಪರಿಸರವನ್ನು ಸ್ವಚ್ಛವಾಗಿಡಲು ಉದ್ದೇಶಿಸಿ 2025 ನೇ ಆಗಸ್ಟ್ 15 ರಿಂದ ಅನ್ವಯವಾಗುವಂತೆ ಪರಿಣಾಮಕಾರಿಯಾಗಿ ಮತ್ತು ಕಡ್ಡಾಯವಾಗಿ ಜಾರಿಗೆ ಬರುವಂತೆ ದೇವಾಲಯಗಳಲ್ಲಿ One time plastic ಬಳಕೆಯನ್ನು ಸಂಪೂರ್ಣ ನಿಷೇಧಿಸಲು ಕಟ್ಟುನಿಟ್ಟಿನ ಕ್ರಮ ಜರುಗಿಸಲು ಸೂಚಿಸಿರುತ್ತಾರೆ. ಮಾನ್ಯ ಸಚಿವರ ಸೂಚನೆಯಂತೆ ಧಾರ್ಮಿಕ ದತ್ತಿ ಆಯುಕ್ತರು ದಿನಾಂಕ: 11.06.2025 ರಂದು ಸುತ್ತೋಲೆಯನ್ನು ಹೊರಡಿಸಿದ್ದು, 2025ನೇ ಆಗಸ್ಟ್ 15 ರಿಂದ ಅನ್ವಯವಾಗುವಂತೆ ಇಲಾಖೆಯ ದೇವಾಲಯಗಳಲ್ಲಿ ಕಡ್ಡಾಯವಾಗಿ ನೀರಿನ ಬಾಟಲ್ ಸೇರಿದಂತೆ ಪ್ಲಾಸ್ಟಿಕ್ ನಿಷೇಧವನ್ನು ಜಾರಿಗೊಳಿಸಲು ಧಾರ್ಮಿಕ ದತ್ತಿ ಇಲಾಖೆಯ ಎಲ್ಲಾ ಅಧಿಕಾರಿಗಳಿಗೂ ನಿರ್ದೇಶನ ನೀಡಲಾಗಿರುತ್ತದೆ **(ಸುತ್ತೋಲೆಯ ಪ್ರತಿ ಲಗತ್ತಿಸಿದೆ).**
ಆ)	ಈ ಆದೇಶವು ಮುಜರಾಯಿ ಇಲಾಖೆ ಅಧೀನದ ದೇವಸ್ಥಾನಗಳಿಗೆ ಮಾತ್ರ ಅನ್ವಯವಾಗುವುದೋ ಅಥವಾ ಎಲ್ಲಾ ದೇವಾಲಯಗಳಿಗೂ ಅನ್ವಯಿಸಲಿದೆಯೇ (ಸಂಪೂರ್ಣ ವಿವರ ನೀಡುವುದು)	➢ ಈ ಆದೇಶವನ್ನು ಧಾರ್ಮಿಕ ದತ್ತಿ ಇಲಾಖೆ ವ್ಯಾಪ್ತಿಗೆ ಒಳಪಡುವ ಎಲ್ಲಾ ಅಧಿಸೂಚಿತ ಮತ್ತು ಘೋಷಿತ ದೇವಾಲಯ /ಸಂಸ್ಥೆಗಳಿಗೆ ಅನ್ವಯಿಸುವಂತೆ ಹೊರಡಿಸಲಾಗಿದೆ. ➢ ಖಾಸಗಿ ದೇವಾಲಯಗಳು ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಗೊಳಪಡುವುದಿಲ್ಲ.
ಇ)	ಒಂದು ವೇಳೆ ಸರ್ಕಾರದ ಆದೇಶವನ್ನು ಉಲ್ಲಂಘಿಸಿ ಪ್ಲಾಸ್ಟಿಕ್ ಉತ್ಪನ್ನಗಳನ್ನು ಬಳಸಿದ್ದಲ್ಲಿ ಯಾವ ರೀತಿಯ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು: (ವಿವರ ನೀಡುವುದು)	➢ ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಗೆ ಒಳಪಡುವ ದೇವಾಲಯಗಳಲ್ಲಿ ಕಡ್ಡಾಯವಾಗಿ ಪ್ಲಾಸ್ಟಿಕ್ ಬಳಕೆಯನ್ನು ನಿಷೇಧಿಸಿದ್ದು, ಪ್ಲಾಸ್ಟಿಕ್ ಉತ್ಪನ್ನಗಳನ್ನು ಬಳಸಿದಲ್ಲಿ ದಂಡ ವಿಧಿಸುವಂತೆ ಸಂಬಂಧಪಟ್ಟ ದೇವಾಲಯಗಳ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

		▸ ದೇವಾಲಯಗಳ ವ್ಯಾಪ್ತಿಯಲ್ಲಿ ಪ್ಲಾಸ್ಟಿಕ್ ಬಳಕೆ ಮಾಡುತ್ತಿರುವುದು ಕಂಡು ಬಂದಲ್ಲಿ ಹಾಗೂ ಇಲಾಖೆಯ ದೇವಾಲಯಗಳಲ್ಲಿ ಸರ್ಕಾರದ ಆದೇಶವನ್ನು ಉಲ್ಲಂಘಿಸಿ ಪ್ಲಾಸ್ಟಿಕ್ ಉತ್ಪನ್ನಗಳನ್ನು ಬಳಸಿದಲ್ಲಿ ಸಂಬಂಧಪಟ್ಟವರ ವಿರುದ್ಧ IPC 198 ಅಡಿಯಲ್ಲಿ ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ಸಹ ಪರಿಶೀಲಿಸಿ ಕಾನೂನು ರೀತ್ಯ ಕ್ರಮ ಕೈಗೊಳ್ಳುವುದಕ್ಕೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ.
ಈ)	ರಾಜ್ಯ ಸರ್ಕಾರದ ದೇವಾಲಯಗಳಿಂದ ಬರುವ ಹಣವನ್ನು ಮುಜರಾಯಿ ಇಲಾಖೆಯು ಅನ್ಯ ಉದ್ದೇಶಗಳಿಗೆ ಬಳಸಿಕೊಳ್ಳುತ್ತಿರುವ ಕುರಿತು ಸರ್ಕಾರದ ಸ್ಪಷ್ಟತೆ ಏನು;	▸ ದೇವಾಲಯಗಳಲ್ಲಿ ಸಂಗ್ರಹವಾಗುವ ಯಾವುದೇ ಆದಾಯವನ್ನು ಸರ್ಕಾರಕ್ಕೆ ಸಂದಾಯ ಮಾಡಲಾಗುವುದಿಲ್ಲ. ▸ ದೇವಾಲಯದಲ್ಲಿ ಸಂಗ್ರಹವಾದ ಆದಾಯವನ್ನು ಆಯಾಯ ದೇವಾಲಯಗಳ ನಿಧಿಗೆ (ಬ್ಯಾಂಕ್ ಖಾತೆ)ಗೆ ಜಮಾ ಮಾಡಲಾಗುತ್ತಿದೆ. ▸ ದೇವಾಲಯದಲ್ಲಿ ಸಂಗ್ರಹವಾಗುವ ಹಣವನ್ನು ಆಯಾಯ ದೇವಾಲಯದ ನಿರ್ವಹಣೆಗೆ ನಿತ್ಯಕಟ್ಟಳೆ, ಹೆಚ್ಚುಕಟ್ಟಳೆ, ರಥೋತ್ಸವ, ಸಿಬ್ಬಂದಿ ವೆಚ್ಚ, ಅಭಿವೃದ್ಧಿ/ಜೀರ್ಣೋದ್ಧಾರ ಮತ್ತು ಮೂಲಭೂತ ಸೌಕರ್ಯ ಹಾಗೂ ದೇವಾಲಯದ ವತಿಯಿಂದ ನಡೆಸುವ ಶಿಕ್ಷಣ ಸಂಸ್ಥೆಗಳ ನಿರ್ವಹಣೆ, ಧಾರ್ಮಿಕ ಉದ್ದೇಶ ಇತ್ಯಾದಿಗಳಿಗೆ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997ರ ಕಾಯ್ದೆ ಕಲಂ 36 (1) ರಡಿಯಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಂಡ ಆಯವ್ಯಯದ ಅನ್ವಯ ಬಳಸಲಾಗುತ್ತಿದ್ದು, ಇದರ ಹೊರತಾಗಿ ಅನ್ಯ ಉದ್ದೇಶಗಳಿಗೆ ಬಳಸಲಾಗುತ್ತಿರುವುದಿಲ್ಲ. ▸ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997ರ ಕಾಯ್ದೆ ಕಲಂ 17(ಎ) ರಡಿಯಲ್ಲಿ ಅವಕಾಶ ಕಲ್ಪಿಸಲಾದಂತೆ ಪ್ರವರ್ಗ 'ಎ' ಅಧಿಸೂಚಿತ ಅಥವಾ ಘೋಷಿತ ಸಂಸ್ಥೆಗಳು ತಮ್ಮ ಒಟ್ಟು ವಾರ್ಷಿಕ ನಿವ್ವಳ ಆದಾಯದ ಶೇಕಡ 10 ರಷ್ಟು ಮತ್ತು 'ಬಿ' ವರ್ಗದ ಅಧಿಸೂಚಿತ ಅಥವಾ ಘೋಷಿತ ಸಂಸ್ಥೆಗಳು ತಮ್ಮ ಒಟ್ಟು ವಾರ್ಷಿಕ ನಿವ್ವಳ ಆದಾಯದ ಶೇಕಡ 5 ರಷ್ಟು ದರದಲ್ಲಿ ಎಂತಿಗೆಗಳನ್ನು ಸಾಮಾನ್ಯ ಸಂಗ್ರಹಣಾ ನಿಧಿ ಪಾವತಿಸಬೇಕಾಗಿರುತ್ತದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

- ಕಳೆದ ಎರಡು ವರ್ಷಗಳಲ್ಲಿ ಪ್ರವರ್ಗ 'ಎ' ಮತ್ತು 'ಬಿ' ಅಧಿಸೂಚಿತ ಅಥವಾ ಘೋಷಿತ ಸಂಸ್ಥೆಗಳಿಂದ ಸಾಮಾನ್ಯ ಸಂಗ್ರಹಣಾ ನಿಧಿಗೆ ಸಂಗ್ರಹವಾದ ಮತ್ತು ಖರ್ಚಾದ ಮೊತ್ತ ವಿವರ ಈ ಕೆಳಕಂಡಂತಿದೆ.

ಕ್ರ. ಸಂ	ವರ್ಷ	ಸಾಮಾನ್ಯ ಸಂಗ್ರಹಣಾ ನಿಧಿಯಲ್ಲಿ ಸಂಗ್ರಹವಾದ ಮೊತ್ತ (ರೂ.ಗಳಲ್ಲಿ)	ಖರ್ಚಾದ ಮೊತ್ತ (ರೂ.ಗಳಲ್ಲಿ)
1.	2023-24	10,22,02,959	2,86,61,030
2.	2024-25	16,10,55,401	4,08,77,151

- ಸಾಮಾನ್ಯ ಸಂಗ್ರಹಣಾ ನಿಧಿಗೆ ಸಂಗ್ರಹವಾದ ಹಣವನ್ನು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ ಅಧಿನಿಯಮ 1997ರ ಕಾಯ್ದೆ ಕಲಂ 19(1) ಮತ್ತು (2) ರನ್ವಯ ಪರತ್ತಿಗೆ ಒಳಪಟ್ಟು ಈ ಮುಂದಿನ ಉದ್ದೇಶಗಳಿಗಾಗಿ ನಿರ್ವಹಿಸತಕ್ಕದ್ದಾಗಿದೆ.

(ಎ)ಬಡತನದಲ್ಲಿರುವ ಅಥವಾ ಅಗತ್ಯ ಸಂದರ್ಭದಲ್ಲಿರುವ ಇತರ ಯಾವುದೇ ಧಾರ್ಮಿಕ ಸಂಸ್ಥೆಗೆ ಸಹಾಯ ನೀಡಿಕೆ;

(ಬಿ)ಹಿಂದೂ ಧರ್ಮಕ್ಕೆ, ಸಂಬಂಧಿಸಿದ ಯಾವುದೇ ಧಾರ್ಮಿಕ ಉದ್ದೇಶಗಳಿಗೆ ಸಹಾಯ ನೀಡಿಕೆ;

(ಸಿ) ಸಂಸ್ಥೆಯ ಧಾರ್ಮಿಕ ಸಿದ್ಧಾಂತಗಳ ಪ್ರಚಾರ;

(ಡಿ) ವೇದ ಪಾಠಶಾಲೆಗಳು, ಆಗಮ ಪಾಠ ಶಾಲೆಗಳು ಮತ್ತು ಅರ್ಚಕರಿಗೆ ತರಬೇತಿ ನೀಡುವ ಸಲುವಾಗಿ ಹಾಗೂ ಆ ಉದ್ದೇಶಕ್ಕಾಗಿ ಪ್ರಾಚೀನ ಬರಹಗಳ ಮತ್ತು ಭಾರತೀಯ ಭಾಷೆಗಳ ಅಧ್ಯಯನ ಮಾಡುವ ಸಲುವಾಗಿ ಶಾಲೆಗಳ ಸ್ಥಾಪನೆ ಹಾಗೂ ನಿರ್ವಹಣೆ;

(ಇ) ಹಿಂದೂ ಧರ್ಮ, ತತ್ವಶಾಸ್ತ್ರ, ಅಥವಾ ಶಾಸ್ತ್ರಗಳ ಅಧ್ಯಯನ ಅಥವಾ ಹಿಂದೂ ದೇವಸ್ಥಾನ ವಾಸ್ತುಶಿಲ್ಪದಲ್ಲಿ ಶಿಕ್ಷಣ ನೀಡುವ ಉದ್ದೇಶ ಹೊಂದಿರುವ ವಿಶ್ವವಿದ್ಯಾನಿಲಯ, ಕಾಲೇಜು ಅಥವಾ ಇತರ ಸಂಸ್ಥೆಯ ಸ್ಥಾಪನೆ ಮತ್ತು ನಿರ್ವಹಣೆ;

(ಎಫ್) ಹಿಂದೂ ಧರ್ಮದ ವಿಷಯದಲ್ಲಿ ಶಿಕ್ಷಣವನ್ನು ನೀಡಲಾಗುವ ಶಿಕ್ಷಣ ಸಂಸ್ಥೆಗಳ ಸ್ಥಾಪನೆ ಮತ್ತು ನಿರ್ವಹಣೆ;

(ಜಿ) ದೇವಸ್ಥಾನ ಕಲೆಗಳು ಮತ್ತು ವಾಸ್ತುಶಿಲ್ಪಕ್ಕೆ ಉತ್ತೇಜನ.

(ಹೆಚ್) ಅನಾಥ ಹಿಂದೂ ಮಕ್ಕಳಿಗಾಗಿ ಅನಾಥಾಲಯಗಳ ಸ್ಥಾಪನೆ ಮತ್ತು ನಿರ್ವಹಣೆ;

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

		(ಐ) ಸಂಸ್ಥೆಯ ಜಮೆಯಲ್ಲಿ ಸಾಕಷ್ಟು ಹಣ ಇಲ್ಲದಿರುವಾಗ ಅರ್ಚಕರಿಗೆ ಮತ್ತು ದೇವಸ್ಥಾನದ ನೌಕರರಿಗೆ ಸೇವಾಂತ ಪ್ರಯೋಜನಗಳ ಸಂದಾಯ. **(ಜೆ)** ನಿರ್ಗತಿಕ, ಅಸಹಾಯಕ ಹಾಗೂ ದೈಹಿಕವಾಗಿ ಅಸಮರ್ಥರಾದ ಜನರಿಗಾಗಿ ಆಶ್ರಯ ಧಾಮಗಳ ಸ್ಥಾಪನೆ ಹಾಗೂ ನಿರ್ವಹಣೆ; **(ಕೆ)** ಯಾತ್ರಿಕರ ಅನುಕೂಲಕ್ಕಾಗಿ ಆಸ್ಪತ್ರೆಗಳು ಹಾಗೂ ಔಷಧಾಲಯಗಳ ಸ್ಥಾಪನೆ ಹಾಗೂ ನಿರ್ವಹಣೆ; **(ಎಲ್)** ಯಾವುದೇ ಇತರ ಹಿಂದೂ ಧಾರ್ಮಿಕ ಅಥವಾ ಧರ್ಮಾದಾಯ ಉದ್ದೇಶ; **(ಎಂ)** ಹಿಂದೂ ಧಾರ್ಮಿಕ ಸಂಸ್ಥೆಗಳು ಅಥವಾ ಯಾವುದೇ ಹಿಂದೂ ಸಂಘಟನೆಯು ಗೋಶಾಲೆಗಳನ್ನು ಸ್ಥಾಪಿಸುವುದು ಮತ್ತು ಪ್ರೋತ್ಸಾಹಿಸುವುದು; **(ಎನ್)** ಅಧಿನಿಯಮದ ಉದ್ದೇಶಗಳನ್ನು ನೆರವೇರಿಸುವುದು. **2)** ಸಾಮಾನ್ಯ ಸಂಗ್ರಹಣ ನಿಧಿಯನ್ನು ಈ ಮುಂದಿನಂತೆ ನಿರ್ವಹಿಸತಕ್ಕದ್ದು; **(i)** ಯಾವೊಬ್ಬ ವ್ಯಕ್ತಿಯಿಂದ ಸ್ವೀಕರಿಸಿದ ಯಾವುದೇ ವಂತಿಗೆ ಅಥವಾ ಕೊಡುಗೆಯನ್ನು ದಾನಿಯು ನಿರ್ದಿಷ್ಟಪಡಿಸಿದ ಉದ್ದೇಶ ಯಾವುದೇ ಇದ್ದರೆ ಅದರ ಹೊರತಾದ ಯಾವುದೇ ಉದ್ದೇಶಕ್ಕಾಗಿ ಬಳಸತಕ್ಕದ್ದಲ್ಲ. **(ii)** ಒಂದು ಯಾವುದೇ ಧಾರ್ಮಿಕ ಸಂಪ್ರದಾಯದ ಅಥವಾ ಅದರ ಯಾವುದೇ ಭಾಗದ ಸಂಸ್ಥೆಗೆ ನೀಡಿದ ವಂತಿಗೆಗಳು ಮತ್ತು ಕೊಡುಗೆಗಳನ್ನು ಆ ನಿರ್ದಿಷ್ಟ ವರ್ಗ, ಸಂಪ್ರದಾಯ ಅಥವಾ ಭಾಗದ ಅನುಕೂಲಕ್ಕಾಗಿ ಮಾತ್ರವೇ ಬಳಸತಕ್ಕದ್ದು.
ಊ)	ಜಿಲ್ಲಾ ಧಾರ್ಮಿಕ ಪರಿಷತ್ತನ್ನು ಎಷ್ಟು ಜಿಲ್ಲೆಗಳಲ್ಲಿ ರಚಿಸಲಾಗಿದೆ? ರಚಿಸಲು ಎಷ್ಟು ಜಿಲ್ಲೆಗಳಲ್ಲಿ ಬಾಕಿ ಇದೆ. ಯಾವ ಅವಧಿಯೊಳಗೆ ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು. ಪರಿಷತ್ತಿನ ಕಾರ್ಯವ್ಯಾಪ್ತಿ ಏನು?(ವಿವರ ನೀಡುವುದು)	ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ಅಧಿನಿಯಮ, 2011ರ ಸೆಕ್ಷನ್ 21ರನ್ವಯ ರಾಜ್ಯ ಸರ್ಕಾರವು, ರಾಜ್ಯ ಧಾರ್ಮಿಕ ಪರಿಷತ್ತಿನ ಶಿಫಾರಸ್ಸಿನ ಮೇಲೆ, ಸರ್ಕಾರಿ ರಾಜ್ಯ ಪತ್ರದಲ್ಲಿ ಅಧಿಸೂಚನೆಯ ಮೂಲಕ, ಪ್ರತಿಯೊಂದು ಜಿಲ್ಲೆಗೆ ಅಥವಾ ಇಂದು ಅಥವಾ ಹೆಚ್ಚಿನ ಜಿಲ್ಲೆಗಳಿಗೆ ಅಧಿಕಾರಿ/ಅಧಿಕಾರೇತರ ಸದಸ್ಯರುಗಳನ್ನು ಒಳಗೊಂಡಂತೆ ಜಿಲ್ಲಾ ಧಾರ್ಮಿಕ ಪರಿಷತ್ತನ್ನು ರಚಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

- ಅದರಂತೆ, ಸರ್ಕಾರದ ವಿವಿಧ ಆದೇಶಗಳನ್ವಯ ಈ ಕೆಳಕಂಡ **7 ಜಿಲ್ಲೆಗಳಿಗೆ** ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ಅಧಿನಿಯಮ 2011ರ ಸೆಕ್ಷನ್ 21ರನ್ವಯ ಜಿಲ್ಲಾ ಧಾರ್ಮಿಕ ಪರಿಷತ್ತನ್ನು ರಚಿಸಲ್ಪಟ್ಟಿರುತ್ತದೆ.

ಕ್ರ ಸಂ	ಜಿಲ್ಲೆ	ಸರ್ಕಾರದ ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ:
1.	ಬೆಂಗಳೂರು ನಗರ	ಕಂಇ 50 ಮುಸೇವಿ 2024, ದಿನಾಂಕ:14.03.2024.
2.	ದಕ್ಷಿಣ ಕನ್ನಡ	ಕಂಇ 35 ಮುಸೇವಿ 2024, ದಿನಾಂಕ:14.03.2024.
3.	ಉತ್ತರ ಕನ್ನಡ	ಕಂಇ 155 ಮುಸೇವಿ 2024, ದಿನಾಂಕ:07.12.2024.
4.	ರಾಮನಗರ	ಕಂಇ 138 ಮುಸೇವಿ 2024, ದಿನಾಂಕ:02.01.2025.
5.	ಶಿವಮೊಗ್ಗ	ಕಂಇ 36 ಮುಸೇವಿ 2024, ದಿನಾಂಕ:21.06.2024.
6.	ತುಮಕೂರು	ಕಂಇ 50 ಮುಸೇವಿ 2025, ದಿನಾಂಕ:15.02.2025.
7.	ಉಡುಪಿ	ಕಂಇ 38 ಮುಸೇವಿ 2024, ದಿನಾಂಕ06.03.2024

- 23 ಜಿಲ್ಲೆಗಳಿಗೆ ಜಿಲ್ಲಾ ಧಾರ್ಮಿಕ ಪರಿಷತ್ತನ್ನು ರಚಿಸಲು ಬಾಕಿ ಇದೆ.

- ಜಿಲ್ಲಾ ಧಾರ್ಮಿಕ ಪರಿಷತ್ತನ್ನು ರಚಿಸಲು ಬಾಕಿಯಿರುವ 23 ಜಿಲ್ಲೆಗಳಿಗೆ ಜಿಲ್ಲಾ ಧಾರ್ಮಿಕ ಪರಿಷತ್ತನ್ನು ರಚಿಸಲು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಂದ ಪ್ರಸ್ತಾವನೆ ಸ್ವೀಕೃತಗೊಂಡ ಕೂಡಲೇ ಪರಿಶೀಲಿಸಿ ಜಿಲ್ಲಾ ಧಾರ್ಮಿಕ ಪರಿಷತ್ತನ್ನು ರಚಿಸಲು ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತಿದೆ.

ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ಅಧಿನಿಯಮ, 2011ರ ಸೆಕ್ಷನ್ 21-ಎ ಜಿಲ್ಲಾ ಧಾರ್ಮಿಕ ಪರಿಷತ್ತಿನ ಅಧಿಕಾರಗಳು ಮತ್ತು ಪ್ರಕಾರ್ಯಗಳಂತೆ ಜಿಲ್ಲಾ ಧಾರ್ಮಿಕ ಪರಿಷತ್ತಿನ ಕಾರ್ಯ ವ್ಯಾಪ್ತಿಯನ್ನು ಸ್ಪಷ್ಟಪಡಿಸಲಾಗಿರುತ್ತದೆ. (ಪ್ರತಿ ಲಗತ್ತಿಸಿದೆ).

ಕಂಇ 141 ಮುಸಪ್ರ 2025

(ರಾಮಲಿಂಗಾರೆಡ್ಡಿ),
ಸಾರಿಗೆ ಮತ್ತು ಮುಜರಾಯಿ ಸಚಿವರು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರ್ನಾಟಕ ಸರ್ಕಾರ

ಆಯುಕ್ತರ ಕಾರ್ಯಾಲಯ,
ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ,
4ನೇ ಮಹಡಿ, ಶ್ರೀ ಮಿಂಟೋ ಆಂಜನೇಯ ಸ್ವಾಮಿ ಭವನ, ಆಲೂರು ವೆಂಕಟರಾವ್ ರಸ್ತೆ, ಚಾಮರಾಜಪೇಟೆ,
ಬೆಂಗಳೂರು-18.ದೂರವಾಣಿ: 26709689/ 26706775 mail: endowmentcommissionor@gmail.com

ಸಂಖ್ಯೆ:E-1663713 HRICE- ADM0MISC/56/2025 ದಿನಾಂಕ:11.06.2025.

-:ಸುತ್ತೋಲೆ:-

ವಿಷಯ: ಧಾರ್ಮಿಕ ದತ್ತಿ, ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಅಧಿಸೂಚಿತ ಮತ್ತು ಘೋಷಿತ ದೇವಾಲಯ/ ಸಂಸ್ಥೆಗಳಲ್ಲಿ ಸಂಪೂರ್ಣ ಪ್ಲಾಸ್ಟಿಕ್ ನಿರ್ಬಂಧಿಸುವ ಹಾಗೂ ಸ್ವಚ್ಛತೆ ಕಾಪಾಡುವ ಬಗ್ಗೆ.

ಉಲ್ಲೇಖ: 1. ಈ ಕಛೇರಿಯ ಸುತ್ತೋಲೆ ಸಂಖ್ಯೆ:ಎಡಿಎಂ/11/ಸಿಆರ್/139/2017-18 ದಿನಾಂಕ: 19.12.2017
2. ಈ ಕಛೇರಿಯ ಸುತ್ತೋಲೆ ಸಂಖ್ಯೆ:ಎಡಿಎಂ/11/ಸಿಆರ್/219/2014-15 ದಿನಾಂಕ: 10.04.2019 ಮತ್ತು ದಿನಾಂಕ: 02.12.2022
3. ಈ ಕಛೇರಿಯ ಸುತ್ತೋಲೆ ಸಂಖ್ಯೆ:E-1663713 HRICE- ADM0MISC/ 56/ 2025, ದಿನಾಂಕ:11.03.2025.

****

ಕರ್ನಾಟಕ ರಾಜ್ಯದ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಅಧಿಸೂಚಿತ ಮತ್ತು ಘೋಷಿತ ದೇವಾಲಯ/ ಸಂಸ್ಥೆಗಳಲ್ಲಿ ಸಂಪೂರ್ಣ ಪ್ಲಾಸ್ಟಿಕ್ ನಿರ್ಬಂಧಿಸುವಂತೆ ಹಾಗೂ ಸ್ವಚ್ಛತೆ ಕಾಪಾಡುವಂತೆ ಉಲ್ಲೇಖಿತ ಸುತ್ತೋಲೆಗಳಲ್ಲಿ ಈಗಾಗಲೇ ಅಗತ್ಯ ಸೂಚನೆಗಳನ್ನು ನೀಡಿ ಕಟ್ಟುನಿಟ್ಟಾಗಿ ಪಾಲಿಸುವಂತೆ ತಿಳಿಸಲಾಗಿರುತ್ತದೆ.

ಆದಾಗ್ಯೂ ಸಹ ಪ್ಲಾಸ್ಟಿಕ್ ನಿಷೇಧ ಕುರಿತು ಉಲ್ಲೇಖಿತ ಸುತ್ತೋಲೆಯನ್ವಯ ಬಹುತೇಕ ದೇವಸ್ಥಾನಗಳಲ್ಲಿ ಕ್ರಮವಹಿಸದೇ ಇರುವುದು ಕಂಡುಬಂದಿರುತ್ತದೆ. ಅಲ್ಲದೇ ದೇವಾಲಯದ ಒಳಾಂಗಣದಲ್ಲಿ ಅಭಿಷೇಕ ಮತ್ತು ಪೂಜಾ ಕಾರ್ಯಗಳಿಗೆ ಪ್ಲಾಸ್ಟಿಕ್ ಬಿಂದಿಗೆ, ಪ್ಲಾಸ್ಟಿಕ್ ಬಕೆಟ್, ಪ್ಲಾಸ್ಟಿಕ್ ಜಗ್ಗ್ ಇತರೆ ಪ್ಲಾಸ್ಟಿಕ್ ಸಾಮಗ್ರಿಗಳನ್ನು ಬಳಸುತ್ತಿರುವುದು ಕಂಡು ಬಂದಿರುತ್ತದೆ. ಇದು ದೇವಾಲಯದ ಧಾರ್ಮಿಕ ಪಾವಿತ್ರ್ಯತೆಗೆ ಪೂರಕವಾಗಿರುವುದಿಲ್ಲ.

ಮಾನ್ಯ ಮುಜರಾಯಿ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ: 09/06/2025ರಂದು ನಡೆದ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿಯೂ ಸಹ ಸದರಿ ವಿಷಯದ ಬಗ್ಗೆ ಪ್ರಸ್ತಾಪವಾಗಿದ್ದು, ಈ ಹಿನ್ನೆಲೆಯಲ್ಲಿ ಮಾನ್ಯ ಸಚಿವರು 2025ನೇ ಆಗಸ್ಟ್ 15 ರಿಂದ ರಾಜ್ಯದ ಧಾರ್ಮಿಕ ದತ್ತಿ ಇಲಾಖಾ ದೇವಸ್ಥಾನಗಳಲ್ಲಿ ನೀರಿನ ಬಾಟಲ್ ಸೇರಿದಂತೆ ಎಲ್ಲಾ ರೀತಿಯ ಪ್ಲಾಸ್ಟಿಕ್ ಸಾಮಗ್ರಿಗಳ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಲು ಸೂಚಿಸಿರುತ್ತಾರೆ.

ಆದ್ದರಿಂದ, ಧಾರ್ಮಿಕ ದತ್ತಿ ಇಲಾಖೆ ವ್ಯಾಪ್ತಿಗೆ ಒಳಪಡುವ ಎಲ್ಲಾ ಅಧಿಸೂಚಿತ ಮತ್ತು ಘೋಷಿತ ದೇವಾಲಯ/ ಸಂಸ್ಥೆಗಳಲ್ಲಿ 2025ನೇ ಆಗಸ್ಟ್ 15 ರಿಂದ ಅನ್ವಯವಾಗುವಂತೆ ನೀರಿನ ಬಾಟಲ್ ಸೇರಿದಂತೆ ಎಲ್ಲಾ ರೀತಿಯ ಪ್ಲಾಸ್ಟಿಕ್ ಸಾಮಗ್ರಿಗಳ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಿ ಕಟ್ಟುನಿಟ್ಟಿನ ಸೂಚನೆ ಯನ್ನು ನೀಡಿದೆ.

ಆಯುಕ್ತರು 11/6/25
ಧಾರ್ಮಿಕ ದತ್ತಿ ಇಲಾಖೆ, ಬೆಂಗಳೂರು

ಇವರಿಗೆ,

1. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
2. ಸಂಬಂಧಿಸಿದ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿಗಳು/ವ್ಯವಸ್ಥಾಪನಾ ಸಮಿತಿ ಅಧ್ಯಕ್ಷರು/ ಆಡಳಿತಾಧಿಕಾರಿಗಳು/ ಅನುವಂಶಿಕ ಮೊಕ್ತೇಸರರು.
3. ಎಲ್ಲಾ ಉಪ ವಿಭಾಗಗಳ ಉಪವಿಭಾಗಾಧಿಕಾರಿಗಳು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(vi) 28ನೇ ಪ್ರಕರಣದಡಿಯಲ್ಲಿ ಉಪಬಂಧಿಸಲಾದಂತೆ [1][ಇಪ್ಪತ್ತೈದು ಲಕ್ಷ ರೂಪಾಯಿಗಳು] ಮತ್ತು ಅದಕ್ಕಿಂತ ಹೆಚ್ಚಿನ ಒಟ್ಟು ಆದಾಯವನ್ನು ಹೊಂದಿರುವ ಅಧಿಸೂಚಿತ ಸಂಸ್ಥೆಗಳ ವ್ಯವಸ್ಥಾಪನಾ ಸಮಿತಿಯನ್ನು ರದ್ದುಪಡಿಸಬಹುದು ಮತ್ತು 29ನೇ ಪ್ರಕರಣದಡಿಯಲ್ಲಿ ಅಧಿಸೂಚಿತ ಸಂಸ್ಥೆಗಳಿಗೆ ಆಡಳಿತಗಾರನನ್ನು ನೇಮಕ ಮಾಡಿಕೊಳ್ಳಬಹುದು.

(vii) ಶಾಶ್ವತ ಖಾಲಿ ಸ್ಥಾನವು ಉಂಟಾದಾಗ ಮತ್ತು ವಂಶಪಾರಂಪರ್ಯ ಪದದಲ್ಲಿ ಅದಕ್ಕೆ ಯಾವುದೇ ವಿವಾದವಿಲ್ಲದಿದ್ದರೆ ವಂಶಪಾರಂಪರ್ಯ ನ್ಯಾಸಧಾರಿಯ ಪದಕ್ಕೆ ಉತ್ತರಾಧಿಕಾರಿಯಾಗಲು ಹಕ್ಕುಳ್ಳ ಕುಟುಂಬದ ಸದಸ್ಯನ ಹೆಸರನ್ನು ದಾಖಲು ಮಾಡತಕ್ಕದ್ದು.]

[2][(3) ಎಲ್ಲಾ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಆಡಳಿತವು ರಾಜ್ಯ ಧಾರ್ಮಿಕ ಪರಿಷತ್ತಿನ ಸಾಮಾನ್ಯ ಮೇಲ್ವಿಚಾರಣೆಯ ಮತ್ತು ನಿಯಂತ್ರಣದ ಅಡಿಯಲ್ಲಿ ಇರತಕ್ಕದ್ದು ಮತ್ತು ಅಂಥ ಮೇಲ್ವಿಚಾರಣೆ ಹಾಗೂ ನಿಯಂತ್ರಣವು, ಅಂಥ ಸಂಸ್ಥೆಗಳು ಮತ್ತು ದತ್ತಿಗಳು ಉಚಿತ ರೀತಿಯಲ್ಲಿ ಆಡಳಿತ ನಡೆಸಲ್ಪಡುತ್ತಿವೆ ಹಾಗೂ ಅವುಗಳ ಆದಾಯವು, ಅವುಗಳು ಸ್ಥಾಪನೆಯಾಗಿರುವ ಅಥವಾ ಅಸ್ತಿತ್ವದಲ್ಲಿರುವ ಉದ್ದೇಶಕ್ಕಾಗಿ ಸೂಕ್ತವಾಗಿ ವಿನಿಯೋಗಿಸಲ್ಪಡುತ್ತಿದೆ ಎಂಬುದನ್ನು ಖಚಿತಪಡಿಸಿ ಕೊಳ್ಳುವುದಕ್ಕೆ ಅವಶ್ಯವಾಗಬಹುದಾದ ಯಾವುದೇ ಆದೇಶವನ್ನು ಹೊರಡಿಸುವುದಕ್ಕೆ ಅಥವಾ ನಿರ್ದೇಶನಗಳನ್ನು ನೀಡುವುದಕ್ಕೆ ಅಧಿಕಾರವನ್ನು ಒಳಗೊಂಡಿರತಕ್ಕದ್ದು.]

[3][21. **ಜಿಲ್ಲಾ ಧಾರ್ಮಿಕ ಪರಿಷತ್ತು / Zilla Dharmika Parishat**.– (1) ರಾಜ್ಯ ಸರ್ಕಾರವು, ರಾಜ್ಯ ಧಾರ್ಮಿಕ ಪರಿಷತ್ತಿನ ಶಿಫಾರಸ್ಸಿನ ಮೇಲೆ, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ, ಪ್ರತಿಯೊಂದು ಜಿಲ್ಲೆಗೆ ಅಥವಾ ಒಂದು ಅಥವಾ ಹೆಚ್ಚಿನ ಜಿಲ್ಲೆಗಳಿಗೆ ಈ ಮುಂದಿನ ಸದಸ್ಯರುಗಳನ್ನು ಒಳಗೊಂಡಂತೆ ಜಿಲ್ಲಾ ಧಾರ್ಮಿಕ ಪರಿಷತ್ತನ್ನು ರಚಿಸತಕ್ಕದ್ದು, ಎಂದರೆ:–

(ಎ) ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿ	–ಅಧ್ಯಕ್ಷರು
(ಬಿ) ಲಭ್ಯವಿರುವೆಡೆಗಳಲ್ಲೆಲ್ಲ, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಸಂಬಂಧಪಟ್ಟ ಸಹಾಯಕ ಆಯುಕ್ತರು, ಅಥವಾ ಜಿಲ್ಲಾಧಿಕಾರಿ ಕಚೇರಿಯ ದತ್ತಿ ತಹಶೀಲ್ದಾರರು	–ಪದನಿಮಿತ್ತ ಕಾರ್ಯದರ್ಶಿ

1. "ಹತ್ತು ಲಕ್ಷ ರೂಪಾಯಿಗಳು" ಎಂಬ ಪದಗಳ ಬದಲಾಗಿ 2012ರ ಅಧಿನಿಯಮ ಸಂಖ್ಯೆ 12ರ ಅನ್ವಯ ಪ್ರತಿಯೋಜಿಸಲಾಗಿದೆ ಮತ್ತು ಇದು ದಿನಾಂಕ: 5-3-2012 ರಿಂದ ಜಾರಿಗೆ ಬಂದಿದೆ.
2. 2012ರ ಅಧಿನಿಯಮ ಸಂಖ್ಯೆ 12ರ ಅನ್ವಯ (3)ನೇ ಉಪ-ಪ್ರಕರಣವನ್ನು ದಿನಾಂಕ 5-3-2012ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
3. 2011ರ ಅಧಿನಿಯಮ ಸಂಖ್ಯೆ 27ರ ಅನ್ವಯ ಪ್ರಕರಣ 21ರ ಬದಲಾಗಿ 21 ರಿಂದ 21-ಎಫ್ ಪ್ರಕರಣಗಳನ್ನು ಪ್ರತಿಯೋಜಿಸಲಾಗಿದೆ. ಮತ್ತು ಇದು ದಿನಾಂಕ: 4-5-2011 ರಿಂದ ಜಾರಿಗೆ ಬಂದಿದೆ.

(ಸಿ) [1][ನಾಲ್ಕು ವರ್ಷಗಳ] ಅವಧಿಗಾಗಿ ಸರ್ಕಾರದಿಂದ ನಾಮನಿರ್ದೇಶಿತರಾಗಬೇಕಾದ ಸದಸ್ಯರು

(i) ಸಿವಿಲ್ ನ್ಯಾಯಾಧೀಶರು (ಹಿರಿಯ ವಿಭಾಗ) ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಒಬ್ಬರು ನಿವೃತ್ತ ನ್ಯಾಯಾಂಗ ಅಧಿಕಾರಿ	–ಸದಸ್ಯರು
(ii) ಒಬ್ಬರು ಆಗಮ ಪಂಡಿತರು	–ಸದಸ್ಯರು
(iii) ಒಬ್ಬರು ವೇದ ವಿದ್ವಾಂಸರು	–ಸದಸ್ಯರು
(iv) ಅನುಸೂಚಿತ ಜಾತಿ ಅಥವಾ ಅನುಸೂಚಿತ ಪಂಗಡದಿಂದ ಒಬ್ಬರು	–ಸದಸ್ಯರು
(v) ಒಬ್ಬರು ಮಹಿಳೆ	–ಸದಸ್ಯರು
(vi) ಹಿಂದುಳಿದ ವರ್ಗಗಳಿಂದ ಒಬ್ಬರು ವ್ಯಕ್ತಿ	–ಸದಸ್ಯರು
(vii) [2][ಮೂವರು ಇತರರು]	–ಸದಸ್ಯರು

(2) ನಿವೃತ್ತ ನ್ಯಾಯಾಂಗ ಅಧಿಕಾರಿಯನ್ನು ಹೊರತುಪಡಿಸಿ, (1)ನೇ ಉಪಪ್ರಕರಣದ ಆಡಿಯಲ್ಲಿ ಸರ್ಕಾರದಿಂದ ನಾಮನಿರ್ದೇಶಿತರಾದ ಸದಸ್ಯರು, ಸರ್ಕಾರದ ಇಚ್ಛೆಗೊಳಪಟ್ಟು ಪದದಲ್ಲಿರತಕ್ಕದ್ದು.

(3) ಸರ್ಕಾರದಿಂದ ನಾಮನಿರ್ದೇಶಿತನಾದ ಸದಸ್ಯನು, ಹಿಂದೂ ಧಾರ್ಮಿಕ ಕ್ಷೇತ್ರಕ್ಕೆ ಕೊಡುಗೆಯನ್ನು ನೀಡಿರುವ ವ್ಯಕ್ತಿಯಾಗಿರತಕ್ಕದ್ದು ಮತ್ತು ಯಾವುದೇ ಹಂತದಲ್ಲಿ ಯಾವುದೇ ರಾಜಕೀಯ ಪಕ್ಷದ ಪದಾಧಿಕಾರಿಯಾಗಿರತಕ್ಕದ್ದಲ್ಲ.

(4) ಮರಣ, ರಾಜೀನಾಮೆ ಅಥವಾ ಅನ್ಯಥಾ ಕಾರಣಕ್ಕಾಗಿ ಯಾವುದೇ ಖಾಲಿಸ್ಥಾನವು ಉಂಟಾದ ಸಂದರ್ಭದಲ್ಲಿ, ಸರ್ಕಾರವು ಅಂಥ ಸದಸ್ಯನ ಕಾಲಾವಧಿಯ ಉಳಿದ ಅವಧಿಗಾಗಿ ಒಬ್ಬ ಸದಸ್ಯನನ್ನು ನೇಮಿಸಬಹುದು.

(5) ಜಿಲ್ಲಾ ಧಾರ್ಮಿಕ ಪರಿಷತ್ತು, ಸಮಾಲೋಚನೆಯ ಉದ್ದೇಶಕ್ಕಾಗಿ, ಆದರ ಸಭೆಗೆ, ಪರಿಣತಿ ಮತ್ತು ವಿಶೇಷ ಜ್ಞಾನವುಳ್ಳ ಅಥವಾ ಯಾವುದೇ ವಿಷಯದಲ್ಲಿ ತಜ್ಞನಾಗಿರುವ ಯಾವೊಬ್ಬ ವ್ಯಕ್ತಿಯನ್ನು ಆಹ್ವಾನಿಸಬಹುದು ಮತ್ತು ಪ್ರತಿಯೊಬ್ಬ ಅಂಥ ವ್ಯಕ್ತಿಯು ನಿಯಮಿಸಬಹುದಾದ ಅಂಥ ಭತ್ಯೆ ಅರ್ಹನಾಗಿರತಕ್ಕದ್ದು.

(6) ಸರ್ಕಾರವು, ಅಧಿಸೂಚನೆಯ ಮೂಲಕ, ನಿಯಮಗಳನ್ನು ರೂಪಿಸುವ ಅಧಿಕಾರವನ್ನು ಹೊರತುಪಡಿಸಿ, ಈ ಅಧಿನಿಯಮದ ಉಪಬಂಧಗಳಡಿಯಲ್ಲಿ ತನ್ನ ಯಾವುದೇ ಅಧಿಕಾರಗಳು ಹಾಗೂ ಪ್ರಕಾರ್ಯಗಳನ್ನು ಜಿಲ್ಲಾ ಧಾರ್ಮಿಕ ಪರಿಷತ್ತಿಗೆ ಪ್ರತಿಯೋಜಿಸಬಹುದು.

1. "ಮೂರು ವರ್ಷಗಳ" ಎಂಬ ಪದಗಳ ಬದಲಾಗಿ 2012ರ ಅಧಿನಿಯಮ ಸಂಖ್ಯೆ 12ರ ಅನ್ವಯ ಪ್ರತಿಯೋಜಿಸಲಾಗಿದೆ. ಮತ್ತು ಇದು ದಿನಾಂಕ: 5-3-2012 ರಿಂದ ಜಾರಿಗೆ ಬಂದಿದೆ.
2. 2012ರ ಅಧಿನಿಯಮ ಸಂಖ್ಯೆ 12ರ ಮೂಲಕ ದಿನಾಂಕ: 5-3-2012 ರಿಂದ ಪ್ರತ್ಯಾಯೋಜಿಸಲಾಗಿದೆ.

[1][(7) ಅಧ್ಯಕ್ಷನ ಗೈರು ಹಾಜರಿಯಲ್ಲಿ, ನ್ಯಾಯಿಕ ಸದಸ್ಯನು ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.]

(8) ಜಿಲ್ಲಾ ಧಾರ್ಮಿಕ ಪರಿಷತ್ತಿನ ನಾಮನಿರ್ದೇಶಿತ ಸದಸ್ಯರ ಗೈರುಹಾಜರಿಯಲ್ಲಿ ಉಳಿದ ಸದಸ್ಯರು ಜಿಲ್ಲಾ ಧಾರ್ಮಿಕ ಪರಿಷತ್ತನ್ನು ರಚಿಸತಕ್ಕದ್ದು.

(9) ಜಿಲ್ಲಾ ಧಾರ್ಮಿಕ ಪರಿಷತ್ತಿನ ಸಂಬಂಧದಲ್ಲಿನ ಅಥವಾ ಅದಕ್ಕೆ ಮಾಡುವ ಎಲ್ಲಾ ಪತ್ರವ್ಯವಹಾರಗಳು, ಜಿಲ್ಲಾ ಧಾರ್ಮಿಕ ಪರಿಷತ್ತಿನ ಕಾರ್ಯದರ್ಶಿಯಿಂದ ಅಥವಾ ಅವರಿಗೆ ಮಾಡತಕ್ಕದ್ದು ಮತ್ತು ಇದು ದಾವೆ ಹೂಡುವ ಅಥವಾ ದಾವೆಗೆ ಒಳಗಾಗುವ ಅಧಿಕಾರವನ್ನೂ ಒಳಗೊಳ್ಳುತ್ತದೆ.

21-ಎ. ಜಿಲ್ಲಾ ಧಾರ್ಮಿಕ ಪರಿಷತ್ತಿನ ಅಧಿಕಾರಗಳು ಮತ್ತು ಪ್ರಕಾರ್ಯಗಳು / Powers and Functions of the Zilla Dharmika Parishat.– [2][(1) ರಾಜ್ಯ ಧಾರ್ಮಿಕ ಪರಿಷತ್ತಿನ ಅಧಿಕಾರಗಳಿಗೆ ಒಳಪಟ್ಟು, ಜಿಲ್ಲಾ ಧಾರ್ಮಿಕ ಪರಿಷತ್ತು, ಜಿಲ್ಲೆಯೊಳಗಿನ ಯಾವ ಧಾರ್ಮಿಕ ಸಂಸ್ಥೆಗಳ ವಾರ್ಷಿಕ ಆದಾಯವು ಇಪ್ಪತ್ತೈದು ಲಕ್ಷ ರೂಪಾಯಿಗಳನ್ನು ಮೀರಿಲ್ಲವೋ ಆ ಧಾರ್ಮಿಕ ಸಂಸ್ಥೆಗಳ ಮೇಲ್ವಿಚಾರಣೆ ಮತ್ತು ನಿಯಂತ್ರಣದ ಸಾಮಾನ್ಯ ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಅಂಥ ಮೇಲ್ವಿಚಾರಣೆ ಹಾಗೂ ನಿಯಂತ್ರಣವು ಅಂಥ ಸಂಸ್ಥೆಗಳು ಮತ್ತು ದತ್ತಿಗಳು ಉಚಿತ ರೀತಿಯಲ್ಲಿ ಆಡಳಿತ ನಡೆಸಲ್ಪಡುತ್ತಿವೆ ಹಾಗೂ ಅವುಗಳ ಆದಾಯವು, ಅವುಗಳು ಸ್ಥಾಪನೆಯಾಗಿರುವ ಅಥವಾ ಅಸ್ತಿತ್ವದಲ್ಲಿರುವ ಉದ್ದೇಶಕ್ಕಾಗಿ ಸೂಕ್ತವಾಗಿ ವಿನಿಯೋಗಿಸಲ್ಪಡುತ್ತಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವುದಕ್ಕೆ ಅವಶ್ಯವಾಗಬಹುದಾದ ಯಾವುದೇ ಆದೇಶವನ್ನು ಹೊರಡಿಸುವುದಕ್ಕೆ ಅಥವಾ ನಿರ್ದೇಶನಗಳನ್ನು ನೀಡುವುದಕ್ಕೆ ಅಧಿಕಾರವನ್ನು ಒಳಗೊಂಡಿರತಕ್ಕದ್ದು.]

(2) ಜಿಲ್ಲಾ ಧಾರ್ಮಿಕ ಪರಿಷತ್ತು, (1)ನೇ ಉಪ ಪ್ರಕರಣದಡಿಯಲ್ಲಿನ ಅಧಿಕಾರಗಳು, ಕರ್ತವ್ಯಗಳು ಮತ್ತು ಪ್ರಕಾರ್ಯಗಳಿಗೆ ಹೆಚ್ಚುವರಿಯಾಗಿ,–

(ಎ) ಒಂದು ಲಕ್ಷ ರೂಪಾಯಿಗಳು ಮತ್ತು ಅದಕ್ಕಿಂತ ಮೇಲ್ಪಟ್ಟು ಆದರೆ [3][ಇಪ್ಪತ್ತೈದು ಲಕ್ಷ ರೂಪಾಯಿಗಳಿಗಿಂತ] ಕಡಿಮೆ ಒಟ್ಟು ವಾರ್ಷಿಕ ಆದಾಯವನ್ನು ಹೊಂದಿರುವ ಅಧಿಸೂಚಿತ ಸಂಸ್ಥೆಗಳಿಗೆ ವ್ಯವಸ್ಥಾಪನಾ ಸಮಿತಿಯನ್ನು ರಚಿಸುವ,

(ಬಿ) 28ನೇ ಪ್ರಕರಣದಡಿಯಲ್ಲಿ ಉಪಬಂಧಿಸಲಾದಂತೆ ಒಂದು ಲಕ್ಷ ರೂಪಾಯಿಗಳು ಮತ್ತು ಅದಕ್ಕಿಂತ ಮೇಲ್ಪಟ್ಟು ಆದರೆ [3][ಇಪ್ಪತ್ತೈದು ಲಕ್ಷ ರೂಪಾಯಿಗಳಿಗಿಂತ] ಕಡಿಮೆ ಆದಾಯವನ್ನು ಹೊಂದಿರುವ ಅಧಿಸೂಚಿತ ಸಂಸ್ಥೆಗಳ ವ್ಯವಸ್ಥಾಪನಾ ಸಮಿತಿಯನ್ನು ವಿಸರ್ಜಿಸುವ, –ಅಧಿಕಾರವನ್ನು ಹೊಂದಿರತಕ್ಕದ್ದು.

(3) ಜಿಲ್ಲಾ ಧಾರ್ಮಿಕ ಪರಿಷತ್ತಿನ ಅಧಿಕಾರ ವ್ಯಾಪ್ತಿಯೊಳಗೆ ಬರುವ ವಿವಾದಗಳನ್ನು, ಪರಿಷತ್ತಿನ ನ್ಯಾಯಿಕ ಸದಸ್ಯ ಹಾಗೂ ಕಾರ್ಯದರ್ಶಿಯನ್ನು ಒಳಗೊಂಡಂಥ ನ್ಯಾಯಾಧಿಕರಣವು ನಿರ್ಣಯಿಸತಕ್ಕದ್ದು. ಅವರಲ್ಲಿ ಯಾವುದೇ ಭಿನ್ನಾಭಿಪ್ರಾಯವಿದ್ದಲ್ಲಿ, ವಿವಾದವನ್ನು ಜಿಲ್ಲಾ ಧಾರ್ಮಿಕ ಪರಿಷತ್ತು ನಿರ್ಧರಿಸತಕ್ಕದ್ದು.

1. 2012ರ ಅಧಿನಿಯಮ ಸಂಖ್ಯೆ 12ರ ಮೂಲಕ ದಿನಾಂಕ: 5-3-2012 ರಿಂದ ಪ್ರತ್ಯಾಯೋಜಿಸಲಾಗಿದೆ.
2. 2012ರ ಅಧಿನಿಯಮ ಸಂಖ್ಯೆ 12ರ ಮೂಲಕ ದಿನಾಂಕ: 5-3-2012 ರಿಂದ ಪ್ರತ್ಯಾಯೋಜಿಸಲಾಗಿದೆ.

21-ಬಿ. ಧಾರ್ಮಿಕ ಪರಿಷತ್ತಿನ ಸದಸ್ಯರ ಅರ್ಹತೆಗಳು ಮತ್ತು ಅನರ್ಹತೆಗಳು / Qualification and Disqualification of the Members of the Dharmika Parishats.– (1) ರಾಜ್ಯ ಧಾರ್ಮಿಕ ಪರಿಷತ್ತು ಮತ್ತು ಜಿಲ್ಲಾ ಧಾರ್ಮಿಕ ಪರಿಷತ್ತಿನ ಸದಸ್ಯನು ಹಿಂದೂ ಆಗಿರತಕ್ಕದ್ದು ಹಾಗೂ ಆತನು, ಅಂಥ ಧರ್ಮವನ್ನು ಅನುಸರಿಸುತ್ತಿರುವುದು ನಿಂತುಹೋದಾಗ ಪದದಲ್ಲಿರುವುದೂ ನಿಂತುಹೋಗತಕ್ಕದ್ದು.

(2) ಒಬ್ಬ ವ್ಯಕ್ತಿಯು,–

(ಎ) ಅವನು ಅವಿಯುಕ್ತ ದಿವಾಳಿಯಾಗಿದ್ದರೆ; ಅಥವಾ

(ಬಿ) ಅವನು ಅಸ್ವಸ್ಥಚಿತ್ತನಾಗಿದ್ದು ಮತ್ತು ಸಕ್ಷಮ ನ್ಯಾಯಾಲಯದಿಂದ ಹಾಗೆಂದು ಘೋಷಿಸಲಾಗಿದ್ದರೆ; ಅಥವಾ

(ಸಿ) ನೈತಿಕ ಅಧಃಪತನವನ್ನು ಒಳಗೊಳ್ಳುವ ಒಂದು ಅಪರಾಧಕ್ಕಾಗಿ ಕ್ರಿಮಿನಲ್ ನ್ಯಾಯಾಲಯದಿಂದ-ಶಿಕ್ಷಿತನಾಗಿದ್ದರೆ; ಅಥವಾ

(ಡಿ) ಯಾವುದೇ ಸಮಯದಲ್ಲಿ ಹಿಂದೂ ಧಾರ್ಮಿಕ ಸಂಸ್ಥೆಗಳ ಹಿತಾಸಕ್ತಿಗೆ ವಿರುದ್ಧವಾಗಿ ವರ್ತಿಸಿದ್ದರೆ; ಅಥವಾ

(ಇ) ಅವನು ಮದ್ಯಪಾನ ಅಥವಾ ಮಾದಕ ದ್ರವ್ಯ ಸೇವನೆಯ ದುರ್ವ್ಯಸನಿಯಾಗಿದ್ದರೆ ಅಥವಾ ಜೂಜಾಡುವವನಾಗಿದ್ದರೆ,–ಪರಿಷತ್ತಿನ ಸದಸ್ಯನಾಗಿ ನೇಮಕಗೊಳ್ಳಲು ಅಥವಾ ಸದಸ್ಯನಾಗಿ ಮುಂದುವರೆಯಲು ಅನರ್ಹನಾಗಿರತಕ್ಕದ್ದು.

21-ಸಿ. ರಾಜ್ಯ ಧಾರ್ಮಿಕ ಪರಿಷತ್ತಿನ ಮತ್ತು ಜಿಲ್ಲಾ ಧಾರ್ಮಿಕ ಪರಿಷತ್ತಿನ ಸದಸ್ಯರನ್ನು ತೆಗೆದುಹಾಕುವುದು ಮತ್ತು ಅನರ್ಹಗೊಳಿಸುವುದು / Removal and Disqualification of the Members of the Rajya Dharmika Parishat and Zilla Dharmika Parishat.– ರಾಜ್ಯ ಸರ್ಕಾರವು, ರಾಜ್ಯ ಧಾರ್ಮಿಕ ಪರಿಷತ್ತು ಅಥವಾ ಜಿಲ್ಲಾ ಧಾರ್ಮಿಕ ಪರಿಷತ್ತಿನ ಅಧಿಕಾರೇತರ ಸದಸ್ಯನನ್ನು ಅಂಥ ಆರೋಪಗಳ ಮೇಲೆ ತಾನು ಸೂಕ್ತವೆಂದು ಭಾವಿಸಬಹುದಾದಂಥ ವಿಚಾರಣೆಯನ್ನು ನಡೆಸಿದ ನಂತರ ರುಜುವಾತಾದ ದುರ್ನಡತೆ ಮತ್ತು ದುರ್ವರ್ತನೆಗಾಗಿ ತೆಗೆದುಹಾಕಬಹುದು ಅಥವಾ ಅನರ್ಹಗೊಳಿಸಬಹುದು.

21-ಡಿ. ರಾಜ್ಯ ಧಾರ್ಮಿಕ ಪರಿಷತ್ತು ಮತ್ತು ಜಿಲ್ಲಾ ಧಾರ್ಮಿಕ ಪರಿಷತ್ತಿನ ಸಭೆ / Meeting of the Rajya Dharmika Parishad and Zilla Dharmika Parishat.– (1) ರಾಜ್ಯ ಧಾರ್ಮಿಕ ಪರಿಷತ್ತು ಮತ್ತು ಜಿಲ್ಲಾ ಧಾರ್ಮಿಕ ಪರಿಷತ್ತಿನ ನಿಯತಕಾಲಿಕ ಸಭೆಗಳನ್ನು ನಿಯಮಿಸಬಹುದಾದಂಥ ಮಧ್ಯಂತರ ಅವಧಿಗಳಲ್ಲಿ ನಡೆಸತಕ್ಕದ್ದು.

(2) ರಾಜ್ಯ ಧಾರ್ಮಿಕ ಪರಿಷತ್ತು ಮತ್ತು ಜಿಲ್ಲಾ ಧಾರ್ಮಿಕ ಪರಿಷತ್ತಿನ ಸದಸ್ಯರಿಗೆ ಸಂದಾಯ ಮಾಡಬೇಕಾದ ಉಪವೇಶನ ಶುಲ್ಕ ಮತ್ತು ಭತ್ಯೆಗಳು ನಿಯಮಿಸ ಬಹುದಾದಂತೆ ಇರತಕ್ಕದ್ದು.

21-ಇ. ರಾಜ್ಯ ಸರ್ಕಾರದಿಂದ ನಿಯಂತ್ರಣ / Control by the State Governments.– ರಾಜ್ಯ ಸರ್ಕಾರವು, ರಾಜ್ಯ ಧಾರ್ಮಿಕ ಪರಿಷತ್ತಿನ ಮತ್ತು ಜಿಲ್ಲಾ ಧಾರ್ಮಿಕ ಪರಿಷತ್ತಿನ ಚಟುವಟಿಕೆಗಳು ಹಾಗೂ ವ್ಯವಹಾರಗಳ ಮೇಲೆ ಸಾಮಾನ್ಯ ಆಡಳಿತಾತ್ಮಕ ಹಾಗೂ ಮೇಲ್ವಿಚಾರಣೆಯ ನಿಯಂತ್ರಣವನ್ನು ಹೊಂದಿರತಕ್ಕದ್ದು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಇಲ್ಲಿ 2-3 ವಿಚಾರಗಳಿವೆ. ದೇವಾಲಯಗಳಲ್ಲಿ ಮಾತ್ರ ನೀರಿನ ಪ್ಲಾಸ್ಟಿಕ್ ಬಾಟಲಿಗಳನ್ನು ನಿಷೇಧ ಮಾಡಿದ್ದಾರೆ. ಆದರೆ ದೇವಾಲಯಗಳ ಸುತ್ತ ಒಂದೆರಡು ಕಿಲೋ ಮೀಟರ್‌ಗಳ ವ್ಯಾಪ್ತಿಯಲ್ಲಿ ಇರುವಂತಹ ಎಲ್ಲಾ ಅಂಗಡಿಗಳಲ್ಲಿ ಈ ಬಾಟಲಿಗಳು ಸಿಗುತ್ತವೆ. ಈ ಬಾಟಲಿಗಳನ್ನು ಉಪಯೋಗಿಸಿ ಬಿಸಾಡುವುದರಿಂದ ಸುತ್ತಮುತ್ತಲಿನ ಪ್ರದೇಶಗಳು ಗಲೀಜಾಗುತ್ತಿವೆ. ಆದ್ದರಿಂದ ಕಡೆ ಪಕ್ಷ ದೇವಾಲಯಗಳ ಒಂದೆರಡು ಕಿಲೋ ಮೀಟರ್‌ಗಳ ವ್ಯಾಪ್ತಿಯಲ್ಲಿ ಪ್ಲಾಸ್ಟಿಕ್ ಅನ್ನು ನಿಷೇಧ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತಿದ್ದೇನೆ. ಅದರ ಜೊತೆಗೆ ಧಾರ್ಮಿಕ ಪರಿಷತ್ ಅನ್ನು ರಚನೆ ಮಾಡುವುದು ಇನ್ನೂ 23 ಜಿಲ್ಲೆಗಳಲ್ಲಿ ಬಾಕಿ ಇವೆ. ಹಲವಾರು ದೇವಸ್ಥಾನಗಳ ಜಮೀನುಗಳು ಒತ್ತುವರಿಯಾಗುತ್ತಿವೆ. ಅದನ್ನು ಮರಳಿ ಪಡೆಯುವುದಕ್ಕೆ ಈ ಪರಿಷತ್ ಅನ್ನು ರಚನೆ ಮಾಡಿದರೆ ಅನುಕೂಲವಾಗುತ್ತದೆ ಎನ್ನುವುದು ನನ್ನ ಭಾವನೆ. ಆದ್ದರಿಂದ ಉಳಿದಿರುವ 23 ಜಿಲ್ಲೆಗಳಲ್ಲಿ ಶೀಘ್ರದಲ್ಲಿಯೇ ಜಿಲ್ಲಾ ಧಾರ್ಮಿಕ ಪರಿಷತ್ತನ್ನು ರಚನೆ ಮಾಡಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಮತ್ತು ಮುಜರಾಯಿ ಸಚಿವರು):- ಮಾನ್ಯ ಸಭಾಪತಿಯವರೇ, ನಾವು ದೇವಸ್ಥಾನದ ಆವರಣದೊಳಗೆ ಪ್ಲಾಸ್ಟಿಕ್ ಬಾಟಲಿಗಳನ್ನು ನಿಷೇಧ ಮಾಡುತ್ತೇವೆ. ಹೊರಗಡೆ ಜಿಲ್ಲಾಧಿಕಾರಿಗಳು ಮಾಡಬೇಕು. ಅದರ ಬಗ್ಗೆ ಸಚಿವ ಸಂಪುಟದಲ್ಲಿ ತೀರ್ಮಾನ ತೆಗೆದುಕೊಳ್ಳಬೇಕು ಅಥವಾ ಜಿಲ್ಲಾಧಿಕಾರಿಗಳು ತೀರ್ಮಾನ ತೆಗೆದುಕೊಳ್ಳಬೇಕು. ದೇವಸ್ಥಾನಗಳ ಒಳಗಡೆ ಅಂತೂ ಪ್ಲಾಸ್ಟಿಕ್ ಬಳಕೆಯನ್ನು ಖಂಡಿತವಾಗಿಯೂ ನಾವು ಆಗಸ್ಟ್ ತಿಂಗಳನ 15ನೇ ತಾರೀಖಿನಿಂದ ಕಟ್ಟುನಿಟ್ಟಾಗಿ ನಿಷೇಧ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಎ-ಗ್ರೇಡ್ ದೇವಾಲಯಗಳು ಧಾರ್ಮಿಕ ಪರಿಷತ್‌ಗೆ ಬರುತ್ತವೆ. ಅದಕ್ಕೆ ನಾನು ಅಂದರೆ ಮುಜರಾಯಿ ಸಚಿವರು ಛೇರ್ಮನ್ ಆಗಿರುತ್ತಾರೆ. 4-5 ದೇವಾಲಯಗಳನ್ನು ಬಿಟ್ಟರೆ ಉಳಿದ ಎಲ್ಲಾ ಎ-ಗ್ರೇಡ್ ದೇವಾಲಯಗಳಲ್ಲಿಯೂ ಮಾಡಿದ್ದೇವೆ. ಬಿ-ಗ್ರೇಡ್ ದೇವಾಲಯಗಳಿಗೆ ಆಯಾ ಜಿಲ್ಲಾಧಿಕಾರಿಗಳು ಜಿಲ್ಲಾ ಧಾರ್ಮಿಕ ಪರಿಷತ್ ಅಧ್ಯಕ್ಷರಾಗಿರುತ್ತಾರೆ. 7 ಜಿಲ್ಲೆಗಳಲ್ಲಿ ಆಗಿದೆ, ಉಳಿದ ಜಿಲ್ಲೆಗಳಲ್ಲಿ ಆಗಿಲ್ಲ. ಅದಕ್ಕೆ ಸಾಕಷ್ಟು ಸುತ್ತೋಲೆಗಳನ್ನು ಕೊಟ್ಟಿದ್ದೇವೆ, ನಮ್ಮ ಕಮಿಷನರ್‌ರವರು ಸಹ ಸಾಕಷ್ಟು ಬಾರಿ ಮಾತನಾಡಿದ್ದಾರೆ. ಅದನ್ನು ಆದಷ್ಟು ಬೇಗ ಮಾಡುತ್ತೇವೆ.

ಶ್ರೀ ಮಧು ಜಿ. ಮಾದೇಗೌಡ:- ಮಾನ್ಯ ಸಭಾಪತಿಯವರೇ, 'ಸಿ' ವರ್ಗದ ದೇವಾಲಯಗಳನ್ನು ವಹಿಸುವುದಕ್ಕೆ ಟ್ರಸ್ಟ್ ಮತ್ತು ಸಂಘ ಸಂಸ್ಥೆಗಳಿಗೆ ಕೊಡುತ್ತೇವೆಂದು ಈಗಾಗಲೇ ಕಾನೂನೊಂದು ಮಾಡಿದ್ದಾರೆ. ಅದಕ್ಕೆ ಏನಾದರೂ ಗೈಡ್‌ಲೈನ್ಸ್ ಅನ್ನು ರಚನೆ ಮಾಡಿದ್ದಾರೆಯೇ ಎಂದು ಕೇಳಬಯಸುತ್ತೇನೆ.

ಶ್ರೀ ರಾಮಲಿಂಗಾರೆಡ್ಡಿ:- ಮಾನ್ಯ ಸಭಾಪತಿಯವರೇ, ಸಿ-ಗ್ರೇಡ್ ದೇವಾಲಯಗಳ ದತ್ತು ಸ್ವೀಕಾರವನ್ನು ಯಾರು ಬೇಕಾದರೂ ಮಾಡಬಹುದು. Development Committee ಸಹ ಮಾಡಿಕೊಡುತ್ತೇವೆ. ಯಾರು ಬೇಕಾದರೂ ಮಾಡಬಹುದು, ಎಷ್ಟು ದೇವಸ್ಥಾನಗಳನ್ನು ಬೇಕಾದರೂ ತೆಗೆದುಕೊಳ್ಳಬಹುದು. ಅಂದರೆ ಅವರಿಗೆ

"ತಿದ್ದುಪಡಿಯಾಗದ ಪ್ರತಿ/**unedited copy**/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡುವುದಿಲ್ಲ. ಮುಜರಾಯಿ ಇಲಾಖೆಯ ನಿಯಂತ್ರಣದಲ್ಲಿಯೇ ಇರುತ್ತದೆ. ಅವರು ಅಭಿವೃದ್ಧಿಗೊಳಿಸಬಹುದು. Development Committee ಸಹ ಮಾಡಿಕೊಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಶ್ನೆ ಸಂಖ್ಯೆ: 336

ಧಾರವಾಡ, ಗದಗ ಹಾಗೂ ಹಾವೇರಿ ಜಿಲ್ಲೆಗಳಿಗೆ ಲೋಕೋಪಯೋಗಿ ಇಲಾಖೆಯಿಂದ ಬಿಡುಗಡೆಯಾಗಿರುವ ಅನುದಾನದ ಬಗ್ಗೆ

ಕ್ರ.ಸಂ	ಪ್ರಶ್ನೆಗಳು	ಉತ್ತರಗಳು
ಅ)	2023ನೇ ಸಾಲಿನಿಂದ ಈವರೆಗೆ ಧಾರವಾಡ, ಗದಗ ಹಾಗೂ ಹಾವೇರಿ ಜಿಲ್ಲೆಗಳ ರಸ್ತೆ ಮತ್ತು ಇತರೆ ಕಾಮಗಾರಿಗಳಿಗೆ ಬಿಡುಗಡೆಯಾಗಿರುವ ಅನುದಾನ ಎಷ್ಟು;	2023-24, 2024-25 ಹಾಗೂ 2025-26ನೇ ಸಾಲಿನಲ್ಲಿ ಧಾರವಾಡ, ಗದಗ ಹಾಗೂ ಹಾವೇರಿ ಜಿಲ್ಲೆಗಳಿಗೆ ರಸ್ತೆ ಕಾಮಗಾರಿಗಳಿಗೆ ಒದಗಿಸಿದ ಅನುದಾನದ ವಿವರ ಕೆಳಕಂಡಂತಿದೆ. (ರೂ.ಕೋಟಿ)
ಆ)	ಬಿಡುಗಡೆಯಾಗಿರುವ ಅನುದಾನದಲ್ಲಿ ಮುಕ್ತಾಯಗೊಂಡಿರುವ ಕಾಮಗಾರಿಗಳಾವುವು;	2023-24, 2024-25 ಹಾಗೂ 2025-26ನೇ ಸಾಲಿನಲ್ಲಿ ಧಾರವಾಡ, ಗದಗ ಹಾಗೂ ಹಾವೇರಿ ಜಿಲ್ಲೆಗಳಿಗೆ ರಸ್ತೆ ಕಾಮಗಾರಿಗಳಿಗೆ ಬಿಡುಗಡೆಯಾಗಿರುವ ಅನುದಾನದಲ್ಲಿ ಕೈಗೊಂಡಿರುವ, ಮುಕ್ತಾಯಗೊಂಡಿರುವ ಹಾಗೂ ಪ್ರಗತಿಯಲ್ಲಿರುವ ಕಾಮಗಾರಿಗಳ ವಿವರ ಕೆಳಕಂಡಂತಿದ್ದು, ಯಾವುದೇ ಕಾಮಗಾರಿಗಳು ಕುಂಠಿತವಾಗಿರುವುದಿಲ್ಲ.
ಇ)	ಅನುದಾನ ವಿಳಂಬದಿಂದ ಕುಂಠಿತವಾಗಿರುವ ಕಾಮಗಾರಿಗಳ ಸಂಖ್ಯೆ ಎಷ್ಟು? (ವಿವರ ನೀಡುವುದು)	ಕಾಮಗಾರಿಗಳ ವಿವರಗಳನ್ನು ಅನುಬಂಧ-1ರಲ್ಲಿ ಒದಗಿಸಿದೆ.

ಕ್ರ. ಸಂ	ವಿಭಾಗ	ಬಿಡುಗಡೆಯಾದ ಅನುದಾನ			
		2023-24	2024-25	2025-26	ಒಟ್ಟು
1	ಧಾರವಾಡ	201.69	190.97	0.00	**392.66**
2	ಗದಗ	88.38	122.70	0.00	**211.08**
3	ಹಾವೇರಿ	157.03	141.88	0.00	**298.91**
	ಒಟ್ಟು	**447.10**	**455.55**	**0.00**	**902.65**

ಕ್ರ. ಸಂ	ವಿಭಾಗ	ಮಂಜೂರಾದ ಕಾಮಗಾರಿಗಳ ಸಂಖ್ಯೆ	ಮುಕ್ತಾಯಗೊಂಡಿರುವ ಕಾಮಗಾರಿಗಳ ಸಂಖ್ಯೆ	ಪ್ರಗತಿಯಲ್ಲಿರುವ ಕಾಮಗಾರಿಗಳ ಸಂಖ್ಯೆ
1	ಧಾರವಾಡ	390	266	124
2	ಗದಗ	342	284	58
3	ಹಾವೇರಿ	565	157	408
	ಒಟ್ಟು	**1297**	**707**	**590**

ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸವಿಸ್ತಾರವಾಗಿ ಮೂರು ಜಿಲ್ಲೆಗಳಿಗೆ ಸಂಬಂಧಪಟ್ಟಂತೆ ಉತ್ತರವನ್ನು ಕೊಟ್ಟಿದ್ದಾರೆ. ಇದನ್ನು ನೋಡುವುದಕ್ಕೆ ನನಗೆ ಒಂದು ದಿವಸವಾದರೂ ಬೇಕಾಗುತ್ತದೆ. 2021ರಲ್ಲಿ ಧಾರವಾಡ ಜಿಲ್ಲೆಗೆ ಲೋಕೋಪಯೋಗಿ ಕೆಲಸಗಳು ಏನು ಮಂಜೂರಾಗಿತ್ತು, ಅದರಲ್ಲಿ ಕೆಲವು ಕಾಮಗಾರಿಗಳು ಇನ್ನೂ ನಡೆಯುತ್ತಿವೆ. ತಾವು ಉತ್ತರದಲ್ಲಿ ಕುಂಠಿತ ಕಾಮಗಾರಿಗಳ ಸಂಖ್ಯೆಯನ್ನು ಶೂನ್ಯ ಎಂದು ತೋರಿಸಿದ್ದೀರಿ. ಆದರೆ ಅಲ್ಲಿ ಸಾಕಷ್ಟು ಕಾಮಗಾರಿಗಳು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕುಂಠಿತಗೊಂಡಿವೆ. ಅಲ್ಲಿ ಕೆಲವು ಒಳಚರಂಡಿ ಯೋಜನೆಗಳ ಕಾಮಗಾರಿಗಳು ಮಹಾನಗರಪಾಲಿಕೆ ಇರಬಹುದು, ನಗರಾಭಿವೃದ್ಧಿ ಇಲಾಖೆಯಿಂದ ಕೆಲವು ಕಾಮಗಾರಿಗಳು ಆಗುತ್ತಿಲ್ಲ. ಅದರಿಂದಲೂ ಕುಂಠಿತವಾಗಿದೆ. ನಾನು ಲೋಕೋಪಯೋಗಿ ಇಲಾಖೆ ಮೇಲೆ ನೇರವಾಗಿ ಆಪಾದನೆ ಮಾಡುವುದಿಲ್ಲ. ಅದು ನಿಮಗೆ ಮತ್ತು ಆ ಇಲಾಖೆಗೆ ಸಂಬಂಧಪಟ್ಟಿದ್ದಾಗಿದೆ. ಏಕೆಂದರೆ ಅವರು delay ಮಾಡುವುದರಿಂದ ಅಲ್ಲಿ ಲೋಕೋಪಯೋಗಿ ಕೆಲಸಗಳು ನಿಂತು ಹೋಗಿವೆ. ಇದೆಲ್ಲಾ 2021ರ ಕಾಮಗಾರಿಗಳು. ಭಾರತೀಯ ಜನತಾ ಪಾರ್ಟಿಯ ಸರ್ಕಾರ ಇದ್ದಾಗ ಶ್ರೀ ಜಗದೀಶ್ ಶೆಟ್ಟರ್‌ರವರು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದಾಗ ಆಗಿದ್ದ ಕೆಲಸಗಳವು. ಹೊಸದಾಗಿ ಲೋಕೋಪಯೋಗಿ ಇಲಾಖೆಯ ಯಾವುದೇ ಕೆಲಸಗಳು ಆದಂತಿಲ್ಲ. ಮೂರು ಜಿಲ್ಲೆಗಳಲ್ಲಿಯೂ ಬಹಳ ಕಡಿಮೆ ಕಾಮಗಾರಿಗಳಾಗಿವೆ. ಅದನ್ನು ನಾನು ಚೆಕ್ ಮಾಡುತ್ತೇನೆ. ಏಕೆಂದರೆ ಬಹಳಷ್ಟು ಮಾಹಿತಿಗಳಿವೆ, ನನಗೆ ನೋಡುವುದಕ್ಕೆ ಸಮಯವಾಗುತ್ತಿಲ್ಲ. ಹುಬ್ಬಳ್ಳಿ-ಧಾರವಾಡದ ಕೆಲವು ಕಡೆ ರಸ್ತೆ ಬದಿಗಳಲ್ಲಿ pavers ಹಾಕಿಲ್ಲ. ಇದೆಲ್ಲಾ 2021-22ನೇ ಸಾಲಿನಲ್ಲಿ ನಮ್ಮ ಸರ್ಕಾರ ಇದ್ದಾಗ ಆಗಿದ್ದಂತಹ ಕಾಮಗಾರಿಗಳು. 40 ಕೋಟಿ ರೂಪಾಯಿಗಳ ಕಾಮಗಾರಿಗಳಾಗಿವೆ. ಉದಾಹರಣೆಗೆ ಹುಬ್ಬಳ್ಳಿ ಸ್ಟೇಷನ್ ರಸ್ತೆಯಿಂದ ಗೋಪನಕೊಪ್ಪ ಹಾಗೂ ಉಣಕಲ್‌ಗೆ ಹೋಗುವ ದಾರಿ. ಅದು 60 ಕೋಟಿ ರೂಪಾಯಿಗಳ ಕೆಲಸವಾಗಿದೆ. ಅದು ಪೂರ್ಣಗೊಂಡಿದೆ, ಆದರೆ ಏತಕ್ಕೆ pavers ಹಾಕಿಲ್ಲ ಎಂದು ಗೊತ್ತಿಲ್ಲ. ನಾನು ಬಹಳಷ್ಟು ಸಲ ಕರೆದು ಕೇಳಿದ್ದೇನೆ. ಹೀಗಾಗಿ ಕೆಲವು ಕಾಮಗಾರಿಗಳು ವಿಳಂಬವೂ ಆಗಿದೆ, ಕುಂಠಿತವೂ ಆಗಿವೆ. ಉತ್ತರದಲ್ಲಿ ಅದನ್ನು 'ಇಲ್ಲ' ಎಂದು ಕೊಟ್ಟಿದ್ದೀರಿ. ನಾನು ಬರೀ ಧಾರವಾಡ ಜಿಲ್ಲೆಯ ಬಗ್ಗೆ ಹೇಳುತ್ತೇನೆ. ಈ ಎಲ್ಲಾ ಕಾಮಗಾರಿಗಳು ಬಹಳ ಬೇಗ ಆಗಬೇಕಾಗಿದೆ. ಅದಲ್ಲದೇ ಮುಖ್ಯವಾಗಿ ಹುಬ್ಬಳ್ಳಿ traffic line ನಲ್ಲಿ ಆಗುತ್ತಿರುವ flyover manage ಮಾಡುವವರು ಸರ್ಕಾರ. ಅದಕ್ಕೆ ಫಂಡಿಂಗ್ ಮಾಡುವುದು ಕೇಂದ್ರ ಸರ್ಕಾರ. ಕೇಂದ್ರ ಸಚಿವರಾದ ಮಾನ್ಯ ಪ್ರಹ್ಲಾದ ಜೋಶಿಯವರು ಹಾಗೂ ಶ್ರೀ ಜಗದೀಶ್ ಶೆಟ್ಟರ್‌ರವರ ಪ್ರಯತ್ನದಿಂದ ಇವತ್ತು ಅಲ್ಲಿ ಫ್ಲೈ ಓವರ್ ನಿರ್ಮಾಣವಾಗುತ್ತಿದೆ. ಒಟ್ಟಾರೆ ಅದು Central Road Fund. ಅದನ್ನು ಲೋಕೋಪಯೋಗಿ ಇಲಾಖೆಯಿಂದ manage ಮಾಡಬೇಕು. ಅದು ಆಗುತ್ತಿಲ್ಲ. ಅಲ್ಲಿ ಒಂದು ಸಾವಾಗಿದೆ, ಕಾಮಗಾರಿ ಸಹ ವಿಳಂಬವಾಗುತ್ತಿದೆ. ಆ ಕಾರಣದಿಂದ ಬೆಂಗಳೂರಿನ ನಂತರ ವೇಗವಾಗಿ ಬೆಳೆಯುತ್ತಿರುವ ನಗರವೆಂದರೆ ಹುಬ್ಬಳ್ಳಿ-ಧಾರವಾಡ ಮಹಾನಗರ. ಇದನ್ನು ಸರ್ಕಾರ ಗಂಭೀರವಾಗಿ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಸತೀಶ್ ಜಾರಕಿಹೊಳಿ (ಲೋಕೋಪಯೋಗಿ ಸಚಿವರು):- ಮಾನ್ಯ ಸಭಾಪತಿಯವರೇ, ನಾವು ಕಾಮಗಾರಿ ಮುಗಿದಿದೆ ಎಂದು ಎಲ್ಲಿಯೂ ಹೇಳಿಲ್ಲ. ಒಟ್ಟು ಕಾಮಗಾರಿಗಳ ಸಂಖ್ಯೆ 1297. ಅದರಲ್ಲಿ 707 ಕಾಮಗಾರಿಗಳು ಮುಕ್ತಾಯಗೊಂಡಿವೆ, 590 ಕಾಮಗಾರಿಗಳು ಪ್ರಗತಿಯಲ್ಲಿವೆ. ಅವರು ಹೇಳಿರುವಂತಹ ಕಾಮಗಾರಿ ಇದರಲ್ಲಿ ಬಂದೇ ಬರುತ್ತದೆ. ತಾವು ಹೇಳಿದ ಹಾಗೆ ಕಾರ್ಪೊರೇಷನ್ ಕೂಡ ಇದಕ್ಕೆ related ಇದೆ. ಬಹುಶಃ ಜಂಟಿಯಾಗಿ ಸಭೆ ಮಾಡಿದರೆ ಪರಿಹಾರ ಆಗಬಹುದು. ಅವರು ಕೇಳಿದ ಸಂಪೂರ್ಣವಾದ ಮಾಹಿತಿಯನ್ನು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಟ್ಟಿದ್ದೇವೆ, ಅದನ್ನು ನೋಡುವುದಕ್ಕೆ ತಮಗೂ ಸಮಯ ಬೇಕಾಗಬಹುದು. ಧಾರವಾಡ ಜಿಲ್ಲೆಯಲ್ಲಿ ಒಂದು ಸಲ ಮೀಟಿಂಗ್ ಮಾಡಿದಾಗ ಇದರ ಬಗ್ಗೆ ಸವಿಸ್ತಾರವಾಗಿ ಚರ್ಚೆ ಮಾಡೋಣ.

ಶ್ರೀ ಪ್ರದೀಪ್ ಶೆಟ್ಟರ್:– ಮಾನ್ಯ ಸಭಾಪತಿಯವರೇ, ದಯವಿಟ್ಟು ತ್ವರಿತವಾಗಿ review meeting ಮಾಡಿ. ಧಾರವಾಡದಲ್ಲಿ ಸಾಕಷ್ಟು ಕಾಮಗಾರಿಗಳನ್ನು ತೆಗೆದುಕೊಳ್ಳಬೇಕು, ಇನ್ನೂ ತೆಗೆದುಕೊಂಡಿಲ್ಲ. ದಯವಿಟ್ಟು ಅದನ್ನು ಶೀಘ್ರದಲ್ಲಿಯೇ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸತೀಶ್ ಜಾರಕಿಹೊಳಿ:– ಮಾನ್ಯ ಸಭಾಪತಿಯವರೇ, ಈ ವರ್ಷದ್ದು ಇನ್ನೂ ಕೊಟ್ಟಿಲ್ಲ, ಅದನ್ನೂ ಕೊಡುತ್ತೇವೆ.

ಸಭಾಪತಿಯವರು:– ಈಗ ಶ್ರೀ ಕೆ.ಎಸ್. ನವೀನ್‌ರವರ ಪ್ರಶ್ನೆ.

ಶ್ರೀ ಎಸ್.ಎಲ್. ಭೋಜೇಗೌಡ:– ಮಾನ್ಯ ಸಭಾಪತಿಯವರೇ, ದಯವಿಟ್ಟು ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕಾದ ಸಚಿವರು ಮತ್ತು ಅಧಿಕಾರಿಗಳು ಎನ್ನುವ ಪತ್ರದಲ್ಲಿ ಕಡ್ಡಾಯ ಎನ್ನುವ ಪದವನ್ನು ತೆಗೆದುಬಿಡಿ. ಇಲ್ಲದಿದ್ದರೆ ಈ ಪತ್ರಕ್ಕೆ ಬೆಲೆ ಇಲ್ಲದಂತಾಗುತ್ತದೆ.

ಸಭಾಪತಿಯವರು:– ಆಯಿತು. ತಾವು ಹೇಳಿದ ಹಾಗೆ ಮಾಡೋಣ.

ಶ್ರೀ ಎಸ್.ಎಲ್. ಭೋಜೇಗೌಡ:– ಆಮೇಲೆ ಶ್ರೀ ಕೆ.ಎನ್. ರಾಜಣ್ಣನವರು ರಾಜೀನಾಮೆ ಕೊಟ್ಟಿದ್ದಾರೆಂದು ನಿನ್ನೆ, ಮೊನ್ನೆ ದಿವಸದಿಂದ ಚರ್ಚೆಯಾಗುತ್ತಿದೆ. ಆದರೆ ಅವರ ಹೆಸರು ಮತ್ತೆ ಮತ್ತೆ ಈ ಪತ್ರದಲ್ಲಿ ಬರುತ್ತಿದೆಯಲ್ಲಾ, ಇದರ ಬಗ್ಗೆ ತಾವು ತಿಳಿಸಬೇಕು.

ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):– ಬಂದಿದೆ, ಅವರಿಗೆ ಮಾಹಿತಿ ಕೊಟ್ಟಿದ್ದೇವೆ,

ಸಭಾಪತಿಯವರು:– ಇದನ್ನು ಸರಿಪಡಿಸಲಾಗುವುದು.

ಶ್ರೀ ಎಸ್.ಎಲ್. ಭೋಜೇಗೌಡ:– ಇದು ಆಗಬಾರದು. ಇದನ್ನು ಗಂಭೀರವಾಗಿ ಮಾಡುತ್ತೀರೋ ಅಥವಾ ಬಿಡುತ್ತೀರೋ! ನೀವು ಬಹಳ ಸುಲಭವಾಗಿ ತೆಗೆದುಕೊಂಡಿದ್ದೀರಿ, ಸುಲಭವಾಗಿಯೇ ತೆಗೆದುಕೊಳ್ಳಿ.

ಸಭಾಪತಿಯವರು:– ಮಾನ್ಯ ಭೋಜೇಗೌಡರೇ, ಅದು ನಿಮ್ಮಷ್ಟು ಸುಲಭವಾಗಿಲ್ಲ ಕುಳಿತುಕೊಳ್ಳಿ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಶ್ನೆ ಸಂಖ್ಯೆ: 386

ರಸ್ತೆ ಅಪಘಾತಗಳ ಮತ್ತು ವಾಹನ ಚಾಲನೆ ಪರವಾನಗಿಗಳ ಬಗ್ಗೆ

<table>
<tr><th></th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ರಾಜ್ಯದಲ್ಲಿ ಕಳೆದ ಎರಡು ವರ್ಷಗಳಲ್ಲಿ ಎಷ್ಟು ರಸ್ತೆ ಅಪಘಾತಗಳಾಗಿದೆ: ಈ ಅಪಘಾತಗಳಿಂದ ಎಷ್ಟು ಜನ ಮೃತಪಟ್ಟಿದ್ದಾರೆ: (ಜಿಲ್ಲಾವಾರು ವಿವರ ಒದಗಿಸುವುದು)</td><td>2020, 2021, 2022, 2023, 2024 ಮತ್ತು 2025 (ಜೂನ್) ರ ಸಾಲಿನಲ್ಲಿ ರಾಜ್ಯದಲ್ಲಿ ಸಂಭವಿಸಿರುವ ರಸ್ತೆ ಅಪಘಾತಗಳ ವಾರ್ಷಿಕ ವಿವರಗಳು ಈ ಕೆಳಕಂಡಂತಿವೆ.
<table>
<tr><th>ವರ್ಷ</th><th>ಅಪಘಾತಗಳು</th><th>ರಸ್ತೆ ಅಪಘಾತಗಳಲ್ಲಿ ಮೃತ ಪಟ್ಟಿರುವವರ ಸಂಖ್ಯೆ</th></tr>
<tr><td>01.01.2020 ರಿಂದ 31.12.2020</td><td>34178</td><td>9760</td></tr>
<tr><td>01.01.2021 ರಿಂದ 31.12.2021</td><td>34647</td><td>10038</td></tr>
<tr><td>01.01.2022 ರಿಂದ 31.12.2022</td><td>39762</td><td>11702</td></tr>
<tr><td>01.01.2023 ರಿಂದ 31.12.2023</td><td>43440</td><td>12321</td></tr>
<tr><td>01.01.2024 ರಿಂದ 31.12.2024</td><td>39228</td><td>10319</td></tr>
<tr><td>01.01.2025 ರಿಂದ 30.06.2025</td><td>21937</td><td>5975</td></tr>
<tr><td>ಒಟ್ಟು</td><td>213192</td><td>60115</td></tr>
</table>
ಜಿಲ್ಲಾವಾರು ವಿವರಗಳು ಅನುಬಂಧದಲ್ಲಿ ಒದಗಿಸಲಾಗಿದೆ.</td></tr>
<tr><td>ಆ.</td><td>ಈವರೆಗೆ ರಾಜ್ಯದಲ್ಲಿ ಒಟ್ಟು ಎಷ್ಟು ವಾಹನ ಚಾಲನಾ ಪರವಾನಿಗೆ ನೀಡಲಾಗಿದೆ: (ದ್ವಿಚಕ್ರ ವಾಹನ, ನಾಲ್ಕು ಚಕ್ರ ವಾಹನ ಮತ್ತು ಭಾರಿ ವಾಹನ ಪ್ರತ್ಯೇಕವಾಗಿ ವಿವರ ನೀಡುವುದು</td><td>ರಾಜ್ಯದಲ್ಲಿ ಈವರೆವಿಗೆ ಒಟ್ಟು 80,43,253 ದ್ವಿಚಕ್ರ ವಾಹನಗಳ, 1,17,34,448 ನಾಲ್ಕು ಚಕ್ರ ವಾಹನ ಮತ್ತು 7,14,380 ಭಾರಿ ವಾಹನ ಚಾಲನಾ ಪರವಾನಿಗೆಯನ್ನು ನೀಡಲಾಗಿದೆ.</td></tr>
<tr><td>ಇ.</td><td>ಈವರೆಗೆ ಎಷ್ಟು ಟ್ರ್ಯಾಕ್ಟರ್ ಚಾಲನಾ ಪರವಾನಿಗೆ ನೀಡಲಾಗಿದೆ:</td><td>ರಾಜ್ಯದಲ್ಲಿ ಒಟ್ಟು 2,57,321 ಟ್ರ್ಯಾಕ್ಟರ್ ವಾಹನಗಳಿಗೆ ಚಾಲನಾ ಪರವಾನಿಗೆಗಳನ್ನು ನೀಡಲಾಗಿದೆ.</td></tr>
</table>

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

	ಪ್ರಶ್ನೆ	ಉತ್ತರ
ಈ.	ರಾಜ್ಯದಲ್ಲಿ ಒಟ್ಟು ಎಷ್ಟು ಹಳದಿ ಬೋರ್ಡ್‌ನ ಕಾರುಗಳಿವೆ? (ವಿವರ ನೀಡುವುದು)	ರಾಜ್ಯದಲ್ಲಿ ಈವರೆವಿಗೆ ಒಟ್ಟು 2,89,977 ಹಳದಿ ಬೋರ್ಡ್ ಕಾರುಗಳು ನೋಂದಣಿಯಾಗಿರುತ್ತದೆ. ವಿವರಗಳು ಈ ಕೆಳಕಂಡಂತಿವೆ:

ವಿಭಾಗದ ಹೆಸರು	ಹಳದಿ ಬೋರ್ಡ್‌ನ ಕಾರುಗಳ ನೋಂದಣಿ ಸಂಖ್ಯೆ
ಬೆಂಗಳೂರು (ನಗರ)	152146
ಬೆಂಗಳೂರು (ಗ್ರಾಮಾಂತರ)	10232
ಮೈಸೂರು	27739
ಶಿವಮೊಗ್ಗ	23141
ಬೆಳಗಾವಿ	32184
ಕಲಬುರಗಿ	44265
ಒಟ್ಟು	**2,89,977**

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನುಬಂಧ

	2020				2021			
	Name of the District	ACC	DEA	INJ	Name of the District	Acc	DEA	INJ
1	Bagalkote	781	389	960	Bagalkote	802	343	1069
2	Bellary	1005	361	1197	Bellary	1150	437	1401
3	Belagavi	1600	639	2311	Belagavi	1697	684	2322
4	Bengaluru District	1850	567	1712	Bengaluru District	1743	519	1693
5	Bidar	1069	233	1414	Bidar	1086	270	1482
6	Chamarajanagar	529	156	700	Chamarajanagar	495	164	603
7	Chikkaballapura	585	234	632	Chikkaballapura	634	273	684
8	Chikkamagaluru	765	185	868	Chikkamagaluru	818	186	957
9	Chitradurga	1484	383	2160	Chitradurga	1485	398	2072
10	Dakshina Kannada	654	109	995	Dakshina Kannada	751	146	1035
11	Davanagere	929	227	1040	Davanagere	977	258	1309
12	Dharawada	422	178	610	Dharawada	436	203	611
13	Gadag	336	164	526	Gadag	291	150	439
14	Hassan	1772	372	1837	Hassan	1800	432	1873
15	Haveri	660	216	1048	Haveri	753	230	1236
16	Kalburgi	839	284	1062	Kalburgi	762	283	961
17	Kodagu	387	66	480	Kodagu	380	66	487
18	Kolar	551	198	486	Kolar	549	170	562
19	Koppal	527	224	660	Koppal	600	232	717
20	Mandya	1739	385	1862	Mandya	1704	406	1774
21	Mysore	1365	382	1590	Mysore	1311	361	1489
22	Raichur	635	294	919	Raichur	705	335	976
23	Ramnagara	1251	304	1191	Ramnagara	1077	274	1042
24	Shivamogga	1270	291	1670	Shivamogga	1275	310	1621
25	Tumkur	2127	681	2252	Tumkur	2020	635	2096
26	Udupi	990	193	1104	Udupi	1010	196	1160
27	Uttara Kannada	891	217	1299	Uttara Kannada	950	205	1556
29	Vijayapura	851	431	603	Vijayapura	896	418	987
30	Yadagiri	405	153	700	Yadagiri	414	158	700
	TOTAL	**28269**	**8516**	**33888**	**TOTAL**	**28571**	**8742**	**34914**
1	Belagavi City	420	114	499	Belagavi City	424	109	514
2	Bengaluru City	3233	646	2751	Bengaluru City	3213	654	2820
3	Hubli-Dharward City	342	91	323	Hubli-Dharward City	428	114	369
4	K.G.F	130	31	145	K.G.F	108	41	112
5	Kalburgi City	455	121	476	Kalburgi City	454	127	498
6	Mangaluru City	692	116	786	Mangaluru City	797	130	854
7	Mysore City	633	122	623	Mysore City	651	121	672
8	K-Railways	4	3	1	K-Railways	1	0	1
	TOTAL	**5909**	**1244**	**5604**	**TOTAL**	**6076**	**1296**	**5840**
	Total (A + B)	**34178**	**9760**	**39492**	**TOTAL A+B**	**34647**	**10038**	**40754**

ಅಪರ ಆಯುಕ್ತರು ಹಾಗೂ
ಸದಸ್ಯ ಕಾರ್ಯದರ್ಶಿ
ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ
ಪ್ರಾಧಿಕಾರ, ಬೆಂಗಳೂರು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

2022				
	Name of the District	**ACC**	**DEA**	**INJ**
1	Bagalkote	900	379	1280
2	Bellary	528	226	628
3	Belagavi	1935	746	2776
4	Bengaluru District	2129	613	2236
5	Bidar	1136	332	1607
6	Chamarajanagar	604	197	849
7	Chikkaballapura	768	281	919
8	Chikkamagaluru	985	234	1180
9	Chitradurga	1722	435	2377
10	Dakshina Kannada	943	156	1410
11	Davanagere	1053	330	1355
12	Dharawada	472	250	701
13	Gadag	329	172	557
14	Hassan	1975	477	2032
15	Haveri	835	284	1385
16	Kalburgi	852	327	1079
17	Kodagu	448	68	616
18	Kolar	741	257	743
19	Koppal	653	262	985
20	Mandya	1978	474	2163
21	Mysore	1599	482	1745
22	Raichur	658	330	863
23	Ramnagara	1410	376	1406
24	Shivamogga	1395	362	1898
25	Tumkur	2257	772	2515
26	Udupi	1232	245	1475
27	Uttara Kannada	1053	252	1747
28	Vijayanagara	616	237	902
29	Vijayapura	918	407	1082
30	Yadagiri	420	181	720
	TOTAL	**32544**	**10144**	**41231**
1	Belagavi City	565	167	697
2	Bengaluru City	3822	772	3189
3	Hubli-Dharward City	518	111	499
4	K.G.F	154	49	147
5	Kalburgi City	451	128	563
6	Mangaluru City	927	159	1047
7	Mysore City	776	171	775
8	K-Railways	5	1	6
	TOTAL	**7218**	**1558**	**6923**
	Total (A + B)	**39762**	**11702**	**48154**

ಅಪರ ಆಯುಕ್ತರು ಹಾಗೂ
ಸದಸ್ಯ ಕಾರ್ಯದರ್ಶಿ
ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ
ಪ್ರಾಧಿಕಾರ, ಬೆಂಗಳೂರು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

	2023			
	Name of the District	ACC	DEA	INJ
1	Bagalkote	862	402	1183
2	Bellary	575	252	730
3	Belagavi	2086	800	3026
4	Bengaluru District	2451	694	2546
5	Bidar	1097	335	1404
5	Chamarajanagar	675	179	938
7	Chikkaballapura	940	346	1082
3	Chikkamagaluru	1010	281	1325
9	Chitradurga	1750	472	2634
0	Dakshina Kannada	897	134	1306
1	Davanagere	1081	304	1526
2	Dharawada	515	255	783
3	Gadag	344	170	434
4	Hassan	2138	502	2272
5	Haveri	796	281	1390
6	Kalburgi	919	360	1153
7	Kodagu	544	88	750
8	Kolar	766	255	778
9	Koppal	648	277	978
0	Mandya	2160	515	2620
1	Mysore	1736	472	1982
2	Raichur	630	279	855
3	Ramnagara	1627	421	1677
4	Shivamogga	1483	368	2021
5	Tumkur	2601	783	2891
6	Udupi	1272	253	1447
7	Uttara Kannada	1029	248	1739
8	Vijayanagara	605	274	790
9	Vijayapura	1025	446	1287
0	Yadagiri	442	170	750
	TOTAL	**34704**	**10616**	**44297**
1	Belagavi City	556	137	613
2	Bengaluru City	4974	915	4162
3	Hubli-Dharward City	544	118	539
4	K.G.F	203	71	178
5	Kalburgi City	494	129	606
6	Mangaluru City	1008	166	1156
7	Mysore City	953	168	992
8	K-Railways	4	1	4
	TOTAL	**8736**	**1705**	**8250**
	Total (A + B)	**43440**	**12321**	**52547**

	2024			
	Name of the District	ACC	DEA	INJ
1	Bagalkote	773	320	1062
2	Bellary	499	195	711
3	Belagavi	1746	597	2628
4	Bengaluru District	2376	609	2399
5	Bidar	945	275	1316
6	Chamarajanagar	705	217	1078
7	Chikkaballapura	790	289	861
8	Chikkamagaluru	875	218	1141
9	Chitradurga	1549	375	2245
10	Dakshina Kannada	774	133	1207
11	Davanagere	946	257	1273
12	Dharawada	417	165	705
13	Gadag	282	138	418
14	Hassan	2034	426	2134
15	Haveri	752	265	1245
16	Kalburgi	760	259	1008
17	Kodagu	447	72	635
18	Kolar	748	231	754
19	Koppal	602	230	1054
20	Mandya	1916	458	2302
21	Mysore	1840	387	2151
22	Raichur	616	298	797
23	Ramnagara	1456	378	1540
24	Shivamogga	1376	328	1976
25	Tumkur	2396	667	2740
26	Udupi	1105	174	1296
27	Uttara Kannada	890	212	1424
28	Vijayanagara	515	200	634
29	Vijayapura	880	356	1103
30	Yadagiri	402	140	619
31	**TOTAL**	**31412**	**8869**	**40456**
1	Belagavi City	483	115	607
2	Bengaluru City	4371	777	3736
3	Hubli-Dharward City	401	88	428
4	K.G.F	172	59	163
5	Kalburgi City	436	111	546
6	Mangaluru City	930	150	1081
7	Mysore City	1021	148	1041
8	K-Railways	2	2	0
	TOTAL	**7816**	**1450**	**7602**
	Total (A + B)	**39228**	**10319**	**48058**

ಅಪರ ಆಯುಕ್ತರು ಹಾಗೂ
ಸದಸ್ಯ ಕಾರ್ಯದರ್ಶಿ
ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ
ಪ್ರಾಧಿಕಾರ, ಬೆಂಗಳೂರು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Jan to June-2025				
	Name of the District	**ACC**	**DEA**	**INJ**
1	Bagalkote	461	215	635
2	Bellary	283	116	351
3	Belagavi	1049	349	1603
4	Bengaluru District	1273	335	1379
5	Bidar	555	179	740
6	Chamarajanagar	425	107	658
7	Chikkaballapura	464	173	495
8	Chikkamagaluru	451	95	583
9	Chitradurga	799	205	1281
10	Dakshina Kannada	435	78	614
11	Davanagere	537	138	668
12	Dharawada	268	121	496
13	Gadag	172	89	266
14	Hassan	1091	250	1119
15	Haveri	417	148	596
16	Kalburgi	449	164	584
17	Kodagu	269	32	341
18	Kolar	398	138	371
19	Koppal	363	130	591
20	Mandya	1103	229	1392
21	Mysore	1216	258	1485
22	Raichur	344	159	478
23	Ramnagara	810	232	951
24	Shivamogga	780	194	1000
25	Tumkur	1279	367	1542
26	Udupi	607	138	651
27	Uttara Kannada	454	130	945
28	Vijayanagara	295	125	397
29	Vijayapura	525	211	720
30	Yadagiri	236	106	349
	TOTAL	**17808**	**5211**	**23281**
1	Belagavi City	263	73	304
2	Bengaluru City	2297	390	2075
3	Hubli-Dharward City	185	49	190
4	K.G.F	121	39	137
5	Kalburgi City	253	63	304
6	Mangaluru City	536	79	662
7	Mysore City	474	71	503
8	K-Railways	0	0	0
	TOTAL	**4129**	**764**	**4175**
	Total (A + B)	**21937**	**5975**	**27456**

ಅಪರ ಆಯುಕ್ತರು ಹಾಗೂ
ಪದನ್ ಕಾರ್ಯದರ್ಶಿ
ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ
ಪ್ರಾಧಿಕಾರ, ಬೆಂಗಳೂರು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಮಾನ್ಯ ಸಾರಿಗೆ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ನಾನು ರಾಜ್ಯದಲ್ಲಿ ಐದು ವರ್ಷಗಳಲ್ಲಿ ಎಷ್ಟು ರಸ್ತೆ ಅಪಘಾತಗಳಾಗಿತ್ತು ಎಂಬ ಮಾಹಿತಿ ಕೇಳಿದ್ದೆ. ಮಾನ್ಯ ಸಚಿವರು ಕೊಟ್ಟಿರುವ ಉತ್ತರವನ್ನು ನೋಡಿದ ಮೇಲೆ ನಾನು ಪೂರ್ತಿಯಾಗಿ ದಿಗ್ಭ್ರಾಂತನಾಗಿಬಿಟ್ಟಿದ್ದೇನೆ. ರಾಜ್ಯದಲ್ಲಿ 2,13,192 ಅಪಘಾತಗಳಾಗಿವೆ. 60,115 ಜನರು ಮೃತರಾಗಿದ್ದಾರೆ. ಅಂದರೆ ಪ್ರತಿ ದಿನದ ಸರಾಸರಿಗೆ ಭಾಗ ಮಾಡಿದರೆ ಒಂದು ದಿವಸಕ್ಕೆ 130-150 ಅಪಘಾತಗಳಾಗುತ್ತಿವೆ. ಒಂದು ದಿವಸಕ್ಕೆ 36 ರಿಂದ 40 ಜನರು ರಸ್ತೆ ಅಪಘಾತಗಳಿಂದ ಸಾಯುತ್ತಿದ್ದಾರೆ. 18 ರಿಂದ 40 ವರ್ಷ ವಯಸ್ಸಿನ ಜನರು ಸಾಯುತ್ತಿದ್ದಾರೆ. ಇದರಲ್ಲಿ ಬಹಳ ಮುಖ್ಯವಾಗಿ ನಾವು ಗಮನಿಸಬೇಕಾಗಿರುವುದು ಏನೆಂದರೆ, ಇಡೀ ದೇಶದಲ್ಲಿ ಬೆಂಗಳೂರು ಮಹಾನಗರ two-wheeler deaths ನಲ್ಲಿ ಮೊದಲನೆ ಸ್ಥಾನದಲ್ಲಿದೆ. ದೊಡ್ಡ ರಾಜ್ಯಗಳ ಪೈಕಿ ಅಪಘಾತದಲ್ಲಿ ಕರ್ನಾಟಕ ಮೂರನೇ ಸ್ಥಾನದಲ್ಲಿದೆ.

(ಮುಂದು)

(669) 13.08.2025 12.10 ಹೆಚ್‌ವಿ.ವಿಕೆ (ಸಭಾಪತಿಯವರ ಉಪಸ್ಥಿತಿ)

ಶ್ರೀ ಕೆ.ಎಸ್.ನವೀನ್(ಮುಂದು):-

ಸನ್ಮಾನ್ಯ ಸಭಾಪತಿಯವರೇ, ಬಹಳ ದೊಡ್ಡ ಪ್ರಮಾಣದಲ್ಲಿ ಅಪಘಾತಗಳು ನಡೆಯುತ್ತಿವೆ. ನಮ್ಮ ಮಧ್ಯೆ ಇದಂತಹ 60,000 ಜನರನ್ನು ಅಪಘಾತದಲ್ಲಿ ಕಳೆದುಕೊಂಡಿದ್ದೇವೆ. ಇನ್ನೂ ದುಡಿಯಬೇಕಾಗಿರುವವರು, ತಂದೆ-ತಾಯಂದಿರನ್ನು ಮತ್ತು ಹೆಂಡತಿ-ಮಕ್ಕಳನ್ನು ನೋಡಿಕೊಳ್ಳಬೇಕಾದವರನ್ನು ಕಳೆದುಕೊಂಡಿದ್ದೇವೆ. ಇವತ್ತು ನಮ್ಮ ರಾಜ್ಯದಲ್ಲಿ ವಾಹನಗಳ ಸಂಖ್ಯೆ ಮಿತಿಮೀರಿ ಬೆಳೆಯುತ್ತಿದೆ. ಸುಮಾರು 2 ಕೋಟಿ 25 ಲಕ್ಷ ದ್ವಿಚಕ್ರ ವಾಹನಗಳಿವೆ. ಸುಮಾರು 50 ಲಕ್ಷಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ನಾಲ್ಕು ಚಕ್ರ ವಾಹನಗಳಿವೆ. ಅದೇ ರೀತಿಯಲ್ಲಿ ಬೇಸಾಯಕ್ಕಾಗಿ ಬಳಕೆ ಮಾಡುವಂತಹ ಟ್ರಾಕ್ಟರ್‌ಗಳು ಮತ್ತು ಹೆವಿ ಡ್ಯೂಟಿ ವಾಹನಗಳು ಇವೆ.

ಸನ್ಮಾನ್ಯ ಸಭಾಪತಿಯವರೇ, "ಎಷ್ಟು ಜನರಿಗೆ ಚಾಲನಾ ಪರವಾನಿಗೆಯನ್ನು ವಿತರಿಸಲಾಗಿದೆ?" ಎನ್ನುವ ಪ್ರಶ್ನೆಯನ್ನು ನಾನು ಕೇಳಿದ್ದೆ, "ಸುಮಾರು 80 ಲಕ್ಷ ದ್ವಿಚಕ್ರ ವಾಹನಗಳ ಪರವಾನಿಗೆಯನ್ನು ವಿತರಣೆ ಮಾಡಲಾಗಿದೆ" ಎನ್ನುವ ಉತ್ತರವನ್ನು ಮಾನ್ಯ ಸಚಿವರು ನೀಡಿದ್ದಾರೆ. ನಮ್ಮ ರಾಜ್ಯದಲ್ಲಿ 2 ಕೋಟಿ 25 ಲಕ್ಷ ದ್ವಿಚಕ್ರ ವಾಹನಗಳಿವೆ. ಬಹಳ ದೊಡ್ಡ ಸಂಖ್ಯೆಯಲ್ಲಿ ದ್ವಿಚಕ್ರ ವಾಹನಗಳು ಮಾರಾಟವಾಗುತ್ತಿದ್ದರೂ ಪರವಾನಿಗೆಯನ್ನು ಯಾಕೆ ಇಷ್ಟು ಕಡಿಮೆ ಪ್ರಮಾಣದಲ್ಲಿ ಪಡೆದುಕೊಳ್ಳಲಾಗುತ್ತಿದೆ ಎನ್ನುವುದು ನನ್ನ ಪ್ರಶ್ನೆಯಾಗಿದೆ.

ಸನ್ಮಾನ್ಯ ಸಭಾಪತಿಯವರೇ, ತಾವು ಕೃಷಿ ಪ್ರಧಾನವಾಗಿರುವ ಕುಟುಂಬದ ಹಿನ್ನೆಲೆಯಿಂದ ಬಂದವರು. ಅತೀ ಹೆಚ್ಚು ಟ್ರಾಕ್ಟರ್‌ಗಳನ್ನು ಖರೀದಿ ಮಾಡುವ ರಾಜ್ಯಗಳ ಪಟ್ಟಿಯಲ್ಲಿ ನಮ್ಮ ರಾಜ್ಯ ನಾಲ್ಕನೆಯ ಸ್ಥಾನದಲ್ಲಿದೆ. ಪ್ರತಿ ವರ್ಷ ಸುಮಾರು 35 ರಿಂದ 40 ಸಾವಿರ ಟ್ರಾಕ್ಟರ್‌ಗಳನ್ನು ಖರೀದಿ ಮಾಡಲಾಗುತ್ತಿದೆ. ಮಾನ್ಯ ಸಚಿವರು ನೀಡಿರುವ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉತ್ತರದಲ್ಲಿ "ಸುಮಾರು 2,57,321 ಟ್ರ್ಯಾಕ್ಟರ್ ವಾಹನಗಳಿಗೆ ಚಾಲನಾ ಪರವಾನಿಗೆಗಳನ್ನು ನೀಡಲಾಗಿದೆ" ಎನ್ನುವ ಮಾಹಿತಿಯನ್ನು ನೀಡಿದ್ದಾರೆ. ಗ್ರಾಮೀಣ ಭಾಗದಲ್ಲಿ ಟ್ರ್ಯಾಕ್ಟರ್ ಅಥವಾ ದ್ವಿಚಕ್ರ ವಾಹನಗಳ ಅಪಘಾತವಾದಾಗ ಅವುಗಳಿಗೆ ವಿಮೆ ಇರುವುದಿಲ್ಲ ಮತ್ತು ಪರವಾನಿಗೆ ಇರುವುದಿಲ್ಲ. ಅಪಘಾತದಲ್ಲಿ ಸತ್ತವರಿಗೆ ಒಂದೇ ಒಂದು ರೂಪಾಯಿ ವಿಮೆ ಹಣ ಬರುತ್ತಿಲ್ಲ. ಆದ್ದರಿಂದ ನಾನು ಮಾನ್ಯ ಸಾರಿಗೆ ಸಚಿವರಲ್ಲಿ ಕೇಳಬಯಸುವುದೇನೆಂದರೆ, ರಸ್ತೆ ಸುರಕ್ಷತಾ ಇಲಾಖೆಗೆ ಸಾರಿಗೆ ಇಲಾಖೆಯಿಂದ ನೂರಾರು ಕೋಟಿ ರೂಪಾಯಿಗಳನ್ನು ಸಂದಾಯ ಮಾಡಲಾಗುತ್ತದೆ. ಪರವಾನಿಗೆ ಕೊಟ್ಟರೆ, ಆರ್.ಸಿ.ಕಾರ್ಡ್ ಕೊಟ್ಟಾಗ ಬರುವಂತಹ ಹಣ ರಸ್ತೆ ಸುರಕ್ಷತಾ ಇಲಾಖೆಗೆ ಹೋಗುತ್ತಿದೆ.

ಸನ್ಮಾನ್ಯ ಸಭಾಪತಿಯವರೇ, ಒಂದು ಅಪಘಾತ ಸಂಭವಿಸಿದರೆ, ಸಾರಿಗೆ ಇಲಾಖೆ, ಆರೋಗ್ಯ ಇಲಾಖೆ, ಗೃಹ ಇಲಾಖೆ, ಕಾನೂನು ಇಲಾಖೆ ಮತ್ತು ಲೋಕೋಪಯೋಗಿ ಇಲಾಖೆ ಹೀಗೆ ಸುಮಾರು 5 ಇಲಾಖೆಗಳು ಇದಕ್ಕೆ ಸಂಬಂಧಪಟ್ಟಂತೆ ಕೆಲಸ ಮಾಡುತ್ತವೆ. ಒಂದು ಅಪಘಾತ ಸಂಭವಿಸಿದರೆ ಈ 5 ಇಲಾಖೆಗಳು ತಮ್ಮ ಸಂಪನ್ಮೂಲಗಳನ್ನು ವ್ಯಯಿಸಬೇಕಾಗುತ್ತದೆ. ನಮ್ಮ ರಾಜ್ಯ ಪ್ರತಿದಿನ 40 ಜನರನ್ನು ರಸ್ತೆ ಅಪಘಾತದಲ್ಲಿ ಕಳೆದುಕೊಳ್ಳುತ್ತಿದೆ. ನಮ್ಮ ರಾಜ್ಯ ಇಂತಹ ದುಸ್ಥಿತಿಯಲ್ಲಿದೆ. ಒಂದು ವರ್ಷದಲ್ಲಿ ಸುಮಾರು 60,000 ಜನ ಅಪಘಾತದಲ್ಲಿ ಮೃತ ಹೊಂದುತ್ತಿದ್ದಾರೆ ಎಂದರೆ, ಯಾವುದಾದರೊಂದು ನಗರಕ್ಕೆ ಹೋಲಿಕೆ ಮಾಡಿದರೆ 4-5 ವರ್ಷಗಳಲ್ಲಿ ಒಂದು ಸಣ್ಣ ನಗರವನ್ನೇ ಕಳೆದುಕೊಂಡಂತಾಗುತ್ತದೆ. ಆದ್ದರಿಂದ ಈ ವಿಚಾರವನ್ನು ಮಾನ್ಯ ಸಚಿವರು ಗಂಭೀರವಾಗಿ ಪರಿಗಣಿಸಿ, ಈ ನಿಟ್ಟಿನಲ್ಲಿ ಸೂಕ್ತ ಮಾಹಿತಿಯನ್ನು ನೀಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ರಾಮಲಿಂಗಾರೆಡ್ಡಿ(ಸಾರಿಗೆ ಮತ್ತು ಮುಜರಾಯಿ ಸಚಿವರು):- ಸನ್ಮಾನ್ಯ ಸಭಾಪತಿಯವರೇ, ಅಪಘಾತಗಳ ಪ್ರಮಾಣವನ್ನು ಕಡಿಮೆ ಮಾಡಬೇಕೆಂದು ಅಂತರರಾಷ್ಟ್ರೀಯ ಮಟ್ಟದಲ್ಲಿ ಬಹಳ ಹಿಂದೆಯೇ ತೀರ್ಮಾನವನ್ನು ತೆಗೆದುಕೊಂಡು, ಆ ನಿಟ್ಟಿನಲ್ಲಿ ಪ್ರಯತ್ನಿಸಲಾಗುತ್ತಿದೆ. ಕಾನೂನುಗಳು ಎಷ್ಟೇ ಬಿಗಿಯಾಗಿದ್ದರೂ, ನಮ್ಮ ಪೋಲೀಸ್ ಇಲಾಖೆ ಮತ್ತು ಸಾರಿಗೆ ಇಲಾಖೆಗಳು ಎಷ್ಟೇ ಕಾನೂನುಗಳನ್ನು ತಂದರೂ ಸಹ ಅಪಘಾತಗಳ ಸಂಖ್ಯೆ ಕಡಿಮೆಯಾಗುತ್ತಿಲ್ಲ. ನಮ್ಮ ರಾಜ್ಯದಲ್ಲಿ ಪ್ರತಿ ವರ್ಷ ಸುಮಾರು 10,000 ಜನರು ಅಪಘಾತದಲ್ಲಿ ಮೃತ ಹೊಂದುತ್ತಿದ್ದಾರೆ. ನಮ್ಮ ದೇಶದಲ್ಲಿ ಪ್ರತಿ ವರ್ಷ 1,25,000 ಜನರು ರಸ್ತೆ ಅಪಘಾತದಲ್ಲಿ ಮೃತ ಹೊಂದುತ್ತಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ನಮ್ಮ ಇಲಾಖೆಗೆ ತೆರಿಗೆಯ ರೂಪದಲ್ಲಿ ಪ್ರತಿ ವರ್ಷ ಸುಮಾರು 800 ಕೋಟಿ ರೂಪಾಯಿಗಳು ಬರುತ್ತವೆ. ಅದರಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚುವುದಕ್ಕಾಗಿ ಲೋಕೋಪಯೋಗಿ ಇಲಾಖೆಗೆ ಹಣವನ್ನು ನೀಡಲಾಗುತ್ತದೆ. ಕ್ಯಾಮೆರಾಗಳನ್ನು ಅಳವಡಿಸುವುದಕ್ಕೆ ಪೋಲೀಸ್ ಇಲಾಖೆಯವರಿಗೂ ಹಣವನ್ನು ನೀಡಲಾಗುತ್ತಿದೆ. ಆಂಬ್ಯುಲೆನ್ಸ್‌ಗಳಿಗಾಗಿ ಆರೋಗ್ಯ ಇಲಾಖೆಗೂ ಹಣವನ್ನು ನೀಡಲಾಗುತ್ತದೆ. ನಮ್ಮ ಸಾರಿಗೆ ಇಲಾಖೆಗೆ ಸುಮಾರು 94 ಕೋಟಿ ರೂಪಾಯಿಗಳ ಅನುದಾವನ್ನು ನೀಡಲಾಗುತ್ತಿದೆ. ಪ್ರತಿ ವರ್ಷ ನಾವು 800 ಕೋಟಿ ರೂಪಾಯಿಗಳನ್ನು ಇದಕ್ಕಾಗಿಯೇ ಖರ್ಚು ಮಾಡುತ್ತಿದ್ದೇವೆ. ರಸ್ತೆ ಸುರಕ್ಷತೆಯ ಬಗ್ಗೆ ಸಾರ್ವಜನಿಕರಲ್ಲಿ ಅರಿವನ್ನುಂಟು ಮಾಡುವುದಕ್ಕಾಗಿ ಇಡೀ ವರ್ಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಈ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾರ್ಯಕ್ರಮಗಳಲ್ಲಿ ಹಿರಿಯರಿಂದ ಹಿಡಿದು ಶಾಲಾ ಮಕ್ಕಳು ಭಾಗವಹಿಸುತ್ತಾರೆ. ಆದರೂ ಸಹ ಅಪಘಾತದ ಸಂಖ್ಯೆ ಕಡಿಮೆಯಾಗುತ್ತಿಲ್ಲ. ರಸ್ತೆ ಅಪಘಾತದಲ್ಲಿ ಸಾಯುವವರ ಪೈಕಿ ಯುವಕರ ಸಂಖ್ಯೆಯೇ ಹೆಚ್ಚಾಗಿದೆ. ವೀಲಿಂಗ್ ಮಾಡುವವರು ಮತ್ತು ಪಾನಮತ್ತರಾಗಿ ವಾಹನವನ್ನು ಚಲಾಯಿಸುವವರು, ಫುಟ್‌ಪಾತ್ ಮೇಲೆ ವಾಹನ ಚಲಾಯಿಸುವವರು ಮತ್ತು ಹೆಲ್ಮೆಟ್ ಇಲ್ಲದೆ ವಾಹನ ಚಲಾಯಿಸಿ ಅಪಘಾತಕ್ಕೀಡಾಗಿರುವವರ ಸಂಖ್ಯೆ ಹೆಚ್ಚಾಗಿದೆ. ಹೆಲ್ಮೆಟ್ ಇಲ್ಲದೆ ವಾಹನ ಚಲಾಯಿಸಿ ಅಪಘಾತಕ್ಕೀಡಾಗಿರುವವರಲ್ಲಿ ವಿಶೇಷವಾಗಿ ಯುವಕರೇ ಹೆಚ್ಚಾಗಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ಟೋಪಿ ರೀತಿಯಲ್ಲಿರುವ ಹೆಲ್ಮೆಟ್ ಹಾಕಿಕೊಳ್ಳುತ್ತಾರೆ. ಜೀವ ಉಳಿಸಿಕೊಳ್ಳುವುದಕ್ಕೆ ಹೆಲ್ಮೆಟ್ ಹಾಕಿಕೊಳ್ಳಬೇಕೆನ್ನುವುದನ್ನು ಜನರು ಅರ್ಥ ಮಾಡಿಕೊಳ್ಳಬೇಕಾಗಿದೆ. ಹೆಲ್ಮೆಟ್ ಹಾಕಿಕೊಳ್ಳದಿದ್ದರೆ ಪೊಲೀಸಿನವರು ಹಿಡಿದು ದಂಡ ಹಾಕುತ್ತಾರೆ ಎನ್ನುವ ಕಾರಣಕ್ಕಾಗಿ ಕಾಟಾಚಾರಕ್ಕೆ ಟೋಪಿಯಂತಹ ಹೆಲ್ಮೆಟ್ ಅನ್ನು ಹಾಕಿಕೊಂಡರೆ, ಸಹಜವಾಗಿ ಅಪಘಾತವುಂಟಾದಾಗ, ಸಾವು ಸಂಭವಿಸುತ್ತದೆ ಮತ್ತು ಸಾವಿನ ಪ್ರಮಾಣವೂ ಹೆಚ್ಚಾಗುತ್ತಿದೆ. ಅತಿ ವೇಗವಾಗಿ ವಾಹನ ಚಾಲನೆ ಮಾಡುವುದರಿಂದಲೂ ಅಪಘಾತದ ಸಂಖ್ಯೆಯೂ ಹೆಚ್ಚಾಗುತ್ತಿದೆ. ಸರ್ಕಾರ ಮಾಡಿರುವಂತಹ ಕಾನೂನುಗಳನ್ನು ಪಾಲನೆ ಮಾಡುತ್ತೇವೆ ಎನ್ನುವ ಅರಿವು ವಾಹನ ಚಾಲಕರಲ್ಲಿ ಬರದಿದ್ದರೆ, ಅಪಘಾತಗಳ ಪ್ರಮಾಣವನ್ನು ಖಂಡಿತವಾಗಿಯೂ ಕಡಿಮೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

ಯಾರು ಅಪಘಾತಗಳಿಗೆ ಕಾರಣರಾಗಿರುತ್ತಾರೆ ಅವರನ್ನು ರಾಜ್ಯ ಸರ್ಕಾರ ಹೆಚ್ಚಿನ ಶಿಕ್ಷೆಗೆ ಒಳಪಡಿಸಿದರೆ, ಆಗ ಅವರಿಗೆ ಸ್ವಲ್ಪ ಮಟ್ಟಿಗೆ ಭಯ ಬರುತ್ತದೆ. ಲಿಖಿತ ರೂಪದ ಉತ್ತರದಲ್ಲಿ ನೀಡಿರುವ ಅಂಕಿಅಂಶದಲ್ಲಿ ಸ್ವಲ್ಪ ಮಟ್ಟಿಗೆ ವ್ಯತ್ಯಾಸವಾಗಿದೆ. ಅದನ್ನು ಸರಿಪಡಿಸುತ್ತಿದ್ದೇನೆ.

ದ್ವಿಚಕ್ರ ವಾಹನ ಚಾಲನಾ ಪರವಾನಿಗೆಯನ್ನು 1 ಕೋಟಿ 23 ಲಕ್ಷ ಜನರು ಪಡೆದುಕೊಂಡಿದ್ದಾರೆ. ಉತ್ತರದಲ್ಲಿ 80,43,253 ಎಂದು ನೀಡಲಾಗಿದೆ ಇದು ಸ್ವಲ್ಪ ಮಟ್ಟಿಗೆ ವ್ಯತ್ಯಾಸವಾಗಿದೆ. ಮೋಟಾರು ಕಾರು ಚಾಲನಾ ಪರವಾನಿಗೆಯನ್ನು 1 ಕೋಟಿ 23 ಲಕ್ಷ ಜನರು ತೆಗೆದುಕೊಂಡಿದ್ದಾರೆ. ಅದೇ ರೀತಿಯಲ್ಲಿ ಸಾರಿಗೆ ವಾಹನ ಚಾಲನಾ ಪರವಾನಿಗೆಯನ್ನು 18,73,000 ಜನರು ತೆಗೆದುಕೊಂಡಿದ್ದಾರೆ. ಟ್ರಾಕ್ಟರ್‌ಗಳ ಮಾರಾಟ ಹೆಚ್ಚಾಗಿದೆ. ಆದರೆ, ಅದಕ್ಕೆ ಡಿ.ಎಲ್. ತೆಗೆದುಕೊಂಡಿರುವವರ ಸಂಖ್ಯೆ ಕಡಿಮೆಯಿದೆ. ಉತ್ತರ ಕರ್ನಾಟಕ ಭಾಗದಲ್ಲಿ ಹೆಚ್ಚು ಟ್ರಾಕ್ಟರ್‌ಗಳನ್ನು ಖರೀದಿ ಮಾಡಿದ್ದಾರೆ. ಅದಕ್ಕಾಗಿಯೇ ನಾನು ಮೊನ್ನೆ ಹುಬ್ಬಳ್ಳಿಯಲ್ಲಿ ಮಾತನಾಡುತ್ತಾ, ಆರ್.ಟಿ.ಓ. ಕಛೇರಿಯಲ್ಲಿ ಉಚಿತವಾಗಿ ಡಿ.ಎಲ್., ಮಾಡಿಕೊಡುತ್ತೇವೆಂದು ಹೇಳಿ ಒಂದು ಕ್ಯಾಂಪ್ ಮಾಡಿ ಎನ್ನುವ ಸೂಚನೆಯನ್ನು ಕೊಟ್ಟಿದ್ದೇನೆ. ಒಂದೇ ಜಿಲ್ಲೆಯಲ್ಲಿ ಮಾತ್ರವಲ್ಲದೇ ಎಲ್ಲ ಜಿಲ್ಲೆಗಳಲ್ಲಿಯೂ ಈ ಕ್ಯಾಂಪ್‌ಗಳನ್ನು ಮಾಡಲಾಗುತ್ತದೆ.

ಶ್ರೀ ಕೆ.ಎಸ್.ನವೀನ್:- ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತಮವಾದ ಉತ್ತರವನ್ನು ಕೊಟ್ಟಿದ್ದಾರೆ. ಶೇಕಡಾ ೨೦ರಷ್ಟು ಅಪಘಾತಗಳು ಅತಿ ವೇಗದ ವಾಹನ ಚಾಲನೆಯಿಂದ ಆಗುತ್ತಿದೆ. ಇದನ್ನು ನಿಯಂತ್ರಣ ಮಾಡುವಂತಹ ಶಕ್ತಿ ನಮ್ಮ ಪೊಲೀಸರಿಗಿದೆ. ಒಂದು ಟೋಲ್‌ನಿಂದ ಮತ್ತೊಂದು ಟೋಲ್‌ಗೆ ಇಷ್ಟು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಿಮಿಷದಲ್ಲಿ ಹೋಗಬೇಕೆಂದು ಇದೆ. ಎಲ್ಲ ಕಡೆಗಳಲ್ಲಿ ಕ್ಯಾಮೆರಾಗಳು ಇವೆ. ಅತಿ ವೇಗವಾಗಿ ವಾಹನ ಚಾಲನೆ ಮಾಡಿ ಪದೇಪದೇ ಅಪರಾಧವೆಸಗುವಂತಹವರು ಇದ್ದಾರೆ. ಅಂತಹವರ ಮೇಲೆ ಸರ್ಕಾರ ಕಠಿಣವಾಗಿರುವ ಕ್ರಮವನ್ನು ತೆಗೆದುಕೊಂಡು ಶಾಶ್ವತವಾಗಿ ಅವರ ಡ್ರೈವಿಂಗ್ ಲೈಸೆನ್ಸ್ ಅನ್ನು ರದ್ದುಗೊಳಿಸುವಂತಹ ಅಥವಾ ಜೈಲು ಶಿಕ್ಷೆ ವಿಧಿಸುವಂತಹ ಕೆಲಸವನ್ನು ಮಾಡಬೇಕಾಗುತ್ತದೆ. ಇವರುಗಳ ಅತಿವೇಗದ ವಾಹನ ಚಾಲನೆಯಿಂದಾಗಿ ಪಾದಚಾರಿಗಳು ಮತ್ತು ರಸ್ತೆ ಬದಿಯಲ್ಲಿ ನಡೆದುಕೊಂಡು ಹೋಗುತ್ತಿರುವ ಅಮಾಯಕರು ಸಾವನ್ನಪ್ಪುತ್ತಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ಶೇಕಡಾ ೩೮ರಷ್ಟು ಸಾವು ಸೀಟ್ ಬೆಲ್ಟ್ ಧರಿಸದೇ ಇರುವುದರಿಂದ ಸಂಭವಿಸುತ್ತಿದೆ. ಮಾನ್ಯ ಸಚಿವರು ಹೇಳಿದಂತೆ ದ್ವಿಚಕ್ರ ವಾಹನ ಸವಾರರು ಹೆಲ್ಮೆಟ್ ಧರಿಸದೇ ಯದ್ವಾತದ್ವಾ ಓಡಿಸುವುದರಿಂದಲೂ ಸಾವು ನೋವುಗಳುಂಟಾಗುತ್ತಿದೆ. ಬಹಳ ಬೇಸರದ ಸಂಗತಿ ಏನೆಂದರೆ, ಕರ್ನಾಟಕ ರಾಜ್ಯ ಎಲ್ಲ ವಿಚಾರಗಳಲ್ಲಿಯೂ ಪ್ರಗತಿಯಲ್ಲಿದ್ದೇವೆಂದು ಹೇಳಿಕೊಳ್ಳುತ್ತೇವೆ ಆದರೆ, ಕೇವಲ ತೆರಿಗೆ ಸಂಗ್ರಹಣೆಯಲ್ಲಿ ಮಾತ್ರ ನಾವು ಮೊದಲನೆ ಸ್ಥಾನ….. ಎರಡನೆಯ ಸ್ಥಾನದಲ್ಲಿದ್ದೇವೆ ಎನ್ನುವುದು ದೊಡ್ಡಸ್ತಿಕೆಯ ಮಾತಲ್ಲ. ಇದು ಎಲ್ಲರಿಗೂ ಅನ್ವಯವಾಗುತ್ತದೆ. ಪೊಲೀಸ್ ಇಲಾಖೆಯವರು ನಿಯಮಗಳನ್ನು ಅತ್ಯಂತ ಕಟ್ಟುನಿಟ್ಟಾಗಿ ಪಾಲನೆ ಮಾಡುವಂತಹ ಕೆಲಸ ಮಾಡಬೇಕಾಗಿದೆ. ಮಾನ್ಯ ಲೋಕೋಪಯೋಗಿ ಸಚಿವರು ಈ ಸದನದಲ್ಲಿ ಉಪಸ್ಥಿತರಿದ್ದಾರೆ ಅವರಿಗೊಂದು ಸಲಹೆಯನ್ನು ನೀಡುವುದಕ್ಕೆ ಬಯಸುತ್ತಿದ್ದೇನೆ. ರಸ್ತೆಗಳಿಗೆ ಅವೈಜ್ಞಾನಿಕವಾಗಿರುವ ಹಂಪ್ಸ್‌ಗಳನ್ನು ಹಾಕಿರುತ್ತಾರೆ. ಅದೂ ಕೂಡ ಅಪಘಾತಕ್ಕೆ ಬಹಳ ದೊಡ್ಡ ಕಾರಣವಾಗಿದೆ. ಸಾರಿಗೆ ಇಲಾಖೆಯವರು ಲೋಕೋಪಯೋಗಿ ಇಲಾಖೆಯವರೊಂದಿಗೆ ಹೊಂದಾಣಿಕೆಯನ್ನು ಸಾಧಿಸಬೇಕಾಗುತ್ತದೆ. ರಸ್ತೆ ಗುಂಡಿಗಳನ್ನು ಮುಚ್ಚುವುದಕ್ಕೆ ನೂರಾರು ಕೋಟಿ ರೂಪಾಯಿಗಳನ್ನು ಸರ್ಕಾರ ಬೇರೆಬೇರೆ ಇಂಟರ್ ಡಿಪಾರ್ಟ್‌ಮೆಂಟ್‌ನಿಂದ ಅನುದಾನವನ್ನು ಕೊಡುತ್ತಿದೆ. ಆದರೆ, ಬೆಂಗಳೂರು ನಗರದಲ್ಲಿ ಏತಕ್ಕೋಸ್ಕರ ಇಷ್ಟೊಂದು ಸಂಖ್ಯೆಯಲ್ಲಿ ದ್ವಿಚಕ್ರ ವಾಹನಗಳ ಸವಾರರು ಅಪಘಾತಗಳಿಂದ ಮೃತ ಹೊಂದುತ್ತಿದ್ದಾರೆ ಎನ್ನುವುದು ಪ್ರಶ್ನೆಯಾಗಿದೆ. ಸಾವಿನಲ್ಲಿ ಬೆಂಗಳೂರು ನಗರ ಇಡೀ ದೇಶಕ್ಕೆ ನಂಬರ್ ಒನ್ ಆಗಿದೆ. ನಾನು ಇದರಲ್ಲಿ ಯಾವುದೇ ರೀತಿಯ ರಾಜಕೀಯವನ್ನು ಬೆರೆಸುವುದಕ್ಕೆ ಹೋಗುವುದಿಲ್ಲ. ಈ ರಾಜ್ಯದ ಜನರ ಪರವಾಗಿ ಕಳಕಳಿಯ ಮನವಿಯನ್ನು ಮಾಡುತ್ತಿದ್ದೇನೆ. ಇಬ್ಬರೂ ಹಿರಿಯ ಸಚಿವರು ಈ ಸದನದಲ್ಲಿದ್ದಾರೆ ಅವರಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ, ೨ ಇಲಾಖೆಯವರು ಸೇರಿ ಸೂಕ್ತ ಕ್ರಮಗಳನ್ನು ಜರುಗಿಸಬೇಕಾಗಿದೆ. ನನಗೆ ಇದರ ಬಗ್ಗೆ ಬಹಳ ಆಸಕ್ತಿ ಇದೆ. ತಾವು ಹೇಳಿದರೆ, ನಾನು ಇದಕ್ಕೆ ಸಂಬಂಧಪಟ್ಟಂತೆ ಮಾನ್ಯ ಸಚಿವರೊಂದಿಗೆ ಕೆಲಸ ಮಾಡುವುದಕ್ಕೆ ಸಿದ್ಧನಿದ್ದೇನೆ.

ಸಭಾಪತಿಯವರು:- ಮಾನ್ಯ ಸತೀಶ್ ಜಾರಕಿಹೊಳಿಯವರೇ, ಮಾನ್ಯ ಕೆ.ಎಸ್.ನವೀನ್‌ರವರನ್ನು ರಸ್ತೆಯಲ್ಲಿರುವ ಗುಂಡಿಗಳನ್ನು ಮುಚ್ಚುವುದಕ್ಕೆ ಕರೆದುಕೊಳ್ಳಿ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಕೆ.ಎಸ್.ನವೀನ್:– ಸನ್ಮಾನ್ಯ ಸಭಾಪತಿಯವರೇ, ರಸ್ತೆಯಲ್ಲಿರುವ ಹೊಂಡಗಳನ್ನು ಮುಚ್ಚುವುದು ಲೋಕೋಪಯೋಗಿ ಸಚಿವರ ಜವಾಬ್ದಾರಿಯಾಗಿದೆ. ನಾನು ರಸ್ತೆ ಸುರಕ್ಷತೆಯ ಬಗ್ಗೆ ಮಾನ್ಯ ರಾಮಲಿಂಗಾರೆಡ್ಡಿಯವರ ಜೊತೆಗೆ ಕೆಲಸ ಮಾಡುತ್ತೇನೆ.

ಶ್ರೀ ರಾಮಲಿಂಗಾರೆಡ್ಡಿ:– ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿರುವ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಕಾನೂನಿಗಳಿಗೆ ತಿದ್ದುಪಡಿ ತರಬೇಕೇ ಎನ್ನುವುದರ ಬಗ್ಗೆ ಆಲೋಚಿಸಲಾಗುತ್ತದೆ. ನಮಗೆ ಅಲೋಕೇಶನ್ ಆಗಿರುವ ಹಣದಲ್ಲಿ ರಾಷ್ಟ್ರೀಯ ಹೆದ್ದಾರಿಗಳಲ್ಲಿ ೪೦ ಜಾಗಗಳಲ್ಲಿ ಎ.ಐ.ತಂತ್ರಜ್ಞಾನವನ್ನು ಬಳಸಿಕೊಂಡು ಲೋಕೋಪಯೋಗಿ ಇಲಾಖೆಯವರ ಅಥವಾ ಪೊಲೀಸ್ ಇಲಾಖೆಯವರ ಸಲಹೆಯನ್ನು ಪಡೆದುಕೊಂಡು ಆಟೋಮೆಟಿಕ್ ಕ್ಯಾಮೆರಾ ಅಳವಡಿಸಲಾಗುತ್ತದೆ. ಹಿಂದಿನ ವರ್ಷಗಳಿಗೆ ಹೋಲಿಕೆ ಮಾಡಿದರೆ, ಈಗ ಶೇಕಡಾ 10ರಷ್ಟು ದಂಡ ವಿಧಿಸುವುದು ಕಡಿಮೆಯಾಗಿದೆ. ಇದರ ಪ್ರಮಾಣ ಇನ್ನೂ ಕಡಿಮೆಯಾಗಬೇಕೆನ್ನುವುದು ನಮ್ಮ ಅಭಿಲಾಷೆಯಾಗಿದೆ.

ಶ್ರೀ ಕೆ.ಎಸ್.ನವೀನ್:– ಸನ್ಮಾನ್ಯ ಸಭಾಪತಿಯವರೇ, ಮಳೆಗಾಲದಲ್ಲಿ ರಸ್ತೆ ಗುಂಡಿಗಳು ಮತ್ತು ಓಪನ್ ಡ್ರೈನ್ಸ್ ಎಲ್ಲಿವೆ ಎನ್ನುವುದು ಗೊತ್ತಾಗುವುದಿಲ್ಲ. ಇದರ ಬಗ್ಗೆಯೂ ಸಂಬಂಧಪಟ್ಟ ನಗರ ಪಾಲಕೆಯ ಅಧಿಕಾರಿಗಳೊಂದಿಗೆ ನಿಮ್ಮ ಇಲಾಖೆಯ ಅಧಿಕಾರಿಗಳು ಚರ್ಚೆಯನ್ನು ನಡೆಸಿ ಸೂಕ್ತ ಕ್ರಮ ಕೈಗೊಳ್ಳುವುದು ಉತ್ತಮ ಎನ್ನುವುದು ನನ್ನ ಸಲಹೆಯಾಗಿದೆ.

(ಮುಂದುವರಿದಿದೆ)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(670) 13.8.2025 12.20 ಪಿಕೆ:ಬಿಎನ್ಎಸ್

ಪ್ರಶ್ನೆ ಸಂಖ್ಯೆ: 388

ರಾಜ್ಯದ ಸಾರಿಗೆ ಬಸ್ಸುಗಳ ಕುರಿತು

ಕ್ರ. ಸಂ.	ಪ್ರಶ್ನೆ	ಉತ್ತರ
ಅ.	ರಾಜ್ಯದಲ್ಲಿ ಸರ್ಕಾರಿ ಬಸ್ ನಿಗಮಗಳಿಗೆ ರಾಜ್ಯ ಸರ್ಕಾರದಿಂದ ಕಳೆದ 2 ವರ್ಷಗಳಲ್ಲಿ ಬಿಡುಗಡೆಯಾದ ಅನುದಾನ ಎಷ್ಟು; (ನಿಗಮವಾರು ವಿವರ ನೀಡುವುದು)	ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳಾದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳಿಗೆ ಕಳೆದ ಎರಡು ವರ್ಷಗಳಲ್ಲಿ ಸರ್ಕಾರದಿಂದ ಬಿಡುಗಡೆಯಾದ ಅನುದಾನದ ವಿವರಗಳು ಕೆಳಕಂಡಂತಿದೆ:- (ರೂ.ಕೋಟಿಗಳಲ್ಲಿ)

ಸಂಸ್ಥೆ/ನಿಗಮ	ಬಿಡುಗಡೆಯಾದ ಅನುದಾನ	
	2023-34	2024-25
ಕ.ರಾ.ರ.ಸಾ.ನಿಗಮ	1602.20	2503.69
ಬೆಂ.ಮ.ಸಾ.ಸಂಸ್ಥೆ	1227.33	1522.72
ವಾ.ಕ.ರ.ಸಾ.ಸಂಸ್ಥೆ	1214.93	1694.07
ಕ.ಕ.ರ.ಸಾ.ನಿಗಮ	882.29	1174.67
ಒಟ್ಟು	**4926.75**	**6895.15**

ಆ.	ರಾಜ್ಯದಲ್ಲಿ ನಿಗಮಗಳಿಗೆ ಅಂಗಡಿ, ಹೋಟೆಲ್ ಇನ್ನಿತರ ಹೊರ ಆದಾಯ ಎಷ್ಟು; (ವಿಭಾಗವಾರು ನೀಡುವುದು)	ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳ ಬಸ್ ನಿಲ್ದಾಣಗಳು/ ಘಟಕಗಳಲ್ಲಿನ ವಾಣಿಜ್ಯ ಮಳಿಗೆಗಳು/ ವ್ಯವಹಾರಗಳು, ಜಾಹೀರಾತು ಪ್ರದರ್ಶನ ಮತ್ತು ಮಾರ್ಗ ಬದಿಯ ಫಲಹಾರ ಮಂದಿರಗಳಿಂದ 2024-25ನೇ ಸಾಲಿನಲ್ಲಿ ಗಳಿಸಿರುವ ಆದಾಯದ ವಿವರ ಕೆಳಕಂಡಂತಿದೆ:- (ರೂ.ಲಕ್ಷಗಳಲ್ಲಿ)

ಸಂಸ್ಥೆ/ನಿಗಮ	ಮೊತ್ತ
ಕ.ರಾ.ರ.ಸಾ.ನಿಗಮ	7837.44
ಬೆಂ.ಮ.ಸಾ.ಸಂಸ್ಥೆ	13845.58
ವಾ.ಕ.ರ.ಸಾ.ಸಂಸ್ಥೆ	7136.14
ಕ.ಕ.ರ.ಸಾ.ನಿಗಮ (ಸದಾಸರಿ)	3940.56
ಒಟ್ಟು	**32759.72**

ವಿಭಾಗವಾರು ವಿವರವನ್ನು **ಅನುಬಂಧ-'ಅ'**ರಲ್ಲಿ ನೀಡಲಾಗಿದೆ.

ಇ.	ರಾಜ್ಯದ ಎಲ್ಲಾ ನಿಗಮಗಳಲ್ಲಿ ಖಾಸಗಿ ಚಾಲಕರನ್ನು ಹೊರಗುತ್ತಿಗೆ	ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ 2023-24ನೇ ಸಾಲಿನ ಪೂರ್ವದ 07 ವರ್ಷಗಳಿಂದ ಮತ್ತು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಧಾರದ ಮೇಲೆ ನೇಮಕ ಮಾಡಲಾಗುತ್ತಿದೆಯೇ; ಮಾಡಿದ್ದಲ್ಲಿ, ಅವರಿಗೆ ಎಷ್ಟು ದಿನಗಳ ತರಬೇತಿ ನೀಡಲಾಗುತ್ತಿದೆ; (ವಿಭಾಗಗಳ ಸಂಪೂರ್ಣ ಮಾಹಿತಿ ನೀಡುವುದು)	ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳಲ್ಲಿ 2023-24ನೇ ಸಾಲಿನ ಪೂರ್ವದ ನಾಲ್ಕು ವರ್ಷಗಳಲ್ಲಿ ಯಾವುದೇ ನೇಮಕಾತಿಯಾಗಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಸಾರ್ವಜನಿಕರಿಗೆ ಸಾರಿಗೆ ಸೌಲಭ್ಯ ದೊರಕಿಸುವ ನಿಟ್ಟಿನಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ವಿವಿಧ ಏಜೆನ್ಸಿಯವರಿಂದ ಅಗತ್ಯವಿರುವ ಖಾಸಗಿ ಚಾಲಕರನ್ನು ನಿಯಮಾನುಸಾರ ನಿಯೋಜಿಸಿಕೊಳ್ಳಲಾಗುತ್ತಿದೆ. ನಿಗಮವಾರು ಹೊರ ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಚಾಲಕರು ವಿವರ ಕೆಳಕಂಡಂತಿದೆ:-

ನಿಗಮ	ಹೊರ ಗುತ್ತಿಗೆ ಚಾಲಕರ ಸಂಖ್ಯೆ
ಕ.ರಾ.ರ.ಸಾ.ನಿಗಮ	1898
ಬೆಂ.ಮ.ಸಾ.ಸಂಸ್ಥೆ	-
ವಾ.ಕ.ರ.ಸಾ.ಸಂಸ್ಥೆ	811
ಕ.ಕ.ರ.ಸಾ.ನಿಗಮ	973
ಒಟ್ಟು	**3682**

ಆದರೆ ಪ್ರಸ್ತುತ ಜುಲೈ-2025ರ ಅಂತ್ಯಕ್ಕೆ ನಾಲ್ಕು ಸಾರಿಗೆ ಸಂಸ್ಥೆಗಳಲ್ಲಿ ಚಾಲನಾ ಸಿಬ್ಬಂದಿಗಳನ್ನು ನೇಮಿಸಿಕೊಂಡಿದ್ದು ವಿವರ ಕೆಳಕಂಡಂತಿದೆ:-

ನಿಗಮ	ಚಾಲನಾ ಸಿಬ್ಬಂದಿಗಳ ಸಂಖ್ಯೆ
ಕ.ರಾ.ರ.ಸಾ.ನಿಗಮ	2000
ಬೆಂ.ಮ.ಸಾ.ಸಂಸ್ಥೆ	2518
ವಾ.ಕ.ರ.ಸಾ.ಸಂಸ್ಥೆ	1026
ಕ.ಕ.ರ.ಸಾ.ನಿಗಮ	1619
ಒಟ್ಟು	**7163**

ಕ.ರಾ.ರ.ಸಾ.ನಿಗಮ:-

ನಿಗಮದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ವಿವಿಧ ಏಜೆನ್ಸಿಯವರಿಂದ ಖಾಸಗಿ ಚಾಲಕರನ್ನು ನಿಯಮಾನುಸಾರ ನಿಯೋಜಿಸಿಕೊಳ್ಳಲಾಗುತ್ತಿದೆ. ಹೊರಗುತ್ತಿಗೆ ಚಾಲಕರಿಗೆ ಚಾಲನಾ ಅರ್ಹತಾ ಪರೀಕ್ಷೆ ನಡೆಸಿ, ಉತ್ತೀರ್ಣರಾದವರಿಗೆ ನಿಗಮದ ಬಗ್ಗೆ/ಚಾಲಕರ ಕರ್ತವ್ಯ ಮತ್ತು ಜವಾಬ್ದಾರಿಗಳ ಬಗ್ಗೆ ತಿಳುವಳಿಕೆ ನೀಡಿದ ನಂತರ ನಿಯೋಜಿಸಿಕೊಳ್ಳಲಾಗುತ್ತಿದೆ.

ವಿಭಾಗವಾರು ಮಾಹಿತಿ ಕೆಳಕಂಡಂತಿದೆ:-

ಕ್ರ.ಸಂ	ವಿಭಾಗ	ಚಾಲಕರ ಸಂಖ್ಯೆ
1	ಚಿಕ್ಕಬಳ್ಳಾಪುರ	159
2	ಚಿತ್ರದುರ್ಗ	49
3	ಚಿಕ್ಕಮಗಳೂರು	96
4	ಚಾಮರಾಜನಗರ	189
5	ದಾವಣಗೆರೆ	47
6	ಕೋಲಾರ	99
7	ಮಂಗಳೂರು	142

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

8	ಮೈಸೂರು (ಗ್ರಾ)	178
9	ಮೈಸೂರು (ನ)	254
10	ಮಂಡ್ಯ	88
11	ಪುತ್ತೂರು	200
12	ಬೆಂಗಳೂರು (ದ)	161
13	ತುಮಕೂರು	140
14	ಶಿವಮೊಗ್ಗ	96
	ಒಟ್ಟು	**1898**

ವಾ.ಕ.ರ.ಸಾ.ಸಂಸ್ಥೆ:- ಸದರಿ ಚಾಲಕರನ್ನು ನೇಮಕ ಮಾಡಿಕೊಳ್ಳುವಾಗ ಸಂಸ್ಥೆಯಲ್ಲಿ ಪರಿಣಿತಿ ಹೊಂದಿದ ತಾಂತ್ರಿಕ ಅಧಿಕಾರಿಗಳಿಂದ ಚಾಲನಾ ಪರೀಕ್ಷೆಗೆ ಒಳಪಡಿಸಿ, ನೇಮಕ ಮಾಡಿಕೊಳ್ಳಲಾಗಿದೆ. ಸದರಿ ಚಾಲಕರುಗಳಿಗೆ ಪ್ರತ್ಯೇಕವಾಗಿ ಯಾವುದೇ ತರಬೇತಿಯನ್ನು ನೀಡಿರುವುದಿಲ್ಲ. ಆದರೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ನೀಡಿದ ಭಾರಿ ವಾಹನ ಚಾಲನಾ ಪರವಾನಿಗೆ ಹಾಗೂ ಬ್ಯಾಡ್ಜ್ ಹೊಂದಿರುವುದನ್ನು ಕಡ್ಡಾಯವಾಗಿ ಪರಿಶೀಲಿಸುವುದರೊಂದಿಗೆ ಅವಶ್ಯಕ ದಾಖಲಾತಿಗಳನ್ನು ಪರಿಶೀಲಿಸಿ ನೇಮಕಾತಿ ಮಾಡಿಕೊಳ್ಳಲಾಗಿದೆ.

ವಿಭಾಗವಾರು ಮಾಹಿತಿ ಕೆಳಕಂಡಂತಿದೆ:-

ಕ್ರ.ಸಂ.	ವಿಭಾಗ	ಚಾಲಕರ ಸಂಖ್ಯೆ
1	ಬೆಳಗಾವಿ	64
2	ಚಿಕ್ಕೋಡಿ	175
3	ಗದಗ	40
4	ಉತ್ತರ ಕನ್ನಡ	170
5	ಧಾರವಾಡ ಗ್ರಾ	110
6	ಹಾವೇರಿ	165
7	ಹುಬ್ಬಳ್ಳಿ ಗ್ರಾ	37
8	ಹು-ಧಾ ನ. ಸಾರಿಗೆ	50
ಒಟ್ಟು		**811**

ಕ.ಕ.ರ.ಸಾ.ನಿಗಮ: ನಿಗಮದಲ್ಲಿ ಚಾಲನಾ ಸಿಬ್ಬಂದಿಗಳ ಕೊರತೆ ಇರುವುದರಿಂದ, ಖಾಸಗಿ ಚಾಲಕರನ್ನು ಅವರ ಚಾಲನಾ ವೃತ್ತಿ ಕೌಶಲ್ಯ ಪರೀಕ್ಷೆಯನ್ನು ಕೈಗೊಂಡು, ಅದರಲ್ಲಿ ಅರ್ಹರಾದವರನ್ನು ಹೊರಗುತ್ತಿಗೆ ಆಧಾರದ ಮೇಲೆ ತಾತ್ಕಾಲಿಕವಾಗಿ ಮಾತ್ರ ನಿಯೋಜಿಸಿಕೊಳ್ಳಲಾಗುತ್ತಿದೆ.

ವಿಭಾಗವಾರು ಮಾಹಿತಿ ಕೆಳಕಂಡಂತಿದೆ:-

ಕ್ರ.ಸಂ.	ವಿಭಾಗ	ಚಾಲಕರ ಸಂಖ್ಯೆ
1	ಕಲಬುರಗಿ-1	150
2	ಕಲಬುರಗಿ-2	140

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

3	ರಾಯಚೂರು	81
4	ಕೊಪ್ಪಳ	96
5	ಯಾದಗಿರಿ	106
6	ಬಳ್ಳಾರಿ	82
7	ಹೊಸಪೇಟೆ	123
8	ವಿಜಯಪುರ	125
9	ಬೀದರ	70
ಒಟ್ಟು		**973**

ಈ ರಾಜ್ಯದ ಎಲ್ಲಾ ನಿಗಮದ ಡಿಪೋ ಅದವಾ ವಿಭಾಗದ ಅಧಿಕಾರಿಗಳು ಚಾಲಕ ಮತ್ತು ನಿರ್ವಾಹಕರಿಗೆ ಮಾನಸಿಕ ಕಿರುಕುಳ ನೀಡುತ್ತಿದ್ದಾರೆ ಎಂದು ಮೇಲಾಧಿಕಾರಿಗಳಿಗೆ ದೂರು ನೀಡಿರುವ ಪ್ರಕರಣಗಳು ಎಷ್ಟು ಮತ್ತು ಅದರಂತೆ ಕಾನೂನು ರೀತಿ ಕ್ರಮ ಕೈಗೊಂಡ ಪ್ರಕರಣಗಳು ಎಷ್ಟು; ಚಾಲಕ ಮತ್ತು ನಿರ್ವಾಹಕರು ಆತ್ಮಹತ್ಯೆಗೆ ಯತ್ನಿಸಿರುವ ಪ್ರಕರಣಗಳು ಎಷ್ಟು; (ಸಂಪೂರ್ಣ ಜಿಲ್ಲಾವಾರು ಮಾಹಿತಿ ನೀಡುವುದು)

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದಲ್ಲಿ ಕಳೆದ 02 ವರ್ಷಗಳಲ್ಲಿ ಡಿಪೋ ಅಥವಾ ವಿಭಾಗದ ಅಧಿಕಾರಿಗಳು ಚಾಲಕ ಮತ್ತು ನಿರ್ವಾಹಕರಿಗೆ ತೊಂದರೆ, ಮಾನಸಿಕ ಕಿರುಕುಳ ನೀಡುತ್ತಿದ್ದಾರೆಂದು ಮೇಲಾಧಿಕಾರಿಗಳಿಗೆ ದೂರು ನೀಡಿರುವ ಹಾಗೂ ಚಾಲಕ ಮತ್ತು ನಿರ್ವಾಹಕರು ಆತ್ಮಹತ್ಯೆಗೆ ಯತ್ನಿಸಿದ ಪ್ರಕರಣಗಳ ವಿವರಗಳು ಕೆಳಗಿನಂತಿದ್ದು, ಸಂಪೂರ್ಣ ಮಾಹಿತಿಯನ್ನು **ಅನುಬಂಧ-'ಆ'**ರಲ್ಲಿ ನೀಡಲಾಗಿದೆ.

ಸಂಸ್ಥೆ / ನಿಗಮ	ದೂರು ನೀಡಿರುವ ಪ್ರಕರಣಗಳು	ಕಾನೂನು ರೀತಿ ಕ್ರಮ ಕೈಗೊಂಡ ಪ್ರಕರಣಗಳು	ಆತ್ಮಹತ್ಯೆಗೆ ಯತ್ನಿಸಿದ ಪ್ರಕರಣಗಳು
[illegible]	04	03 ([illegible])	06 ([illegible])
[illegible]	19	11 ([illegible])	00
[illegible]	26	26	00
[illegible]	27	10 ([illegible])	02 ([illegible])
ಒಟ್ಟು	**76**	**50**	**8**

ಉ. ರಾಜ್ಯದಲ್ಲಿ ಸರ್ಕಾರಿ ಬಸ್ ಅಪಘಾತವಾಗುತ್ತಿರುವುದು ಅದವಾ ಆಕಸ್ಮಿಕ ಬೆಂಕಿ ಕಾಣಿಸುವುದು ಈ ರೀತಿ ಪ್ರಕರಣಗಳಿಗೆ ಸರ್ಕಾರ ಯಾವ ಯೋಜನೆಯನ್ನು ಹಮ್ಮಿಕೊಂಡಿದೆ;

ನಾಲ್ಕು ಸಾರಿಗೆ ಸಂಸ್ಥೆಗಳಲ್ಲಿ ಅಪಘಾತಗಳನ್ನು ಕಡಿಮೆಗೊಳಿಸುವ ನಿಟ್ಟಿನಲ್ಲಿ ಮತ್ತು ಆಕಸ್ಮಿಕ ಬೆಂಕಿ ಕಾಣಿಸಿದಾಗ ಕೈಗೊಳ್ಳಲಾಗುತ್ತಿರುವ ಕ್ರಮಗಳ ವಿವರಗಳನ್ನು **ಅನುಬಂಧ-'ಇ'**ರಲ್ಲಿ ನೀಡಲಾಗಿದೆ.

ಊ. ಕೇಂದ್ರ ಸರ್ಕಾರ ಪ್ರೋತ್ಸಾಹಿಸಿ ಮಾಡಿರುವ ಎಲೆಕ್ಟ್ರಿಕ್ ಬಸ್‌ಗಳನ್ನು ಕರ್ನಾಟಕದ ಯಾವ ಯಾವ ಜಿಲ್ಲೆಗೆ ಹಂಚಿಕೆ ಮಾಡಲಾಗಿರುವುದು

ಭಾರತ ಸರ್ಕಾರದ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯವು (MoHUA) 'PM-eBus Sewa' ಯೋಜನೆಯನ್ನು ಕೈಗೆತ್ತಿಕೊಂಡಿರುತ್ತದೆ. ಭಾರತ ಸರ್ಕಾರವು ನಗರ ಇ-ಬಸ್ ಕಾರ್ಯಾಚರಣೆಗೆ MoHUA ಮೂಲಕ CESL (Convergence Energy Services Ltd.,) [illegible]

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವೆಚ್ಚದ ಒಪ್ಪಂದ (GCC-wet lease)- ಮಾದರಿಯ ಮೇಲೆ ಕೇಂದ್ರ ಸರ್ಕಾರವೇ ಟೆಂಡರ್ ಪ್ರಕ್ರಿಯೆ ನಡೆಸುತ್ತದೆ.

ಸದರಿ PM e-bus sewa ಯೋಜನೆಯಡಿಯಲ್ಲಿ ಆಯ್ಕೆಯಾದ ಕರ್ನಾಟಕ ರಾಜ್ಯದ 10 ನಗರಗಳಿಗೆ ಒಟ್ಟು 750 ಸಂಖ್ಯೆ ವಿದ್ಯುತ್ ಚಾಲಿತ ಬಸ್ಸುಗಳನ್ನು ಜಿಸಿಸಿ (Gross Cost Contract) ಆಧಾರದ ಮೇಲೆ ಒದಗಿಸಲು ಕೇಂದ್ರ ಸರ್ಕಾರವು ಅನುಮೋದನೆ ನೀಡಿರುತ್ತದೆ. ಅದರಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ 350 ವಿದ್ಯುತ್ ಚಾಲಿತ ಬಸ್‌ಗಳು ಹಂಚಿಕೆಯಾಗಿದ್ದು, ಆ ಪೈಕಿ ತುಮಕೂರು ವಿಭಾಗಕ್ಕೆ 50 ಸಂಖ್ಯೆಯ 12ಮೀಟರ್ ಬಸ್‌ಗಳು ಹಂಚಿಕೆಯಾಗಿರುತ್ತವೆ. ಅದರಂತೆ, ಸದರಿ ಯೋಜನೆಯಡಿ ಟೆಂಡರ್‌ನಲ್ಲಿ L-1ಆಗಿ ಆಯ್ಕೆಯಾಗುವ ಬಿಡ್ಡುದಾರರೇ ವಿದ್ಯುತ್ ಚಾಲಿತ ಬಸ್‌ಗಳಿಗೆ ಚಾಲಕರ ಸೇವೆ, ನಿರ್ವಹಣೆ ಹಾಗೂ ಬಸ್ಸುಗಳನ್ನು ಚಾರ್ಜಿಂಗ್‌ಗೊಳಿಸಲು ತಗಲುವ ವಿದ್ಯುತ್ ವೆಚ್ಚವನ್ನು ಸಹ ಪಾವತಿಸುತ್ತಾರೆ. ಆದರೆ, ಸದರಿ ವಿದ್ಯುತ್ ಚಾಲಿತ ಬಸ್ಸುಗಳಿಗೆ ನಿರ್ವಾಹಕರನ್ನು ಸಾರಿಗೆ ನಿಗಮವು ಒದಗಿಸಬೇಕಾಗುತ್ತದೆ.

ಮುಂದುವರೆದು, ಟೆಂಡರ್‌ನಲ್ಲಿ ಬಿಡ್ಡುದಾರರು Standard ಬಸ್ಸುಗಳಿಗೆ ಸಂಬಂಧಿಸಿದಂತೆ ಬಿಡ್‌ನಲ್ಲಿ ಪ್ರತಿ ಕಿ.ಮೀ.ಗೆ ನಮೂದಿಸುವ ದರದಲ್ಲಿ ಕೇಂದ್ರ ಸರ್ಕಾರವು ಪ್ರತಿ ಕಿ.ಮೀ.ಗೆ ರೂ.24/-ರಷ್ಟು CA (Central Assistance) ಮಾದರಿಯಲ್ಲಿ ನೀಡಲಿದ್ದು ಉಳಿದ ವ್ಯತ್ಯಾಸದ ಮೊತ್ತವನ್ನು ಸಂಬಂಧಪಟ್ಟ ಸಾರಿಗೆ ನಿಗಮವು ಭರಿಸಬೇಕಾಗಿರುತ್ತದೆ.

ಸಿವಿಲ್ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಶೇ.60ರಷ್ಟು ಅನುದಾನವನ್ನು ಕೇಂದ್ರ ಸರ್ಕಾರ ಒದಗಿಸುತ್ತಿದ್ದು, ಉಳಿದ ಶೇ.40ರಷ್ಟು ಅನುದಾನವನ್ನು ಮಾತ್ರ ರಾಜ್ಯ ಸರ್ಕಾರ ಒದಗಿಸಬೇಕಾಗಿರುತ್ತದೆ. ಸದರಿ ಯೋಜನೆಯಡಿ ಎಲೆಕ್ಟ್ರಿಕ್ ಬಸ್ಸುಗಳಿಗೆ ಅವಶ್ಯವಿರುವ ಚಾರ್ಜಿಂಗ್ ಸ್ಟೇಷನ್‌ಗಳನ್ನು ಸ್ಥಾಪಿಸಲು ಸಹ ಕೇಂದ್ರ ಸರ್ಕಾರವೇ ಟೆಂಡರ್ ಆಹ್ವಾನಿಸುತ್ತದೆ ಹಾಗೂ ಆಹ್ವಾನಿಸಲಾಗುವ ಟೆಂಡರ್‌ನಲ್ಲಿ ವಿಧಿಸಬಹುದಾದ ಷರತ್ತು ಮತ್ತು ನಿಬಂಧನೆಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದಿಂದ ಅಭಿಪ್ರಾಯ ಪಡೆದು ಸೂಕ್ತವಾದವುಗಳನ್ನು ಅಳವಡಿಸಿಕೊಂಡು ಕೇಂದ್ರ ಸರ್ಕಾರವೇ ಷರತ್ತು ಮತ್ತು ನಿಬಂಧನೆಗಳನ್ನು ಹೊರಡಿಸುತ್ತದೆ.

ಭಾರತ ಸರ್ಕಾರವು ಹಣ ಪಾವತಿ ವಿಳಂಬದ ಸಂಭಾವ್ಯ ಅಪಾಯಗಳನ್ನು ಪರಿಹರಿಸಲು ಹಾಗೂ OEM/ ಆಚರಣೆದಾರರ Financial Viability ಅನ್ನು ಹೆಚ್ಚಿಸಲು, ಸಾರ್ವಜನಿಕ ಸಾರಿಗೆ ಸಂಸ್ಥೆಗಳಿಗೆ ಎಲೆಕ್ಟ್ರಿಕ್ ಬಸ್‌ಗಳ ಖರೀದಿ ಮತ್ತು ಕಾರ್ಯಾಚರಣೆಗಾಗಿ Payment Security Mechanism ವ್ಯವಸ್ಥೆಯನ್ನು ರೂಪಿಸಿದ್ದು, ಸದರಿ ವ್ಯವಸ್ಥೆಗೆ ರಾಜ್ಯ ಸರ್ಕಾರವು ಸಹ ಅನುಮೋದನೆ ನೀಡಿರುತ್ತದೆ.

ಅಲ್ಲದೆ, ಮಾರ್ಚ್ 2027ರವರೆಗೆ ಆಯ್ಕೆ ನಗರಗಳಿಗೆ ವಿದ್ಯುತ್ ಮೂಲಸೌಕರ್ಯ ರಚನೆಗೆ 100%ರಷ್ಟು ನೆರವನ್ನು ಕೇಂದ್ರ ಸರ್ಕಾರ ಒದಗಿಸುತ್ತದೆ. ಸದರಿ ಯೋಜನೆಯಡಿ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಿಗಮವಾರು ಬಸ್ಸುಗಳ ಹಂಚಿಕೆ ವಿವರ ಕೆಳಕಂಡಂತಿದೆ:-

ಕ.ರಾ.ರ.ಸಾ.ನಿಗಮ:- PM e-bus sewa ಯೋಜನೆಯಡಿಯಲ್ಲಿ ನಿಗಮಕ್ಕೆ ಒಟ್ಟು 350 ಸಂಖ್ಯೆ ವಿದ್ಯುತ್ ಚಾಲಿತ ಬಸ್‌ಗಳನ್ನು ಮಂಜೂರು ಮಾಡಿದ್ದು, ಸದರಿ ಬಸ್‌ಗಳನ್ನು ನಿಗಮದ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಜಿಲ್ಲೆಗಳಿಗೆ ಜಿ.ಸಿ.ಸಿ ಮಾದರಿಯಲ್ಲಿ ಕಾರ್ಯಾಚರಣೆ ಮಾಡಲು ಉದ್ದೇಶಿಸಲಾಗಿದೆ:-

ಜಿಲ್ಲೆ	ಬಸ್‌ಗಳ ಸಂಖ್ಯೆ
ಮಂಗಳೂರು	100
ಮೈಸೂರು	100
ದಾವಣಗೆರೆ	50
ಶಿವಮೊಗ್ಗ	50
ತುಮಕೂರು	50
ಒಟ್ಟು	**350**

ಬೆಂ.ಮ.ಸಾ.ಸಂಸ್ಥೆ:- ಕೇಂದ್ರ ಸರ್ಕಾರವು PM E-DRIVE ಯೋಜನೆ ಅಡಿಯಲ್ಲಿ ಸಂಸ್ಥೆಗೆ 4500 ಎಲೆಕ್ಟ್ರಿಕ್ ಬಸ್ಸುಗಳಿಗೆ ಮಂಜೂರಾತಿ ನೀಡಿರುತ್ತದೆ.

ವಾ.ಕ.ರ.ಸಾ.ಸಂಸ್ಥೆ:- PM e-bus sewa ಯೋಜನೆಯಡಿಯಲ್ಲಿ ಸಂಸ್ಥೆಗೆ ಒಟ್ಟು 200 ಸಂಖ್ಯೆ ವಿದ್ಯುತ್ ಚಾಲಿತ ಬಸ್‌ಗಳನ್ನು ಮಂಜೂರು ಮಾಡಿದ್ದು, ಸದರಿ ಬಸ್‌ಗಳನ್ನು ಸಂಸ್ಥೆಯ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಜಿಲ್ಲೆಗಳಿಗೆ ಜಿ.ಸಿ.ಸಿ ಮಾದರಿಯಲ್ಲಿ ಕಾರ್ಯಾಚರಣೆ ಮಾಡಲು ಉದ್ದೇಶಿಸಲಾಗಿದೆ:-

ಜಿಲ್ಲೆ	ಬಸ್‌ಗಳ ಸಂಖ್ಯೆ
ಬೆಳಗಾವಿ	100
ಹುಬ್ಬಳ್ಳಿ-ಧಾರವಾಡ	100
ಒಟ್ಟು	**200**

ಕ.ಕ.ರ.ಸಾ.ನಿಗಮ:- PM e-bus sewa ಯೋಜನೆಯಡಿಯಲ್ಲಿ ಸಂಸ್ಥೆಗೆ ಒಟ್ಟು 200 ಸಂಖ್ಯೆ ವಿದ್ಯುತ್ ಚಾಲಿತ ಬಸ್‌ಗಳನ್ನು ಮಂಜೂರು ಮಾಡಿದ್ದು, ಸದರಿ ಬಸ್‌ಗಳನ್ನು ನಿಗಮದ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಜಿಲ್ಲೆಗಳಿಗೆ ಜಿ.ಸಿ.ಸಿ ಮಾದರಿಯಲ್ಲಿ ಕಾರ್ಯಾಚರಣೆ ಮಾಡಲು ಉದ್ದೇಶಿಸಲಾಗಿದೆ:-

ಜಿಲ್ಲೆ	ಬಸ್‌ಗಳ ಸಂಖ್ಯೆ
ಕಲಬುರಗಿ	100
ಬಳ್ಳಾರಿ	50
ವಿಜಯಪುರ	50
ಒಟ್ಟು	**200**

ಮೇಲ್ಕಂಡಂತೆ ವಿದ್ಯುತ್ ಚಾಲಿತ ಬಸ್‌ಗಳನ್ನು ಒದಗಿಸುವ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

		ಪ್ರಸ್ತಾವನೆಗೆ ಸಂಬಂಧಿಸಿದಂತೆ Convergence Energy Services Limited (CESL) ಇವರು ಕೇಂದ್ರ ಸರ್ಕಾರದ ಪರವಾಗಿ ಕ್ರೋಢೀಕೃತ ಪ್ರಮಾಣಕ್ಕೆ ಟೆಂಡರ್ ಆಹ್ವಾನಿಸುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.
ಋ.	ಕಲಬುರಗಿ ನಗರ ಸಾರಿಗೆಗೆ ಎಲೆಕ್ಟ್ರಿಕ್ ಬಸ್‌ಗಳನ್ನು ನೀಡಲಾಗುವುದೇ; ಅಂತಹ ಎಷ್ಟು ಬಸ್‌ಗಳನ್ನು ನೀಡಲು ಚಿಂತನೆ ನಡೆದಿದೆ? (ಮಾಹಿತಿ ನೀಡುವುದು)	ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಕ್ಕೆ PM e-bus sewa ಯೋಜನೆಯಡಿ ನಿಗಮದ ಕಲಬುರಗಿ ನಗರಕ್ಕೆ 100 ವಿದ್ಯುತ್ ಚಾಲಿತ ಬಸ್‌ಗಳು ಮಂಜೂರಾಗಿರುತ್ತವೆ ಸದರಿ ಬಸ್‌ಗಳನ್ನು ಒದಗಿಸುವ ಪ್ರಸ್ತಾವನೆಗೆ ಸಂಬಂಧಿಸಿದಂತೆ ಭಾರತ ಸರ್ಕಾರವು Convergence Energy Services Limited (CESL) ಇವರಿಂದ ಕ್ರೂಢೀಕೃತ ಪ್ರಮಾಣಕ್ಕೆ ಟೆಂಡರ್ ಆಹ್ವಾನಿಸುವ ಪ್ರಕ್ರಿಯೆ ಪ್ರಸ್ತುತ ಜಾರಿಯಲ್ಲಿರುತ್ತದೆ.

ಸಂಖ್ಯೆ: ಟಿಡಿ 141 ಟಿಸಿಕ್ಯೂ 2025

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಸುನೀಲ್ ವಲ್ಯಾಪೂರ್ (ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಗಳೆ, ನಮ್ಮ ಆರ್.ಟಿ.ಸಿ. ನಿಗಮಗಳು ಸರಿಯಾದ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿವೆ ಎನ್ನುವ ಉತ್ತರವನ್ನು ಕೊಟ್ಟಿದ್ದಾರೆ. ಸರ್ಕಾರ ರೂ. 6,895 ಕೋಟಿ ಅನುದಾನವನ್ನು ಕೊಟ್ಟಿದೆ. ಇದರಿಂದ ಹೊರ ಆದಾಯಗಳಾದ, ಹೋಟೆಲ್‌ಗಳು, ಬಸ್ ಸ್ಟ್ಯಾಂಡ್‌ನಲ್ಲಿರಬಹುದಾದ ಬೂತ್‌ಗಳು, ಮಳಿಗೆಗಳು ಇವುಗಳಿಂದ ರೂ. 32,759 ಕೋಟಿ ಆದಾಯ ಬಂದಿದೆ ಎಂದು ಹೇಳಿದ್ದಾರೆ. ಆದರೆ ಈ ಆದಾಯ ಇನ್ನೂ ಹೆಚ್ಚಾಗಬೇಕು. ಸರ್ಕಾರ ರೂ. 6,895 ಕೋಟಿಗಳನ್ನು ಕೇವಲ ಮಳಿಗೆಗಳಿಗಷ್ಟೇ ಕೊಟ್ಟಿರುವುದಿಲ್ಲ. ವಾಹನ ಖರೀದಿ, ವಾಹನ ರಿಪೇರಿ ಇತ್ಯಾದಿಗಳಿಗೆ ಕೊಟ್ಟಿರುತ್ತಾರೆ. ಆದರೆ ಇವತ್ತಿನ ದಿವಸ ಬಸ್‌ಗಳ ಸ್ಥಿತಿಯನ್ನು ನೋಡಿದರೆ ಡಿಪೋಗಳಲ್ಲಿ, ಬಸ್ ಸ್ಟ್ಯಾಂಡ್‌ಗಳಲ್ಲಿ ಕೆಟ್ಟು ನಿಂತಿರುವುದನ್ನು ನೋಡುತ್ತೇವೆ. ಅದನ್ನು ರಿಪೇರಿ ಮಾಡಲು ಸರಿಯಾದ ಮೆಕ್ಯಾನಿಕ್‌ಗಳು ಇರುವುದಿಲ್ಲ. ಮೆಕ್ಯಾನಿಕ್‌ಗಳಿದ್ದರೆ ಅಸಿಸ್ಟೆಂಟ್ ಮೆಕ್ಯಾನಿಕ್‌ಗಳು ಇರುವುದಿಲ್ಲ. ಚಾಲಕ ಇದ್ದರೆ, ಆತನ ಜೊತೆ ಮೆಕ್ಯಾನಿಕ್ ಸರಿಯಾಗಿ ಕೋ ಆಪರೇಟ್ ಮಾಡುವುದಿಲ್ಲ. ಇಡೀ ದೇಶದಲ್ಲಿ ನಮ್ಮ ಕರ್ನಾಟಕ ಆರ್.ಟಿ.ಸಿ. ಸೂಪರ್ ಲೈನ್‌ನಲ್ಲಿದೆ. ಇದರರ್ಥ ಶ್ರೇಷ್ಠ ಸ್ಥಾನದಲ್ಲಿದೆ. ಪಕ್ಕದ ಮಹಾರಾಷ್ಟ್ರ ರಾಜ್ಯವನ್ನು ನೋಡಿದಾಗ, ಅಲ್ಲೂ ಕೂಡ ನಮ್ಮ ಆರ್.ಟಿ.ಸಿ.ಯಲ್ಲಿರುವ ಸೌಲಭ್ಯಗಳು ಅವರಿಗಿಲ್ಲ ಎನ್ನುವುದು ಕಂಡುಬರುತ್ತದೆ. ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣ ಈ ರಾಜ್ಯಗಳಿಗೆ ನಮ್ಮ ಆರ್.ಟಿ.ಸಿ. ಬಸ್ಸುಗಳು ಹೋದಾಗ, ಫಸ್ಟ್ ಕ್ಲಾಸ್, ಸೂಪರ್ ಕ್ಲಾಸ್ ಬಸ್‌ನ ಮಾದರಿಯಲ್ಲಿ ಕಾಣಿಸುತ್ತದೆ. ಖಾಸಗಿಯವರು ತಮ್ಮ ಬಸ್ಸುಗಳನ್ನು ಯಾವರೀತಿ ಮೇನ್‌ಟೇನ್ ಮಾಡುತ್ತಾರೋ ಆ ರೀತಿ ನಮ್ಮ ಬಸ್ಸುಗಳನ್ನು ಮೇನ್‌ಟೇನ್ ಮಾಡಿರುತ್ತಾರೆ. ಆದರೆ ಇವತ್ತಿನ ದಿವಸ ಕೆಲವು ಅಂಶಗಳ ಬಗ್ಗೆ ಮಾನ್ಯ ಸಚಿವರ ಗಮನ ಸೆಳೆಯಬಯಸುತ್ತೇನೆ. ಬಸ್ಸುಗಳ ರಿಪೇರಿಗಾಗಿ ಹೊರಗುತ್ತಿಗೆ ಆಧಾರದ ಮೇಲೆ ಮೆಕ್ಯಾನಿಕ್‌ಗಳನ್ನು, ಡ್ರೈವರ್‌ಗಳನ್ನು, ಕಂಡಕ್ಟರ್‌ಗಳನ್ನು ತೆಗೆದುಕೊಳ್ಳುತ್ತಿದ್ದೀರೋ ಅದನ್ನು ನಿಲ್ಲಿಸಬೇಕು. ಪರ್ಮನೆಂಟ್ ಆಗಿ ನೌಕರರನ್ನು ನೇಮಕ ಮಾಡಿಕೊಳ್ಳಬೇಕು. ಆಗ ಮಾತ್ರ ಅವರ ಜವಾಬ್ದಾರಿ ಜಾಸ್ತಿಯಾಗುತ್ತದೆ. ಹೊರ ಗುತ್ತಿಗೆ ಆಧಾರದ ಮೇಲೆ ಡ್ರೈವರ್‌ಗಳನ್ನು ತೆಗೆದುಕೊಳ್ಳುತ್ತಿದ್ದೀರಿ. ಅವರನ್ನು ತೆಗೆದುಕೊಂಡರೂ, ಪರ್ಮನೆಂಟ್ ಎಂಪ್ಲಾಯಿಗಳಿಗೆ ಒಂದು ವರ್ಷದ ತರಬೇತಿ ಕೊಡುವ ಹಾಗೆ ಇವರಿಗೆ ತರಬೇತಿ ಕೊಡುತ್ತಿಲ್ಲ. ಇವರಿಗೆ ಕೇವಲ ಒಂದು ವಾರದ ತರಬೇತಿ ಕೊಡುತ್ತಿದ್ದಾರೆ. ಇದರಿಂದ ಅನಾಹುತಗಳು, ಅಪಘಾತಗಳು ಜಾಸ್ತಿಯಾಗುತ್ತಿವೆ. ಹೊರ ಗುತ್ತಿಗೆ ಆಧಾರದ ಮೇಲೆ ಬರುವವರು ಟ್ರಕ್ ಡ್ರೈವರ್‌ಗಳಾಗಿರುತ್ತಾರೆ; ಟಿಪ್ಪರ್ ಡ್ರೈವರ್‌ಗಳಾಗಿರುತ್ತಾರೆ, ಲಾರಿ ಡ್ರೈವರ್‌ಗಳಾಗಿರುತ್ತಾರೆ. ಹೊರಗುತ್ತಿಗೆ ಆಧಾರದ ಮೇಲೆ ಏನು ನೇಮಕ ಮಾಡಿಕೊಳ್ಳುತ್ತಿದ್ದೀರೋ ಅವರಿಗೆ ಸೂಕ್ತ ತರಬೇತಿ ಕೊಡುವ ವ್ಯವಸ್ಥೆಯನ್ನು ಮಾಡಬೇಕು ಎಂದು ಈ ಸಂದರ್ಭದಲ್ಲಿ ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ.

ಕಲಬುರಗಿ-ಬೀದರ್, ಕಲಬುರಗಿ-ಬಿಜಾಪುರ, ಕಲಬುರಗಿ ಯಾದಗಿರಿ ಮತ್ತು ಕಲಬುರಗಿ -ರಾಯಚೂರು, ಕಲ್ಯಾಣ ಕರ್ನಾಟಕದ ಈ ಭಾಗಗಳಲ್ಲಿ ಬಿಸಿಲಿನ ತಾಪಮಾನ ಹೆಚ್ಚಾಗಿರುತ್ತದೆ. ಅಲ್ಲಿ ನೀವು ತಡೆರಹಿತ ಎ.ಸಿ.

ಬಸ್ಸುಗಳನ್ನು ಬಿಡಬೇಕೆಂದು ಕೇಳಿಕೊಳ್ಳುತ್ತೇನೆ. ಕಲ್ಬುರ್ಗಿ ನಗರದಲ್ಲಿ ವಿದ್ಯುತ್ ಚಾಲಿತ ಬಸ್ಸುಗಳನ್ನೂ ಕೂಡ ಕೊಡುತ್ತೇವೆ, ಅದರ ಟೆಂಡರ್ ಪ್ರಕ್ರಿಯೆಯನ್ನು ಮಾಡಲಾಗುತ್ತಿದೆ ಎಂದು ತಮ್ಮ ಉತ್ತರದಲ್ಲಿ ತಿಳಿಸಿದ್ದೀರಿ. ಈ ಟೆಂಡರ್ ಪ್ರಕ್ರಿಯೆಯನ್ನು ಕೇಂದ್ರ ಸರ್ಕಾರದ ಸಂಯೋಜನೆಯೊಂದಿಗೆ ಮಾಡುತ್ತಿದ್ದೇವೆ ಎಂದು ಹೇಳಿದ್ದೀರಿ. ಆದಷ್ಟು ಬೇಗ ಟೆಂಡರ್ ಪ್ರಕ್ರಿಯೆಯನ್ನು ಮುಗಿಸಿ ಕಲಬುರಗಿ ನಗರದಲ್ಲಿ ವಿದ್ಯುತ್ ಚಾಲಿತ ಬಸ್ಸುಗಳನ್ನು ನೀಡಬೇಕು. ಈಗಾಗಲೇ ಕಲ್ಬುರ್ಗಿ ನಗರದಲ್ಲೇನು ಬಸ್ಸುಗಳು ಓಡಾಡುತ್ತಿವೆಯೋ ಇವು ಒಂದರ ಹಿಂದೆ ಒಂದು ಬರುತ್ತಿರುತ್ತವೆ ಮತ್ತು ಖಾಲಿಯಾಗಿ ಓಡಾಡುತ್ತವೆ. ಅಲ್ಲಿರುವ ಎಂ.ಡಿ. ಅವರ ಹತ್ತಿರ ಮಾತನಾಡಿ, ಸೂಕ್ತ ವ್ಯವಸ್ಥೆ ಮಾಡಿಸಿ, ಅಲ್ಲಿನ ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ರಾಮಲಿಂಗಾ ರೆಡ್ಡಿ (ಸಾರಿಗೆ ಮತ್ತು ಮುಜರಾಯಿ ಸಚಿವರು):- ಮಾನ್ಯ ಸಭಾಪತಿಗಳೆ, ವಿದ್ಯುತ್ ಚಾಲಿತ ಬಸ್ಸುಗಳ ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು ಕೊಟ್ಟಿದ್ದೇನೆ. Private operators, mechanics, drivers, ಇವರನ್ನು ಏಕೆ ತೆಗೆದುಕೊಂಡಿದ್ದೇವೆ ಎಂದರೆ, ಹಿಂದೆ 2016ನೇ ಸಾಲಿನಲ್ಲಿ ನಾನು ಈ ಇಲಾಖೆಯ ಮಂತ್ರಿಯಾಗಿದ್ದಾಗ ನೇಮಕಾತಿ ಪ್ರಕ್ರಿಯೆಯಾಗಿತ್ತು. ಬಿ.ಎಂ.ಟಿ.ಸಿ.ಯಲ್ಲಿ 2018ರಲ್ಲಿ ಸ್ವಲ್ಪ ಜನರನ್ನು ತೆಗೆದುಕೊಂಡರು. 2019ರಲ್ಲಿ ನೋಟಿಫಿಕೇಷನ್ ಮಾಡಿದರು. ನಂತರ ಕೊರೋನ ಬಂತು. ಹೀಗೆ ನಾನಾ ಕಾರಣದಿಂದ ನೇಮಕಾತಿ ಆಗಲಿಲ್ಲ. ಈಗ ನಾಲ್ಕು ನಿಗಮಗಳು ಸೇರಿ, ಒಟ್ಟು 3,682 ಜನ ಚಾಲಕರು ಮತ್ತು ಮೆಕ್ಯಾನಿಕ್‌ಗಳನ್ನು ನೇಮಕ ಮಾಡಿಕೊಂಡಿದ್ದರು. ಅಂದರೆ temporary ಯಾಗಿ ಪ್ರೈವೇಟ್ ಅವರನ್ನು ತೆಗೆದುಕೊಂಡಿದ್ದರು. ಈಗ ನಾಲ್ಕು ನಿಗಮಗಳಿಂದ 7,163 ಜನ ಈಗಾಗಲೇ ಹೊಸದಾಗಿ ನೇಮಕ ಆಗಿಹೋಗಿದ್ದಾರೆ. 1,000ಕ್ಕಿಂತಲೂ ಹೆಚ್ಚು ಜನರು ಅನುಕಂಪದ ಆಧಾರದ ಮೇಲೆ ನೇಮಕವಾಗಿದ್ದಾರೆ. ವಾಯುವ್ಯ ಕರ್ನಾಟಕಕ್ಕೆ ಸಂಬಂಧಪಟ್ಟಂತೆ ಇನ್ನೂ 1,000 ಹುದ್ದೆಗಳನ್ನು ತುಂಬುವುದು ಬಾಕಿ ಇದ್ದು, ಈ ನಿಟ್ಟಿನಲ್ಲಿ ಎಲ್ಲಾ ಪ್ರಕ್ರಿಯೆಗಳು ಮುಗಿದಿದ್ದು ಅಂತಿಮಗೊಳಿಸಬೇಕಿದೆ. ಸುಮಾರು 9,500-10,000 ಹುದ್ದೆಗಳು ಹೊಸದಾಗಿ ನೇಮಕವಾಗಿವೆ. ಹಿಂದೆ ಅವಶ್ಯಕತೆ ಇತ್ತು ಎಂದು ಹೊರಗುತ್ತಿಗೆ ಮೇಲೆ ತೆಗೆದುಕೊಂಡಿದ್ದೆವು. ಇನ್ನು ಮುಂದೆ ಅದರ ಅವಶ್ಯಕತೆ ಕಂಡುಬರುವುದಿಲ್ಲ. ಗುಲ್ಬರ್ಗಾ ನಗರದಲ್ಲಿ ಖಾಲಿ ಬಸ್ಸುಗಳು ಓಡಾಡುತ್ತಿರುತ್ತವೆ ಎಂದು ಹೇಳಿದರು. ಈ ಕುರಿತು ಸಂಬಂಧಪಟ್ಟವರ ಹತ್ತಿರ ಮಾತನಾಡುತ್ತೇನೆ.

ಶ್ರೀ ಸುನೀಲ್ ವಲ್ಯಾಪುರ್:- ಮಾನ್ಯ ಸಚಿವರೇ, ವಿದ್ಯುತ್ ಚಾಲಿತ ಬಸ್‌ಗಳ ಬಗ್ಗೆ ಹೇಳಲಿಲ್ಲ.

ಶ್ರೀ ರಾಮಲಿಂಗಾ ರೆಡ್ಡಿ:- ಮಾನ್ಯ ಸಭಾಪತಿಗಳೆ, ಕೆ.ಎಸ್.ಆರ್.ಟಿ.ಸಿ.ಯಿಂದ 100 ಬಸ್ಸುಗಳನ್ನು ತೆಗೆದುಕೊಳ್ಳುತ್ತಿದ್ದೇವೆ; ಇದಕ್ಕೆ ಟೆಂಡರ್ ಪ್ರಕ್ರಿಯೆ ಆಗಿದೆ. ಕಲ್ಯಾಣ ಕರ್ನಾಟಕಕ್ಕೆಂದು 65 ಬಸ್ಸುಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯವರು 10 ಬಸ್ಸುಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಅವರು ಮೊದಲು ಟೆಂಡರ್ ಕರೆದಾಗ ಯಾರು ಅದರಲ್ಲಿ ಭಾಗವಹಿಸಲಿಲ್ಲ ಎಂದು ಕೆ.ಎಸ್.ಆರ್.ಟಿ.ಸಿ.ಗೆ ರಿಕ್ರೂಟ್‌ಮೆಂಟ್ ಮಾಡಿ ಎಂದು ಹೇಳಿದ್ದಾರೆ. ಒಟ್ಟು 125 ಲಾಂಗ್ ರೂಟ್ ಎ.ಸಿ. ಸ್ಲೀಪರ್ ಬಸ್ಸುಗಳು ಬರುತ್ತವೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಟೆಂಡರ್ ಪ್ರಕ್ರಿಯೆಯೆಲ್ಲಾ ಮುಗಿದಿದೆ. ಇನ್ನು ಒಂದೆರಡು ತಿಂಗಳುಗಳಲ್ಲಿ ಆ ಭಾಗದಿಂದ ಬೆಂಗಳೂರಿಗೆ ಬಸ್ಸುಗಳ ಓಡಾಟ ಪ್ರಾರಂಭವಾಗುತ್ತವೆ.

ಶ್ರೀ ಸುನೀಲ್ ವಲ್ಯಾಪುರ್:– ಮಾನ್ಯ ಸಭಾಪತಿಗಳೆ, ಮಾನ್ಯ ಸಚಿವರಲ್ಲಿ ಇನ್ನೊಂದು ವಿನಂತಿ ಇದೆ. ಕಲಬುರಗಿದಿಂದ ಬೆಂಗಳೂರಿಗೆ ಬರಬೇಕಾದರೂ ಎ.ಸಿ. ಬಸ್ಸುಗಳಿಲ್ಲ.

ಶ್ರೀ ರಾಮಲಿಂಗಾ ರೆಡ್ಡಿ:– ಈಗ ಹಾಕಿ ಕೊಡುತ್ತೇವೆ. ಕಲ್ಯಾಣ ಕರ್ನಾಟಕದಿಂದ ಒಟ್ಟು 175 ಎ.ಸಿ. ಸ್ಲೀಪರ್ ಬಸ್ಸುಗಳನ್ನು ಹಾಕಿದ್ದೇವೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಶ್ನೆ ಸಂಖ್ಯೆ 434

ರಾಜ್ಯದ ಪಶು ವೈದ್ಯಕೀಯ ಕಾಲೇಜುಗಳಲ್ಲಿ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳ ಕೊರತೆ ಕುರಿತು

ಕ್ರ. ಸಂ	ಪ್ರಶ್ನೆ	ಉತ್ತರಗಳು
ಅ)	ರಾಜ್ಯದಲ್ಲಿ ಎಷ್ಟು ಪಶುವೈದ್ಯಕೀಯ ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ; ಮತ್ತು ಅವುಗಳು ಪ್ರಾರಂಭವಾಗಿ ಎಷ್ಟು ವರ್ಷಗಳಾಗಿವೆ; (ವಿವರವಾದ ಮಾಹಿತಿ ನೀಡುವುದು):	ಕರ್ನಾಟಕ ಪಶುವೈದ್ಯಕೀಯ ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರನ ಅಧೀನದಲ್ಲಿ ಒಟ್ಟು 06 ಪಶುವೈದ್ಯಕೀಯ ಮಹಾವಿದ್ಯಾಲಯಗಳು ಪ್ರಾರಂಭವಾಗಿದ್ದು, ವಿವರಗಳು ಈ ಕೆಳಗಿನಂತಿದೆ:-
ಆ)	ಪ್ರತಿ ಪಶುವೈದ್ಯಕೀಯ ಕಾಲೇಜುಗಳಿಗೆ ಮಂಜೂರಾದ ಬೋಧಕ ಹಾಗೂ ಬೋಧಕೇತರ ಹುದ್ದೆಗಳೆಷ್ಟು; ಅವುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಾಗೂ ಖಾಲಿಯಿರುವ ಹುದ್ದೆಗಳೆಷ್ಟು; (ಪ್ರತಿಯೊಂದು ಕಾಲೇಜುವಾರು ಮಾಹಿತಿಯನ್ನು ಒದಗಿಸುವುದು)	ರಾಜ್ಯದಲ್ಲಿನ ಪಶುವೈದ್ಯಕೀಯ ಮಹಾವಿದ್ಯಾಲಯಗಳಿಗೆ ಮಂಜೂರಾದ, ಕಾರ್ಯನಿರ್ವಹಿಸುತ್ತಿರುವ ಹಾಗೂ ಖಾಲಿಯಿರುವ ಬೋಧಕ ಮತ್ತು ಬೋಧಕೇತರ ಹುದ್ದೆಗಳ ವಿವರಗಳ ಮಾಹಿತಿಯು ಈ ಕೆಳಗಿನಂತಿದೆ:-

ಕ್ರ ಸಂ	ಮಹಾವಿದ್ಯಾಲಯದ ಹೆಸರು	ಪ್ರಾರಂಭವಾದ ವರ್ಷ
1	ಪಶುವೈದ್ಯಕೀಯ ಮಹಾವಿದ್ಯಾಲಯ, ಹೆಬ್ಬಾಳ-ಬೆಂಗಳೂರು.	1958-59
2	ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರ	1984-85
3	ಪಶುವೈದ್ಯಕೀಯ ಮಹಾವಿದ್ಯಾಲಯ, ಶಿವಮೊಗ್ಗ	2006-07
4	ಪಶುವೈದ್ಯಕೀಯ ಮಹಾವಿದ್ಯಾಲಯ, ಹಾಸನ	2007-08
5	ಪಶುವೈದ್ಯಕೀಯ ಮಹಾವಿದ್ಯಾಲಯ, ಗದಗ	2017-18
6	ಪಶುವೈದ್ಯಕೀಯ ಮಹಾವಿದ್ಯಾಲಯ, ಅಥಣಿ	2024-25

ಅ) ಬೋಧಕ ಹುದ್ದೆಗಳ ವಿವರ

ಕ್ರ ಸಂ	ಮಹಾವಿದ್ಯಾಲಯದ ಹೆಸರು	ಮಂಜೂರಾದ ಬೋಧಕರ ಹುದ್ದೆ	ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳ ಸಂಖ್ಯೆ		ಒಟ್ಟು	ಖಾಲಿ ಇರುವ ಬೋಧಕ ಹುದ್ದೆಗಳ ಸಂಖ್ಯೆ
			ಖಾಯಂ	ಗುತ್ತಿಗೆ		
1	ಪಶುವೈದ್ಯಕೀಯ ಮಹಾವಿದ್ಯಾಲಯ, ಹೆಬ್ಬಾಳ-ಬೆಂಗಳೂರು	91	56	04	60	31
2	ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರ	91	43	08	51	40
3	ಪಶುವೈದ್ಯಕೀಯ ಮಹಾವಿದ್ಯಾಲಯ, ಶಿವಮೊಗ್ಗ	91	37	04	41	50
4	ಪಶುವೈದ್ಯಕೀಯ ಮಹಾವಿದ್ಯಾಲಯ, ಹಾಸನ	91	36	04	40	51
5	ಪಶುವೈದ್ಯಕೀಯ ಮಹಾವಿದ್ಯಾಲಯ, ಗದಗ	91	33	07	40	51
6	ಪಶುವೈದ್ಯಕೀಯ ಮಹಾವಿದ್ಯಾಲಯ, ಅಥಣಿ	77	10	02	12	65

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆ) ಬೋಧಕೇತರ ಹುದ್ದೆಗಳ ವಿವರ

ಕ್ರ ಸಂ	ಮಹಾವಿದ್ಯಾಲಯದ ಹೆಸರು	ಮಂಜೂರಾದ ಬೋಧಕೇತರ ಹುದ್ದೆ	ಕಾರ್ಯನಿರ್ವಹಿಸುತ್ತಿರುವ ಬೋಧಕೇತರ ಸಿಬ್ಬಂದಿಗಳ ಸಂಖ್ಯೆ		ಒಟ್ಟು	ಖಾಲಿ ಇರುವ ಬೋಧಕೇತರ ಹುದ್ದೆಗಳ ಸಂಖ್ಯೆ
			ಖಾಯಂ	ಗುತ್ತಿಗೆ		
1	ಪಶುವೈದ್ಯಕೀಯ ಮಹಾವಿದ್ಯಾಲಯ, ಹೆಬ್ಬಾಳ-ಬೆಂಗಳೂರು	173	59	49	108	65
2	ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರ	173	52	66	118	59
3	ಪಶುವೈದ್ಯಕೀಯ ಮಹಾವಿದ್ಯಾಲಯ, ಶಿವಮೊಗ್ಗ	173	17	46	63	110
4	ಪಶುವೈದ್ಯಕೀಯ ಮಹಾವಿದ್ಯಾಲಯ, ಹಾಸನ	173	16	44	60	113
5	ಪಶುವೈದ್ಯಕೀಯ ಮಹಾವಿದ್ಯಾಲಯ, ಗದಗ	134	07	50	57	77
6	ಪಶುವೈದ್ಯಕೀಯ ಮಹಾವಿದ್ಯಾಲಯ, ಅಥಣಿ	98	01	24	25	73

ಇ) ಖಾಲಿಯಿರುವ ಬೋಧಕ ಮತ್ತು ಬೋಧಕೇತರ ಹುದ್ದೆಗಳಲ್ಲಿ ಎಷ್ಟು ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಸರ್ಕಾರವು ನಿರ್ಧಾರವನ್ನು ಕೈಗೊಂಡಿದೆ: (ವಿವರವಾದ ಮಾಹಿತಿಯನ್ನು ನೀಡುವುದು)

ಪಶುವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ಖಾಲಿ ಇರುವ ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ನಿರ್ದರಿಸಲಾಗಿದ್ದು, ವಿವರಗಳು ಈ ಕೆಳಗಿನಂತಿದೆ:-

ಕ್ರ ಸಂ	ಮಹಾವಿದ್ಯಾಲಯ	ಸರ್ಕಾರದ ಅನುಮತಿ ಕೋರಿ ಸಲ್ಲಿಸಿದ ಹುದ್ದೆಗಳ ಸಂಖ್ಯೆ		ಒಟ್ಟು
		ಬೋಧಕ	ಬೋಧಕೇತರ	
1	ಪಶುವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು	42	112	154
2	ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರ	49	112	161
3	ಪಶುವೈದ್ಯಕೀಯ ಮಹಾವಿದ್ಯಾಲಯ, ಶಿವಮೊಗ್ಗ	44	154	198
4	ಪಶುವೈದ್ಯಕೀಯ ಮಹಾವಿದ್ಯಾಲಯ, ಹಾಸನ	60	153	213
5	ಪಶುವೈದ್ಯಕೀಯ ಮಹಾವಿದ್ಯಾಲಯ, ಗದಗ	90	134	224
6	ಪಶುವೈದ್ಯಕೀಯ ಮಹಾವಿದ್ಯಾಲಯ, ಅಥಣಿ	67	98	165

ಪ್ರಸ್ತುತ ಸರ್ಕಾರದ ಸುತ್ತೋಲೆ ಸಂಖ್ಯೆ:ಸೀಆಸುಇ 388 ಸೇನಿನಿ 2024, ದಿನಾಂಕ:25-11-2024ರನ್ವಯ ಪರಿಶಿಷ್ಟ ಜಾತಿಯ ಒಳಮೀಸಲಾತಿ ವರ್ಗೀಕರಣ ಪ್ರಕ್ರಿಯೆ ಜಾರಿಯಲ್ಲಿದ್ದು, ಸದರಿ ಪ್ರಕ್ರಿಯೆ ಪೂರ್ಣಗೊಂಡ ನಂತರ ನೇಮಕಾತಿ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ)	ರಾಜ್ಯದ ಯಾವ ಪಶುವೈದ್ಯಕೀಯ ಕಾಲೇಜುಗಳಲ್ಲಿ ಪಿ.ಹೆಚ್.ಡಿ. ಅಧ್ಯಯನ ಮಾಡಲು ಅವಕಾಶ ಕಲ್ಪಿಸಲಾಗಿದೆ; ಮತ್ತು ಆ ಕಾಲೇಜುಗಳಲ್ಲಿ ಎಷ್ಟು ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದಾರೆ (ಮಾಹಿತಿ ಒದಗಿಸುವುದು)?	ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ಮೀನುಗಾರಿಕ ವಿಜ್ಞಾನಗಳ ವಿಶ್ವವಿದ್ಯಾಲಯ ಬೀದರ ಅಧೀನದಲ್ಲಿನ ಈ ಕೆಳಕಂಡ ಪಶುವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ಪಿ.ಎಚ್.ಡಿ. ಅಧ್ಯಯನ ಮಾಡಲು ಅವಕಾಶ ಕಲ್ಪಿಸಲಾಗಿದ್ದು, ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಕೆಳನಂತಿದೆ:-

ಕ್ರ ಸಂ	ಮಹಾವಿದ್ಯಾಲಯ	2023-24	2024-25	ಒಟ್ಟು
1	ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರ	04	02	06
2	ಪಶುವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು	09	04	13
	ಒಟ್ಟು	13	06	19

ಶ್ರೀ ಎಸ್.ವಿ.ಸಂಕನೂರ (ಪದವೀಧರ ಕ್ಷೇತ್ರ):- ಮಾನ್ಯ ಸಭಾಪತಿಗಳೆ, ನಾನು, ರಾಜ್ಯದಲ್ಲಿ ಎಷ್ಟು ಪಶುವೈದ್ಯಕೀಯ ಕಾಲೇಜುಗಳಿವೆ, ಅವು ಯಾವಾಗ ಪ್ರಾರಂಭವಾದವು, ಅಲ್ಲಿ ಎಷ್ಟು ಜನ ಬೋಧಕ-ಬೋಧಕೇತರ ಸಿಬ್ಬಂದಿ ಹುದ್ದೆಗಳನ್ನು ಮಂಜೂರು ಮಾಡಿದ್ದೀರಿ ಮತ್ತು ಆ ಪೈಕಿ ಎಷ್ಟು ಜನ ಕಾರ್ಯನಿರ್ವಹಿಸುತ್ತಿದ್ದಾರೆ, ಎಷ್ಟು ಹುದ್ದೆಗಳು ಖಾಲಿ ಇವೆ ಎಂದು ಕೇಳಿದ್ದೆ. ಖಾಲಿ ಇರುವ ಹುದ್ದೆಗಳಿಗೆ ಯಾವಾಗ ನೇಮಕ ಮಾಡಿಕೊಳ್ಳುತ್ತಾರೆ ಎನ್ನುವ ವಿವರವಾದ ಮಾಹಿತಿಯನ್ನು ಕೊಟ್ಟಿದ್ದಾರೆ. ಇದೆಲ್ಲವನ್ನು ಗಮನಿಸಿದಾಗ ಮಾನ್ಯ ಸಚಿವರಲ್ಲಿ ಒಂದು ಪ್ರಶ್ನೆಯನ್ನು ಕೇಳುತ್ತೇನೆ. ರಾಜ್ಯದಲ್ಲಿ 6 ಪಶುವೈದ್ಯಕೀಯ ಮಹಾವಿದ್ಯಾಲಯಗಳಿವೆ. ನೀವು, ಪಶು ವೈದ್ಯಕೀಯ ಮಹಾವಿದ್ಯಾಲಯ, ಹೆಬ್ಬಾಳ ಇಲ್ಲಿ 91 ಬೋಧಕರ ಹುದ್ದೆಗಳಿದ್ದು, 56 ಖಾಯಂ ಹುದ್ದೆಗಳನ್ನು ತುಂಬಿಕೊಳ್ಳಲಾಗಿದೆ ಮತ್ತು 31 ಹುದ್ದೆಗಳು ಖಾಲಿ ಇವೆ ಎಂದು ತಿಳಿಸಿದ್ದೀರಿ. ಅಂದರೆ, 40% ಹುದ್ದೆಗಳು ಖಾಲಿ ಇವೆ. ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರ್‌ನಲ್ಲಿ ಮಂಜೂರಾದ ಬೋಧಕರ ಹುದ್ದೆ 91 ಮತ್ತು ಖಾಯಂ 43 ಹುದ್ದೆಗಳನ್ನು ತುಂಬಿಕೊಳ್ಳಲಾಗಿದೆ ಎಂದು ಹೇಳಿದ್ದಾರೆ. ಅಂದರೆ ಇಲ್ಲಿ 50%ರಷ್ಟು ಹುದ್ದೆಗಳು ಖಾಲಿ ಇವೆ. ಪಶು ವೈದ್ಯಕೀಯ ಮಹಾವಿದ್ಯಾಲಯ, ಶಿವಮೊಗ್ಗದಲ್ಲಿ 60% ಹುದ್ದೆಗಳು ಖಾಲಿ ಇವೆ. ಪಶುವೈದ್ಯಕೀಯ ಮಹಾವಿದ್ಯಾಲಯ, ಹಾಸನದಲ್ಲೂ 60% ಹುದ್ದೆಗಳು ಖಾಲಿ ಇವೆ. ಪಶು ವೈದ್ಯಕೀಯ ಮಹಾವಿದ್ಯಾಲಯ, ಗದಗದಲ್ಲಿ 70% ಹುದ್ದೆಗಳು ಖಾಲಿ ಇವೆ. ಇಷ್ಟೊಂದು ಖಾಲಿ ಹುದ್ದೆಗಳನ್ನು ಇಟ್ಟುಕೊಂಡು ಅಲ್ಲಿ ಗುಣಮಟ್ಟದ ವೈದ್ಯಕೀಯ ಶಿಕ್ಷಣ ಕೊಡುವುದಕ್ಕೆ ಹೇಗಾಗುತ್ತದೆ?

ಪಶುವೈದ್ಯಕೀಯದಲ್ಲಿ theory ಗಿಂತ practical ಜಾಸ್ತಿ ಇರುತ್ತದೆ. Practical oriented knowledge, skill ಅನ್ನು ಪಡೆದುಕೊಳ್ಳಬೇಕಾಗುತ್ತದೆ. ಬೋಧಕ ಸಿಬ್ಬಂದಿ ಇಲ್ಲದೇ ಹೋದರೆ ಅವರು ಪರಿಣಿತ ಪಶುವೈದ್ಯರನ್ನು ಹೇಗೆ ತಯಾರು ಮಾಡುವುದಕ್ಕಾಗುತ್ತದೆ? ಇದು ಸರ್ಕಾರದ ನಿರ್ಲಕ್ಷ್ಯದ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಧೋರಣೆಯನ್ನು ತೋರಿಸುತ್ತದೆ. ಈ ವಿಷಯ ಪತ್ರಿಕೆಗಳಲ್ಲೂ ಬಂದಿದೆ. ಪತ್ರಿಕೆಯಲ್ಲಿ "*ಮುಚ್ಚುವ ಭೀತಿಯಲ್ಲಿ ಕರ್ನಾಟಕ ಪಶು ವೈದ್ಯಕೀಯ ಮಹಾವಿದ್ಯಾಲಯ, ಶೇಕಡ 25 ಸಿಬ್ಬಂದಿ ಕಾರ್ಯನಿರ್ವಹಣೆ, ನಿರ್ಲಕ್ಷ್ಯ ಮುಂದುವರೆದರೆ ನಾಲ್ಕು ವರ್ಷಗಳಲ್ಲಿ ಸಂಕಷ್ಟ*" ಎಂದಿದೆ. ತಮಗೆ ಗೊತ್ತಿರುವ ಹಾಗೆ, 5 ವರ್ಷಕ್ಕೊಮ್ಮೆ Veterinary Council of India, New Delhi, ಇವರು ಇನ್ಸ್‌ಪೆಕ್ಷನ್‌ಗೆ ಬರುತ್ತಾರೆ. ಅವರು ಬಂದಾಗ ಬೋಧಕ ಹುದ್ದೆಗಳು ಖಾಲಿ ಇರುವುದನ್ನು ನೋಡಿದರೆ derecognize ಮಾಡುತ್ತಾರೆ. ಗದಗದಲ್ಲಿ ಇಂತಹ ಪರಿಸ್ಥಿತಿ ಕಳೆದ 3 ವರ್ಷಗಳ ಹಿಂದೆ ಬಂದಿತ್ತು. ಇಷ್ಟೊಂದು ಬೋಧಕ ಹುದ್ದೆಗಳನ್ನು ಖಾಲಿ ಇಟ್ಟುಕೊಂಡರೆ ಗುಣಮಟ್ಟದ ಶಿಕ್ಷಣವನ್ನು ಕೊಡುವುದಕ್ಕೆ ಆಗುವುದಿಲ್ಲ. ಇದು ಬಹಳ ಗಂಭೀರವಾದ ವಿಷಯವಾಗಿದೆ.

ನಿಮ್ಮ ಉತ್ತರದಲ್ಲಿ, ಖಾಲಿ ಇರುವ ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ನಿರ್ಧರಿಸಿದ್ದೇವೆ ಎಂದು ಹೇಳಿದ್ದೀರಿ.

(ಮುಂದು)

(671) 13-8-2025 12.30 ಡಿಎಸ್-ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

ಶ್ರೀ ಎಸ್.ವಿ.ಸಂಕನೂರ (ಮುಂದು):-

ನನ್ನ ಪ್ರಶ್ನೆ ಏನೆಂದರೆ, ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ನಿರ್ಧಾರ ಕೈಗೊಂಡಿದ್ದೀರಲ್ಲಾ ಆರ್ಥಿಕ ಇಲಾಖೆಯ concurrence ತೆಗೆದುಕೊಂಡಿದ್ದಾರೆಯೇ? ಆರ್ಥಿಕ ಇಲಾಖೆ ಅನುಮತಿಯನ್ನು ಕೊಟ್ಟಿದೆಯೇ? ಅನುಮತಿಯನ್ನು ಕೊಟ್ಟಿದ್ದರೆ ದಯವಿಟ್ಟು ಅದರ ಕಾಪಿಯನ್ನು ಕೊಡಿ. ಅದನ್ನು ಮಾನ್ಯ ಸಚಿವರು ಕ್ಲಾರಿಫೈ ಮಾಡಬೇಕು. ಮಾನ್ಯ ಸಚಿವರೇನೋ ನಿರ್ಧಾರ ಮಾಡಿದ್ದಾರೆ. ಆದರೆ ಆರ್ಥಿಕ ಇಲಾಖೆ ತೀರ್ಮಾನ ಮಾಡಬೇಕಾಗಿದೆ. ಸರ್ಕಾರ, ಇಲಾಖೆಗಳಲ್ಲಿ ಏನೆಲ್ಲಾ ನಿರ್ಣಯಗಳನ್ನು ತೆಗೆದುಕೊಳ್ಳುತ್ತಾರೆ, ಆದರೆ ಆರ್ಥಿಕ ಇಲಾಖೆಯ concurrence ಇರುವುದಿಲ್ಲ. ಖಾಲಿಯಿರುವ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡುತ್ತೇವೆಂದು ಹೇಳಿದ್ದಾರೆ, ಬಹಳ ಸಂತೋಷ. ಆದರೆ ಅದಕ್ಕೆ ಆರ್ಥಿಕ ಇಲಾಖೆಯವರು concurrence ಕೊಟ್ಟಿದ್ದಾರೆಯೋ ಇಲ್ಲವೋ? ಆರ್ಥಿಕ ಇಲಾಖೆ concurrence ಕೊಟ್ಟಿದ್ದರೆ ಎಷ್ಟು ಹುದ್ದೆಗಳಿಗೆ ಕೊಟ್ಟಿದ್ದಾರೆ? ಏಕೆಂದರೆ, ಒಳಮೀಸಲಾತಿ ಸಮಸ್ಯೆ ಇದೆ, ಅದನ್ನು ಬಗೆಹರಿಸಿದ ತಕ್ಷಣ ನಾವು ಪ್ರಕ್ರಿಯೆ ಪ್ರಾರಂಭ ಮಾಡುತ್ತೇವೆಂದು ಮಾನ್ಯ ಸಚಿವರು ಉತ್ತರದಲ್ಲಿ ಕೊಟ್ಟಿದ್ದಾರೆ. ಇದರ ಬಗ್ಗೆ ನನಗೆ ಮಾಹಿತಿಯನ್ನು ಕೊಡಿ. ಆಮೇಲೆ ನಾನು ಉಳಿದ ಪ್ರಶ್ನೆಗಳನ್ನು ಕೇಳುತ್ತೇನೆ.

ಸಭಾಪತಿಯವರು:- ಭಾಷಣ ಮಾಡಬೇಡಿ.

ಶ್ರೀ ಎಸ್.ವಿ.ಸಂಕನೂರ:- ಮಾನ್ಯ ಸಭಾಪತಿಯವರೇ, ಭಾಷಣ ಅಲ್ಲ, ನಾನು ಪ್ರಶ್ನೆ ಕೇಳುತ್ತಿದ್ದೇನೆ.

ಶ್ರೀ ಕೆ.ವೆಂಕಟೇಶ್ (ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು):- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರೇನು ಕಳಕಳಿ ವ್ಯಕ್ತಪಡಿಸಿದ್ದಾರೆ ಅದು ಸತ್ಯ ಇದೆ. ನಮ್ಮಲ್ಲಿ ಬೋಧಕರು ಬಹಳ ಕಡಿಮೆ ಇದ್ದಾರೆ. ಹೀಗಾಗಿ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವರೇನು ಪ್ರಸ್ತಾಪ ಮಾಡಿದ್ದಾರೆ ಅದು ಸತ್ಯ ಇದೆ. ಮಾನ್ಯ ಸದಸ್ಯರು ಹೇಳಿದ ಹಾಗೆ ನಾವು ಹಣಕಾಸು ಇಲಾಖೆಗೆ ಮನವಿ ಮಾಡಿದ್ದೇವೆ. ಒಳ ಮೀಸಲಾತಿ ಬಗ್ಗೆ ತೀರ್ಮಾನವಾದ ಮೇಲೆ ಭೋದಕರನ್ನು ನೇಮಕ ಮಾಡಿಕೊಳ್ಳಿ ಎಂದು ಅವರು ಹೇಳಿದ್ದಾರೆ. ಒಳ ಮೀಸಲಾತಿ ತೀರ್ಮಾನವಾದ ಮೇಲೆ ಮೊದಲ ಆದ್ಯತೆ ಮೇಲೆ ನಾವು ಬೋಧಕರನ್ನು ನೇಮಕ ಮಾಡಿಕೊಳ್ಳುತ್ತೇವೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಬೋಧಕರನ್ನು ನೇಮಕಾತಿ ಮಾಡಿಕೊಳ್ಳದಿದ್ದರೆ ವಿದ್ಯಾರ್ಥಿಗಳಿಗೂ ಕಷ್ಟವಾಗುತ್ತದೆ, ಕಾಲೇಜು ನಡೆಸುವುದು ಕಷ್ಟವಾಗುತ್ತದೆ. ಆದ್ದರಿಂದ ನಾವು ಅದರ ಬಗ್ಗೆ ಹಚ್ಚು ಗಮನ ಕೊಟ್ಟಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೂ ತಂದಿದ್ದೇನೆ. ಅವರು ಒಪ್ಪಿಕೊಂಡಿದ್ದಾರೆ, ಮುಂದಿನ ದಿನಗಳಲ್ಲಿ ಅದನ್ನು ನಾವು ಮಾಡುತ್ತೇವೆ.

ಶ್ರೀ ಎಸ್.ಫ್ಹಿ.ಸಂಕನೂರ:- ಮಾನ್ಯ ಸಭಾಪತಿಯವರೇ, ನನಗೆ ಸ್ಪಷ್ಟವಾದ ಉತ್ತರ ಮಾನ್ಯ ಸಚಿವರಿಂದ ಸಿಗಲಿಲ್ಲ. ಮಾನ್ಯ ಸಚಿವರು ಹುದ್ದೆಗಳನ್ನು ಭರ್ತಿ ಮಾಡುತ್ತೇವೆಂದು ಹೇಳಿದರು. ಆರ್ಥಿಕ ಇಲಾಖೆಯವರು concurrence ಕೊಟ್ಟಿರುವ ಕಾಪಿಯನ್ನು ನಾನು ಕೇಳುತ್ತಿದ್ದೇನೆ.

ಶ್ರೀ ಕೆ.ವೆಂಕಟೇಶ್:- ಕೊಡುತ್ತೇನೆ.

ಶ್ರೀ ಎಸ್.ಫ್ಹಿ.ಸಂಕನೂರ:- ಮಾನ್ಯ ಸಭಾಪತಿಯವರೇ, ಅದರ ಕಾಪಿಯನ್ನು ಕೊಡಿ. ಈ ಪ್ರಶ್ನೆ ಇದೆ ಎಂದ ಮೇಲೆ ಮಾನ್ಯ ಸಚಿವರು ಸಿದ್ಧತೆಯನ್ನು ಮಾಡಿಕೊಂಡು ಬರಬೇಕಾಗುತ್ತದೆ. ಮಾನ್ಯ ಸಚಿವರ ಬಗ್ಗೆ ನನಗೆ ಗೌರವವಿದೆ.

ಶ್ರೀ ಕೆ.ವೆಂಕಟೇಶ್:- ಮಾನ್ಯ ಸಭಾಪತಿಯವರೇ, ನಮಗೆ ಬೋಧಕರ ಹುದ್ದೆ ಅಗತ್ಯವಿದೆ, ಬಹಳ ತುರ್ತಾಗಿ ಆಗಬೇಕೆಂದು ನಾವು ಹಣಕಾಸು ಇಲಾಖೆಗೆ ಮನವಿ ಮಾಡಿದ್ದೇವೆ. ಒಳ ಮೀಸಲಾತಿ ಆದಮೇಲೆ ನೇಮಕ ಮಾಡಿಕೊಳ್ಳಿ ಎಂದು ಹಣಕಾಸು ಇಲಾಖೆಯವರು ಹೇಳಿದ್ದಾರೆ. ಅವರು concurrence ಕೊಟ್ಟೇ ಕೊಡುತ್ತಾರೆ. Concurrence ತೆಗೆದುಕೊಂಡೇ ನಾವು ಮಾಡಬೇಕು.

ಶ್ರೀ ಎಸ್.ಫ್ಹಿ.ಸಂಕನೂರ:- ಮಾನ್ಯ ಸಭಾಪತಿಯವರೇ, ಆರ್ಥಿಕ ಇಲಾಖೆ concurrence ಕೊಟ್ಟಿರುವ ಕಾಪಿಯನ್ನು ನನಗೆ ಕೊಡಲಿ.

ಶ್ರೀ ಕೆ.ವೆಂಕಟೇಶ್:- ಮಾನ್ಯ ಸಭಾಪತಿಯವರೇ, ಹಣಕಾಸು ಇಲಾಖೆಯ concurrence ಇಲ್ಲದಿದ್ದರೆ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವುದಕ್ಕೆ ಬರುವುದಿಲ್ಲ.

ಸಭಾಪತಿಯವರು:- ಮಾನ್ಯ ಸದಸ್ಯರು ಹೇಳುವುದು ಸರಿಯಾಗಿದೆ. ಆದಷ್ಟು ಬೇಗನೆ ಮಾಡಿಸಿ ಕೊಡಿ.

ಶ್ರೀ ಎಸ್.ಫ್ಹಿ.ಸಂಕನೂರ:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರ ಗಮನಕ್ಕೆ ಬಹಳ ಮಹತ್ವವಾದ ವಿಷಯವನ್ನು ತರಬಯಸುತ್ತಿದ್ದೇನೆ. ಗದಗ ಜಿಲ್ಲೆಯಲ್ಲಿ ಪಶುವೈದ್ಯಕೀಯ ಕಾಲೇಜು ಪ್ರಾರಂಭ ಮಾಡಿ ೨ ವರ್ಷಗಳಾಗಿವೆ. ಇದು ಬಹಳ ಗಂಭೀರವಾದ ವಿಷಯವಾಗಿದೆ. ೨ ವರ್ಷಗಳಾದರೂ ಕೂಡ ಅಲ್ಲಿ ಒಂದೂ ಹುದ್ದೆಗಳನ್ನು ಪರ್ಮನೆಂಟ್ ಆಗಿ ನೇಮಕಾತಿ ಮಾಡಿಕೊಂಡಿಲ್ಲ. ಬೇರೆ ಪಕ್ಕದ ಪಶುವೈದ್ಯಕೀಯ ಕಾಲೇಜಿನಿಂದ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬೋಧಕರನ್ನು ವರ್ಗಾವಣೆ ಮಾಡುತ್ತಾರೆ. ವರ್ಗಾಯಿತ ಬೋಧಕರಿಂದಲೇ ೨ ವರ್ಷಗಳು ಆ ಕಾಲೇಜು ನಡೆದಿದೆ. ಉಳಿದ ಕಾಲೇಜುಗಳಲ್ಲಿ ಹುದ್ದೆಗಳನ್ನು ಮಂಜೂರು ಮಾಡಿದ್ದಾರೆ. ಗದಗ ಜಿಲ್ಲೆಯಲ್ಲಿ ಒಂದೂ ಹುದ್ದೆಯನ್ನು ಭರ್ತಿ ಮಾಡಿಕೊಳ್ಳುವುದಕ್ಕೆ ಅನುಮತಿಯನ್ನು ಕೊಟ್ಟಿಲ್ಲ. ಇದು ಗದಗ ಜಿಲ್ಲೆಯ ಜನರಿಗೆ ಆಗುವ ಅವಮಾನ. ಅಲ್ಲಿ ಸೀನಿಯರ್ ಕ್ಯಾಬಿನೆಟ್ ಸಚಿವರಿದ್ದಾರೆ. ವರ್ಗಾವಣೆ ಬೋಧಕರಿಂದಲೇ ಕಾಲೇಜು ನಡೆದಿದೆ. ಈಗ ವಿದ್ಯಾರ್ಥಿಗಳು ನನ್ನ ಮನೆ ಮುಂದೆ ಧರಣಿ ಮಾಡುತ್ತಿದ್ದಾರೆ.

ಶ್ರೀ ಕೆ.ವೆಂಕಟೇಶ್:– ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳುತ್ತಿರುವುದು ಸತ್ಯ ಇದೆ. ನಮ್ಮಲ್ಲಿ ೬ ಕಾಲೇಜುಗಳಿವೆ. ಆ ೬ ಕಾಲೇಜುಗಳಲ್ಲಿ ಎಷ್ಟೆಷ್ಟು ಬೋಧಕರ ಹುದ್ದೆಗಳು ಖಾಲಿ ಇವೆ ಎಂಬುದನ್ನು ಕೊಟ್ಟಿದ್ದಾರೆ. ಆ ಹುದ್ದೆಗಳನ್ನು ಭರ್ತಿ ಮಾಡುತ್ತೇವೆ.

ಶ್ರೀ ಎಸ್.ವಿ.ಸಂಕನೂರ:– ಮಾನ್ಯ ಸಭಾಪತಿಯವರೇ, ಆರ್ಥಿಕ ಇಲಾಖೆ ಒಂದೂ ಹುದ್ದೆಯನ್ನು ತುಂಬುವುದಕ್ಕೆ ಅನುಮತಿಯನ್ನು ಕೊಟ್ಟಿಲ್ಲ. ಈಗಾಗಲೇ ೨ ವರ್ಷಗಳಾಗಿವೆ.

ಸಭಾಪತಿಯವರು:– ಮಾನ್ಯ ಸಚಿವರೇ, ಬೇಗನೆ ಮಾಡಿಸಿ ಕೊಡಿ.

ಶ್ರೀ ಎಸ್.ವಿ.ಸಂಕನೂರ:– ಮಾನ್ಯ ಸಭಾಪತಿಯವರೇ, ಗದಗ ಜಿಲ್ಲೆಗೆ ಏಕೆ ತಾರತಮ್ಯ ಮಾಡುತ್ತಿದ್ದಾರೆ?

ಶ್ರೀ ಕೆ.ವೆಂಕಟೇಶ್:– ಮಾನ್ಯ ಸಭಾಪತಿಯವರೇ, ತಾರತಮ್ಯ ಮಾಡಿಲ್ಲ. ಹುದ್ದೆಗಳನ್ನು ಭರ್ತಿ ಮಾಡಿಲ್ಲ, ಮಾಡಿ ಕೊಡುತ್ತೇವೆ.

ಶ್ರೀ ಎಸ್.ವಿ.ಸಂಕನೂರ:– ಮಾನ್ಯ ಸಭಾಪತಿಯವರೇ, ಈಗಾಗಲೇ ೨ ವರ್ಷಗಳಾಗಿವೆ, ಯಾವಾಗ ಹುದ್ದೆಗಳನ್ನು ಭರ್ತಿ ಮಾಡುತ್ತಾರೆ, ಇದು ಅವಮಾನವಲ್ಲವೇ? ಅದು ಯಾವುದೇ ಸರ್ಕಾರ ಇರಲಿ. ಒಂದು ಪ್ರೊಫೆಸರ್ ಹುದ್ದೆಯನ್ನು ಭರ್ತಿ ಮಾಡಿಲ್ಲ. ಇದು ಗದಗ ಜಿಲ್ಲೆಗೆ ಮಾಡುತ್ತಿರುವ ತಾರತಮ್ಯವಾಗಿದೆ. ಇದನ್ನು ಬೇಗನೆ ಸರಿಪಡಿಸಬೇಕು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಶ್ನೆ ಸಂಖ್ಯೆ: 407

ಬುಡಕಟ್ಟು ಜನಾಂಗದ ಚಿಕ್ಕ-ಚಿಕ್ಕ ಪೂಜಾ ಸ್ಥಳಗಳಿಗೆ ಅನುದಾನ ನೀಡುವ ಕುರಿತು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಬುಡಕಟ್ಟು ಮತ್ತು ವನವಾಸಿ ಜನಾಂಗಗಳ ಪ್ರದೇಶದಲ್ಲಿ ಇರುವ ಚಿಕ್ಕ ಚಿಕ್ಕ ಪೂಜಾಸ್ಥಳಗಳಿಗೆ ಗುಡಿ ನಿರ್ಮಾಣ ಮಾಡಲು ಅನುದಾನ ಬಿಡುಗಡೆ ಮಾಡುವ ಯೋಜನೆ ಸರ್ಕಾರದ ಮುಂದೆ ಇದೆಯೇ;	ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿ ಗಿರಿಜನ ಉಪಯೋಜನೆ ಕಾರ್ಯಕ್ರಮದಡಿ ಗಿರಿಜನ/ಪರಿಶಿಷ್ಟ ಪಂಗಡದವರು ವಾಸಿಸುವ ಸ್ಥಳಗಳಲ್ಲಿನ ದೇವಾಲಯ, ಪ್ರಾರ್ಥನಾ ಮಂದಿರಗಳ ನವ ನಿರ್ಮಾಣ/ಜೀರ್ಣೋದ್ಧಾರಕ್ಕಾಗಿ ವಿಧಾನ ಸಭಾ ಕ್ಷೇತ್ರವಾರು ಅನುದಾನವನ್ನು ಸರ್ಕಾರದ ಆದೇಶ ಸಂಖ್ಯೆ:ಕಂಇ 189 ಮುಅಬಿ 2011, ದಿನಾಂಕ:19.09.2011ರಲ್ಲಿನ ಮಾರ್ಗಸೂಚಿಗಳನ್ವಯ ಬಿಡುಗಡೆ ಮಾಡಲಾಗುತ್ತಿದೆ. ಪ್ರತಿಯನ್ನು **ಅನುಬಂಧ-1** ರಲ್ಲಿ ಒದಗಿಸಿದೆ.
ಆ)	ಬುಡಕಟ್ಟು ಮತ್ತು ವನವಾಸಿ ಜನಾಂಗಗಳ ಪರಂಪರೆ, ಸಂಸ್ಕೃತಿ, ಆಚಾರ, ವಿಚಾರ ಮತ್ತು ಧಾರ್ಮಿಕತೆ ಉಳಿಸಲು ಸರ್ಕಾರ ತೆಗೆದುಕೊಳ್ಳುವ ಕ್ರಮಗಳೇನು;	ಧಾರ್ಮಿಕ ದತ್ತಿ ಇಲಾಖೆಯಿಂದ ಬುಡಕಟ್ಟು ಮತ್ತು ವನವಾಸಿ ಜನಾಂಗಗಳ ಪರಂಪರೆ, ಸಂಸ್ಕೃತಿ, ಆಚಾರ, ವಿಚಾರ ಮತ್ತು ಧಾರ್ಮಿಕತೆ ಉಳಿಸಲು ದಿನಾಂಕ:19.09.2011ರ ಸರ್ಕಾರದ ಆದೇಶದನ್ವಯ ಗಿರಿಜನ ಉಪಯೋಜನೆಯಡಿ ಒದಗಿಸಲಾಗುವ ಅನುದಾನವನ್ನು ಗಿರಿಜನ / ಪರಿಶಿಷ್ಟ ಪಂಗಡದವರು ವಾಸಿಸುವ ಸ್ಥಳಗಳಲ್ಲಿ ಅಥವಾ ಸದರಿ ಸಮುದಾಯದವರು ವಾಸಿಸುವ ಸ್ಥಳಕ್ಕೆ ಸಮೀಪದಲ್ಲಿ ದೇವಾಲಯ, ಪ್ರಾರ್ಥನಾ ಮಂದಿರ ಅಥವಾ ಕಲ್ಯಾಣ ಮಂಟಪ/ಸಮುದಾಯ ಭವನವನ್ನು ನಿರ್ಮಿಸಲು ಅಥವಾ ಅವುಗಳ ಜೀರ್ಣೋದ್ಧಾರಕ್ಕಾಗಿ ಬಳಸಲು ಬಿಡುಗಡೆ ಮಾಡಲು ಅವಕಾಶ ಕಲ್ಪಿಸಲಾಗಿದೆ.
ಇ)	ಉತ್ತರ ಕನ್ನಡ ಜಿಲ್ಲೆಯ ಬುಡಕಟ್ಟು ಮತ್ತು ವನವಾಸಿ ಹಳ್ಳಿಗಳ ಎಷ್ಟು ದೇವಸ್ಥಾನಗಳಿಗೆ ಕಳೆದ ಎರಡು ವರ್ಷದಲ್ಲಿ ಅನುದಾನ ನೀಡಲಾಗಿದೆ? (ತಾಲ್ಲೂಕುವಾರು ಮಾಹಿತಿ ನೀಡುವುದು)	ಉತ್ತರ ಕನ್ನಡ ಜಿಲ್ಲೆಗೆ ಗಿರಿಜನ ಉಪಯೋಜನೆ ಕಾರ್ಯಕ್ರಮದಡಿ ಕಳೆದ ಎರಡು ವರ್ಷದಲ್ಲಿ ಒಟ್ಟು ರೂ.28.63 ಲಕ್ಷಗಳ ಅನುದಾನ ನೀಡಲಾಗಿದ್ದು, ವರ್ಷವಾರು ವಿವರ ಕೆಳಕಂಡಂತಿದೆ.

(ರೂ.ಲಕ್ಷಗಳಲ್ಲಿ)

ಯೋಜನೆ	2023-24	2024-25	ಒಟ್ಟು
ಗಿರಿಜನ ಉಪ ಯೋಜನೆ	3.21	3.21	6.42
ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ 2013ರಡಿ ಬಳಕೆಯಾಗದೇ ಇರುವ ಮೊತ್ತ ಇದರಡಿ ಗಿರಿಜನ ಉಪ ಯೋಜನೆಗೆ	19.08	3.13	22.21
ಒಟ್ಟು	22.29	6.34	28.63

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕ್ರ. ಸಂ	ಪ್ರಶ್ನೆ	ಉತ್ತರ
		ಮೇಲ್ಕಂಡಂತೆ ವಿಧಾನಸಭಾ ಕ್ಷೇತ್ರವಾರು ಅನುದಾನವನ್ನು ಹಂಚಿಕೆ ಮಾಡಿ, ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದ್ದು, ಈ ಅನುದಾನದಡಿ ಸದರಿ ಯೋಜನೆಯ ಮಾರ್ಗಸೂಚಿಯನ್ವಯ ಜಿಲ್ಲಾ ಹಂತದಲ್ಲಿರುವ ಜಿಲ್ಲಾ ಸಮಿತಿಗಳಲ್ಲಿ ಕಾಮಗಾರಿಗಳನ್ನು ಆಯ್ಕೆ ಮಾಡಿ, ನಿರ್ವಹಿಸಬೇಕಾಗಿದ್ದು, ಅದರನ್ವಯ ವಿಧಾನಸಭಾ ಕ್ಷೇತ್ರವಾರು ಅನುದಾನದ ಮಾಹಿತಿ ಮತ್ತು ಕೈಗೊಳ್ಳಲಾದ ದೇವಾಲಯಗಳ ಅಭಿವೃದ್ಧಿ/ಜೀರ್ಣೋದ್ಧಾರ ಕಾಮಗಾರಿ ವಿವರಗಳನ್ನು **ಅನುಬಂಧ-2 ರಲ್ಲಿ** ಒದಗಿಸಿದೆ.

ಸಂಖ್ಯೆ: ಕಂಇ 148 ಮುಸಪ್ರ 2025

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶಿತರು):- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಸಾಮಾನ್ಯವಾಗಿ ಎಲ್ಲರಿಗೂ ಗೊತ್ತಿರುವಂತಹ ಉತ್ತರವನ್ನು ಕೊಟ್ಟಿದ್ದಾರೆ. ಬುಡಕಟ್ಟು ಮತ್ತು ವನವಾಸಿ ಜನಾಂಗಗಳ ಪ್ರದೇಶದಲ್ಲಿ ಇರುವ ಚಿಕ್ಕ ಚಿಕ್ಕ ಪೂಜಾಸ್ಥಳಗಳಿಗೆ ಗುಡಿ ನಿರ್ಮಾಣ ಮಾಡಲು ಅನುದಾನ ಬಿಡುಗಡೆ ಮಾಡುವ ಯೋಜನೆ ಸರ್ಕಾರದ ಮುಂದೆ ಇದೆಯೇ ಎಂದು ಪ್ರಶ್ನೆಯನ್ನು ಕೇಳಿದ್ದೇನೆ. ಮಾನ್ಯ ಸಚಿವರು ಈಗಾಗಲೇ ಶಾಸಕರ ಅನುದಾನದಲ್ಲಿದೆ ಮತ್ತು SCSP/TSP ಅನುದಾನದಲ್ಲಿದೆ ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ. ನನ್ನ ಪ್ರಶ್ನೆ ಏನೆಂದರೆ, ಯಾರೆಲ್ಲಾ ಬುಡಕಟ್ಟು ಜನಾಂಗದವರು ಇರುತ್ತಾರೆ ಅವರೆಲ್ಲರೂ ಕಾಡಿನ ಪ್ರದೇಶದಲ್ಲಿ ವಾಸ ಮಾಡುತ್ತಾರೆ. ಅವರ ವಸತಿಗೆ ಹೇಗೆ ಸ್ಥಳ ಇಲ್ಲವೋ ಅವರ ಸಣ್ಣಪುಟ್ಟ ಪೂಜಾ ಸ್ಥಳಗಳಿಗೂ ಅಲ್ಲಿ ಸ್ಥಳ ಇರುವುದಿಲ್ಲ. ಈಗ ಅರಣ್ಯ ಹಕ್ಕು ಕಾಯ್ದೆಯಲ್ಲಿ ಹಕ್ಕುಪತ್ರ ಕೊಡುವ ಪ್ರಕ್ರಿಯೆ ಇತ್ತು ಅದು ಕೂಡ ಸಮಿತಿಯಲ್ಲಿ ಕೋರಂ ಇಲ್ಲ ಎನ್ನುವ ಕಾರಣಕ್ಕೆ ಪೂರ್ತಿಯಾಗಿ ನಿಂತಿದೆ. ಹೀಗಾಗಿ ಹಕ್ಕು ಪತ್ರ ಕೂಡ ಸಿಗುತ್ತಿಲ್ಲ. G.P.S. ಸಿಗುವ ಜಾಗದಲ್ಲೂ ಸಣ್ಣಪುಟ್ಟ ಗುಡಿಗಳನ್ನು ನಿರ್ಮಾಣ ಮಾಡುವುದಕ್ಕೆ ಕಷ್ಟವಾಗುತ್ತದೆ. ಇವತ್ತು ಇಡೀ ಕರ್ನಾಟಕ ರಾಜ್ಯದಲ್ಲಿ ಸುಮಾರು ೫೦ ರಷ್ಟು ಬುಡಕಟ್ಟು ಜನಾಂಗದವರು ಇದ್ದಾರೆ. ಅದರಲ್ಲಿ 48ಕ್ಕೂ ಹೆಚ್ಚು ಜನಾಂಗದವರು ಕಾಡಿನಲ್ಲಿ ಇರುತ್ತಾರೆ. ಅವರು ಇರುವ ಗುಡಿಸಲಿನ ಪಕ್ಕದಲ್ಲಿ ಚಿಕ್ಕಚಿಕ್ಕ ಮರದ ಕೆಳಗಡೆ ಕಲ್ಲುಗಳನ್ನಿಟ್ಟು ಪೂಜೆ ಮಾಡುತ್ತಾರೆ. ಅವರ ಶ್ರದ್ಧೆ ಅಷ್ಟೇ ಗಂಭೀರವಾಗಿರುತ್ತದೆ. ನಾನು 3-4 ಉದಾಹರಣೆಗಳನ್ನು ಹೇಳುವುದಾದರೆ, ಉತ್ತರ ಕನ್ನಡ ಜಿಲ್ಲೆಯಲ್ಲಿ ಇಡೀ ಜಿಲ್ಲೆಯ ಸಿದ್ದಿ ಸಮುದಾಯಕ್ಕಾಗಿ ಸಿದ್ದಿ ನಾಸ ಎನ್ನುವಂಥ ಒಂದೇ ಒಂದು ಪೂಜಾ ಸ್ಥಳ ಇರುವಂಥದ್ದು. ಪುಟ್ಟ ಕಲ್ಲನ್ನು ಇಟ್ಟಿದ್ದಾರೆ, ಅದಕ್ಕೆ ಬಹಳ ವರ್ಷಗಳಿಂದ ಪೂಜೆ ಮಾಡಿಕೊಂಡು ಬರುತ್ತಿದ್ದಾರೆ. ಅದಕ್ಕೆ ಸಭಾ ಭವನವನ್ನು ಸರ್ಕಾರ ಶಾಸಕರ ಅನುದಾನದಲ್ಲಿ ಕಟ್ಟಿದೆ. ಅದರ ಆಡಳಿತವನ್ನು ನಮಗೆ ವಹಿಸಿ ಕೊಟ್ಟಿಲ್ಲ. ಸರ್ಕಾರದ ಕೈಯಲ್ಲಿ ಅದು ಇದೆ. ನಾವೇನಾದರೂ ಬಳಕೆ ಮಾಡಬೇಕೆಂದರೆ ಸರ್ಕಾರದ ಅನುಮತಿ ತೆಗೆದುಕೊಂಡು ಬಳಕೆ ಮಾಡಬೇಕು. ಆ ಸ್ಥಿತಿಯಲ್ಲಿದೆ. ನಾನು ಇನ್ನು ಬೇರೆ ಬೇರೆ ಜನಾಂಗದ ಪೂಜಾ ಸ್ಥಳಗಳ ಬಗ್ಗೆ ಉಲ್ಲೇಖ ಮಾಡುವುದಾದರೆ, ನಾವು ಕೊಡಗಿಗೆ ಹೋದರೆ ಅಲ್ಲಿ ಕುದುರೆ ಹಬ್ಬ ಎಂದು ಜೇನು ಕುರುಬ ಜನಾಂಗದವರು ಮಾಡುತ್ತಾರೆ. ಅದು ಗೋಣಿಕೊಪ್ಪ ತಾಲ್ಲೂಕಿನಲ್ಲಿ ಬರುತ್ತದೆ. ಸೋಲಿಗರು ಜಡೆಸ್ವಾಮಿಯನ್ನು ಪೂಜೆ ಮಾಡುತ್ತಾರೆ. ಕೊರಗ ಜನಾಂಗದವರು ಕೊರಗಜ್ಜನನ್ನು ಪೂಜೆ ಮಾಡುತ್ತಾರೆ. ಹಾಗೆಯೇ ಗುರುಸಿದ್ಧ, ವಿಠಲ, ಮಾಗಳ, ಕಾರಯ್ಯ, ಬಿಲ್ಲಯ್ಯ, ಭೂಮಿ ವೀರ, ಮಾದೇಶ್ವರ, ಜಡೆಸ್ವಾಮಿ, ಈ ರೀತಿ ಅನೇಕ ಕಾಡಿನ ಜನರು ಪೂಜೆ ಮಾಡುವಂತಹ ಸಾಂಪ್ರದಾಯಿಕ ದೇವಸ್ಥಾನಗಳು. ಯಾವ ಒಂದೇ ಒಂದು ಗುಡಿಗಳಗೂ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರ್ಕಾರದ ಅನುದಾನ ಹಾಕಿ ನಾವು ಚಿಕ್ಕ ಗುಡಿಗಳನ್ನು ಕಟ್ಟುವುದಕ್ಕಾಗುವುದಿಲ್ಲ. ಆ ರೀತಿಯ ಯೋಜನೆ ಏನಾದರೂ ಸರ್ಕಾರದ ಮುಂದೆ ಇದೆಯೇ ಎಂದು ನಾನು ಮಾನ್ಯ ಸಚಿವರನ್ನು ಕೇಳಬಯಸುತ್ತಿದ್ದೇನೆ.

ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು):- ಮಾನ್ಯ ಸಭಾಪತಿಯವರೇ, ಆರಾಧನ ಸಮಿತಿಗಳಿರುತ್ತವೆ. ಆರಾಧನ ಸಮಿತಿಗಳಿಗೆ ಹಣವನ್ನು ಈಕ್ವಲ್ ಆಗಿ ಕೊಟ್ಟುಬಿಡುತ್ತಾರೆ. ಅವರಿಗೆ SCSP/TSP ನಲ್ಲಿ ಸ್ವಲ್ಪ ಅವಕಾಶವಿರುತ್ತದೆ. ಇದಕ್ಕೆ ಸಂಬಂಧಪಟ್ಟ ಸಚಿವರಾದ ಡಾ॥ ಹೆಚ್.ಸಿ.ಮಹದೇವಪ್ಪನವರನ್ನು ಕೇಳಿದರೆ ಅವರು ಹೆಚ್ಚಿನ ಹಣ ಬಿಡುಗಡೆ ಮಾಡುತ್ತಾರೆ. ಮುಜರಾಯಿ ಸಚಿವರುಗಳಿಗೆ discretionary grant ಇರುತ್ತದೆ. ಅದರ ಪ್ರಕಾರ ಕೊಡಬಹುದು. ಮಾನ್ಯ ಸದಸ್ಯರು ಒಂದು ಪಟ್ಟಿ ಮಾಡಿ ಕೊಡಲಿ. ಒಂದೇ ಸಲ ಹಣ ಕೊಡುತ್ತೇವೆಂದು ಹೇಳುವುದಿಲ್ಲ, ಸ್ವಲ್ಪ ಸ್ವಲ್ಪ ಕೊಡುತ್ತೇವೆ.

ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ:- ಮಾನ್ಯ ಸಭಾಪತಿಯವರೇ, ಕೇವಲ ನಾನು ಕೊಟ್ಟಿರುವ ಪಟ್ಟಿ ಬಗ್ಗೆ ಹೇಳುತ್ತಿಲ್ಲ. ಅದಕ್ಕೆ ನಿರ್ದಿಷ್ಟವಾಗಿ ನೀತಿ ಇರಬೇಕು. ಉದಾಹರಣೆಗೆ ಹೇಳುವುದಾದರೆ, ಒಂದು ವರ್ಷದ ಹಿಂದೆ ಬನ್ನೇರುಘಟ್ಟದ ಪಕ್ಕದಲ್ಲಿ ಒಂದು ವನವಾಸಿ ಹಕ್ಕಿಪಿಕ್ಕಿ ಜನಾಂಗದ ಕಾಡು ಇದೆ. ಬನ್ನೇರುಘಟ್ಟ ನ್ಯಾಷನಲ್ ಪಾರ್ಕ್ ರಗೆಕುಂಟೆ ಒಳಗಡೆ ಈಶ್ವರ ಮತ್ತು ಮಾರಮ್ಮದೇವಿ. ಆ ರೀತಿಯ ಹೆಸರು ಇಟ್ಟಿದ್ದಾರೆ, ಆದರೆ ಅವೆರಡು ಕಾಡಿನ ದೇವರು. ಅವರು ಆ ದೇವರ ಜಾತ್ರೆ ಮಾಡುತ್ತಿದ್ದರು. ಅವರು ಜೀವನ ಪರ್ಯಂತ ಮಾಡಿಕೊಂಡು ಬರುತ್ತಿದ್ದರು. ಈಗ ಸುಮಾರು 10-14 ವರ್ಷಗಳಿಂದ ಅದರ ಪೂಜೆ, ಜಾತ್ರೆ ನಡೆದಿರಲಿಲ್ಲ. ನಾನು ಅರಣ್ಯ ಇಲಾಖೆಗೆ ಕೇಳಿದಾಗ, ಅಲ್ಲಿ ಒಳಗಡೆ ಹೋಗುವುದಕ್ಕೆ ಬರುವುದಿಲ್ಲ ಎಂದು ಹೇಳಿದರು. ಆದರೂ ಬಲವಂತವಾಗಿ ಅವರ ಅನುಮತಿಯನ್ನು ತೆಗೆದುಕೊಂಡು ನಾನು ಹೋದಾಗ ನೂರು ಜನರು ನನ್ನ ಜೊತೆ ಬಂದರು. ಅಲ್ಲಿ ಹೋಗಿ ನೋಡಿದರೆ ಒಂದು ಪುಟ್ಟ ಕಲ್ಲು ಇದೆ, ಒಂದು ಮರ ಇದೆ, ಅದರ ಪಕ್ಕದಲ್ಲಿ ಒಂದು ಕಲ್ಯಾಣಿ ಇದೆ. ಕಲ್ಯಾಣಿ ಎಂದರೆ ಕಾಡಿನಲ್ಲಿ ನೀರು ಕುಡಿಯುವಂತಹ ಸ್ಥಳ ಇದೆ. ವಿಶೇಷವೇನೆಂದರೆ, ಅಲ್ಲಿ ನೂರಾರು ವರ್ಷಗಳ ಹಿಂದಿನ ಸ್ಮಶಾನ ಇದೆ. ಅದು ಬಿಟ್ಟರೆ ಆ ಭಾಗದಲ್ಲಿ ಬೇರೆ ಯಾವುದೇ ಸ್ಮಶಾನ ಇಲ್ಲ. ಆ ಜನಗಳು ಯಾರಾದರೂ ತೀರಿಕೊಂಡರೆ ಒಳಗಡೆ ಹೋಗುವುದಕ್ಕಾಗುವುದಿಲ್ಲ. ಅಲ್ಲಿ ರೈಲ್ವೆ ಕಂಬಿಗಳ ಬೇಲಿ ಹಾಕಿದ್ದಾರೆ. ಹಾಗೇನಾದರೂ ಒಳಗಡೆ ಹೋದರೆ ರಾತ್ರಿ ಹೋಗಿ ಹೆಣ ಸಂಸ್ಕಾರ ಮಾಡಿ ಬರಬೇಕು. ಕಳೆದ ಎರಡು ತಿಂಗಳ ಹಿಂದೆ ಮೈಸೂರಿನಲ್ಲಿ ನಡೆದ ಒಂದು ಘಟನೆ ಬಗ್ಗೆ ಕೇಳಿದ್ದೇವೆ. ಈ ರೀತಿ ಶಾಶ್ವತವಾದ ಸಮಸ್ಯೆಗಳ ಬಗ್ಗೆ ನಾನು ಹೇಳುತ್ತಿದ್ದೇನೆ. ಹೆಚ್.ಡಿ. ಕೋಟೆ, ಹುಣಸೂರು ತಾಲ್ಲೂಕು, ಕೊಡಗು ಜಿಲ್ಲೆಯ ಅನೇಕ ತಾಲ್ಲೂಕುಗಳಲ್ಲಿ ಇದು ಇರುವುದರಿಂದ ನಿರ್ದಿಷ್ಟವಾಗಿ ಕೇವಲ ಪೂಜಾ ಸ್ಥಳ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಂದಲ್ಲ, ಪೂಜಾ ಸ್ಥಳದ ಜೊತೆಗೆ ಅಂತ್ಯ ಸಂಸ್ಕಾರ ಮಾಡುವಂಥದ್ದು ಇರಬಹುದು, ಅವರ ಜಾತ್ರಾ ಸ್ಥಳ ಇರಬಹುದು. ನಾನು ಕುದುರೆ ಹಬ್ಬದ ಬಗ್ಗೆ ಉಲ್ಲೇಖ ಮಾಡಿದ್ದೇನೆ. ಉಡುಪಿ ಜಿಲ್ಲೆಯಲ್ಲಿ ಕೊರಗ ಸಮುದಾಯ ಅತ್ಯಂತ ಹಿಂದುಳಿದ ಜನಾಂಗ. It is a primitive tribe. ಅವರ ಪೂಜಾ ಸ್ಥಳಗಳಿಗೆ ಹೋಗುವುದಕ್ಕೆ ಅನುಮತಿಯೇ ಇಲ್ಲ. ಆದ್ದರಿಂದ ಅಲ್ಲೇ ಇರುವಂತಹ ಕಾಡಿನಲ್ಲಿ G.P.S. ಮಾಡಿ ಹಕ್ಕುಪತ್ರವನ್ನಾದರೂ ಕೊಡಬೇಕು. ನಾನು ಅಥವಾ ಇನ್ಯಾವುದೇ ಶಾಸಕರುಗಳು ಅನುದಾನ ಹಾಕುವುದಕ್ಕೆ ಬರುವುದಿಲ್ಲ. ಶೇಕಡ ಎರಡರಷ್ಟು ಮಾತ್ರ ಹಾಕಬಹುದು. ನಮಗೆ ಬರುವುದು ಎರಡು ಕೋಟಿ ರೂಪಾಯಿಗಳಲ್ಲಿ ಇಡೀ ರಾಜ್ಯಕ್ಕೆ ಹೇಗೆ ಆಗುತ್ತದೆ? ಹಾಗಾಗಿ ನಿರ್ದಿಷ್ಟವಾದ ಯೋಜನೆಯನ್ನು ಸರ್ಕಾರ ಮಾಡಲೇಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ರಾಮಲಿಂಗಾರೆಡ್ಡಿ:- ಮಾನ್ಯ ಸಭಾಪತಿಯವರೇ, 35,000 ಮುಜರಾಯಿ ದೇವಸ್ಥಾನಗಳಿವೆ. ಅದರಲ್ಲಿ 205 'ಎ' ಗ್ರೇಡ್ ದೇವಸ್ಥಾನಗಳಿವೆ. ಅವರದ್ದೇ ಹಣ ಇರುವುದರಿಂದ ಅವರು ಯಾರು ಹಣ ಕೇಳುವುದಕ್ಕೆ ಬರುವುದಿಲ್ಲ. 'ಬಿ' ಗ್ರೇಡ್ ದೇವಸ್ಥಾನಗಳು ಅಷ್ಟೆ. 5 ಲಕ್ಷ ರೂಪಾಯಿಗಳಿಂದ 25 ಲಕ್ಷ ರೂಪಾಯಿಗಳ ಆದಾಯ ಬರುವುದರಿಂದ ಅವರು ಯಾರು ಹಣ ಕೇಳುವುದಿಲ್ಲ. ಸುಮಾರು 34,000 'ಸಿ' ಗ್ರೇಡ್ ದೇವಸ್ಥಾನಗಳಿವೆ. ಅವರಿಗೆ ತಸ್ತೀಕ್ ಹಣ ಪ್ರತಿ ವರ್ಷ 72,000 ರೂಪಾಯಿಗಳನ್ನು ಕೊಟ್ಟುಬಿಡುತ್ತೇವೆ. ಆದರೆ ಇದು ಮುಜರಾಯಿ ವ್ಯಾಪ್ತಿಗೆ ಬರುವುದಿಲ್ಲ. ಈ ದೇವಸ್ಥಾನಗಳು ಅರಣ್ಯ ಪ್ರದೇಶದಲ್ಲಿರುತ್ತದೆ. ಅರಣ್ಯ ಪ್ರದೇಶದಲ್ಲಿರುವುದರಿಂದ ಅರಣ್ಯ ಇಲಾಖೆಯವರು ದೇವಸ್ಥಾನ ಕಟ್ಟುವುದಕ್ಕೆ ಅವಕಾಶ ಕೊಡುವುದಿಲ್ಲ ಎಂದು ನಾನು ಭಾವಿಸಿಕೊಂಡಿದ್ದೇನೆ. ಅವರು ಅವಕಾಶ ಕೊಟ್ಟರೆ, ಡಾ॥ ಹೆಚ್.ಸಿ.ಮಹದೇವಪ್ಪನವರಿಗೆ ಹೇಳಿ ಸ್ಪೆಷಲ್ ಗ್ರಾಂಟ್ ಅನ್ನು ತೆಗೆದುಕೊಂಡು ಇವರಿಗೆ ಸಹಾಯ ಮಾಡಬೇಕು ಅಥವಾ ನನ್ನ discretionary quota ದಲ್ಲಿ ಏನಾದರೂ ಸಹಾಯ ಮಾಡಬೇಕು.

(ಮುಂದು)

(672) 13/08/2025 12:40 ಎಸ್‌ಪಿಆರ್/ಕೆಎಸ್ (ಸಭಾಪತಿಯವರ ಉಪಸ್ಥಿತಿ)

ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶನ):- ಮಾನ್ಯ ಸಭಾಪತಿಯವರೆ, ನಾನು ಉತ್ತರ ಕನ್ನಡ ಜಿಲ್ಲೆಯ ಬುಡಕಟ್ಟು ಮತ್ತು ವನವಾಸಿ ಹಳ್ಳಿಗಳ ಎಷ್ಟು ದೇವಸ್ಥಾನಗಳಿಗೆ ಕಳೆದ ಎರಡು ವರ್ಷದಲ್ಲಿ ಅನುದಾನ ನೀಡಲಾಗಿದೆ ಎಂಬುದರ ಬಗ್ಗೆ ತಾಲ್ಲೂಕುವಾರು ಮಾಹಿತಿ ನೀಡುವಂತೆ ಮತ್ತೊಂದು ಪ್ರಶ್ನೆಯನ್ನು ಕೇಳಿದ್ದೆನು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರ್ಕಾರವು ಉತ್ತರಿಸಿದೆ. ಉತ್ತರ ಕನ್ನಡ ಜಿಲ್ಲೆಗೆ ಗಿರಿಜನ ಉಪಯೋಜನೆ ಕಾರ್ಯಕ್ರಮದಡಿ ಕಳೆದ ಎರಡು ವರ್ಷಗಳಲ್ಲಿ ನೀಡಿರುವ ಅನುದಾನದ ಮೊತ್ತವನ್ನು ಕೇಳಿದರೆ ಎಲ್ಲರಿಗೂ ಆಶ್ಚರ್ಯವಾಗುತ್ತದೆ. ಕಳೆದ ಎರಡು ವರ್ಷಗಳಲ್ಲಿ ಕೇವಲ 4,77,000/- ರೂಪಾಯಿಗಳು ಮಾತ್ರವೇ ಬಿಡುಗಡೆಯಾಗಿದೆ. ಈ ರೀತಿಯಾದ ಚಿಕ್ಕ-ಚಿಕ್ಕ ಯೋಜನೆಗಳಿಂದ ಇದು ಆಗಲು ಸಾಧ್ಯವಿಲ್ಲ. ಹೀಗಾಗಿ ನಾನು ಸಚಿವರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಅವರ ಇಲಾಖೆಯ ಜೊತೆಗೆ ಅರಣ್ಯ ಇಲಾಖೆ ಮತ್ತು ನಮ್ಮ ನೋಡಲ್ ಸಂಸ್ಥೆಯಾದ ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ಇವರುಗಳು ಸೇರಿಕೊಂಡು ಒಂದು ನಿರ್ದಿಷ್ಟವಾದ ಯೋಜನೆಯನ್ನು ಮಾಡಿದರೆ ಅನುಕೂಲವಾಗುತ್ತದೆ. ಈಗಾಗಲೇ ಅವರಿಗೆ ಇರಲಿಕ್ಕೂ ಸಹ ಸ್ಥಳವಿಲ್ಲ. ಅವರುಗಳು ಮರಣಹೊಂದಿದರೆ, ಶವ ಹೂಳಲೂ ಸಹ ಸ್ಥಳವಿಲ್ಲ. ಅವರಿಗೆ ಪೂಜೆ ಮಾಡಲು ಪೂಜಾ ಸ್ಥಳಗಳೂ ಸಹ ಇಲ್ಲ. ಹೊರಗಡೆ ಹೋಗಲು ಆ ಜನಾಂಗದವರಿಗೆ ಗೊತ್ತಾಗುವುದಿಲ್ಲ. ಹೀಗಾಗಿ ಇವರಿಗಾಗಿಯೇ ನಿರ್ದಿಷ್ಟವಾದ ಅವಧಿಯಲ್ಲಿ ಒಂದು ವಿಶೇಷವಾದ ಯೋಜನೆಯನ್ನು ಘೋಷಣೆ ಮಾಡಲೇಬೇಕೆಂದು ನಾನು ಸಚಿವರಲ್ಲಿ ಕೋರುತ್ತೇನೆ.

ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು):- ಮಾನ್ಯ ಸಭಾಪತಿಯವರೆ, ಉತ್ತರ ಕನ್ನಡ ಜಿಲ್ಲೆಗೆ ಗಿರಿಜನ ಉಪಯೋಜನೆ ಕಾರ್ಯಕ್ರಮದಡಿ ಕಳೆದ ಎರಡು ವರ್ಷದಲ್ಲಿ ಒಟ್ಟು 28.63 ಲಕ್ಷ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಸದಸ್ಯರು ನಿರ್ದಿಷ್ಟವಾದ ಯಾವುದಾದರೂ ದೇವಸ್ಥಾನಗಳ ಪಟ್ಟಿಯನ್ನು ನೀಡಲಿ. ನಮ್ಮ discretionary quota ದಡಿ ಎಷ್ಟು ಸಾಧ್ಯವೋ ಅಷ್ಟನ್ನು ನೀಡುತ್ತೇವೆ.

ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ:- ಮಾನ್ಯ ಸಭಾಪತಿಯವರೆ, ಸಚಿವರು ತಿಳಿಸಿದಂತೆ ನಾನು ಪಟ್ಟಿಯನ್ನು ನೀಡುತ್ತೇನೆ. ಸಚಿವರು ತಿಳಿಸಿರುವ ಮೊತ್ತದಲ್ಲಿ ಎಸ್.ಸಿ. ಸೇರಿದೆ. ಮತ್ತೊಂದರ ಬಗ್ಗೆ ನಾನು ಪುನಃ ಸ್ಪಷ್ಟಪಡಿಸಬೇಕು. ಎಸ್.ಟಿ. ವರ್ಗಕ್ಕೆ ಸೇರಿದ 48 ಜನಾಂಗಗಳು ಕಾಡಿನೊಳಗೆ ಇರುತ್ತವೆ. ಅಲ್ಲಿ ಅನುದಾನದ ಅವಶ್ಯಕತೆ ಇದೆ ಎಂದು ನಾನು ಹೇಳುತ್ತೇನೆ. ಯಾವುದೋ ಗ್ರಾಮ ಪಂಚಾಯತಿಯ ಹತ್ತಿರ ಅಥವಾ ಯಾವುದೋ ಊರಿನ ಮಧ್ಯದಲ್ಲಿ ಇರುವುದಕ್ಕೆ ಕೊಟ್ಟಿದ್ದಾರೆ; ಇಲ್ಲವೆಂತಲ್ಲ. ಕಾಡಿನಲ್ಲಿ ಅನುದಾನ ನೀಡಬೇಕೆಂದು ನಾನು ವಿಶೇಷವಾದ ಮನವಿಯನ್ನು ಮಾಡಿಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಶ್ನೆ ಸಂಖ್ಯೆ: 326

ಸಮುದ್ರ ಮೀನುಗಾರಿಕೆ ಮಾಡುವ ಮೀನುಗಾರರ ಬಗ್ಗೆ

ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 326
2) ಸದಸ್ಯರ ಹೆಸರು : ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭೆಯಿಂದ ಚುನಾಯಿತರಾದವರು)
3) ಉತ್ತರಿಸಬೇಕಾದ ದಿನಾಂಕ : 13-08-2025
4) ಉತ್ತರಿಸಬೇಕಾದ ಸಚಿವರು : ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

	ಪ್ರಶ್ನೆ	ಉತ್ತರ
ಅ)	ರಾಜ್ಯದ ಸಮುದ್ರಗಳಲ್ಲಿ ಮೀನುಗಾರಿಕೆ ಮಾಡುವ ಮೀನುಗಾರರು ಸಮುದ್ರದಲ್ಲಿ ಮೀನುಗಾರಿಕೆ ಹೋಗುವಾಗ ಆಗುತ್ತಿರುವ ಅಪಘಾತ, ಸಾವುಗಳನ್ನು ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಈ ಬಗ್ಗೆ ರೂಪಿಸಲಾಗಿರುವ ಯೋಜನೆಗಳೇನು;	ಮೀನುಗಾರರು ಮೀನುಗಾರಿಕೆಗೆ ತೆರಳುವ ದೋಣಿಗಳಲ್ಲಿ ಕಡ್ಡಾಯವಾಗಿ ಮೀನುಗಾರರ ಸಂಖ್ಯೆಗೆ ಅನುಗುಣವಾಗಿ ಜೀವರಕ್ಷಕ ಸಾಧನಗಳಾದ ಲೈಫ್‌ಜಾಕೆಟ್ ಮತ್ತು ಲೈಫ್‌ಬಾಯ್ ಇರುವುದನ್ನು ಖಚಿತಪಡಿಸಿಕೊಂಡ ನಂತರವೇ ಮೀನುಗಾರಿಕೆ ಇಲಾಖೆಯು ಮೀನುಗಾರರಿಗೆ ಪರವಾನಗಿ ನೀಡುತ್ತಿದೆ. ಹಾಗು ಜೀವರಕ್ಷಕ ಸಾಧನಗಳ ಬಗ್ಗೆ ಮೀನುಗಾರರಿಗೆ ನಿಯಮಿತವಾಗಿ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಮುನ್ಸೂಚಿತ ಹವಾಮಾನ ವರದಿಗಳನ್ನು ಸಾರ್ವಜನಿಕವಾಗಿ ಲಭ್ಯವಾಗುವಂತೆ ಹಾಗೂ ವಿಶೇಷವಾಗಿ ಮೀನುಗಾರರಿಗೆ ತಲುಪುವಂತೆ ವಿವಿಧ ಮಾಧ್ಯಮಗಳ (Whatsapp) ಮುಖಾಂತರ ಪ್ರಚಾರ ಪಡಿಸಲಾಗುತ್ತಿದೆ. ರಾಜ್ಯದ ಕರಾವಳಿ ತೀರದ ಮೀನುಗಾರಿಕೆ ಬಂದರುಗಳು, ಇಳಿದಾಣ ಕೇಂದ್ರಗಳಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ, ಸಾಮಾಜಿಕ ಮಾಧ್ಯಮಗಳಲ್ಲಿ ಮತ್ತು ಮೀನುಗಾರರ ವೈಯಕ್ತಿಕ ದೂರವಾಣಿ ಸಂಖ್ಯೆಗೆ ಮುನ್ನೆಚ್ಚರಿಕೆ ಸಂದೇಶಗಳನ್ನು ಹಂಚಿಕೊಳ್ಳಲಾಗುತ್ತಿದೆ. ಹಾಗೆಯೇ, ಕರಾವಳಿ ತೀರದ ಪಂಚಾಯಿತಿಗಳಿಂದ ಮೀನುಗಾರರು ಹೆಚ್ಚು ಇರುವ ಗ್ರಾಮಗಳಲ್ಲಿ ಮುನ್ನೆಚ್ಚರಿಕೆಯ ಪ್ರಕಟಣೆಯನ್ನು ಟಾಮ್‌ಟಾಮ್ ಹಾಗೂ ಭಿತ್ತಿಪತ್ರಗಳನ್ನು ಹಂಚುವ ಮೂಲಕ ಪ್ರಚಾರ ಪಡಿಸಲಾಗುತ್ತಿದೆ. ಮೀನುಗಾರರ ಹಾಗೂ ಅವರ ದೋಣಿಗಳ ಸುರಕ್ಷತೆಗೆಗಾಗಿ ISRO ಅಭಿವೃದ್ಧಿಪಡಿಸಿರುವ GPS ಆಧಾರಿತ ದ್ವಿಮುಖ ಸಂವಹನ (Two-way communication) ಸಂವಹನ ವ್ಯವಸ್ಥೆಯನ್ನು ಎಲ್ಲಾ ಯಾಂತ್ರೀಕೃತ ಮೀನುಗಾರಿಕೆ ದೋಣಿಗಳಲ್ಲಿ ಅಳವಡಿಸಲಾಗುತ್ತಿದೆ. ಇದರಿಂದ ಸಮುದ್ರದಲ್ಲಿ ವಾತಾವರಣದ ವೈಪರೀತ್ಯಗಳಿರುವ ವೇಳೆ ಮೀನುಗಾರರ ಜೀವಕ್ಕೆ ಅಪಾಯವಾಗುವ ಸಾಧ್ಯತೆಗಳಿರುವ ಸಂದರ್ಭಗಳಲ್ಲಿ ಸಂರಕ್ಷಣಾ ಪಡೆಗೆ ತಕ್ಷಣ ಮಾಹಿತಿ ರವಾನಿಸಲು ಹಾಗೂ ಅಪಾಯದಲ್ಲಿರುವ ಮೀನುಗಾರರಿಗೆ ಸಂರಕ್ಷಣಾ ಪಡೆಯು ಮಾಹಿತಿ ರವಾನಿಸಲು ಸಹಕಾರಿಯಾಗಿರುತ್ತದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆ)	ಇಂತಹ ಅಪಘಾತದಿಂದ ಮೀನುಗಾರರನ್ನು ತಕ್ಷಣವೇ ರಕ್ಷಿಸಲು ಕರಾವಳಿ ಪಡೆಯಿಂದ ಹೆಲಿಕಾಪ್ಟರ್ ಅಥವಾ ಸರ್ವರುತುವಿನಲ್ಲೂ ಮೀನುಗಾರರ ರಕ್ಷಣೆಗೆ ಬರುವ ತಂತ್ರಜ್ಞಾನದ ಬೋಟನ್ನು ಯಾವಾಗ ಪರಿಚಯಿಸಲಾಗುವುದು;	ಅಪಘಾತದಿಂದ ಮೀನುಗಾರರನ್ನು ತಕ್ಷಣವೇ ರಕ್ಷಿಸಲು ಕರಾವಳಿ ಕಾವಲು ಪಡೆಯವರ ಹತ್ತಿರ ಯಾವುದೇ ಹೆಲಿಕಾಪ್ಟರ್ ವ್ಯವಸ್ಥೆ ಇರುವುದಿಲ್ಲ. ತುರ್ತು ಸಂದರ್ಭಗಳಲ್ಲಿ ಭಾರತೀಯ ತಟ ರಕ್ಷಣ ಪಡೆಯ ಹೆಲಿಕಾಪ್ಟರ್ ಸೇವೆಯನ್ನು ಪಡೆಯಲಾಗುತ್ತಿದೆ. ಆದರೆ, ಸಮುದ್ರ ಮೀನುಗಾರಿಕೆಗೆ ತೆರಳಿದಾಗ ಅಪಘಾತ / ಅನಾರೋಗ್ಯಕ್ಕೆ ಒಳಗಾಗುವ ಮೀನುಗಾರರನ್ನು ತ್ವರಿತವಾಗಿ ದಡಕ್ಕೆ ತರಲು ಸಮುದ್ರ ಅಂಬ್ಯೂಲೆನ್ಸ್ ಖರೀದಿಸುವ ಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ: ಪಸಂಮೀ/101/ಮೀಇಯೋ/2025 ದಿನಾಂಕ: 07-07-2025 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ಅದರಂತೆ, ದೋಣಿಯನ್ನು ನಿರ್ಮಿಸಲು ಕಾರ್ಯಾದೇಶ ನೀಡಲಾಗಿದೆ.
ಇ)	ಪ್ರತಿಯೊಂದು ಜೀವ ಹಾನಿಗೆ ಹಾಲಿ ಒದಗಿಸಲಾಗುತ್ತಿರುವ ಪರಿಹಾರವನ್ನು ದುಪ್ಪಟ್ಟು ಮಾಡಲು ಸರ್ಕಾರ ಮುಂದಾಗುವುದೇ;	ಚಾಲ್ತಿಯಲ್ಲಿದ್ದ ರೂ.6.00 ಲಕ್ಷಗಳ ಪರಿಹಾರ ಮೊತ್ತವನ್ನು 2024-25ನೇ ಸಾಲಿನಿಂದ ರೂ.10.00 ಲಕ್ಷಗಳಿಗೆ ಹೆಚ್ಚಿಸಲಾಗಿದೆ ಆದ್ದರಿಂದ, ಪರಿಹಾರದ ಮೊತ್ತವನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.
ಈ)	ಮನೆ ಮಾಲೀಕರನ್ನು ಕಳೆದುಕೊಂಡ ಬಡ ಮೀನುಗಾರರ ಕುಟುಂಬದ ಮಕ್ಕಳಲ್ಲಿ ಒಬ್ಬರಿಗೆ ಸರ್ಕಾರದ ಮಟ್ಟದಲ್ಲಿ ಕನಿಷ್ಠ ಪಕ್ಷ ಗ್ರೂಪ್ "ಡಿ" ನೌಕರಿಯನ್ನು ನೀಡಿ ಅವರ ಬದುಕಿಗೆ ಆಸರೆಯಾಗಲು ಕ್ರಮವಹಿಸಲಾಗುವುದೇ?	ಈ ರೀತಿಯ ಯಾವುದೇ ಪ್ರಸ್ತಾವನೆ ಪ್ರಸ್ತುತ ಸರ್ಕಾರದ ಮುಂದೆ ಇರುವುದಿಲ್ಲ.

ಸಂಖ್ಯೆ: ಪಸಂಮೀ ಇ-122 ಮೀಇಇ 2025

(ಮಂಕಾಳ ಎಸ್. ವೈದ್ಯ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೆ, ನಾನು ಕೇಳಿರುವ ಪ್ರಶ್ನೆಗಳಿಗೆ ಸರ್ಕಾರವು ಬಹಳಷ್ಟು ಪ್ರಯತ್ನಗಳನ್ನು ಮಾಡಿ ಉತ್ತರ ನೀಡಿದೆ. ಮೀನುಗಾರರಿಗೆ ಅನುಕೂಲವಾಗುವಂತೆ ಸುಧಾರಣೆ ಮಾಡಬೇಕು ಎನ್ನುವ ಭಾವನೆಯಿಂದ ಉತ್ತರ ನೀಡಿದ್ದಾರೆ. ಆದರೆ, ಯಾವುದೂ ಸಹ ಕಾರ್ಯರೂಪದಲ್ಲಿಲ್ಲ. ಮೀನುಗಾರಿಕೆಗೆ ಹೋಗುವವರ ಮೇಲೆ ಡ್ರೋಣ್ ಕ್ಯಾಮೆರಾ ನಿಗಾವಣೆಯಾಗಬೇಕು ಮತ್ತು ಎಂತಹುದೇ ಅವಗಢಗಳು ಸಂಭವಿಸಿದ ತಕ್ಷಣ ಸಮುದ್ರ ಆಂಬ್ಯುಲೆನ್ಸ್ ಇವರ ರಕ್ಷಣೆಗೆ ಸಾಗಬೇಕು ಮತ್ತು ಮೃತರಾದ ಮೀನುಗಾರರ ಕುಟುಂಬಕ್ಕೆ ಹಾಲಿ ಇರುವ ಪರಿಹಾರ ಧನವನ್ನು ದುಪ್ಪಟ್ಟುಗೊಳಿಸಬೇಕು ಎನ್ನುವ ಅಂಶಗಳ ಬಗ್ಗೆ ನಾನು ಪ್ರಶ್ನೆಗಳನ್ನು ಕೇಳಿದ್ದೆನು. ದಿನಾಂಕ 21 ನೇ ನವೆಂಬರ್ 2024 ರಂದು ಮುರುಡೇಶ್ವರದಲ್ಲಿ ನಡೆದ ವಿಶ್ವ ಮೀನುಗಾರಿಕೆ ದಿನಾಚರಣೆ ಮತ್ತು ಮತ್ಸ್ಯ ಸಮ್ಮೇಳನವನ್ನು ಮೀನುಗಾರಿಕೆ ಸಚಿವರು ನೇರವೇರಿಸಿದರು. ಆ ಕಾರ್ಯಕ್ರಮದಲ್ಲಿ ಉಪ ಮುಖ್ಯಮಂತ್ರಿಗಳೂ ಸಹ ಭಾಗವಹಿಸಿದ್ದರು. ಈ ಮುಂಚೆ, ಮೀನುಗಾರಿಕೆಯ ಕೆಲಸದಲ್ಲಿ ಮೃತಪಟ್ಟ ಮೀನುಗಾರರಿಗೆ ಆರು ಲಕ್ಷ ರೂಪಾಯಿಗಳ ಪರಿಹಾರ ಧನವನ್ನು ನೀಡುತ್ತಿದ್ದರು. ಈಗಿನ ಮಂತ್ರಿಗಳು ಇದರ ಮೊತ್ತವನ್ನು ಇನ್ನೂ ಎರಡು ಲಕ್ಷ ರೂಪಾಯಿಗಳಷ್ಟು ಹೆಚ್ಚಿಗೆ ಮಾಡಿದರು; ಆಗ ಪರಿಹಾರ ಮೊತ್ತ ಎಂಟು ಲಕ್ಷ ರೂಪಾಯಿಗಳಷ್ಟಾಯಿತು. ಉಪ ಮುಖ್ಯಮಂತ್ರಿಗಳು ಆ ಕಾರ್ಯಕ್ರಮಕ್ಕೆ ಬಂದಾಗ ಪರಿಹಾರ ಧನವನ್ನು ಹತ್ತು ಲಕ್ಷ ರೂಪಾಯಿಗಳಷ್ಟು ಘೋಷಣೆ ಮಾಡಿದರು. ಈ ಮೊತ್ತವು ಯಾವುದಕ್ಕೂ ಸಾಕಾಗುವುದಿಲ್ಲ. ಮೀನುಗಾರರ ಜೀವನ ಬಹಳ ಕಷ್ಟವಾಗಿದೆ. ರಾಜ್ಯದ ಕರಾವಳಿ ಭಾಗದ ಮೂರು ಜಿಲ್ಲೆಗಳು ಸೇರಿ 4,693 ಯಾಂತ್ರಿಕ ಬೋಟುಗಳು; 10,770 ಮೋಟರೀಕೃತ ದೋಣಿಗಳು ಹಾಗೂ 9,725 ಸಾಂಪ್ರದಾಯಿಕ ದೋಣಿಗಳಿವೆ. ಇವುಗಳ ಪೈಕಿ ಬೋಟುಗಳು ಮತ್ತು ಮೋಟರೀಕೃತ ದೋಣಿಗಳಿಂದಲೇ ಶೇಕಡಾ 85 ರಷ್ಟು ಆಳ ಸಮುದ್ರದ ಮೀನುಗಾರಿಕೆಯ ಉತ್ಪಾದನೆಯಾಗುತ್ತದೆ. ರಾಜ್ಯದಲ್ಲಿ ಹತ್ತು ಲಕ್ಷಕ್ಕೂ ಹೆಚ್ಚು ಕುಟುಂಬ ಆಳ ಸಮುದ್ರದ ಮೀನುಗಾರಿಕೆಯ ವೃತ್ತಿಯಲ್ಲಿ ತೊಡಗಿದೆ. ಇದರ ಜೊತೆಗೆ ರಾಜ್ಯದಲ್ಲಿ ಪ್ರತಿ ವರ್ಷ ಎರಡರಿಂದ ಎರಡೂವರೆ ಲಕ್ಷ ಟನ್ ಸಮುದ್ರದ ಮತ್ಸ್ಯೋತ್ಪನ್ನ ವಿದೇಶಗಳಿಗೆ ರಫ್ತಾಗುತ್ತದೆ. ರಫ್ತಿನ ವಾರ್ಷಿಕ ವಹಿವಾಟು ಮೂರರಿಂದ ನಾಲ್ಕು ಸಾವಿರ ಕೋಟಿ ರೂಪಾಯಿಗಳಷ್ಟಿದೆ. ಆದರೆ, ಮೀನುಗಾರರ ಬದುಕು ದಡ ಸೇರದೇ, ಸಮುದ್ರದಲ್ಲಿಯೇ ತೇಲುತ್ತಿದೆ. ಮೀನುಗಾರಿಕೆ ಕೆಲಸ ಮಾಡುವ ಜನರು ತಾವು ಹೊರಗೆ ಹೋಗುವ ಮುನ್ನ ಯಾರಿಗೂ ಸಹ "ಹೋಗಿ ಬರುತ್ತೇನೆ" ಎಂದು ಹೇಳುವುದೇ ಇಲ್ಲ; ಕೇವಲ "ಹೋಗುತ್ತೇವೆ" ಎಂಬುದಾಗಿ ಮಾತ್ರವೇ ಹೇಳುತ್ತಾರೆ. ಏಕೆಂದರೆ ಸಮುದ್ರದಿಂದ ಅವರುಗಳು ಮರಳುವುದು ಖಾತ್ರಿ ಇರುವುದಿಲ್ಲ. ಹೀಗಾಗಿ ಅವರಿಗೆ ಯಾವ್ಯಾವ ರೀತಿಯ ಸೌಲಭ್ಯಗಳನ್ನು ನೀಡಬೇಕು ಎನ್ನುವುದರ ಬಗ್ಗೆ ಚರ್ಚಿಸಬೇಕು. ಇಲಾಖೆಯ ಮಂತ್ರಿಗಳು ಬಹಳ ಪ್ರಾಮಾಣಿಕವಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಆದರೆ, ಇದಕ್ಕೆ ಸಂಬಂಧಿತ ಯೋಜನೆಗಳೆಲ್ಲವೂ ಕಾರ್ಯರೂಪಕ್ಕೆ ಬರಬೇಕು.

ಸಭಾಪತಿಯವರು:- ಶ್ರೀ ತಿಪ್ಪಣಪ್ಪ ಕಮಕನೂರ ರವರೇ ಸಾಕು; ಮಂತ್ರಿಗಳು ಉತ್ತರಿಸುತ್ತಾರೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ತಿಪ್ಪಣ್ಣಪ್ಪ ಕಮಕನೂರ:- ಮಾನ್ಯ ಸಭಾಪತಿಯವರೆ, ಇದರ ಬಗ್ಗೆ ನಾನು ಇನ್ನೂ ಹೆಚ್ಚು ಹೇಳಬೇಕಾಗಿದೆ. ತಾವು ಎರಡು-ಮೂರು ಕೆಲಸಗಳನ್ನು ಮಾಡಿಕೊಟ್ಟಿದ್ದೀರಿ. ತಮ್ಮ ನೇತೃತ್ವದಲ್ಲಿ ಅಂಬಿಗರ ಚೌಡಯ್ಯ ಸಮಿತಿಗೆ ಅನುಮೋದಿಸಿ, ಅದಕ್ಕೆ ಶ್ರೀ ಹೆಚ್.ಕೆ.ಪಾಟೀಲ್‌ರವರನ್ನು ಅಧ್ಯಕ್ಷರನ್ನಾಗಿ ಮಾಡಿಕೊಡಲಾಗಿದೆ. ಅದೇ ರೀತಿಯಾಗಿ ನೀವೇ ಹೇಳಿ ಮಾಣಿಕ್ಯ ಶಿವರಾಮಯ್ಯನವರ ಪ್ರಾಧಿಕಾರವನ್ನು ಮಾಡಿಸಿಕೊಟ್ಟಿದ್ದೀರಿ. ಹೀಗಾಗಿ ಸದನದ ಮುಖಾಂತರ ತಮಗೆ ಹೃದಯಪೂರ್ವಕವಾದ ನಮನಗಳನ್ನು ಸಲ್ಲಿಸುತ್ತೇನೆ. ಹೀಗಾಗಿ ತಾವು ನನಗೆ ಮಾತನಾಡಲು ಇನ್ನೂ ಎರಡ್ಮೂರು ನಿಮಿಷಗಳ ಹೆಚ್ಚಿನ ಕಾಲಾವಕಾಶವನ್ನು ನೀಡಿ; ಬೆಲ್ ಅನ್ನು ಬಾರಿಸಬೇಡಿ.

(ಈ ಹಂತದಲ್ಲಿ ಸದನದಲ್ಲಿ ನಗುವಿನ ಅಲೆ ತೇಲಿ ಬಂತು)

ಮೀನುಗಾರರ ಹೆಣ್ಣು ಮಕ್ಕಳು ಸಮುದ್ರದಿಂದ ತಂದ ಮೀನುಗಳನ್ನು ತಮ್ಮ ತಲೆಯ ಮೇಲೆ ಹೊತ್ತುಕೊಂಡು ಹೋಗಿ ಮಾರಾಟ ಮಾಡುತ್ತಾರೆ. ಇದರಿಂದಾಗಿ ಅವರ ಮೈ ಎಲ್ಲಾ ವಾಸನೆ ಬರುತ್ತದೆ. ಈ ಕಾರಣಕ್ಕಾಗಿ ಈ ಜಾತಿ ಜನಾಂಗದವರು ಆರ್ಥಿಕವಾಗಿ, ಸಾಮಾಜಿಕವಾಗಿ ಅತ್ಯಂತ ದುರ್ಬಲರಾಗಿರುವುದರಿಂದ ಇವರನ್ನು ಎಸ್.ಟಿ. ವರ್ಗಕ್ಕೆ ಸೇರಿಸಬೇಕೆಂದು ಚಿನ್ನಪ್ಪ ರೆಡ್ಡಿ ಆಯೋಗದಿಂದ ಹಿಡಿದು ನಾವು ಇಲ್ಲಿಯವರೆಗೆ ಹೋರಾಟ ಮಾಡುತ್ತಲೇ ಬಂದಿದ್ದೇವೆ. ಮೀನುಗಾರರಿಗೆ ತೊಂದರೆ ಇದೆ. ಆ ಭಾಗದಲ್ಲಿ ಈ ಜನಾಂಗದವರನ್ನು ಮೊಗವೀರ ಎನ್ನುತ್ತಾರೆ. ಆದರೆ, ನಮ್ಮ ಭಾಗದಲ್ಲಿ ನೀರೇ ಇಲ್ಲದೇ ನಾವು ಒಕ್ಕಲುತನ ಮಾಡುವುದರಿಂದ ನಮ್ಮ ಜನಾಂಗವನ್ನು ಕೂಲಿ ಮತ್ತು ಕಬ್ಬಲಿ ಎನ್ನುತ್ತಾರೆ. ಒಟ್ಟಾರೆಯಾಗಿ ಹೇಳುವುದಾದರೆ, ಈ ಎಲ್ಲಾ ಪದಗಳು ಒಂದೇ ರೀತಿಯದ್ದಾಗಿವೆ. ಹೀಗಾಗಿ ಇಲಾಖೆಯ ಮಂತ್ರಿಗಳು ಇದರ ಬಗ್ಗೆ ಮುಖ್ಯಮಂತ್ರಿಗಳ ಮನವೊಲಿಸಬೇಕು. ನಾವು ಎಷ್ಟೇ ಮಾತನಾಡಿದರೂ ಸಹ ಪೀಠದಿಂದ ಸೂಚನೆ ಮತ್ತು ಆದೇಶಗಳನ್ನು ಹೊರಡಿಸಬೇಕು. ಮಾಣಿಕೇಶ್ವರ ಅಮ್ಮನವರದ್ದೂ ಸಹ ಬಹಳ ವರ್ಷಗಳಿಂದ ಬಾಕಿ ಇತ್ತು. ಬಹಳ ದಿನಗಳಿಂದಲೂ ಇದನ್ನು ಕೇಳುತ್ತಿದ್ದಾರೆ ಎಂದು ನೀವು ಹೇಳಿದಾಗ, ಶ್ರೀ ಹೆಚ್.ಕೆ.ಪಾಟೀಲ ರವರು ಮಾಡಿಕೊಟ್ಟರು. ಹೀಗಾಗಿ ನಿಮಗೆ ಎಷ್ಟು ಬಾರಿ ಅಭಿನಂದನೆಗಳನ್ನು ಸಲ್ಲಿಸಿದರೂ ಸಹ ಅಷ್ಟು ಕಡಿಮೆಯಾಗಿದೆ. ಮುಂದುವರೆದು ಮೀನುಗಾರರ ಸಮಸ್ಯೆಯ ಬಗ್ಗೆ ಹೇಳುವುದಾದರೆ, ಸಮುದ್ರದ ಮೀನುಗಾರಿಕೆ ನಡೆಯುವ ರಾಜ್ಯದ ಉತ್ತರ ಕನ್ನಡ, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿಂದ 2024-25 ನೇ ಆರ್ಥಿಕ ವರ್ಷದಲ್ಲಿ ಕೇವಲ ಐದು ಲಕ್ಷ ಟನ್‌ನಷ್ಟು ಮೀನು ಉತ್ಪಾದನೆಯಾಗಿದೆ. ಕಳೆದ ವರ್ಷ ಅಂದರೆ, 2023-24 ನೇ ವರ್ಷದಲ್ಲಿ 5.43 ಲಕ್ಷ ಟನ್‌ನಷ್ಟು ಸಮುದ್ರದ ಮೀನು ಉತ್ಪಾದನೆಯಾಗಿತ್ತು. 2022-23 ನೇ ಸಾಲಿನಲ್ಲಿ 7.30 ಲಕ್ಷ ಟನ್‌ನಷ್ಟು ಮೀನು ಉತ್ಪಾದನೆ ಇತ್ತು. ಕಳೆದ ಎರಡು ವರ್ಷಗಳಿಂದ ಪರಿಸ್ಥಿತಿ ಬಿಗಡಾಯಿಸಿದೆ. ಮೀನುಗಾರರಿಗೆ ಆರ್ಥಿಕ ತೊಂದರೆ ಇದ್ದು, ಅವರುಗಳೆಲ್ಲಾ ಕಷ್ಟದಲ್ಲಿದ್ದಾರೆ. ಹೀಗಾಗಿ ಮೀನುಗಾರಿಕೆಗಾಗಿ ಸಮುದ್ರಕ್ಕೆ ಹೋಗುವವರ ಮೇಲೆ ಡ್ರೋಣ್ ಕ್ಯಾಮೆರಾ ನಿರ್ವಹಣೆಯಾಗಬೇಕು. ಅಲ್ಲಿ ಅವಗಢಗಳು ಸಂಭವಿಸಿದ ತಕ್ಷಣ ಸಮುದ್ರ ಆಂಬ್ಯುಲೆನ್ಸ್ ವ್ಯವಸ್ಥೆಯಾಗಬೇಕು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪರಿಹಾರ ಧನದ ಬಗ್ಗೆ ಒಂದು ಉದಾಹರಣೆಯನ್ನು ನೀಡಬಯಸುತ್ತೇನೆ. ದೆಹಲಿ ರಾಜ್ಯದ ಹಿಂದಿನ ಮುಖ್ಯಮಂತ್ರಿಗಳಾದ ಶ್ರೀ ಅರವಿಂದ್ ಕ್ರೇಜಿವಾಲ್ ರವರು ತಮ್ಮ ಅಧಿಕಾರಾವಧಿಯಲ್ಲಿ ಕರ್ತವ್ಯ ನಿರತ ಪೋಲೀಸ್ ಕಾನ್ಸ್‌ಟೇಬಲ್‌ರವರು ಯಾವುದೇ ಅವಗಢದಲ್ಲಿ ಮೃತರಾದರೆ ಅವರ ಕುಟುಂಬ ವರ್ಗಕ್ಕೆ ಮೃತ ಪರಿಹಾರವಾಗಿ ಒಂದು ಕೋಟಿ ರೂಪಾಯಿಗಳನ್ನು ನೀಡಿದ್ದರು. ನಮ್ಮ ರಾಜ್ಯದ ಈಗಿನ ಸರ್ಕಾರವು ಘೋಷಿಸಿದ ಐದು ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕಾಗಿ 53,000/- ಕೋಟಿ ರೂಪಾಯಿಗಳಷ್ಟು ಹಣವನ್ನು ಖರ್ಚು ಮಾಡುತ್ತಿದೆ. ಮೀನುಗಾರರು ಆರ್ಥಿಕವಾಗಿ ದುರ್ಬಲರಾಗಿದ್ದಾರೆ. ಹೀಗಾಗಿ ನಮಗೂ ಸಹ ಗ್ಯಾರಂಟಿಗಳನ್ನು ನೀಡಬೇಕು. ಮೀನುಗಾರರು ತಮ್ಮ ಜೀವವನ್ನು ಕಳೆದುಕೊಳ್ಳುತ್ತಿದ್ದಾರೆ. ಮೀನುಗಾರರು ಸಮುದ್ರಕ್ಕೆ ಮೀನುಗಾರಿಕೆಗೆ ಹೋಗಬೇಕಾದಾಗ ಅವರುಗಳು ಹೋಗಿ ಬರುವುದಾಗಿ ತಿಳಿಸದೇ, ಕೇವಲ ಹೋಗುವುದಾಗಿ ತಿಳಿಸಿ ಹೊರಡುತ್ತಾರೆ. ಹೀಗಾಗಿ ಮೃತ ಮೀನುಗಾರರ ಕುಟುಂಬಕ್ಕೆ ಪರಿಹಾರ ಧನವಾಗಿ 25 ಲಕ್ಷ ರೂಪಾಯಿಗಳನ್ನು ನೀಡಿದರೆ ಸರ್ಕಾರದ ಗಂಟು ಏನು ಹೋಗುತ್ತದೆ ಎಂದು ನಾನು ಪ್ರಶ್ನಿಸುತ್ತೇನೆ. ಇಷ್ಟು ಮೊತ್ತದ ಪರಿಹಾರ ಧನವನ್ನು ಸರ್ಕಾರವು ಏಕೆ ಘೋಷಣೆ ಮಾಡಬಾರದು?

ಸಭಾಪತಿಯವರು:- ಮಂತ್ರಿಗಳು ಉತ್ತರ ಹೇಳುತ್ತಾರೆ.

ಶ್ರೀ ಮಂಕಾಳ ಎಸ್.ವೈದ್ಯ (ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು):- ಮಾನ್ಯ ಸಭಾಪತಿಯವರೆ, ಸದಸ್ಯರು ಪ್ರಸ್ತಾಪಿಸುತ್ತಿರುವ ಅಂಶವು ನಿಜವಾಗಿದೆ. ಏಕೆಂದರೆ ಸಮುದ್ರಕ್ಕೆ ಮೀನುಗಾರಿಕೆಗಾಗಿ ಹೋದವರು ಪುನಃ ವಾಪಸ್ಸು ಬರುತ್ತಾರೆ ಎನ್ನುವ ಖಾತ್ರಿ ಇಲ್ಲ. ಕಳೆದ 20 ದಿನಗಳಲ್ಲಿ 13 ಮೀನುಗಾರರು ಮೃತರಾಗಿದ್ದಾರೆ. ಇದಕ್ಕೆ ಪೂರಕವಾಗಿ ಏನು ಅವಶ್ಯಕತೆ ಇದೆ ಎನ್ನುವುದರ ಬಗ್ಗೆ ನಾವು ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಮೀನುಗಾರರು ಲೈಫ್ ಜ್ಯಾಕೆಟ್‌ಗಳನ್ನು ಹಾಕಿಕೊಳ್ಳಲೇಬೇಕು. ಲೈಫ್ ಜ್ಯಾಕೆಟ್‌ಗಳಿಲ್ಲದಿದ್ದರೆ, ಅವರುಗಳ ನೋಂದಣಿಯನ್ನೇ ಮಾಡಿಕೊಳ್ಳಬಾರದು ಎಂಬ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ. ಹೀಗಾಗಿ ಇದು ಈಗ ನಿಯಂತ್ರಣಕ್ಕೆ ಬಂದಿದೆ. ಸರ್ಕಾರದ ವತಿಯಿಂದಲೂ ಸಹ ಆದಷ್ಟು ಲೈಫ್ ಜ್ಯಾಕೆಟ್‌ಗಳನ್ನು ನೀಡಲಾಗುತ್ತಿದೆ. ಮೀನುಗಾರಿಕೆಯ ಮಾಲೀಕರು ಅಥವಾ ಕಾರ್ಮಿಕರು ಕಡ್ಡಾಯವಾಗಿ ಲೈಫ್ ಜ್ಯಾಕೆಟ್‌ಗಳನ್ನು ಖರೀದಿಸಿ ಹಾಕಿಕೊಳ್ಳಲೇಬೇಕು ಎಂಬ ನಿಯಮವನ್ನು ಜಾರಿಗೊಳಿಸಲಾಗಿದೆ. ಇನ್ನೂ ಮುಂದುವರೆದು, ಒಂದು ವೇಳೆ ಅವರುಗಳಿಗೆ ಖರೀದಿ ಮಾಡಲು ಸಾಧ್ಯವಾಗದೇ ಹೋದರೆ, ಸರ್ಕಾರದಿಂದಲೇ ನೀಡಬೇಕು ಎನ್ನುವ ತೀರ್ಮಾನವನ್ನೂ ಸಹ ತೆಗೆದುಕೊಳ್ಳಲಾಗಿದೆ. ಈ ರೀತಿಯ ಅವಗಢಗಳು ಆಗಬಾರದು ಎಂಬ ನಿಟ್ಟಿನಲ್ಲಿ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಇನ್ನು ಗುಣಮಟ್ಟದ ಬಗ್ಗೆ ಹೇಳುವುದಾದರೆ, ಗುಣಮಟ್ಟದಲ್ಲಿ ಯಾವುದೇ ರಾಜಿ ಇರುವುದಿಲ್ಲ. ಏಕೆಂದು ಹೇಳಿದರೆ, ಲೈಫ್ ಜ್ಯಾಕೆಟ್‌ಗಳು ಜೀವವನ್ನು ಉಳಿಸುವ ಸಾಮಗ್ರಿಗಳಾಗಿವೆ. ಹೀಗಾಗಿ ಗುಣಮಟ್ಟದಲ್ಲಿ ಯಾವುದೇ ರಾಜಿಯನ್ನು ಮಾಡಿಕೊಳ್ಳದೇ ಒಳ್ಳೆಯ ಗುಣಮಟ್ಟದ ಲೈಫ್ ಜ್ಯಾಕೆಟ್‌ಗಳನ್ನು ನೀಡಬೇಕು ಎಂಬ ತೀರ್ಮಾನವನ್ನು ತೆಗೆದುಕೊಳ್ಳಲಾಗಿದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ ಮೊದಲು ಮರಣ ಪರಿಹಾರ ಮೊತ್ತವು ಆರು ಲಕ್ಷ ರೂಪಾಯಿಗಳಷ್ಟಿತ್ತು. ಕಳೆದ ನಾಲ್ಕು ವರ್ಷಗಳಿಂದ ಯಾವುದೇ ಮರಣ ಪರಿಹಾರ ಮೊತ್ತವನ್ನು ನೀಡಿರಲಿಲ್ಲ. ಹೀಗೆ ಬಾಕಿ ಇದ್ದ ಮರಣ ಪರಿಹಾರ ಮೊತ್ತವಾದ ಆರು ಲಕ್ಷ ರೂಪಾಯಿಗಳನ್ನೂ ಸಹ ನಾವು ನೀಡಿದ್ದೇವೆ. ನಾನು ಇಲಾಖೆಯ ಪ್ರಭಾರವನ್ನು ವಹಿಸಿಕೊಂಡಾಗ ಈ ಮೊತ್ತವನ್ನು ಎಂಟು ಲಕ್ಷ ರೂಪಾಯಿಗಳಿಗೆ ಹೆಚ್ಚಳ ಮಾಡಲಾಯಿತು. ಇತ್ತೀಚೆಗೆ ಭಟ್ಕಳ ತಾಲ್ಲೂಕಿನ ಮುರುಡೇಶ್ವರದಲ್ಲಿ ನಡೆದ ವಿಶ್ವ ಮೀನುಗಾರಿಕೆ ದಿನಾಚರಣೆ ಮತ್ತು ಮತ್ಸ್ಯ ಮೇಳ ಕಾರ್ಯಕ್ರಮಕ್ಕೆ ಉಪ ಮುಖ್ಯಮಂತ್ರಿಗಳು ಬಂದಾಗ ಹತ್ತು ಲಕ್ಷ ರೂಪಾಯಿಗಳ ಪರಿಹಾರವನ್ನು ಘೋಷಣೆ ಮಾಡಿದರು. ಹೀಗಾಗಿ ಹತ್ತು ಲಕ್ಷ ರೂಪಾಯಿಗಳಂತೆ ಎಲ್ಲರಿಗೂ ಸಹ ಪರಿಹಾರ ಧನವನ್ನು ನೀಡಲಾಗಿದೆ. ಇಲಾಖೆಯಲ್ಲಿ ಯಾವುದೇ ಹಣದ ಕೊರತೆ ಇಲ್ಲ. ಈ ಹಿಂದೆ ಇದ್ದ ಆರು ಲಕ್ಷ ರೂಪಾಯಿಗಳ ಮರಣ ಪರಿಹಾರ ಮೊತ್ತವನ್ನು ಕಳೆದ ಎರಡು ವರ್ಷಗಳ ಅವಧಿಯಲ್ಲಿ ಒಟ್ಟು ನಾಲ್ಕು ಲಕ್ಷ ರೂಪಾಯಿಗಳಷ್ಟು ಹೆಚ್ಚಳ ಮಾಡಿದ್ದೇವೆ. ಪುನಃ ಇದನ್ನು ಪರಿಶೀಲನೆ ಮಾಡಲಾಗುವುದು.

ಸಭಾಪತಿಯವರು:- ಮಾನ್ಯ ಸಚಿವರೆ, ಹೊನ್ನಾವರದ ಪಕ್ಕದಲ್ಲಿ ಇರುವುದನ್ನು ಪರಿಶೀಲಿಸಿ.

ಶ್ರೀ ಐವನ್ ಡಿ'ಸೋಜ:- ಮಾನ್ಯ ಸಭಾಪತಿಯವರೆ, ಮಂಗಳೂರಿನಲ್ಲಿ ಕೊಟ್ಟಿದ್ದಾರೆ.

ಶ್ರೀ ಮಂಕಾಳ ಎಸ್.ವೈದ್ಯ (ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು):- ಇಡೀ ರಾಜ್ಯದ್ದು ಆಗಿದೆ. ಈ ಮೊದಲು ಅವಗಢ ಸಂಭವಿಸಿದ ನಾಲ್ಕು ವರ್ಷಗಳಾದರೂ ಸಹ ಮರಣ ಪರಿಹಾರ ಮೊತ್ತವನ್ನು ನೀಡುತ್ತಿರಲಿಲ್ಲ. ಆದರೆ, ಈಗ ಅವಗಢ ಸಂಭವಿಸಿದ ಕೇವಲ 24 ಗಂಟೆಗಳ ಅವಧಿಯಲ್ಲಿಯೇ ಪರಿಹಾರ ಧನವನ್ನು ನೀಡುವ ವ್ಯವಸ್ಥೆಯನ್ನು ಮಾಡಿದ್ದೇವೆ.

(ಮುಂದು)

(673)13-08-2025/12-50/bkp-ks (ಸಭಾಪತಿಯವರ ಉಪಸ್ಥಿತಿ)

ಶ್ರೀ ಮಂಕಾಳ ಎಸ್.ವೈದ್ಯ(ಮುಂದು):-

ನಾವು ಹೋಗಿ ಕೊಡುವವರೆಗೆ ಎರಡು ದಿನ ತಡವಾಗುತ್ತದೆ, ಒಟ್ಟಾರೆ ಅದನ್ನು 24 ಗಂಟೆಯೊಳಗೆ ಕೊಡುವಂತಹದ್ದನ್ನು ಮಾಡಿದ್ದೇವೆ. ಅದರ ಜೊತೆಗೆ ಅದರೊಳಗೆ ಡ್ರೋಣ್ ಕ್ಯಾಮೆರಾ ಬಿಡಬೇಕೆಂದು ಇವರು ಹೇಳುತ್ತಿದ್ದಾರೆ. ಅದು ಕಷ್ಟದ ಕೆಲಸ ಏತಕ್ಕೆಂದರೆ ಸಾಮಾನ್ಯವಾಗಿ ಅವರು 1000 ಕಿ.ಮೀ ದೂರಕ್ಕೆ ಹೋಗಿರುತ್ತಾರೆ. ಹೀಗಾಗಿ ಇದು ಆಗುವುದಿಲ್ಲ. ಅಂತಹ ಸಂದರ್ಭದಲ್ಲಿ ಅವರಿಗೆ GPS based two-way communication devices ಅನ್ನು ದೋಣಿಗೆ ಅಳವಡಿಸಲಾಗಿದೆ. ಅದು ವೈರ್‌ಲೆಸ್ ಇದೆ. ಅದರ ಜೊತೆಯಲ್ಲಿ 'sea ambulances' ಗೆ ಈಗಾಗಲೇ ಟೆಂಡರ್ ಕರೆದಿದ್ದೇವೆ. ಅದು ಇನ್ನು 2-3 ತಿಂಗಳಲ್ಲಿ ಬರಬಹುದು. ಅಂತಹದ್ದನ್ನು 3 ಜಿಲ್ಲೆಗಳಲ್ಲಿ ಮೂರನ್ನು ಇಡಬೇಕಾಗಿದ್ದು, ಮೊದಲಿಗೆ ಈಗ ಒಂದನ್ನು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಂದಿದ್ದೇವೆ. ಇದನ್ನು ಎಲ್ಲಿಯಾದರೂ ಸೆಂಟರ್ ಪ್ಲೆಸ್‌ನಲ್ಲಿಟ್ಟು ಪರಿಶೀಲಿಸಿದ ಮೇಲೆ ಅದರ ಫಲಿತಾಂಶ ಗೊತ್ತಾಗುತ್ತದೆ. ಅದು ಸರಿಯಾಗಿ ಮತ್ತೆ ಬೇಕೆಂದರೆ ಮತ್ತೆ ಎರಡನ್ನು ಕೊಡಲಿಕ್ಕೂ ಸಿದ್ಧರಿದ್ದೇವೆ. ಸರ್ಕಾರದಿಂದ ಯಾವುದೇ ರೀತಿಯ ತೊಂದರೆ ಇಲ್ಲ.

ಶ್ರೀ ತಿಪ್ಪಣ್ಣಪ್ಪ ಕಮಕನೂರ(ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೆ, ಡ್ರೋಣ್ ಕ್ಯಾಮೆರಾ ವಿಚಾರ ಬಹಳ ಗಂಭೀರವಾದ ವಿಚಾರವೆಂದು ಪರಿಗಣಿಸಿ, ಮಾನ್ಯ ಸಚಿವರಿಗೆ ಮತ್ತು ಸರ್ಕಾರಕ್ಕೆ ಸೂಚನೆಯನ್ನು ಕೊಡಬೇಕು. ಉಡುಪಿ ಜಿಲ್ಲೆಯ ಕಾಪು ಸಮುದ್ರದಲ್ಲಿ ಕಳೆದ ಜನವರಿ 30 ರಂದು ಬೆಳಗ್ಗೆ 5 ರ ಸುಮಾರಿಗೆ ದರೋಡೆಕೋರರ ತಂಡವೊಂದು ಆಳಕಡಲ್ ಬೋಟ್‌ವೊಂದರ ಮೇಲೆ ಧಾಳಿ ನಡೆಸಿತ್ತು. ಆ ವೇಳೆ 6 ಮಂದಿ ಮೀನುಗಾರರಿಗೆ ಹಲ್ಲೆಗೈದು 4 ಮೊಬೈಲ್ ಫೋನ್‌ಗಳು ಹಾಗೂ ಲಕ್ಷಾಂತರ ರೂಪಾಯಿಗಳ ಮೌಲ್ಯ ಬೆಲೆ ಬಾಳುವ 4 ಬಾಕ್ಸ್‌ಗಳಲ್ಲಿದ್ದ ಮೀನುಗಳನ್ನು ತೆಗೆದುಕೊಂಡಿರುತ್ತಾರೆ. ಮೀನುಗಾರ ಕೂಲಿ ಕಾರ್ಮಿಕರು ತಮ್ಮ ಜೀವನ ನಿರ್ವಹಣೆಗಾಗಿ ಬವಣೆ ಪಡುತ್ತಿದ್ದು, ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರವು ಕರಾವಳಿ ತೀರದ ಈ ಬಡಪಾಯಿ ಮೀನುಗಾರರ ಕಷ್ಟವನ್ನು ತಪ್ಪಿಸಲಿಕ್ಕೆ ಕ್ರಮ ತೆಗೆದುಕೊಳ್ಳಬೇಕು. ಮುಖ್ಯವಾಗಿ ಮೀನುಗಾರರಿಗೆ life jackets ಅನ್ನು ಒದಗಿಸಿರುವುದಿಲ್ಲ. ಹಾಗೆಯೇ, ಅವರಿಗೆ life jackets ಅನ್ನು ಒದಗಿಸುವಲ್ಲಿ ಸರ್ಕಾರ ಕ್ರಮಕೈಗೊಳಬೇಕು. 49 ಪ್ರಕರಣಗಳಲ್ಲಿ ಮೀನುಗಾರರು ಮೃತರಾಗಿದ್ದು, ಆ ಪೈಕಿ 29 ಮೃತ ಕುಟುಂಬಗಳಿಗೆ ಇನ್ನೂ ಪರಿಹಾರಧನವನ್ನು ವಿತರಿಸಿರುವುದಿಲ್ಲ. ಆದ್ದರಿಂದ, ಇವರಿಗೆ ಪರಿಹಾರಧನವನ್ನು ಕೊಡುವಂತಹ ಕೆಲಸವನ್ನು ಅದೇ ಸಮುದಾಯದವರಾದ ಮಂತ್ರಿಗಳು ಮಾಡಬೇಕು. ಮಾನ್ಯ ಮಂತ್ರಿಗಳಿಗೆ ನನಗಿಂತ ಹೆಚ್ಚಿನ ಅನುಭವ ಇದ್ದು, ಈ ನಿಟ್ಟಿನಲ್ಲಿ ಕೆಲಸ ಮಾಡಬೇಕು. ತಾವು ನೇರವಾಗಿ ಮುಖ್ಯಮಂತ್ರಿಗಳ ಹತ್ತಿರ ಹೋಗಿ ಈ ಪರಿಹಾರ ಧನದ ವಿಚಾರವಾಗಿ ಅವರಿಂದ ಬರೆಯಿಸಬೇಕು. ಆಗ ಮಾತ್ರ ಕೆಲಸವಾಗುತ್ತದೆ. ಸುಮ್ಮನೆ ಇದ್ದರೆ ಬೇಗ ಈ ಕೆಲಸವನ್ನು ಮಾಡುವುದಿಲ್ಲ. ಅದಕ್ಕಾಗಿ, 29 ಮೃತ ಕುಟುಂಬಗಳಿಗಾಗಿ ಇನ್ನೂ ಪರಿಹಾರಧನವನ್ನು ವಿತರಿಸಿರುವುದಿಲ್ಲ. ಈ ಪರಿಹಾರ ಮೊತ್ತವನ್ನು ಕೊಡುವಲ್ಲಿ ತಕ್ಷಣ ಕ್ರಮ ಕೈಗೊಳ್ಳಬೇಕೆಂದು ಮಾನ್ಯ ಸಭಾಪತಿಯವರ ಮೂಲಕ ಮಂತ್ರಿಗಳಿಗೆ ಮನವಿ ಮಾಡುತ್ತೇನೆ.

ಶ್ರೀ ಮಂಕಾಳ ಎಸ್.ವೈದ್ಯ (ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು):- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು 29 ಮೃತ ಕುಟುಂಬಗಳಿಗೆ ಪರಿಹಾರಧನವನ್ನು ಕೊಡುವುದು ಬಾಕಿ ಇದೆ ಎಂದು ಏನು ಹೇಳುತ್ತಿದ್ದಾರೆ, ಅದು ಈ ಎರಡು ವರ್ಷದಲ್ಲಿ ಆಗಿರುವಂತಹದ್ದಲ್ಲ. ನಾವು ಬಂದ ಮೇಲೆ ಆಗಿರುವುದನ್ನು ಪೂರ್ಣವಾಗಿ ಕೊಟ್ಟಿದ್ದೇವೆ. ಮತ್ತೆ ಪುನಃ 6 ವರ್ಷದ್ದು ಒಟ್ಟಾರೆ ಏನು ಬಾಕಿ ಇದೆ, ಅದಕ್ಕೆ ಕೆಲವರು ದಾಖಲೆಗಳನ್ನು ಕೊಡಲಿಲ್ಲ. ಅದಕ್ಕೂ ಪೂರ್ವದಲ್ಲಿ ಹಿಂದೆ ಏನಿತ್ತು ಎಂದರೆ ಮೃತದೇಹ ಸಿಗಲಿಲ್ಲವೆಂದರೆ ಅವರಿಗೆ ಪರಿಹಾರ ಕೊಡುವುದಿಲ್ಲವೆಂದು ಇತ್ತು. ಆದರೆ, ನಾವು ಈಗ ಅದನ್ನು ಕೊಡುವಂತೆ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿದ್ದೇವೆ. ಇಲ್ಲವೆಂದರೆ 7 ವರ್ಷಗಳು ಕಾಯಬೇಕಾಗಿತ್ತು. 7 ವರ್ಷಗಳವರೆಗೆ ಕಾಯಲಿಕ್ಕೆ ಆಗುವುದಿಲ್ಲ. ಏಕೆಂದರೆ, ಅವರಿಗೆ ಮಕ್ಕಳು ಇರುತ್ತಾರೆ. ಅ ಮಕ್ಕಳ ಶಿಕ್ಷಣಕ್ಕೆ ತೊಂದರೆಯಾಗಬಾರದು, ಅವರು ಬಡವರು ಇರುತ್ತಾರೆಂದು ಹೇಳಿ ಕೊಡುವಂತಹದ್ದನ್ನು ಮಾಡಿದ್ದೇನೆ. ಬಾಕಿ 29 ಮೃತ ಕುಟುಂಬಗಳು ಏನಿವೆ, ಅವರುಗಳಿಗೆ ಪೂರ್ಣವಾಗಿ ಕೊಡುವಂತಹ ಕೆಲಸ ಮಾಡುತ್ತೇವೆ. ಅದರಲ್ಲಿ ಯಾವುದೇ ವ್ಯತ್ಯಾಸ ಆಗುವುದಿಲ್ಲ.

ಸಭಾಪತಿಯವರು:– ಶ್ರೀಯುತ ತಳವಾರ ಸಾಬಣ್ಣನವರೆ, ನಿಮ್ಮ ಪ್ರಶ್ನೆಗೆ ಸಂಬಂಧಪಟ್ಟಂತೆ ಮಂತ್ರಿಗಳು ಬರಲಿಕ್ಕೆ ಆಗುವುದಿಲ್ಲವೆಂದು ಹೇಳಿ ನನ್ನ ಅನುಮತಿಯನ್ನು ಪಡೆದಿರುತ್ತಾರೆ. ಅವರ ಪರವಾಗಿ ಮಾನ್ಯ ಉನ್ನತ ಶಿಕ್ಷಣ ಸಚಿವರು ಉತ್ತರಿಸುತ್ತಾರೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಶ್ನೆ ಸಂಖ್ಯೆ 310

ಪರಿಶಿಷ್ಟ ಜಾತಿ/ ಪಂಗಡ ಮತ್ತು ಪ್ರವರ್ಗ-1ರಲ್ಲಿರುವ ಅಲೆಮಾರಿ ಸಮುದಾಯಗಳಿಗೆ ನೀಡಿರುವ ವಸತಿ ಸೌಕರ್ಯ ಕುರಿತು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಪರಿಶಿಷ್ಟ ಜಾತಿ/ಪಂಗಡ ಮತ್ತು ಪ್ರವರ್ಗ-1ರಲ್ಲಿ ಬರುವ ಅಲೆಮಾರಿ ಸಮುದಾಯಗಳಿಗೆ ವಿವಿಧ ವಸತಿ ಯೋಜನೆಗಳ ಅನ್ವಯ ಇಲ್ಲಿಯವರೆಗೆ ಎಷ್ಟು ವಸತಿಗಳನ್ನು ಒದಗಿಸಲಾಗಿದೆ;(ವಿವರ ನೀಡುವುದು).</td><td>ರಾಜೀವ್ ಗಾಂಧಿ ವಸತಿ ನಿಗಮದಿಂದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ-1ರಲ್ಲಿ ಬರುವ ಅಲೆಮಾರಿ ಸಮುದಾಯದ ಫಲಾನುಭವಿಗಳಿಗೆ ದೇವರಾಜ ಅರಸು ವಸತಿ ಯೋಜನೆಯಡಿ ಮನೆಗಳನ್ನು ಮಂಜೂರು ಮಾಡಲಾಗುತ್ತಿದೆ. ಅಲ್ಲದೇ ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದಿಂದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಅಲೆಮಾರಿ ಸಮುದಾಯಗಳಿಗೆ ವಸತಿ ಸೌಕರ್ಯ ಕಲ್ಪಿಸಲಾಗುತ್ತಿದೆ. 2010-11ನೇ ಸಾಲಿನಿಂದ ಈವರೆವಿಗೂ ಮಂಜೂರಾದ ಮನೆಗಳ ವಿವರ ಈ ಕೆಳಗಿನಂತಿದೆ.
<table>
<tr><th>ಕ್ರ. ಸಂ.</th><th>ಯೋಜನೆ ಮತ್ತು ಇಲಾಖೆ</th><th>ಮಂಜೂರಾದ ಮನೆಗಳ ವಿವರ</th></tr>
<tr><td>01</td><td>ರಾಜೀವ್ ಗಾಂಧಿ ವಸತಿ ನಿಗಮದ ದೇವರಾಜ ಅರಸು ವಸತಿ ಯೋಜನೆ ಯಲ್ಲಿ ಪರಿಶಿಷ್ಟ ಜಾತಿ/ಪಂಗಡದ ಅಲೆಮಾರಿಗಳಿಗೆ</td><td>684</td></tr>
<tr><td>02</td><td>ರಾಜೀವ್ ಗಾಂಧಿ ವಸತಿ ನಿಗಮದ ದೇವರಾಜ ಅರಸು ವಸತಿ ಯೋಜನೆ ಪ್ರವರ್ಗ-1 ರ ಅಲೆಮಾರಿಗಳಿಗೆ</td><td>36,195</td></tr>
<tr><td rowspan="2">03</td><td rowspan="2">ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಲೆಮಾರಿ ಸಮುದಾಯಗಳ ಅಭಿವೃದ್ಧಿ ನಿಗಮದಲ್ಲಿನ ವಸತಿ ಯೋಜನೆ</td><td>ಎಸ್.ಸಿ.- 5,021</td></tr>
<tr><td>ಎಸ್.ಟಿ.-995</td></tr>
<tr><td>04</td><td>ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿನ ವಸತಿ ಯೋಜನೆ</td><td>10,860</td></tr>
<tr><td colspan="2">ಒಟ್ಟು</td><td>53,755</td></tr>
</table>
</td></tr>
<tr><td>ಆ)</td><td>ಅಲೆಮಾರಿ ಸಮುದಾಯದವರು ಬಯಲು ಪ್ರದೇಶಗಳಲ್ಲಿ/ಕೊಳಚೆ ಪ್ರದೇಶಗಳಲ್ಲಿ ಯಾವುದೇ ಮೂಲಭೂತ ಸೌಕರ್ಯಗಳಿಲ್ಲದೆ ವಸತಿ ರಹಿತರಾಗಿ ಜೀವನ</td><td>ಮೇಲಿನಂತೆ ರಾಜೀವ್ ಗಾಂಧಿ ವಸತಿ ನಿಗಮದಿಂದ ವಸತಿ ಸೌಕರ್ಯ ಕಲ್ಪಿಸಲಾಗುತ್ತಿದ್ದು, ಸದರಿ ಯೋಜನೆಗಳಡಿ ಮಂಜೂರು ಮಾಡಲಾದ ಮನೆಗಳಿಗೆ ಅವರು ಹೊಂದಿದ ನಿವೇಶನಗಳಿಗೆ ಗ್ರಾಮೀಣ ಪ್ರದೇಶದಲ್ಲಿ ಗ್ರಾಮ ಪಂಚಾಯತಿ ಮತ್ತು ನಗರ ಪ್ರದೇಶದಲ್ಲಿ ಸ್ಥಳೀಯ ಸಂಸ್ಥೆಗಳ ಮೂಲಕ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುತ್ತಿದೆ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ 2025-26ನೇ ಸಾಲಿನ ಆಯವ್ಯಯ ಕಂಡಿಕೆ-206ರ ಘೋಷಣೆಯಲ್ಲಿ</td></tr>
</table>

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

	ನಡೆಸುತ್ತಿರುವುದಕ್ಕೆ ಪರಿಹಾರವಾಗಿ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ;	ಅಲೆಮಾರಿ ಮತ್ತು ಅರೆ ಅಲೆಮಾರಿ ಜನಾಂಗದವರ ಕಾಲೋನಿಗಳ ಸಮಗ್ರ ಅಭಿವೃದ್ಧಿಗಾಗಿ ರೂ.100.00ಕೋಟಿಗಳ ಅನುದಾನವನ್ನು ಒದಗಿಸಲಾಗುವುದೆಂದು ಘೋಷಿಸಲಾಗಿರುತ್ತದೆ. ಅದರಂತೆ ಸರ್ಕಾರದ ಆದೇಶ ಸಂಖ್ಯೆ: ಬಿಸಿಡಬ್ಲ್ಯೂ 602 ಬಿಎಂಎಸ್ 2025, ದಿನಾಂಕ:31.07.2025ನ್ನು ಹೊರಡಿಸಿದ್ದು, ಸದರಿ ಆದೇಶದಲ್ಲಿ ಪ್ರಸಕ್ತ ಸಾಲಿನಲ್ಲಿ ರೂ.30.00ಕೋಟಿ ಅನುದಾನ ಒದಗಿಸಿದ್ದು, ಒದಗಿಸಿರುವ ಅನುದಾನಕ್ಕೆ ಸೀಮಿತವಾಗಿ ಅಲೆಮಾರಿ/ಅರೆಅಲೆಮಾರಿ ಕಾಲೋನಿಗಳಿಗೆ ಮೂಲಭೂತ ಸೌಕರ್ಯ ಕಲ್ಪಿಸಲು ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಕ್ರಮವಹಿಸಲಾಗುತ್ತಿದೆ ಎಂದು ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರು ಪತ್ರ ಸಂಖ್ಯೆ:ಹಿಂವಕಇ/ಸ-09/ವಿಪ/ಸಿಆರ್-01/2025-26, ದಿನಾಂಕ: 05.08.2025 ರಲ್ಲಿ ವ್ಯವಸ್ಥಾಪಕ ನಿರ್ದೇಶಕರು, ರಾಜೀವ್ ಗಾಂಧಿ ವಸತಿ ನಿಗಮ ಇವರಿಗೆ ತಿಳಿಸಿರುತ್ತಾರೆ.
ಇ)	ಅಲೆಮಾರಿ ಸಮುದಾಯದವರು ಅವರ ಸಾಂಪ್ರದಾಯಿಕ ಉದ್ಯೋಗಗಳು ಇಲ್ಲದೆ ತೀರ ಬಡತನದ ಜೀವನ ನಡೆಸುತ್ತಿರುವುದರಿಂದ ಮತ್ತು ಮನೆ ಕಟ್ಟಿಕೊಳ್ಳಲು ಜಾಗ ಹಾಗೂ ಹಣವಿಲ್ಲದ ಕಾರಣ ಅವರಿಗೆ ವಸತಿ ಹಂಚಿಕೆಯಲ್ಲಿ ಆದ್ಯತೆ ನೀಡಲಾಗುತ್ತಿದೆಯೇ;	ರಾಜೀವ್ ಗಾಂಧಿ ವಸತಿ ನಿಗಮದಿಂದ ನಿವೇಶನ ರಹಿತರಿಗೆ ನಿವೇಶನ ಕಲ್ಪಿಸಲು ಮುಖ್ಯ ಮಂತ್ರಿಗಳ ಗ್ರಾಮೀಣ ಮತ್ತು ನಗರ ನಿವೇಶನ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಜಿಲ್ಲೆಗಳಲ್ಲಿ ವಸತಿಗೆ ಯೋಗ್ಯ ಸರ್ಕಾರಿ ಜಮೀನು ಲಭ್ಯವಿಲ್ಲದಿದ್ದಲ್ಲಿ ಖಾಸಗಿ ಜಮೀನನ್ನು ಖರೀದಿಸಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಜಮೀನು ಖರೀದಿ ಸಮಿತಿ ಇದ್ದು, ಸದರಿ ಸಮಿತಿ ಮೂಲಕ ನಿವೇಶನಕ್ಕೆ ಯೋಗ್ಯವಾದ ಖಾಸಗಿ ಜಮೀನನ್ನು ಗುರುತಿಸಿ ನಿಗಮಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದಲ್ಲಿ ಜಮೀನು ಖರೀದಿಸಲು ನಿಗಮದಿಂದ ಅನುದಾನ ಬಿಡುಗಡೆ ಮಾಡಲಾಗುತ್ತದೆ. ವಸತಿ ರಹಿತರಿಗೆ ವಸತಿ ಸೌಕರ್ಯ ಕಲ್ಪಿಸಲು ರಾಜೀವ್ ಗಾಂಧಿ ವಸತಿ ನಿಗಮದಿಂದ ದೇವರಾಜ ಅರಸು ವಸತಿ ಯೋಜನೆಯಡಿ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಹಾಗೂ ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದಿಂದ 2010-11ನೇ ಸಾಲಿನಿಂದ ಒಟ್ಟು **53,755** ಮನೆಗಳನ್ನು ಮಂಜೂರು ಮಾಡಲಾಗಿದೆ. ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದಿಂದ ಸದರಿ ಅಲೆಮಾರಿ ಸಮುದಾಯದ ವಸತಿ ರಹಿತ ಫಲಾನುಭವಿಗಳ ಸರ್ವೆ ನಡೆಸಿ ಅವರಿಗೆ ಆದ್ಯತೆ ಮೇಲೆ ವಸತಿ ಸೌಲಭ್ಯ ನೀಡಲು 2025-26ನೇ ಸಾಲಿನಲ್ಲಿ ಹೆಚ್ಚುವರಿ ಗುರಿ ನೀಡಲು ಸಮಾಜ ಕಲ್ಯಾಣ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮ ಇವರ ಪತ್ರ ಸಂಖ್ಯೆ:ಕ.ಪ.ಜಾ/ಪ/ಪಂ.ಅಅನಿ/ವಿ.ಪ,ಪ್ರಶ್ನಾವಳಿ:2025-26/1847, ದಿನಾಂಕ:04.08.2025(4)ರಲ್ಲಿ ವ್ಯವಸ್ಥಾಪಕ ನಿರ್ದೇಶಕರು, ರಾಜೀವ್ ಗಾಂಧಿ ವಸತಿ ನಿಗಮ ಇವರಿಗೆ ತಿಳಿಸಿರುತ್ತಾರೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ)	ಅಲೆಮಾರಿ ಸಮುದಾಯದವರ ವಸತಿ ಸಮಸ್ಯೆಯನ್ನು ಬಗೆಹರಿಸಿ ಇವರಿಗೆ ಇಷ್ಟು ವಸತಿಗಳು ಎಂದು ಮೀಸಲಿಟ್ಟು ಅವರಿಗೆ ಆದ್ಯತೆ ನೀಡಲು ಸರ್ಕಾರ ನೀತಿ ನಿರೂಪಿಸಿ ತಕ್ಷಣವೇ ಕ್ರಮ ಕೈಗೊಳ್ಳುವುದೇ?.	ಅಲೆಮಾರಿ ಸಮುದಾಯದ ಫಲಾನುಭವಿಗಳನ್ನು ಒಳಗೊಂಡಂತೆ 14 ವಿಶೇಷ ವರ್ಗಕ್ಕೆ ಸೇರಿದ ಫಲಾನುಭವಿಗಳಿಗೆ ವಸತಿ ಸೌಕರ್ಯ ಕಲ್ಪಿಸಲು ರಾಜೀವ್ ಗಾಂಧಿ ವಸತಿ ನಿಗಮದಲ್ಲಿ ದೇವರಾಜ ಅರಸು ವಸತಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಸದರಿ ಯೋಜನೆಯಡಿ ಪ್ರತಿ ವರ್ಷ ಆಯವ್ಯಯದಲ್ಲಿ ಒದಗಿಸಲಾಗುವ ಅನುದಾನಕ್ಕೆ ಅನುಗುಣವಾಗಿ ಗುರಿ ನಿಗಧಿಪಡಿಸಿ ವಸತಿ ಸೌಕರ್ಯ ಕಲ್ಪಿಸಲಾಗುತ್ತಿದೆ. ಅಲ್ಲದೇ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಹಿಂದಿನ ಶ್ರೇಣಿಗಳಡಿ ರಾಜೀವ್ ಗಾಂಧಿ ವಸತಿ ನಿಗಮಕ್ಕೆ ಬಿಡುಗಡೆ ಮಾಡಲಾದ ಅನುದಾನದಲ್ಲಿ ಬಾಕಿ ಇರುವ ಅನುದಾನಕ್ಕೆ ಅನುಗುಣವಾಗಿ 2022-23ನೇ ಸಾಲಿನಲ್ಲಿ ಒಟ್ಟು 6141 ಮನೆಗಳ ಜಿಲ್ಲಾವಾರು ಗುರಿ ನಿಗಧಿಪಡಿಸಲಾಗಿರುತ್ತದೆ. ಫಲಾನುಭವಿಗಳ ಆಯ್ಕೆ ಮತ್ತು ಅನುಮೋದನೆಯನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ನೀಡಲಾಗುತ್ತಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಪತ್ರ ಸಂಖ್ಯೆ:ಹಿಂವಕಇ/ಸ-09/ವಿಪ/ಸಿಆರ್-01/2025-26, ದಿನಾಂಕ:05.08.2025ರಲ್ಲಿ ತಿಳಿಸಲಾಗಿರುತ್ತದೆ. ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದಿಂದ ವಸತಿ ರಹಿತ ಅಲೆಮಾರಿ ಸಮುದಾಯದ ಫಲಾನುಭವಿಗಳ ಸರ್ವೆ ನಡೆಸಿ ಅವರಿಗೆ ಪ್ರತ್ಯೇಕವಾಗಿ ಗುರಿ ನಿಗಧಿಪಡಿಸಿ ವಸತಿ ಸೌಲಭ್ಯ ನೀಡಲು ಕ್ರಮವಹಿಸಲಾಗುತ್ತಿದೆ ಎಂದು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮ. ಇವರ ಪತ್ರ ಸಂಖ್ಯೆ:ಕ.ಪ.ಜಾ/ಪ/ಪಂ.ಅಅನಿ/ವಿ.ಪ,ಪ್ರಶ್ನಾವಳಿ:2025-26/1847, ದಿನಾಂಕ:04.08.2025(4)ರಲ್ಲಿ ತಿಳಿಸಲಾಗಿರುತ್ತದೆ. ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದಿಂದ ಸದರಿ ಅಲೆಮಾರಿ ಸಮುದಾಯದವರಿಗೆ 11,525 ಮನೆಗಳ ಗುರಿಯನ್ನು ಮೀಸಲಿಟ್ಟು, ಆದ್ಯತೆ ಮೇರೆಗೆ ವಸತಿ ಸೌಕರ್ಯ ಕಲ್ಪಿಸಲಾಗುತ್ತಿದೆ. 2017-18, 2020-21 ಮತ್ತು 2021-22ನೇ ಸಾಲಿನಲ್ಲಿ 6,016 ಫಲಾನುಭವಿಗಳನ್ನು ಆಯ್ಕೆಗೊಳಿಸಿ ವಸತಿ ಸೌಕರ್ಯ ಕಲ್ಪಿಸಲಾಗಿದೆ.

ಡಾ॥ ತಳವಾರ್ ಸಾಬಣ್ಣ (ನಾಮ ನಿರ್ದೇಶನ ಹೊಂದಿದವರು):- ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಬಹಳ ವಿವರವಾದಂತಹ ಉತ್ತರವನ್ನು ಕೊಟ್ಟಿದ್ದಾರೆ. ಆದರೆ, ಒಂದು ವೇಳೆ ಈ ಉತ್ತರಕ್ಕೆ ತಕ್ಕಹಾಗೆ ವಾಸ್ತವ ಸ್ಥಿತಿಯಾಗಿದ್ದರೆ ನಾನು ಈ ಪ್ರಶ್ನೆಯನ್ನು ಕೇಳುವಂತಹ ಸಮಸ್ಯೆ ಬರುತ್ತಿರಲಿಲ್ಲ. ಏಕೆಂದರೆ ನಾನು ಈ ಸಮಸ್ಯೆಯನ್ನು ಪರಿಷತ್ತಿನಲ್ಲಿ ಚರ್ಚೆ ಮಾಡಬೇಕೆಂದು ಸುಮಾರು 4 ವರ್ಷಗಳಿಂದ ಕಾಯುತ್ತಿದ್ದೇನೆ. ಅದೃಷ್ಟವಶಾತ್ ತಮ್ಮ ಕೃಪೆಯಿಂದ ಈ ಒಂದು ಅವಕಾಶ ಸಿಕ್ಕಿದೆ. ಆದ್ದರಿಂದ, ಇದನ್ನು ಚರ್ಚೆ ಮಾಡಲು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಾವು 5 ನಿಮಿಷಗಳ ಕಾಲ ಹೆಚ್ಚು ಅವಕಾಶವನ್ನು ಕೊಟ್ಟರೆ ಮತ್ತೊಷ್ಟು ಉಪಕಾರ ಮಾಡಿದಂತಾಗುತ್ತದೆ. ಏಕೆಂದರೆ, ಇದು ಬಹಳ ಗಂಭೀರವಾದ ವಿಚಾರವಾಗಿದ್ದು, ಅಲೆಮಾರಿ ಜನಾಂಗಕ್ಕೆ ಸಂಬಂಧಪಟ್ಟಿದ್ದಾಗಿದೆ. ನರಕಕ್ಕಿಂತ ಹೆಚ್ಚು ಕನಿಷ್ಠ ಜೀವನ ನಡೆಸುವಂತಹ ಅಲೆಮಾರಿ ಸಮಾಜಕ್ಕೆ ಸಂಬಂಧಪಟ್ಟಿದ್ದಾಗಿರುತ್ತದೆ. 50,000 ಮನೆಗಳನ್ನು ಕಟ್ಟಲಾಗಿದೆ ಎಂದು ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಒಂದು ವೇಳೆ ಆ ರೀತಿಯಲ್ಲಿ 50,000 ಮನೆಗಳನ್ನು ಕಟ್ಟಿದ್ದರೆ ಇವತ್ತು ಗುಡಿಸಲು ಮನೆಗಳಲ್ಲಿ ಪ್ಲಾಸ್ಟಿಕ್ ಹೊದಿಸುವಂತಹ ಮತ್ತು ಕಾಡುಪತ್ರೆ ಹಾಕಿಕೊಂಡಿರುವಂತಹ ಈ ಗುಡಿಸಲು ಮನೆಗಳಲ್ಲಿ ಸಾವಿರಾರು ಜನರು ಏತಕ್ಕೆ ಬದುಕುತ್ತಿದ್ದಾರೆ? ಏಕೆಂದರೆ, ಈ ಅಲೆಮಾರಿ ಜನಾಂಗ ಅವರುಗಳು ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗುತ್ತಾರೆ. ನಿರ್ದಿಷ್ಟವಾದ ಪ್ರದೇಶಕ್ಕೆ ಅವರುಗಳು ಸಿಮೀತವಾಗಿರುವುದಿಲ್ಲ. ಮತ್ತೆ ಇವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದಲ್ಲಿ ಮತ್ತು ಪ್ರವರ್ಗದಲ್ಲಿ ಇವರನ್ನು ಸೇರಿಸಲಾಗಿದೆ. ಅವರು ಬಡವರು ಇದ್ದಾರೆ. ಸಂಪ್ರದಾಯಕವಾಗಿ ಇರುವಂತಹ ಯಾವುದೇ ಉದ್ಯೋಗ ಇರುವುದಿಲ್ಲ. ಅವರು ಇವತ್ತು ಪ್ಲಾಸ್ಟಿಕ್ ಬಿಂದಿಗೆಗಳನ್ನು ಹಾಗೂ ರಿಬ್ಬನ್ ಇತ್ಯಾದಿ ಮಾರಿಕೊಂಡು ಜೀವನ ಮಾಡುತ್ತಿರುವುದು ತಮಗೆಲ್ಲಾ ಗೊತ್ತಿದೆ. ತಮ್ಮ ಜಿಲ್ಲೆಯಲ್ಲಿಯೂ ಸಹ ಸಾಕಷ್ಟು ಜನರು ಇದ್ದಾರೆ. ಇವರು ಕಡುಬಡತನದಲ್ಲಿಯೇ ಇದ್ದಾರೆ. ಅವರು ನರಕಕ್ಕಿಂತಲೂ ಕನಿಷ್ಠ ಮಟ್ಟದಲ್ಲಿ ಜೀವನ ನಡೆಸುತ್ತಿದ್ದಾರೆ. ಅವರುಗಳಿಗೆ ಸ್ವಂತ ಮನೆ ಇರುವುದಿಲ್ಲ. ಆಧಾರ್ ಕಾರ್ಡ್ ಇರುವುದಿಲ್ಲ. ಅವರಿಗೆ ಎಲ್ಲಿಯೂ ನೆಲೆ ಇರುವುದಿಲ್ಲ. ಅವರಿಗೆ ಶಿಕ್ಷಣವೇ ಇರುವುದಿಲ್ಲ. ಅವರು ಬದುಕಬೇಕಾದರೆ ಬಹಳ ಗಂಭೀರವಾದಂತಹ ಪರಿಸ್ಥಿತಿ ಇದೆ. ಈ ನಿಟ್ಟಿನಲ್ಲಿ ಅವರುಗಳಿಗೆ ವಸತಿ ಕೊಡುವಲ್ಲಿ ಆದ್ಯತೆಯನ್ನು ಕೊಡಬೇಕೆನ್ನುವುದು ನನ್ನ ಮುಖ್ಯವಾದ ಪ್ರಶ್ನೆಯಾಗಿದೆ. ಇದಕ್ಕೆ ಮಾನ್ಯ ಸಚಿವರು ಏನು ಉತ್ತರ ಕೊಡುತ್ತಾರೆಂದು ನೋಡಿಕೊಂಡು ನಾನು ಅವರಿಗೆ ಈ ನಿಟ್ಟಿನಲ್ಲಿ ಪೂರಕವಾದ ಮಾಹಿತಿಯನ್ನು ಕೊಡುತ್ತೇನೆ.

ಡಾ॥ ಎಂ.ಸಿ.ಸುಧಾಕರ್(ಉನ್ನತ ಶಿಕ್ಷಣ ಸಚಿವರು)(ವಸತಿ ಸಚಿವರ ಪರವಾಗಿ):- ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಿಗೆ ಈ ಪ್ರಶ್ನೆಗೆ ಸಂಬಂಧಿಸಿದಂತೆ ಏನು ಮಾಹಿತಿಯನ್ನು ಕೊಡಬೇಕಾಗಿದೆಯೋ ಅದನ್ನು ನಾವು ಕೊಟ್ಟಿದ್ದೇವೆ. ಸುಮಾರು 2010-11ನೇ ಸಾಲಿನಿಂದ ಸುಮಾರು 53,755 ಮನೆಗಳು ಮಂಜೂರಾಗಿದ್ದು, ಅದರಲ್ಲಿ ಸುಮಾರು 15,878 ಮನೆಗಳು ಬ್ಲಾಕ್ ಆಗಿವೆ. ಏಕೆಂದರೆ, ಅವರು ಮನೆಗಳನ್ನು ನಿರ್ಮಾಣ ಮಾಡಿಲ್ಲವೆಂದು ಹೇಳಿ ಅವುಗಳನ್ನು ಬ್ಲಾಕ್ ಮಾಡಿದ್ದಾರೆ. ಮತ್ತೆ ಅವುಗಳನ್ನು ಸರ್ಕಾರದ ಹಂತದಲ್ಲಿ ಅದೇ ವರ್ಗದವರಿಗೆ ಅಂದರೆ nomadic and seminomadic tribes ಗೆ ಮರು ಹಂಚಿಕೆ ಮಾಡುವಂತಹದ್ದಕ್ಕೆ ಒಂದು ತೀರ್ಮಾನವನ್ನು ತೆಗೆದುಕೊಂಡು ಈಗಾಗಲೇ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಇದರ ಜೊತೆಗೆ ಎಲ್ಲೆಲ್ಲಿ ಈಗ ಇದಕ್ಕೆ ಭೂಮಿ ಬೇಕಾಗಿದೆ. ಅದಕ್ಕೆ ಸಂಬಂಧಪಟ್ಟಂತೆ ಈಗ ಸರ್ಕಾರದಲ್ಲಿ ಬೆಲೆ ನಿಗದಿಯಾಗಿತ್ತು. ಏನು ನಗರ ಪ್ರದೇಶದಲ್ಲಿ ಎಷ್ಟು ದರ, ಗ್ರಾಮೀಣ ಪ್ರದೇಶದಲ್ಲಿ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಷ್ಟು ಬೆಲೆ ಕೊಡಬೇಕೆಂದು ಹೇಳಿ, ಜಮೀನು ಖರೀದಿ ಮಾಡಲಿಕ್ಕೆ ಇವತ್ತಿನ ವಾಸ್ತವಿಕ ಬೆಲೆಗೆ ಅನುಗುಣವಾಗಿ ಅಲ್ಲಿ ಭೂಮಿ ಲಭ್ಯತೆ ಇರುವುದಿಲ್ಲ. ಅದನ್ನೂ ಕೂಡ ಇವತ್ತು ಸರ್ಕಾರ ಪರಿಶೀಲನೆ ಮಾಡುತ್ತಿದೆ. ಏನು ಬೆಲೆಯನ್ನು ನಿಗದಿ ಮಾಡಿದ್ದಾರೆಂದರೆ ಈಗ ಗ್ರಾಮೀಣ ಪ್ರದೇಶದಲ್ಲಿ ಒಂದು ಎಕರೆ ಜಮೀನು ತೆಗೆದುಕೊಳ್ಳಲು ಸುಮಾರು 9,00,000 ರೂಪಾಯಿಗಳು ಗರಿಷ್ಠ ಎಂದು ಇದೆ. ನಗರ ಅದರಲ್ಲೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸುಮಾರು 75,00,000 ರೂಪಾಯಿಗಳು ಇದೆ. ವಾಸ್ತವಿಕವಾಗಿ ನಾನು ಎಲ್ಲವನ್ನು ಹೇಳಲಿಕ್ಕೆ ಹೋಗುವುದಿಲ್ಲ. ಪ್ರತಿಯೊಂದಕ್ಕೂ ಬೆಲೆ ಇದೆ. ಇದಕ್ಕೂ ಕೂಡ ಪ್ರಸ್ತಾವನೆಯನ್ನು ಕೊಟ್ಟಿದ್ದಾರೆ. ಇದನ್ನು ಹೆಚ್ಚು ಮಾಡಿ, ಭೂಮಿಯನ್ನು ಖರೀದಿ ಮಾಡಿ ಈ ಒಂದು ವರ್ಗದ ಹೆಚ್ಚಿನ ಜನಕ್ಕೆ ವಸತಿಯನ್ನು ಕೊಡಲಿಕ್ಕೆ ಒಂದು ವ್ಯವಸ್ಥೆಯನ್ನು ಮಾಡುತ್ತಿದೆ. ಈಗಾಗಲೇ 2025-26ನೇ ಸಾಲಿನಲ್ಲಿ ಸರ್ಕಾರ ಹಿಂದುಳಿದ ವರ್ಗಗಳ ಇಲಾಖೆ ಮೂಲಕ ಸುಮಾರು ಸುಮಾರು 100 ಕೋಟಿ ರೂಪಾಯಿಗಳ ಅನುದಾನವನ್ನು ಈ ಒಂದು ವಸತಿ ಪ್ರದೇಶಗಳ ಅಭಿವೃದ್ಧಿಗಾಗಿ ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಡುವುದಕ್ಕೆ ಈ ಜನರು ಎಲ್ಲಿ ವಾಸ ಮಾಡುತ್ತಿದ್ದಾರೆ, ಅದಕ್ಕೆ ಸುಮಾರು 100 ಕೋಟಿ ರೂಪಾಯಿಗಳನ್ನು ಆಯವ್ಯಯದಲ್ಲಿ ಒದಗಿಸಿದ್ದು, ಈಗಗಲೇ 30 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಹೀಗಾಗಿ, ಇವತ್ತು ನಾವು ಹಲವಾರು ಕ್ರಮಗಳನ್ನು ತೆಗೆದುಕೊಳ್ಳತಕ್ಕಂತಹ ಕೆಲಸವನ್ನು ಮಾಡುತ್ತಿದ್ದೇವೆ. ಇಲ್ಲಿ ಒಂದು ವ್ಯತ್ಯಾಸ ಇದೆ, ಡಾ॥ ಅಂಬೇಡ್ಕರ್ ಅಭಿವೃದ್ಧಿ ನಿಗಮ ಅಥವಾ ಬೇರೆ ನಿಗಮಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ ಸೇರುವಂತಹ ಈ ಒಂದು ಅಲೆಮಾರಿ ಜನಾಂಗದವರಿಗೆ ಡಾ॥ ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ 2,00,000 ರೂಪಾಯಿಗಳವರೆಗೆ ಸರ್ಕಾರದಿಂದ ಕೊಡತಕ್ಕಂತಹ ಅನುದಾನ ಇತ್ತು. ಅದು ಈಗ 1,50,000 ರೂಪಾಯಿಗಳಿದೆ. ಅದನ್ನು ಕೂಡ ಇವತ್ತು ಹಣಕಾಸು ಇಲಾಖೆಯೊಂದಿಗೆ ಪತ್ರ ವ್ಯವಹಾರವನ್ನು ಮಾಡಿ ಅದನ್ನು 2,00,000 ಗಳಿಗೆ ಹೆಚ್ಚು ಮಾಡಬೇಕೆನ್ನುವ ಉದ್ದೇಶ ಇದೆ. ಆದ್ದರಿಂದ, ಈ ಒಂದು ವರ್ಗದ ಜನಕ್ಕೆ ಇವತ್ತು ಏನು 14 ಅಂಶಗಳ ಅಡಿಯಲ್ಲಿ ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಲ್ಲಿ ವಿಶೇಷವಾಗಿ 14 ಸಮುದಾಯದ ಜನರ ಏನು category ಇದೆ, ಅದರಲ್ಲಿ ಇವರುಗಳು ಸಹ ಬರುತ್ತಾರೆ. ಆದ್ದರಿಂದ, ಇದನ್ನು ಒಟ್ಟಾರೆಯಾಗಿ, ಇದನ್ನು ಗಂಭೀರವಾಗಿ ತೆಗೆದುಕೊಂಡು ಈ ಒಂದು ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳುವಂತಹ ಪ್ರಯತ್ನ ಈ ಒಂದು ಇಲಾಖೆಯಲ್ಲಿ ಆಗುತ್ತಿದೆ.

ಡಾ॥ ತಳವಾರ್ ಸಾಬಣ್ಣ:- ಮಾನ್ಯ ಸಭಾಪತಿಯವರೆ, ಸನ್ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಇಲ್ಲಿ ಸಮಸ್ಯೆ ಏನಿದೆ ಎಂದರೆ ಅಲೆಮಾರಿ ಜನಾಂಗ ಪಟ್ಟಣ ಪ್ರದೇಶಗಳಲ್ಲಿನ ಸರ್ಕಾರಿ ಮತ್ತು ಖಾಸಗಿ ಜಾಗದಲ್ಲಿ ಏಲ್ಲಿ ಗಿಡ-ಗೆಂಟೆಗಳ ಜಾಗ ಇದೆ, ಅಲ್ಲಿ ಅವರುಗಳು ಗುಡಿಸಲುಗಳನ್ನು ಹಾಕಿಕೊಂಡಿರುತ್ತಾರೆ. ಆದರೆ, ಅಲ್ಲಿಗೆ ಕಾರ್ಪೋರೇಷನ್‌ನವರು ಬಂದು ಅವರನ್ನು ಓಡಿಸುತ್ತಾರೆ. ಆಗ ಅವರು ಮತ್ತೊಂದು ಜಾಗಕ್ಕೆ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):- ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆ) ವಿಷಯ: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಉದ್ಯೋಗಾಂಕ್ಷಿಗಳು ಜಾಬ್‌ಕಾರ್ಡ್ ಮಾಡಿಸಲು ಬೆಂಗಳೂರನ್ನೇ ಅವಲಂಬಿಸಿರುವ ಬಗ್ಗೆ.

\- - - -

ಶ್ರೀ ರಾಮೋಜಿ ಗೌಡ (ಪದವೀಧರರ ಕ್ಷೇತ್ರ):- ಮಾನ್ಯ ಸಭಾಪತಿಯವರೇ, 'ವಿಜಯವಾಣಿ' ದಿನಪತ್ರಿಕೆಯಲ್ಲಿ ಪ್ರಕಟಗೊಂಡಿರುವಂತೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವಿದ್ಯಾರ್ಥಿಗಳು, ಉದ್ಯೋಗ ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು, ಜಾಬ್‌ಕಾರ್ಡ್ ಮಾಡಿಸಲು ಬೆಂಗಳೂರನ್ನೇ ಅವಲಂಬಿಸಬೇಕಾಗಿರುತ್ತದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಜಿಲ್ಲಾಡಳಿತ ಭವನ ನಿರ್ಮಾಣಗೊಂಡು 8 ವರ್ಷಗಳೇ ಕಳೆಯುತ್ತಾ ಬಂದಿದ್ದು, ಹಲವು ಇಲಾಖೆಗಳು ಜಿಲ್ಲಾಡಳಿತ ಭವನದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಆದರೆ ಉದ್ಯೋಗ ವಿನಿಮಯ ಕೇಂದ್ರ ಇಲ್ಲದಿರುವುದು ಪದವಿ ಮುಗಿಸಿರುವ ವಿದ್ಯಾರ್ಥಿಗಳ ಪರದಾಟಕ್ಕೆ ಕಾರಣವಾಗಿದೆ. ಜಿಲ್ಲೆಯಲ್ಲಿ ಸಾಕಷ್ಟು ಕೈಗಾರಿಕೆಗಳು ತಲೆ ಎತ್ತಿವೆ. ಅದೇ ರೀತಿ ಸಾವಿರಾರು ಉದ್ಯೋಗಾವಕಾಶಗಳು ಹೆಚ್ಚುತ್ತಿವೆ. ಆದರೆ ಜಿಲ್ಲೆಯ ಉದ್ಯೋಗಾಕಾಂಕ್ಷಿಗಳಿಗೆ ಉದ್ಯೋಗಾವಕಾಶಗಳ ಬಗ್ಗೆ ಸರಿಯಾದ ಮಾರ್ಗದರ್ಶನದ ಕೊರತೆ ಎದುರಾಗಿದೆ. ಅಭ್ಯರ್ಥಿಗಳು ಯಾರನ್ನು ಸಂಪರ್ಕಿಸಿ ಉದ್ಯೋಗದ ಬಗ್ಗೆ ಮಾಹಿತಿ ಪಡೆದುಕೊಳ್ಳಬೇಕು ಎಂಬ ಗೊಂದಲಕ್ಕೆ ಸಿಲುಕಿ, ಮಾರ್ಗದರ್ಶನದ ಕೊರತೆ ಎದುರಿಸುತ್ತಿರುತ್ತಾರೆ. ಮುಖ್ಯವಾಗಿ ಮಾಹಿತಿ ಕೊರತೆಯಿಂದ ಅನೇಕ ಉದ್ಯೋಗಾಕಾಂಕ್ಷಿಗಳಿಗೆ ಉದ್ಯೋಗ ಭಾಗ್ಯವಿಲ್ಲದಂತಾಗಿದೆ. ಜಿಲ್ಲೆಯಲ್ಲಿನ ಕೈಗಾರಿಕಾ ವಲಯಗಳಲ್ಲಿ ಸಾಕಷ್ಟು ಉದ್ಯೋಗವಿದ್ದರೂ ಬೆಂಗಳೂರಿಗೆ ಹೋಗಿ ಬರುವ ಅನಿವಾರ್ಯತೆ ನಿರ್ಮಾಣವಾಗಿದೆ. ಆದ್ದರಿಂದ ಕೂಡಲೇ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಉದ್ಯೋಗ ವಿನಿಮಯ ಕೇಂದ್ರ ಸ್ಥಾಪಿಸಿ ಜಾಬ್ ಕಾರ್ಡ್ ಮಾಡಿಸುವ ಪ್ರಕ್ರಿಯೆಗೆ ಚಾಲನೆ ನೀಡಬೇಕು ಎಂಬುದು ಜಿಲ್ಲೆಯ ಸಾವಿರಾರು ಅಭ್ಯರ್ಥಿಗಳ ಒತ್ತಾಯವಾಗಿದೆ. ಆದ್ದರಿಂದ ಈ ಸಂಬಂಧ ಸರ್ಕಾರವು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಶೂನ್ಯ ವೇಳೆಯಲ್ಲಿ ಒತ್ತಾಯಿಸಬಯಸುತ್ತೇನೆ.

ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):- ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇ) ವಿಷಯ: ನೈಸ್ ಸಂಸ್ಥೆಯ ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ (ಬಿಎಂಐಸಿ) ಯೋಜನೆಯ ಕುರಿತು

\- - - -

ಶ್ರೀ ಟಿ.ಎನ್ ಜವರಾಯಿಗೌಡ (ವಿಧಾನಸಭಾ ಕ್ಷೇತ್ರ) ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿವಾದಿತ ನೈಸ್ ಸಂಸ್ಥೆಯ ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ (ಬಿ.ಎಂ.ಐ.ಸಿ.,) ಯೋಜನೆಯನ್ನು ಸರ್ಕಾರದ ವಶಕ್ಕೆ ಪಡೆಯುವ ಕುರಿತು 'ವಿಜಯ ಕರ್ನಾಟಕ' ದಿನ ಪತ್ರಿಕೆಯಲ್ಲಿ ದಿನಾಂಕ 06.08.2025 ರಂದು ವರದಿಯಾಗಿದೆ. ಈ ಯೋಜನೆಯ ಅನುಷ್ಠಾನ ಕುರಿತು ಈವರೆಗಿನ ಪ್ರಗತಿಗಳ ಹಿನ್ನೆಲೆಯಲ್ಲಿ ಹಾಗೂ ಮುಂದೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಪರಾಮರ್ಶೆ ನಡೆಸಿ ಶಿಫಾರಸ್ಸು ಮಾಡುವ ಸಲುವಾಗಿ ಈ ಹಿಂದೆ ರಚನೆಯಾಗಿದ್ದ ಸಚಿವ ಸಂಪುಟದ ಉಪ ಸಮಿತಿಯು ವಿಸ್ತೃತವಾಗಿ ಚರ್ಚೆ ನಡೆಸಿದೆ ಎಂದು ತಿಳಿದುಬಂದಿದೆ. ಮೂಲ ಒಪ್ಪಂದದಂತೆ ಇಲ್ಲದಿದ್ದರೂ ಇಂಟರ್‌ಚೇಂಜ್‌ಗಳಲ್ಲಿ ಅಭಿವೃದ್ಧಿಪಡಿಸಲು ಉದ್ದೇಶಿಸಿರುವ ಲೇಔಟ್‌ಗಳಿಗೆ ಅನುಮೋದನೆ ನೀಡುವ ಬಗ್ಗೆ ಹಾಗೂ ಈ ಬಡಾವಣೆಗಳಲ್ಲಿ ಭೂಮಿ ಕಳೆದುಕೊಂಡ ರೈತರಿಗೆ ನಿವೇಶನ ನೀಡುವ ವಿಧಾನದ ಬಗ್ಗೆಯೂ ತೀರ್ಮಾನಿಸಲಾಗಿದೆಯೇ ಎಂಬುದರ ಬಗ್ಗೆ ಸರ್ಕಾರ ಸ್ಪಷ್ಟಪಡಿಸಬೇಕು. ನೈಸ್ ಕಂಪನಿಗೆ ನೀಡಲಾದ ಒಟ್ಟು ಖಾಸಗಿ ಮತ್ತು ಸರ್ಕಾರಿ ಜಮೀನುಗಳ ಪೈಕಿ ಬಳಸದಿರುವ ಹೆಚ್ಚುವರಿ ಭೂಮಿಯನ್ನು ಸರ್ಕಾರ ಹಿಂಪಡೆಯುವುದೇ ತಿಳಿಸುವುದು. 30 ವರ್ಷಗಳ ಗುತ್ತಿಗೆ ಅವಧಿ ಮುಕ್ತಾಯಗೊಂಡ ನಂತರ ಈ ಯೋಜನೆಯನ್ನು ಸರ್ಕಾರಕ್ಕೆ ಹಿಂದಿರುಗಿಸುವ ಹಾಗೂ ಪ್ರಸ್ತಾಪಿಸಿರುವ ಟೌನ್‌ಶಿಪ್‌ಗಳ ಬಗ್ಗೆ ಸರ್ಕಾರದ ನಿಲುವೇನು ತಿಳಿಸುವುದು. ಈ ಯೋಜನೆಯನ್ನು ಕಾನೂನಾತ್ಮಕವಾಗಿ ಸೂಕ್ತ ಬದಲಾವಣೆಯೊಂದಿಗೆ ಮುಕ್ತಾಯಗೊಳಿಸಿ ಸಾವಿರಾರು ಕೋಟಿ ರೂಪಾಯಿಗಳನ್ನು ಟೋಲ್ ಮುಖಾಂತರ ಅನಧಿಕೃತವಾಗಿ ಸಂಗ್ರಹಿಸುತ್ತಿದ್ದರೂ ಸಹ, ಸರ್ಕಾರದ ಗಮನಕ್ಕೆ ಬಂದಿದ್ದರೂ ಸಹ, ಸರ್ಕಾರ ಏಕೆ ವಿಳಂಬ ಮಾಡುತ್ತಿದೆ ಎಂಬುದರ ಬಗ್ಗೆ ರಾಜ್ಯದ ಜನತೆಗೆ ವಾಸ್ತವಾಂಶವನ್ನು ಸರ್ಕಾರ ತಿಳಿಸಬೇಕಾಗಿದೆ.

ಯೋಜನೆಯ ಚೌಕಟ್ಟಿನ ಕರಾರಿನ ಅನ್ವಯ 13,237 ಎಕರೆ ಖಾಸಗಿ ಜಮೀನಿನ ಬದಲು ಕೆ.ಐ.ಎ.ಡಿ.ಬಿ. ಒಪ್ಪಂದದಲ್ಲಿ 23,846 ಎಕರೆ ಜಮೀನು ನೀಡಲಾಗಿದೆ. 30 ವರ್ಷ ಮುಗಿಯುತ್ತಾ ಬಂದರೂ ಸಹ ಈ ಯೋಜನೆ ಪೂರ್ಣಗೊಂಡಿಲ್ಲ. ರಸ್ತೆ ಜೊತೆಗೆ ಮೂಲ ಸೌಕರ್ಯ ಒದಗಿಸುವುದಾಗಿ ಹೇಳಿದ್ದ ನೈಸ್ ಸಂಸ್ಥೆ ಕಾಮಗಾರಿ ಆರಂಭಿಸಿರುವುದಿಲ್ಲ. ಆದ್ದರಿಂದ ಪತ್ರಿಕೆಯಲ್ಲಿ ವರದಿಯಾಗಿರುವಂತೆ ಈ ಬಿ.ಎಂ.ಐ.ಸಿ., ಯೋಜನೆಯನ್ನು ಸರ್ಕಾರದ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸ್ವಾಧೀನಕ್ಕೆ ತೆಗೆದುಕೊಳ್ಳುವುದೇ ಎಂಬ ಬಗ್ಗೆ ಸರ್ಕಾರ ಸ್ಪಷ್ಟ ಉತ್ತರ ನೀಡಬೇಕೆಂದು ಈ ಶೂನ್ಯವೇಳೆಯಲ್ಲಿ ಮಾನ್ಯ ಉಪ ಮುಖ್ಯಮಂತ್ರಿಯವರನ್ನು ಒತ್ತಾಯಿಸುತ್ತೇನೆ.

ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):- ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ) ವಿಷಯ: ಚಾಮರಾಜನಗರ ಜಿಲ್ಲೆ ಹನೂರು ತಾಲ್ಲೂಕಿನ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆಯಲ್ಲಿನ ಅವ್ಯವಸ್ಥೆಯ ಬಗ್ಗೆ.

– – – –

ಶ್ರೀ ಎಂ. ನಾಗರಾಜು (ವಿಧಾನಸಭಾ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ದಿನಾಂಕ 12.08.2025ರಂದು "ಶಿಥಿಲ ಕೊಠಡಿ; ಶಾಲೆಗೆ ಮಕ್ಕಳನ್ನು ಕಳುಹಿಸದ ಪೋಷಕರು" ಎಂದು ಆಂದೋಲನ ದಿನ ಪತ್ರಿಕೆಯಲ್ಲಿ ಸುದ್ದಿ ಪ್ರಕಟವಾಗಿರುತ್ತದೆ. "ಚಾಮರಾಜನಗರ ಜಿಲ್ಲೆ ಹನೂರು ತಾಲ್ಲೂಕಿನಲ್ಲಿ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆಯಲ್ಲಿನ ಕೊಠಡಿಗಳು ಶಿಥಿಲಾವಸ್ಥೆಯಲ್ಲಿ ಇರುವುದರಿಂದ ಶಾಲಾ ಕೊಠಡಿಗಳು ದುರಸ್ತಿಯಾಗುವವರೆಗೂ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವುದಿಲ್ಲ ಎಂದು ಪೋಷಕರು ಸಾಮೂಹಿಕವಾಗಿ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸದಿರುವ ಘಟನೆ ತಾಲ್ಲೂಕಿನ ಪೆದ್ದನಹಳ್ಳ ಗ್ರಾಮದಲ್ಲಿ ನಡೆದಿದೆ. ತಾಲ್ಲೂಕಿನ ಕೂಡ್ಲೂರು ಕ್ಲಸ್ಟರ್ ವ್ಯಾಪ್ತಿಯ ಪೆದ್ದನಹಳ್ಳ ಗ್ರಾಮದ ಸರ್ಕಾರಿ ಶಾಲೆಯಲ್ಲಿ 1ನೇ ತರಗತಿಯಿಂದ 7ನೇ ತರಗತಿಯವರೆಗೆ 62 ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಗ್ರಾಮದ ಸರ್ಕಾರಿ ಶಾಲೆಯಲ್ಲಿನ ಒಂದಲ್ಲ ಒಂದು ಅವಾಂತರಗಳಿಂದ ಪೋಷಕರು ಬೇಸತ್ತು ಹಲವಾರು ಬಾರಿ ಪ್ರತಿಭಟನೆಯನ್ನು ನಡೆಸಿದ್ದಾರೆ. ಕಳೆದ 4 ದಿನಗಳಿಂದ ಸತತವಾಗಿ ಮಳೆಯಾಗುತ್ತಿರುವುದರಿಂದ ಕೊಠಡಿಗಳು ಶಿಥಿಲವಾಗಿರುವುದರಿಂದ ಮಳೆಯ ನೀರು ಸೋರುತ್ತಿದ್ದು, ಕಾಂಕ್ರೀಟ್ ಗಾರೆ ಚೂರುಗಳು ಕೆಳಗೆ ಬೀಳುತ್ತಿವೆ. ಆದರೂ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳದಿರುವುದರಿಂದ ಪ್ರತಿನಿತ್ಯ ವಿದ್ಯಾರ್ಥಿಗಳು ಸಂಕಷ್ಟದಲ್ಲಿಯೇ ಪಾಠ ಕೇಳುವಂತಾಗಿದೆ" ಎಂದು ದಿನ ಪತ್ರಿಕೆಯಲ್ಲಿ ಪ್ರಕಟವಾಗಿದ್ದು, ಈ ಬಗ್ಗೆ ಇಲಾಖೆಯ ವತಿಯಿಂದ ಕೈಗೊಂಡಿರುವ ಕ್ರಮದ ಬಗ್ಗೆ ಹಾಗೂ ರಾಜ್ಯದಲ್ಲಿ ಇಂತಹ ಎಷ್ಟು ಪ್ರಕರಣಗಳು ಬೆಳಕಿಗೆ ಬಂದಿವೆ ಎಂಬುದರ ಬಗ್ಗೆ ಮಾಹಿತಿ ನೀಡಲು ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವರನ್ನು ಶೂನ್ಯವೇಳೆಯಲ್ಲಿ ಒತ್ತಾಯಿಸುತ್ತೇನೆ.

ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):– ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

(ಮುಂದು)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(675) 13-08-2025 (1.10) ಕೆಜಿ:ಎಂಡಿ (ಸಭಾಪತಿಯವರ ಉಪಸ್ಥಿತಿ)

ಉ) ವಿಷಯ:- ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂ ಪರಿವರ್ತನೆಗೊಳಿಸುವ ಜಮೀನಿಗೆ ಸರ್ಕಾರಿ ರಸ್ತೆ ಸಂಪರ್ಕ ಹೊಂದಿದ್ದರೆ ಮಾತ್ರ ಭೂ ಪರಿವರ್ತನೆ ಮಾಡುತ್ತಿದ್ದು, ಪಂಚಾಯತ್ ವ್ಯಾಪ್ತಿಯಲ್ಲಿ ದೊರಕುತ್ತಿದ್ದ 9/11ಎ ಖಾತಾ ದೃಢೀಕರಣ ಪತ್ರವನ್ನು ಸ್ಥಳೀಯ ಯೋಜನಾ ಪ್ರಾಧಿಕಾರಕ್ಕೆ ವರ್ಗಾಯಿಸಿರುವ ಕುರಿತು.

\- - -

ಶ್ರೀ ಕೆ.ಪ್ರತಾಪಸಿಂಹ ನಾಯಕ್ (ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಈ ಕೆಳಕಂಡ ಸಾರ್ವಜನಿಕ ಮಹತ್ವದ ಜರೂರು ವಿಷಯವನ್ನು ಪ್ರಸ್ತಾಪಿಸಲು ಅನುಮತಿ ನೀಡಿದ್ದಕ್ಕಾಗಿ ತಮಗೆ ಧನ್ಯವಾದಗಳು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂ ಪರಿವರ್ತನೆಗೊಳಿಸುವ ಜಮೀನಿಗೆ ಸರಕಾರಿ ರಸ್ತೆ ಸಂಪರ್ಕ ಹೊಂದಿದ್ದರೆ ಮಾತ್ರ ಭೂ ಪರಿವರ್ತನೆ ಮಾಡುತ್ತಿದ್ದು, ಭೂ ಪರಿವರ್ತನೆ ಮಾಡುವಾಗ ಸರ್ಕಾರಿ ರಸ್ತೆ ಸಂಪರ್ಕ ಇಲ್ಲದಿದ್ದ ಪಕ್ಷದಲ್ಲಿ ಜಮೀನು ಭೂ ಪರಿವರ್ತನೆ ಮಾಡಬಾರದು ಎಂಬ ನಿಯಮ ಜಾರಿಗೆ ಬಂದಿದ್ದು, ಇದರಿಂದ ಜನರಿಗೆ ತುಂಬಾ ತೊಂದರೆಯಾಗಿದೆ.

ಜಿಲ್ಲೆಯಲ್ಲಿ ಪಂಚಾಯತ್‌ನಲ್ಲಿ ದೊರಕುತ್ತಿದ್ದ 9/11ಎ ಖಾತಾ ಸರ್ಟಿಫಿಕೇಟ್ ಅನ್ನು ಸ್ಥಳೀಯ ಯೋಜನಾ ಪ್ರಾಧಿಕಾರಕ್ಕೆ ವರ್ಗಾಯಿಸಿದ್ದು, ಅಲ್ಲಿ ಸಿಬ್ಬಂದಿಗಳ ತೀವ್ರ ಕೊರತೆ ಇರುವುದರಿಂದ ಜಿಲ್ಲೆಯಲ್ಲಿರುವ 223 ಗ್ರಾಮ ಪಂಚಾಯಿತಿಗಳಿಂದ ಅನುಮೋದನೆಗಾಗಿ ಸ್ಥಳೀಯ ಯೋಜನಾ ಪ್ರಾಧಿಕಾರಕ್ಕೆ ಬಂದ ಸಾವಿರಾರು ಕಡತಗಳು ಸಾಕಷ್ಟು ತಿಂಗಳುಗಳಿಂದ ಹಾಗೆಯೇ ಉಳಿದಿದ್ದು ಅವುಗಳಿಗೆ ಮುಕ್ತಿ ದೊರೆಯುವ ಯಾವ ಸಾಧ್ಯತೆಗಳು ಸಧ್ಯಕ್ಕೆ ಕಾಣುತ್ತಿಲ್ಲ. ಇದರಿಂದಾಗಿ ಜನರಿಗೆ ನಿಗದಿತ ಅವಧಿಯೊಳಗೆ ಖಾತೆ ಪಡೆಯಲು ಸಹ ಕಷ್ಟ ಸಾಧ್ಯವಾಗಿದೆ. ಅದರಲ್ಲಿ ಈಗ ಜಮೀನು ಪರಿವರ್ತಿಸಿ ಮನೆ ಕಟ್ಟಲು ಹೊರಟ ಸಾಮಾನ್ಯ ಜನರಿಗೆ ಸರ್ವೆ ಇಲಾಖೆಯು ಅಲಿನೇಷನ್ ಪೂರ್ವ ನಕ್ಷೆಯ ನಿರಾಕರಣೆ ಮಾಡುವ ಮೂಲಕ ಇನ್ನೊಂದು ಶಾಕ್ ನೀಡಿದೆ.

ಭೂ ಪರಿವರ್ತನೆಗೊಳಿಸುವ ಅಲಿನೇಷನ್ ಪೂರ್ವ ನಕ್ಷೆಯಲ್ಲಿ ಸರಕಾರಿ ಸಂಪರ್ಕ ರಸ್ತೆಯನ್ನು ತೋರಿಸಬೇಕು ಯಾವುದೇ ಖಾಸಗಿ ಸಂಪರ್ಕ ರಸ್ತೆಯ ಬಗ್ಗೆ ತೋರಿಸಬಾರದು ಎಂದು ಆದೇಶಿಸಿದ್ದಾರೆ. ಹಾಗಾದರೆ, ಜಮೀನಿನ ಒಂದು ಭಾಗದಲ್ಲಿ ಅರ್ಜಿದಾರರು ಭೂ ಪರಿವರ್ತನೆಗೊಳಿಸುವ ಸಂದರ್ಭದಲ್ಲಿ ಸರ್ಕಾರಿ ರಸ್ತೆಯ ವ್ಯವಸ್ಥೆ ಇಲ್ಲದ ಜಮೀನಾಗಿದ್ದಲ್ಲಿ ಅವರಿಗೆ ಜಮೀನು ಪರಿವರ್ತಿಸುವ ಅವಕಾಶ ಇಲ್ಲದಾಗುತ್ತದೆ. ಜಮೀನಿಗೆ ಸಂಪರ್ಕ ರಸ್ತೆ ಕಾಣಿಸದ ಪಕ್ಷದಲ್ಲಿ ಅವರು ಭೂ ಪರಿವರ್ತನೆಯಿಂದ ವಂಚಿತರಾಗುತ್ತಾರೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜನರು ಗ್ರಾಮಠಾಣಗಳಲ್ಲಿ ವಾಸಿಸುವ ಜನ ಜೀವನ ಪದ್ಧತಿ ಇಲ್ಲ. ಇಲ್ಲಿ ಪ್ರತ್ಯೇಕ ವಾಸ ಹಾಗೂ ಜಮೀನುಗಳನ್ನು ಹೊಂದಿರುತ್ತಾರೆ. ಒಬ್ಬ ವ್ಯಕ್ತಿ ತನ್ನ 3 ಎಕರೆ ಜಮೀನಿನ ಒಂದು ಮೂಲೆಯಲ್ಲಿ 5 ಸೆಂಟ್ಸ್ ಭೂ ಪರಿವರ್ತನೆಗೊಳಿಸಲು ಪ್ರಯತ್ನಿಸಿದಾಗ ಅವನ ಉಳಿಕೆ ಜಮೀನಿನಲ್ಲಿ ಹಾದು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೋಗುವ ಸಂಪರ್ಕ ರಸ್ತೆ ಭೂ ಪರಿವರ್ತಿಸಬೇಕು ಅಥವಾ ಅದನ್ನು ಪಂಚಾಯತ್‌ಗೆ ಹಸ್ತಾಂತರಿಸಬೇಕು ಎನ್ನುವುದು ಎಷ್ಟು ಸರಿ? ಈಗಿನ ಆದೇಶದಂತೆ ಸಂಪರ್ಕ ರಸ್ತೆ ತೋರಿಸದೆ ನಕ್ಷೆ ತಯಾರಿಸಿದರೆ ಅದು ಭೂ ಪರಿವರ್ತನೆಗೊಳಿಸಲು ಸಾಧ್ಯವಾಗುವುದಿಲ್ಲ.

ಸ್ಥಳೀಯ ಸಮಸ್ಯೆಗಳ ಬಗ್ಗೆ ಅರಿವಿಲ್ಲದ ಅಧಿಕಾರಿಗಳು ಆದೇಶಗಳನ್ನು ಮಾಡುವುದರಿಂದ, ಸಾರ್ವಜನಿಕರು ವಿನಾಕಾರಣ ಈ ರೀತಿಯ ತೊಂದರೆಗಳಿಗೆ ಒಳಗಾಗುತ್ತಿದ್ದಾರೆ. ಜಿಲ್ಲೆಯ ಭೌಗೋಳಿಕ ಅಧ್ಯಯನ, ಇಲ್ಲಿಯ ಜನ ಜೀವನ ವ್ಯವಸ್ಥೆಯ ಆಧಾರದಲ್ಲಿ ಸೂಕ್ತ ಕಂದಾಯ ನಿಯಮಗಳನ್ನು ರೂಪಿಸಲು ಈ ಕೂಡಲೇ ಅಗತ್ಯ ಕ್ರಮಕೈಗೊಳ್ಳಬೇಕೆಂದು ಈ ಮೂಲಕ ಸರ್ಕಾರವನ್ನು ಶೂನ್ಯ ವೇಳೆಯಲ್ಲಿ ಒತ್ತಾಯಿಸುತ್ತೇನೆ.

ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):- ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಊ) ವಿಷಯ:- ರಾಜ್ಯದಲ್ಲಿ ಆಸಿಡ್ ದಾಳಿಗೆ ಒಳಗಾದ ಮಹಿಳೆಯರಿಗೆ ಪಿಂಚಣಿ ಹೆಚ್ಚಳ, ನಿವೇಶನ ಮಂಜೂರು ಮಾಡುವ ಕುರಿತು

\- - -

ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ದಿನಾಂಕ 08-08-2025 ರ ವಾರ್ತಾಭಾರತಿ ದಿನಪತ್ರಿಕೆಯಲ್ಲಿ ಆಸಿಡ್ ದಾಳಿಗೆ ಒಳಗಾದ ಮಹಿಳೆಯರ ಯಾತನೆ ಕುರಿತಂತೆ ವರದಿ ಪ್ರಕಟವಾಗಿರುತ್ತದೆ.

ಎಲ್ಲರಿಗೂ ತಿಳಿದಿರುವಂತೆ ಆಸಿಡ್ ದಾಳಿಯ ಘಟನೆಗಳು ಬದುಕುಳಿದವರ ಮೇಲೆ ದೈಹಿಕವಾಗಿ, ಮಾನಸಿಕವಾಗಿ ಮತ್ತು ಸಾಮಾಜಿಕವಾಗಿ ಪರಿಣಾಮ ಬೀರುತ್ತದೆ. ಪ್ರೇಮ ವೈಫಲ್ಯ ಪ್ರಕರಣಗಳು, ಕುಟುಂಬ ಕಲಹ, ಕೆಲಸದ ಸ್ಥಳಗಳಲ್ಲಿ ಆಸಿಡ್ ದಾಳಿಗೆ ಒಳಗಾಗಿರುವ ಅವಿವಾಹಿತ ಯುವತಿಯರ ಪಾಡು ಕೂಡ ಶೋಚನಿಯ ಸ್ಥಿತಿಗೆ ತಲುಪಿದೆ. ಕಣ್ಣು, ಮೂಗು, ಕಿವಿ ಎಲ್ಲವನ್ನು ಕಳೆದುಕೊಂಡವರು ನಮ್ಮೂಡನೆ ಇದ್ದಾರೆ. ಕೆಲವರ ಕುತ್ತಿಗೆ ಮೇಲೆತ್ತಲು ಆಗುವುದಿಲ್ಲ. ಕೈಗಳ ಸ್ನಾಯುಗಳು ಕೂಡ ಅಸಹಾಯಕವಾಗಿರುವುದನ್ನು ನಾವು ನೋಡುತ್ತಿದ್ದೆವೆ. ಹೀಗೆ ಸಾವು ನೋವಿನ ಮಧ್ಯೆ ಬದುಕನ್ನು ಮುನ್ನಡೆಸುತ್ತಿರುವ ರಾಜ್ಯದ ಆಸಿಡ್ ದಾಳಿಗೆ ಒಳಗಾದ ಮಹಿಳೆಯರ ಯಾತನೆಯನ್ನು ನಿಜಕ್ಕೂ ಕೇಳುವವರು ಇಲ್ಲವಾಗಿದ್ದಾರೆಂದರೆ ಅತಿಶೋಕ್ತಿಯೇನಲ್ಲ.

ಮಾಹಿತಿ ಪ್ರಕಾರ, ನಮ್ಮ ರಾಜ್ಯದಲ್ಲಿ 1999 ರಿಂದ ಇಲ್ಲಿಯವರೆಗೆ 150 ಕ್ಕೂ ಹೆಚ್ಚು ಜನ ಆಸಿಡ್ ದಾಳಿಗೆ ಒಳಗಾಗಿದ್ದಾರೆ. ಸರ್ಕಾರದ ಹಲವು ಇಲಾಖೆಗಳ ಯೋಜನೆಗಳಲ್ಲಿ ರೂ.3 ಲಕ್ಷ ಪರಿಹಾರ ಧನ, ರೂ.10,000/- ಗಳ ಮಾಸಶನ, ಚಿಕಿತ್ಸೆ ಸಲುವಾಗಿ ರೂ.20 ಲಕ್ಷದವರೆಗೆ ವೆಚ್ಚ ಮಾಡುವುದು ಹೀಗೆ ಹಲವು ಯೋಜನೆಗಳಿವೆ. ಆದಾಗ್ಯೂ ಆಸಿಡ್ ದಾಳಿಗೆ ಒಳಗಾದ 50 ಕ್ಕೂ ಹೆಚ್ಚು ಮಂದಿಗೆ ಸ್ವಂತ ಸೂರು ಇಲ್ಲದಿರುವುದರಿಂದ ನಿವೇಶನ ಸಲುವಾಗಿ ಕಳೆದ 20 ವರ್ಷಗಳಿಂದ ಸರ್ಕಾರದ ಕಛೇರಿಗಳಿಗೆ ಎಡತಾಕುತ್ತಿದ್ದಾರೆ. ಮತ್ತೊಂದೆಡೆ ಇವರಿಗೆ ಸೂಕ್ತ ಚಿಕಿತ್ಸೆ ಸಿಗದೆ ಆರೋಗ್ಯವು ಹದೆಗೆಡುತ್ತಿದೆ.

ದಯಮಾಡಿ, ಸರ್ಕಾರ ಇವರಿಗೆ ನೀಡುತ್ತಿರುವ ಪಿಂಚಣಿಯನ್ನು ಹೆಚ್ಚಿಸಬೇಕು, ಸಮಾಜದ ಮುಖ್ಯವಾಹಿಯಿಂದ ದೂರ ಸರಿದು ತೆರೆಯ ಹಿಂದೆ ಬದುಕು ಸಾಗಿಸುತ್ತಿರುವ ಬದುಕನ್ನು ಕಟ್ಟಿಕೊಳ್ಳಲು ಪ್ರಯತ್ನಿಸುತ್ತಿರುವ ಇವರ ನೆರವಿಗೆ ಧಾವಿಸಬೇಕು ಇವರುಗಳ ಬೇಡಿಕೆಯನ್ನು ಮನಗಂಡು ವಿಶೇಷ ಸೌಲಭ್ಯದಡಿ ಇವರುಗಳಿಗೆ ನಿವೇಶನವನ್ನು ಹಂಚಿಕೆ ಮಾಡಲು ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಶೂನ್ಯ ವೇಳೆಯಲ್ಲಿ ಮಾನ್ಯ ಮುಖ್ಯಮಂತ್ರಿಯವರನ್ನು ಒತ್ತಾಯಿಸುತ್ತೇನೆ.

ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):- ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರವನ್ನು ಒದಗಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಋ) ವಿಷಯ:– ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ಕೆರೆಬಿಳಚಿ ಸಮುದಾಯ ಆರೋಗ್ಯ ಕೇಂದ್ರದ ಕುರಿತು

– – –

ಶ್ರೀ ಕೆ.ಅಬ್ದುಲ್ ಜಬ್ಬಾರ್ (ವಿಧಾನಸಭಾ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ನನಗೆ ಮೇಲ್ಕಂಡ ವಿಷಯವನ್ನು ಪ್ರಸ್ತಾಪ ಮಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು. ಚನ್ನಗಿರಿ ತಾಲ್ಲೂಕಿನ ಕೆರೆಬಿಳಚಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಸ್ತ್ರೀರೋಗ ತಜ್ಞರ ವರ್ಗಾವಣೆ ಮತ್ತು ಹುದ್ದೆಗಳನ್ನು ಕಡಿತಗೊಳಿಸಿರುವ ಕುರಿತು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಬಯಸುತ್ತೇನೆ.

ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ಕೆರೆಬಿಳಚಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸ್ತ್ರೀರೋಗ ತಜ್ಞರನ್ನು ವರ್ಗಾವಣೆ ಮಾಡಿರುವುದರ ಜೊತೆಗೆ ಹುದ್ದೆಗಳನ್ನೂ ಸಹ ಕಡಿತಗೊಳಿಸಿರುವುದು ಖಂಡನೀಯ.

ಗ್ರಾಮಾಂತರ ಪ್ರದೇಶದಲ್ಲಿರುವ ಆರೋಗ್ಯ ಸಮುದಾಯ ಕೇಂದ್ರದಲ್ಲಿರುವ ತಜ್ಞ ವೈದ್ಯರನ್ನು ವರ್ಗಾವಣೆಗೊಳಿಸುವುದರ ಜೊತೆಗೆ ಅವರನ್ನು ತಾಲ್ಲೂಕು ಆಸ್ಪತ್ರೆಗಳಿಗೆ ನೇಮಕಗೊಳಿಸಿರುವುದು ನಿಜಕ್ಕೂ ಖಂಡನೀಯ. ಗ್ರಾಮೀಣ ಭಾಗಗಳಲ್ಲಿ ಸ್ತ್ರೀರೋಗ ತಜ್ಞರು, ಕೇವಲ ಹೆರಿಗೆಗಳನ್ನು ಮಾಡಿಸಲು ಸೀಮಿತವಾಗದೇ ಗರ್ಭಿಣಿಯರ ಚಿಕಿತ್ಸೆ ಸೇರಿದಂತೆ ಬಾಣಂತಿಯವರು, ವಯೋಸಹಜ ಕಾಯಿಲೆ, ಮಕ್ಕಳಾಗದಿರುವ ಚಿಕಿತ್ಸೆ ಹೀಗೆ ಹತ್ತು ಹಲವು ಮಹಿಳೆಯರ ರೋಗಗಳಿಗೆ ಚಿಕಿತ್ಸೆ ನೀಡುತ್ತಾರೆ. ಗ್ರಾಮೀಣ ಭಾಗಗಳಲ್ಲಿ ತಿಂಗಳಿಗೆ 6 ರಿಂದ 7 ಹೆರಿಗೆಗಳಾಗುತ್ತಿರುವುದರಿಂದ ಸಮುದಾಯದ ಆರೋಗ್ಯ ಕೇಂದ್ರದಲ್ಲಿ ಸ್ತ್ರೀರೋಗ ತಜ್ಞರ ಅವಶ್ಯಕತೆ ಹೆಚ್ಚಾಗಿರುತ್ತದೆ.

ಆದುದರಿಂದ, ಸ್ತ್ರೀರೋಗ ತಜ್ಞರನ್ನು ವರ್ಗಾವಣೆಗೊಳಿಸಿ ಹುದ್ದೆಗಳನ್ನು ಕಡಿತಗೊಳಿಸಿದರೆ ಗ್ರಾಮೀಣ ಭಾಗದಲ್ಲಿ ವಾಸಿಸುವ ಜನರಿಗೆ ಸಕಾಲಕ್ಕೆ ಚಿಕಿತ್ಸೆ ಸಿಗದೇ ತುಂಬಾ ತೊಂದರೆಗಳು ಉಂಟಾಗುವುದರ ಜೊತೆಗೆ ಮರಣಗಳು ಸಂಭವಿಸಬಹುದಾಗಿರುತ್ತದೆ.

ಸದರಿ ವಿಷಯವನ್ನು ಗಂಭೀರವಾಗಿ ಪರಿಗಣಿಸಿ, ಸ್ತ್ರೀರೋಗ ತಜ್ಞರ ಅವಶ್ಯಕತೆ ಇರುವುದರಿಂದ ವರ್ಗಾವಣೆ ಮತ್ತು ಹುದ್ದೆಗಳ ಕಡಿತದ ಬಗ್ಗೆ ಪುನರ್ ಪರಿಶೀಲಿಸಬೇಕೆಂದು ತಮ್ಮ ಮೂಲಕ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):– ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎ) ವಿಷಯ:- ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಜಾರಿಗೊಳಿಸುವ ಹಾಗೂ ಅನುಕಂಪದ ಆಧಾರದ ನೇಮಕಾತಿ ಕುರಿತು.

\- - -

ಶ್ರೀ ಡಿ.ಟಿ.ಶ್ರೀನಿವಾಸ್ (ಶಿಕ್ಷಕರ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಮೇಲ್ಕಂಡ ವಿಷಯವನ್ನು ಪ್ರಸ್ತಾಪಿಸಲು ನನಗೆ ಅವಕಾಶವನ್ನು ನೀಡಿದ್ದಕ್ಕೆ ತಮಗೆ ಧನ್ಯವಾದಗಳು. ದಿನಾಂಕ 12-08-2025 ರ 'ಪ್ರಜಾವಾಣಿ' ದಿನಪತ್ರಿಕೆಯಲ್ಲಿ ಪ್ರಕಟವಾದಂತೆ, ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಜಾರಿಗೊಳಿಸುವಂತೆ ರಾಜ್ಯ ಸರ್ಕಾರವನ್ನು ಒತ್ತಾಯಿಸಲು ಸಾಧ್ಯವಿಲ್ಲ ಎಂಬ ಅಭಿಪ್ರಾಯ ವ್ಯಕ್ತಪಡಿಸಿರುವ ಹೈಕೋರ್ಟ್ ಈ ಸಂಬಂಧ ಸಲುವಾಗಿ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ವಜಾಗೊಳಿಸಿದೆ. ಸರ್ಕಾರದ ನೀತಿ ನಿರೂಪಣೆಯಲ್ಲಿ ಅರ್ಜಿದಾರರ ಮೂಲಭೂತ ಹಕ್ಕು ಮತ್ತು ಶಾಸನಬದ್ಧ ಹಕ್ಕು ಉಲ್ಲಂಘನೆಯಯಾಗಿದೆ ಎಂಬುದನ್ನು ತೋರಿಸದ ಹೊರತು ನ್ಯಾಯಾಲಯ ಸಂವಿಧಾನದ 226ನೇ ವಿಧಿಯಡಿ ತನ್ನ ಹಕ್ಕನ್ನು ಚಲಾಯಿಸಲಾಗದು ಎಂದು ನ್ಯಾಯಪೀಠ ಆದೇಶಿಸಿರುವುದನ್ನು ಗಮನಕ್ಕೆ ತರುತ್ತಾ, ಅದೇ ನಿಟ್ಟಿನಲ್ಲಿ ಹುದ್ದೆ ಇಲ್ಲ ಎನ್ನುವಂತಿಲ್ಲವೆಂದು ಪ್ರಕಟಿಸಿರುವ ಮಾನ್ಯ ಹೈಕೋರ್ಟ್ ತಂದೆ ಮೃತಪಟ್ಟ ಬಳಿಕ ಅನುಕಂಪದ ಉದ್ಯೋಗಕ್ಕಾಗಿ ಸಲ್ಲಿಸಿದ ಮನವಿಯನ್ನು ಪದವಿ ಶಿಕ್ಷಣ ಇಲಾಖೆ ತಿರಸ್ಕರಿಸಿತ್ತು. ಈ ಕ್ರಮವನ್ನು ಪ್ರಶ್ನಿಸಿ ನ್ಯಾಯಪೀಠ ಮೃತರು ಸೇವೆ ಸಲ್ಲಿಸುತ್ತಿದ್ದ ಶಿಕ್ಷಣ ಸಂಸ್ಥೆಯಲ್ಲಿ ಖಾಲಿ ಹುದ್ದೆ ಲಭ್ಯವಿಲ್ಲ ಎಂದಾದಲ್ಲಿ ರಾಜ್ಯ ಪದವಿ ಶಿಕ್ಷಣ (ಶೈಕ್ಷಣಿಕ, ನೋಂದಣಿ, ಆಡಳಿತ, ಅನುದಾನ, ಸಹಾಯ ಇತ್ಯಾದಿ) ತಿದ್ದುಪಡಿ ನಿಯಮಗಳು, 2010ರ ಷರತ್ತು 1 (ಎ) ಮತ್ತು (ಬಿ) ಅನುಸಾರ ಶಿಕ್ಷಣ ಇಲಾಖೆಯ ನಿರ್ದೇಶಕರು ಖಾಲಿ ಹುದ್ದೆಯನ್ನು ಗುರುತಿಸಬೇಕು. ಒಂದು ವೇಳೆ ಖಾಲಿ ಹುದ್ದೆ ಲಭ್ಯವಾಗದೇ ಇದ್ದಲ್ಲಿ ಇಲಾಖೆಯ ಅಧೀನದ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಖಾಲಿ ಹುದ್ದೆ ಹುಡುಕಿ ಹಂಚಿಕೆ ಮಾಡಬೇಕು ಎಂದು ಹೈಕೋರ್ಟ್ ಆದೇಶಿಸಿದೆ. ಈ ವಿಷಯವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ ಶಿಕ್ಷಕರಿಗೆ ಅನುಕೂಲ ಮಾಡಬೇಕು. ಈ ಸಂಬಂಧ ಸರ್ಕಾರ ಸೂಕ್ರ ಕ್ರಮವಹಿಸಬೇಕೆಂದು ಮಾನ್ಯ ಸಾಕ್ಷರತಾ ಮತ್ತು ಶಾಲಾ ಶಿಕ್ಷಣ ಸಚಿವರಲ್ಲಿ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಬಯಸುತ್ತೇನೆ.

ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):- ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಏ) ವಿಷಯ:- ಆಫ್ರಿಕನ್ ಕ್ಯಾಟ್‌ಫಿಶ್‌ಗಳ ಸಾಕಾಣಿಕೆಯನ್ನು ಸರ್ಕಾರ ನಿಷೇಧಿಸಿದ್ದರೂ, ಅಕ್ರಮವಾಗಿ ಸಾಕಾಣಿಕೆ ಮಾಡುತ್ತಿರುವ ಕುರಿತು.

\- - -

ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಸಾರ್ವಜನಿಕರ ಮಹತ್ವವುಳ್ಳ ಜರೂರು ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಅನುಮತಿ ಕೊಟ್ಟಿದಕ್ಕಾಗಿ ತಮಗೆ ಹೃದಯಪೂರ್ವಕವಾದ ನಮನಗಳನ್ನು ಸಲ್ಲಿಸುತ್ತೇನೆ.

ಮನುಷ್ಯನ ಆರೋಗ್ಯಕ್ಕೆ ಹಾನಿಕಾರಕ ಹಾಗೂ ಕ್ಯಾನ್ಸರ್ ಬರಲು ಕಾರಣವಾದ ಆಫ್ರಿಕನ್ ಕ್ಯಾಟ್‌ಫಿಶ್ ಸಾಕಾಣಿಕೆಯು ಪರಿಸರಕ್ಕೆ ಕಂಟಕ ಪ್ರಾಯವಾಗಿದ್ದರೂ, ರಾಜ್ಯ ಹೈಕೋರ್ಟ್ 2012 ರಲ್ಲೇ ಇದರ ಸಾಕಾಣಿಕೆಯನ್ನು ನಿಷೇಧಿಸಿದ್ದರೂ ಅಕ್ರಮವಾಗಿ ಸಾಕಾಣಿಕೆ ಮಾಡುವವರ ವಿರುದ್ಧ ಕ್ರಮ ಕೈಗೊಳ್ಳದಿರುವ ಬಗ್ಗೆ ಇಂದಿನ "ಹೊಸದಿಗಂತ" ಪತ್ರಿಕೆಯಲ್ಲಿ ವರದಿ ಪ್ರಕಟವಾಗಿರುತ್ತದೆ.

ಬೆಂಗಳೂರು ಸುತ್ತಮುತ್ತ ಸುಲಭವಾಗಿ ಹಣಗಳಿಸುವ ಮತ್ತೊಂದು ದಂಧೆಯಾಗಿ ಈ ಆಫ್ರಿಕನ್ ಕ್ಯಾಟ್‌ಫಿಶ್‌ಗಳನ್ನು ಕೆರೆಗಳಲ್ಲಿ ಸಾಕಾಣಿಕೆ ಮಾಡುತ್ತಿರುವುದು ಕಂಡು ಬಂದಿರುತ್ತದೆ. ಈ ನಿಷೇಧಿತ ಆಫ್ರಿಕನ್ ಮೀನು ಲೋಡ್‌ಗಟ್ಟಲೆ ಬೆಂಗಳೂರು, ಆಂಧ್ರಪ್ರದೇಶ, ಕೊಲ್ಕತ್ತಾ, ಮುಂಬಯಿ, ದೆಹಲಿ, ಪಂಜಾಬ್ ಸೇರಿದಂತೆ ದೊಡ್ಡ ದೊಡ್ಡ ನಗರಗಳಿಗೆ ಟ್ರಕ್‌ಗಳಲ್ಲಿ ರವಾನೆಯಾಗುತ್ತಿದೆ. ಪ್ರತಿ ಲೋಡ್‌ಗೆ ಲಕ್ಷಾಂತರ ರೂಪಾಯಿ ಲಾಭವನ್ನು ದಂಧೆಕೋರರಿಗೆ ಗಳಿಸಿಕೊಡುತ್ತಿದೆ.

ಮುಸುಕಿನ ಜೋಳ ಮತ್ತಿತರೆ ತೋಟದ ಜಮೀನುಗಳ ಮಧ್ಯೆ ಕೃಷಿ ಬೆಳೆಯ ಜೊತೆಯಲ್ಲಿ ಹೊಂಡವನ್ನು ನಿರ್ಮಿಸಿಕೊಂಡು ಯಾರ ಅರಿವಿಗೂ ಬಾರದಂತೆ ಅಕ್ರಮವಾಗಿ ಕ್ಯಾಟ್‌ಫಿಶ್ ಸಾಕಾಣಿಕೆ ದಂಧೆಯಲ್ಲಿ ತೊಡಗಿಕೊಂಡಿರುವುದು ತಿಳಿದು ಬಂದಿರುತ್ತದೆ. ಹೊಸಕೋಟೆ, ಬೆಂಗಳೂರು ಸೇರಿದಂತೆ ವಿವಿಧ ನಗರ ಪ್ರದೇಶದಿಂದ ರವಾನೆಯಾಗುವ ಕಸಾಯಿಖಾನೆ ಮಾಂಸದ ತ್ಯಾಜ್ಯ ಸತ್ತ ಪ್ರಾಣಿಗಳು ಮತ್ತು ರೇಷ್ಮೆ ಹುಳುವನ್ನು ಮೀನುಗಳಿಗೆ ಆಹಾರವಾಗಿ ನೀಡುತ್ತಿರುವುದರಿಂದ ಕೆಟ್ಟ ವಾಸನೆ, ದುರ್ವಾಸನೆಗೆ ಕಾರಣವಾಗಿರುತ್ತದೆ. ಇದು ಸಾಂಕ್ರಮಿಕ ರೋಗ ಹರಡುವುದಕ್ಕೂ ಕಾರಣವಾಗಿರುತ್ತದೆ.

ಅಧಿಕಾರಿಗಳು ಕಾಟಾಚಾರಕ್ಕೆ ದಾಳಿ ನಡೆಸದೆ ಜನರ ಅನಾರೋಗ್ಯಕ್ಕೆ ಕಾರಣವಾಗಿರುವ ಆಫ್ರಿಕನ್ ಕ್ಯಾಟ್‌ಫಿಶ್ ಸಾಕಾಣಿಕೆಯನ್ನು ಕಟ್ಟುನಿಟ್ಟಾಗಿ ನಿಯಂತ್ರಿಸುವಂತಾಗಬೇಕು ಈ ವಿಚಾರದಲ್ಲಿ ಮಾನ್ಯ ಮೀನುಗಾರಿಕೆ, ಬಂದರು, ಒಳನಾಡು. ಜಲಸಾರಿಗೆ ಸಚಿವರು ಇದರ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಶೂನ್ಯವೇಳೆಯಲ್ಲಿ ಒತ್ತಾಯಿಸುತ್ತೇನೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(676) 13-08-2025/1.20/ಎಂವಿ-ಎಕೆ (ಸಭಾಪತಿಯವರ ಉಪಸ್ಥಿತಿ)

ಶ್ರೀ ಮಂಕಾಳ ಎಸ್. ವೈದ್ಯ (ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು):- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಏನು ವಿಷಯ ಹೇಳುತ್ತಿದ್ದಾರೆ ಅದು 2013ರಲ್ಲಿಯೇ ನಿಷೇಧವಾಗಿದೆ. ಈ African catfish ಹಾನಿಕರ ಮತ್ತೆ ಅದು ಯಾವುದೇ ಮೀನು ಬೆಳೆಯುವುದಕ್ಕೂ ಸಹ ಅವಕಾಶ ನೀಡುವುದಿಲ್ಲ. ಅಂದರೆ, ಅದು ಒಂದೇ ಬದುಕಬೇಕು ಎಂಬ ರೀತಿಯಲ್ಲಿ ಸೃಷ್ಟಿಯಾಗಿದ್ದು, ಅದು ಬೇರೆ ಮೀನುಗಳು ಬದುಕುವುದಕ್ಕೆ ಬಿಡುವುದಿಲ್ಲ. ಅದಕ್ಕೆ ಮಾನ್ಯ ಉಚ್ಚ ನ್ಯಾಯಾಲಯ ದಿನಾಂಕ 06.02.2013 ರಂದು ಇದನ್ನು ಈ ರಾಜ್ಯದಲ್ಲಿ ನಿಷೇಧ ಮಾಡಬೇಕು ಎಂದು ಒಂದು ಆದೇಶವನ್ನು ಮಾಡಿದ್ದಾರೆ. ಅದೇ ಪ್ರಕಾರ ನಾವು ಕೂಡಲೇ ಇವತ್ತಿನವರೆಗೂ ಎಲ್ಲೂ ಸಾಕಾಣಿಕೆಯಾಗಲಿ ಅಥವಾ ಸಾರಿಗೆ ಇಲಾಖೆಯಿಂದ ಅದನ್ನು ಸಾಗಾಣಿಕೆ ಮಾಡುವುದಾಗಲಿ, ವ್ಯಾಪಾರ ಮಾಡುವುದಾಗಲಿ ಇಲ್ಲವೆಂದು ಅದನ್ನು ನಿಷೇಧಿಸಿದ್ದೇವೆ. ಅದಕ್ಕೆ ಪೂರಕವಾಗಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ Task Force Committee ಯನ್ನು ರಚನೆ ಮಾಡಿದ್ದೇವೆ. ಆ ಸಮಿತಿಯಲ್ಲಿ ತಹಶೀಲ್ದಾರ್, ಪೋಲೀಸ್ ಇನ್‌ಸ್ಪೆಕ್ಟರ್, ಪಿ.ಡಿ.ಓ., ಮತ್ತು ಮೀನುಗಾರಿಕೆಯ ನಿರ್ದೇಶಕರು ಇರುತ್ತಾರೆ. ಎಲ್ಲೂ ಸಾಕಾಣಿಕೆ ಮಾಡುವುದಕ್ಕೂ ಕೊಡುವುದಿಲ್ಲ. ಮಾರಾಟ ಮಾಡುವುದಕ್ಕೂ ಕೊಡುವುದಿಲ್ಲ. ಮತ್ತೆ ಸಾಗಾಣಿಕೆ ಮಾಡುವುದಕ್ಕೂ ಬಿಡುವುದಿಲ್ಲ. ಅದನ್ನು ಸಂಪೂರ್ಣವಾಗಿ ನಿಷೇಧಿಸಿದ್ದೇವೆ. ಮಾನ್ಯ ಸದಸ್ಯರು ದಿನಪತ್ರಿಕೆಯಲ್ಲಿ ಬಂದಿದೆ ಎಂದು ಹೇಳುತ್ತಿದ್ದಾರೆ. ಅದರ ಬಗ್ಗೆ ಕಠಿಣವಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಏಕೆಂದರೆ, ಅದಕ್ಕೆ ಸಂಬಂಧಪಟ್ಟಂತೆ ಕಾನೂನನ್ನು ತಂದಿದ್ದೇವೆ. ಅಂದರೆ, ಸಿ.ಆರ್.ಪಿ.ಸಿ. ಕಲಂ 133ರ ಅಡಿಯಲ್ಲಿ ಅವರ ಮೇಲೆ ಎಫ್.ಐ.ಆರ್. ಹಾಕಬೇಕು. ಅವರ ಮೇಲೆ ಯಾವುದೇ ರೀತಿಯ ಮುಲಾಜಿಲ್ಲದೆ ಕ್ರಮ ಆಗಬೇಕು ಎಂದು ಈಗಾಗಲೇ ಸರ್ಕಾರದ ಕಡೆಯಿಂದ ಆದೇಶ ಇದೆ. ಅದನ್ನು ನಮ್ಮ ಇಲಾಖೆಯಿಂದಾಗಲಿ ಅಥವಾ ಸರ್ಕಾರದಿಂದಾಗಲಿ ಎಲ್ಲೂ ಮಾಡುವುದಕ್ಕೆ ಕೊಡುವುದಿಲ್ಲವೆನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಐ) ವಿಷಯ:–ಬಾಗಲಕೋಟೆ ಜಿಲ್ಲೆ ಹುನಗುಂದ ಪುರಸಭೆಯ ವ್ಯಾಪ್ತಿಯಲ್ಲಿ ಸರ್ಕಾರದ ಅನುದಾನದಲ್ಲಿ ನಿರ್ಮಿಸಿದ ಶೌಚಾಲಯಗಳ ಸೂಕ್ತ ನಿರ್ವಹಣೆ ಆಗದಿರುವ ಬಗ್ಗೆ ಹಾಗೂ ಮಾರುಕಟ್ಟೆ ಅವ್ಯವಸ್ಥೆ ಕುರಿತು.

ಶ್ರೀ ಪಿ.ಹೆಚ್.ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ವಂದನೆಗಳನ್ನು ಸಲ್ಲಿಸುತ್ತೇನೆ. "ಸುಲಭ ಶೌಚಾಲಯಗಳಿಗೆ ಪುರಸಭೆ ಬೀಗ, ಅಭಿವೃದ್ಧಿಯಲ್ಲಿ ಪೋಲಾಯ್ತು ದುಡ್ಡು! ಇದ್ದೂ ಇಲ್ಲದಂತಾದ 7 ಶೌಚಾಲಯಗಳು" ಎಂಬ ಶೀರ್ಷಿಕೆಯು ದಿನಾಂಕ 12.08.2025ರಂದು ಕನ್ನಡ ದಿನಪತ್ರಿಕೆ 'ಸಂಯುಕ್ತ ಕರ್ನಾಟಕ' ದಲ್ಲಿ ಪ್ರಕಟಗೊಂಡಿರುವ ವಿಷಯವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸುತ್ತೇನೆ.

ಬಾಗಲಕೋಟೆ ಜಿಲ್ಲೆಯ ಹುನಗುಂದ ಪುರಸಭೆಯ ಆಡಳಿತ ಮಂಡಳಿಯ ಇಚ್ಛಾಶಕ್ತಿಯ ಕೊರತೆ ಹಾಗೂ ಅಧಿಕಾರಿಗಳ ದಿವ್ಯ ನಿರ್ಲಕ್ಷ್ಯದ ಪರಿಣಾಮವಾಗಿ ಸರ್ಕಾರ ನೀಡಿದ ಅನುದಾನದಲ್ಲಿ ಲಕ್ಷಾಂತರ ರೂಪಾಯಿ ಹಣವನ್ನು ಖರ್ಚು ಮಾಡಿ ಕಟ್ಟಿದ ಬಹುತೇಕ ಕಟ್ಟಡಗಳು ಉದ್ದೇಶಿತ ಕೆಲಸಕ್ಕೆ ಬಳಕೆಯಾಗದೆ ಹಾಳಾಗುತ್ತಿರುವುದು ದೊಡ್ಡ ದೌರ್ಭಾಗ್ಯ ಎನಿಸಿದೆ.

ಬಯಲು ಶೌಚ ನಿರ್ಮೂಲನೆಗಾಗಿ ಸರ್ಕಾರವು ಎಸ್.ಎಫ್.ಸಿ. ಯೋಜನೆ ಅಡಿಯಲ್ಲಿ 2008 ರಿಂದ 2012ರ ಅವಧಿಯಲ್ಲಿ ಪ್ರತಿ ಶೌಚಾಲಯಕ್ಕೆ 8 ರಿಂದ 10 ಲಕ್ಷ ರೂಪಾಯಿಗಳವರೆಗೆ ಖರ್ಚು ಮಾಡಿ ಹುನಗುಂದದಲ್ಲಿ ಮಹಿಳೆಯರಿಗಾಗಿ ಕಟ್ಟಿಸಲಾದ 7 ಸುಲಭ ಶೌಚಾಲಯಗಳನ್ನು ಬಳಕೆ ಮಾಡದ ಕಾರಣ ನಿರುಪಯುಕ್ತವಾಗಿವೆ. ಅವುಗಳಿಗೆ ಅಗತ್ಯ ಸೌಕರ್ಯಗಳನ್ನು ನೀಡದೆ, ಶೌಚಾಲಯಗಳ ಬಾಗಿಲುಗಳಿಗೆ ಬೀಗ ಜಡಿದಿದ್ದಾರೆ. ಹೀಗೆಯೇ ಹುನಗುಂದ ಹೊರವಲಯದಲ್ಲಿ 12 ಎಕರೆ ಪ್ರದೇಶದಲ್ಲಿ ನಿರ್ಮಿಸಲಾದ ಪುರಸಭೆಯ ಘನತ್ಯಾಜ್ಯ ವಿಲೇವಾರಿ ಘಟಕ ಕೂಡ ನಿರುಪಯುಕ್ತವಾಗಿದ್ದು, ಅದಕ್ಕಾಗಿ ಖರ್ಚು ಮಾಡಿದ ಲಕ್ಷಾಂತರ ಹಣ ಕೂಡ ಪೋಲಾಗಿದೆ ಎಂದು ವರದಿಯಾಗಿದೆ. ಅಲ್ಲದೆ 15 ವರ್ಷಗಳ ಹಿಂದೆ ನಿರ್ಮಿಸಿದ ತರಕಾರಿ ಮಾರುಕಟ್ಟೆಗೆ ಸರಿಯಾದ ರೀತಿಯ ಗೇಟ್ ಇಲ್ಲದ ಕಾರಣ ಕೇವಲ ವಾರದ ಸಂತೆಯ ದಿವಸಕ್ಕೆ ಮಾತ್ರ ಸೀಮಿತವಾಗಿದ್ದು, ಇನ್ನುಳಿದ ದಿನಗಳಲ್ಲಿ ಮಾರುಕಟ್ಟೆಯಲ್ಲಿ ಅನೈತಿಕ ಚಟುವಟಿಕೆಗಳು ನಡೆಯುತ್ತಿರುವುದು ಕೂಡ ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.

ರಾಜ್ಯ ಸರ್ಕಾರ ಈ ಎಲ್ಲಾ ವಿಚಾರಗಳನ್ನು ತುರ್ತು ಎಂದು ಪರಿಗಣಿಸಿ, ಈ ದಿವ್ಯ ನಿರ್ಲಕ್ಷ್ಯಗಳಿಗೆ ಕಾರಣರಾದ ಪುರಸಭೆಯ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳುವುದರ ಜೊತೆಗೆ ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಕಟ್ಟಿಸಿದ ಸಾರ್ವಜನಿಕ ಆಸ್ತಿಗಳ, ಕಟ್ಟಡಗಳ ಸದುಪಯೋಗ ಕುರಿತಂತೆ ಶೀಘ್ರವಾಗಿ ಅವಶ್ಯಕ ಕ್ರಮಗಳನ್ನು ಕೈಗೊಳ್ಳಬೇಕೆಂದು ಶೂನ್ಯ ವೇಳೆಯಲ್ಲಿ ರಾಜ್ಯ ಸರ್ಕಾರಕ್ಕೆ ಒತ್ತಾಯಿಸುತ್ತೇನೆ.

ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):– ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಭಾಪತಿಯವರು:– ಈಗ ಚುನಾವಣೆ ಪ್ರಸ್ತಾವಗಳು. ಶ್ರೀ ಎಸ್.ಎನ್.ಬೋಸರಾಜು, ಮಾನ್ಯ ಸಭಾನಾಯಕರು, ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು.

ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭಾ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ಇನ್ನು ಶೂನ್ಯ ವೇಳೆಯ ವಿಷಯ ಇದೆ.

ಸಭಾಪತಿಯವರು:– ಈಗ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ ನಿಯಮ 58-ಬಿ ಯನ್ನು ಓದಿ. ಅದರಲ್ಲಿ 5 ಎಂದು ಇದೆ. ಅದಕ್ಕಿಂತ ಹೆಚ್ಚಿಗೆ ಎಂದರೆ ಸಭಾಪತಿಯವರ ವಿವೇಚನೆಯಂತೆ 10 ಆಗುತ್ತದೆ. ಆದರೆ, ಪ್ರತಿದಿನ 16 ಮತ್ತು 18 ತೆಗೆದುಕೊಂಡಿದ್ದೇವೆ. ಇವತ್ತು 18 ಪ್ರಸ್ತಾವನೆಗಳು ಬಂದಿವೆ. ನಾನು ಇದರಲ್ಲಿ ಯಾವ ಸದಸ್ಯರ ಪ್ರಸ್ತಾವನೆಯನ್ನು ತೆಗೆದುಕೊಳ್ಳಲಿ ಮತ್ತೆ ಯಾವ ಸದಸ್ಯರ ಪ್ರಸ್ತಾವನೆಯನ್ನು ಬಿಡಲಿ? ಇವತ್ತು 10.00 ಗಂಟೆಯ ಒಳಗೆ ಯಾರು ಕೊಟ್ಟಿದ್ದಾರೆ, ಆ 10 ಪ್ರಸ್ತಾವನೆಗಳನ್ನು ತೆಗೆದುಕೊಂಡಿದ್ದೇನೆ.

ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ನಾನು 10.00 ಗಂಟೆಯ ಒಳಗಡೆಯೇ ನೀಡಿದ್ದೇನೆ.

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):– ಮಾನ್ಯ ಸಭಾಪತಿಯವರೇ, ಈಗ ನಿಲುವಳಿ ಸೂಚನೆಯೂ ಸಹ ಇದೆ.

ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ತಾವು ದೊಡ್ಡ ಮನಸ್ಸು ಮಾಡಿ 10 ರಿಂದ 15 ಮಾಡಿ.

ಸಭಾಪತಿಯವರು:– ನೀವು ಎಲ್ಲಾ ರೀತಿ ಮಾಡಿ ನನ್ನನ್ನು ಹಾಳು ಮಾಡಿದ್ದೀರಿ.

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೇ, ಈಗ ಯಾರು ಶೂನ್ಯ ವೇಳೆ ಪ್ರಸ್ತಾವನೆಗಳನ್ನು ನೀಡಿದ್ದಾರೆ, ತಾವು ಅವರಿಗೆ ಅವಕಾಶ ಮಾಡಿಕೊಡಿ.

ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ಇವತ್ತಿನ ಲಿಸ್ಟ್‌ನಲ್ಲಿ ಇರುವಂತಹವರಿಗೆ ಅವಕಾಶ ಮಾಡಿಕೊಡಿ.

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೇ, ಈಗ ಯಾರು ಲಿಸ್ಟ್‌ನಲ್ಲಿದ್ದಾರೆ ಅವರಿಗೆ ಅವಕಾಶ ಮಾಡಿಕೊಡಿ. ನೀವು ನಾಳೆಯಿಂದ ಕಡಿಮೆ ಮಾಡಿದರೆ ಚಿಂತೆಯಿಲ್ಲ.

ಸಭಾಪತಿಯವರು:– ಮಾನ್ಯ ವಿರೋಧ ಪಕ್ಷದ ನಾಯಕರೆ, ನಾನು ಬಹಳ ಸಮಾಧಾನದಿಂದ ತೆಗೆದುಕೊಳ್ಳುತ್ತಿದ್ದೇನೆ. ಈಗ ನಿಯಮದಲ್ಲಿ 5 ತೆಗೆದುಕೊಳ್ಳಬೇಕೆಂದು ಇದೆ. ಆದರೆ, ಸಭಾಪತಿಯವರ discretion ನಲ್ಲಿ 10 ತೆಗೆದುಕೊಂಡಿದ್ದೇನೆ. ಆದರೆ, ಮೊನ್ನೆಯ ದಿವಸ 16, ನಿನ್ನೆಯ ದಿವಸ 14 ಇವತ್ತು 18 ಇದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾಳೆ 20 ಬಂದರೆ ಏನು ಮಾಡಬೇಕು? ಆದರೆ, ತಾವುಗಳೇ time ಪ್ರಕಾರ ಮುಗಿಸಿ ಎಂದು ಹೇಳುತ್ತೀರಿ. ಅದಕ್ಕೆ ನಾನು ಏನು ಮಾಡಬೇಕೆಂದು ತಾವುಗಳೇ ಹೇಳಿ.

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೇ, ತಾವು ಒಂದು uniform ಆಗಿ ತೆಗೆದುಕೊಂಡುಬಿಡಿ.

ಸಭಾಪತಿಯವರು:– ಈಗ uniform ಆಗಿ ನಾಳೆಯಿಂದ 10 ಅನ್ನು ತೆಗೆದುಕೊಳ್ಳೋಣವೇ?

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೇ, ಆಯಿತು, ತೆಗೆದುಕೊಳ್ಳಿ ಚಿಂತೆ ಇಲ್ಲ. ಇಲ್ಲವಾದರೆ ಒಂದೊಂದು ದಿವಸ ಒಂದೊಂದು ರೀತಿಯ ನಿಯಮವಾಗುತ್ತದೆ.

ಸಭಾಪತಿಯವರು:– ಈಗ ಅದೇ ನನ್ನ ತಪ್ಪು.

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೇ, ಈಗ ನಿನ್ನೆಯ ದಿವಸ 5 ತೆಗೆದುಕೊಂಡಿರುತ್ತೀರಿ. ಆದರೆ, ಇವತ್ತು 20 ತೆಗೆದುಕೊಂಡಾಗ ಬೇರೆಯವರಿಗೆ hurt ಆಗುತ್ತದೆ.

ಸಭಾಪತಿಯವರು:– ನಾನು ನಾಳೆಯಿಂದ 5 ಪ್ರಸ್ತಾವನೆಗಳನ್ನು ಮಾತ್ರ ತೆಗೆದುಕೊಳ್ಳುತ್ತೇನೆ.

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೇ, ಅದನ್ನು ನಿಮ್ಮ ಪ್ರಕಾರ ತೆಗೆದುಕೊಳ್ಳಿ. ಇದಾದ ಮೇಲೆ ನಿಲುವಳಿ ಸೂಚನೆಯೂ ಸಹ ಇದೆ.

ಸಭಾಪತಿಯವರು:– ಆಯಿತು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒ) ವಿಷಯ:- ರಾಜ್ಯದ ಸಾವಿರಾರು ಖಾಸಗಿ ಶಿಕ್ಷಣ ಸಂಸ್ಥೆಗಳ ಮಾನ್ಯತೆ ನವೀಕರಣದಲ್ಲಿ ಆಗಿರುವ ಗೊಂದಲಗಳ ನಿವಾರಣೆ ಕುರಿತು.

ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ದಿನಾಂಕ 12.08.2025ರ "ಬೆಂಕಿ ಬೆಳಕು" ಎಂಬ ಪ್ರಾದೇಶಿಕ ದಿನಪತ್ರಿಕೆಯಲ್ಲಿ ಪ್ರಕಟವಾಗಿರುವಂತೆ ರಾಜ್ಯದ ಸಾವಿರಾರು ಖಾಸಗಿ ಶಿಕ್ಷಣ ಸಂಸ್ಥೆಗಳು ಮಾನ್ಯತೆ ನವೀಕರಣದಲ್ಲಿರುವ ಗೊಂದಲಗಳ ನಿವಾರಣೆ, ವಿದ್ಯಾರ್ಥಿಗಳ ಶುಲ್ಕದ ಮೇಲೆ ಜಿ.ಎಸ್.ಟಿ ಹೇರುವುದು ಸೇರಿದಂತೆ ಖಾಸಗಿ ಶಿಕ್ಷಣ ಸಂಸ್ಥೆಗಳ ವಿವಿಧ ಬೇಡಿಕೆಗಳಿಗೆ ಆಗ್ರಹಿಸಿ ರಾಯಚೂರು ಜಿಲ್ಲೆಯ ವಿವಿಧ ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟದಿಂದ ಬೃಹತ್ ಪ್ರತಿಭಟನೆ ನಡೆಸಲಾಗಿದೆ.

ಇತ್ತೀಚೆಗೆ ಶಾಲಾ ಕಾಲೇಜುಗಳ ಮಾನ್ಯತೆ ನವೀಕರಣದಲ್ಲಿರುವ ಗೊಂದಲಮಯ ಅಂಶಗಳನ್ನು ತೆಗೆದುಹಾಕಿ ನವೀಕರಣ ವ್ಯವಸ್ಥೆಯನ್ನು ಸರಳೀಕರಣಗೊಳಿಸುವುದು, ಅಗ್ನಿಶಾಮಕ ಸುರಕ್ಷತೆ ಪ್ರಮಾಣ ಪತ್ರ ಪಡೆಯುವಲ್ಲಿ ಭ್ರಷ್ಟಾಚಾರ ಮತ್ತು ವಿಳಂಬ ಆಗುತ್ತಿದ್ದು, ನಿಗದಿತ ಅವಧಿಯೊಳಗೆ ಅಗ್ನಿಶಾಮಕ ಸುರಕ್ಷತೆ ಪ್ರಮಾಣ ಪತ್ರ ಶಿಕ್ಷಣ ಸಂಸ್ಥೆಗಳಿಗೆ ದೊರಕುತ್ತಿಲ್ಲ. ಮೊದಲೇ ಶೈಕ್ಷಣಿಕವಾಗಿ ಹಿಂದುಳಿದ ಕಲ್ಯಾಣ ಕರ್ನಾಟಕ ಭಾಗಕ್ಕೆ ಎಲ್ಲಾ ಸೌಲಭ್ಯಗಳನ್ನು ನೀಡುವಂತೆ ಡಾ. ಡಿ.ಎಂ. ನಂಜುಂಡಪ್ಪ ವರದಿಯಲ್ಲಿ ಉಲ್ಲೇಖವಿದ್ದರೂ, ಈವರೆವಿಗೂ ಯಾವ ಸೌಲಭ್ಯವನ್ನೂ ನೀಡಿಲ್ಲ. ಖಾಸಗಿ ಶಾಲಾ ಕಾಲೇಜುಗಳಲ್ಲಿ ಕೆಲಸ ಮಾಡುವ ಸಿಬ್ಬಂದಿಗಳಿಗೆ ಸರ್ಕಾರದ ಆರೋಗ್ಯ ವಿಮೆ ಯೋಜನೆಗಳನ್ನು ನೀಡುವುದು; ಖಾಸಗಿ ಶಾಲಾ ಕಾಲೇಜುಗಳ ಮಾನ್ಯತೆ ನವೀಕರಣ ಸಮಯದಲ್ಲಿ ಕಾಲೇಜು ಕಟ್ಟಡ ಹೊಂದಿರುವ ಸಂಸ್ಥೆಗಳಿಗೆ ವಿಧಿಸಿರುವ ಭೂ-ಪರಿವರ್ತನಾ ಷರತ್ತುಗಳನ್ನು ತೆಗೆದುಹಾಕುವುದು; ಆರ್.ಟಿ.ಇ. ಕಂತುಗಳಲ್ಲಿರುವ ದೋಷ ಸರಿಪಡಿಸುವುದು; ಶಿಕ್ಷಣ ಕ್ಷೇತ್ರವನ್ನು ಜಿ.ಎಸ್.ಟಿ. ವ್ಯಾಪ್ತಿಯಿಂದ ಮುಕ್ತಗೊಳಿಸುವುದು; ಶಾಲಾ ಕಾಲೇಜುಗಳ ಶಿಕ್ಷಕರು ಮತ್ತು ಆಡಳಿತ ಮಂಡಳಿಯ ಮೇಲೆ ಆಗುತ್ತಿರುವ ಹಲ್ಲೆಗಳನ್ನು ತಡೆಗಟ್ಟುವುದು; ಪಠ್ಯ ಪುಸ್ತಕಗಳನ್ನು ಸರ್ಕಾರ ನಿಗಿದಿಪಡಿಸಿದ ದರದಲ್ಲಿ ಮುಕ್ತ ಮಾರುಕಟ್ಟೆಯಲ್ಲಿ ಲಭ್ಯವಾಗುವಂತೆ ಮಾಡುವುದು; ಗ್ರಾಮೀಣ ಭಾಗದ ಶಾಲಾ ಕಾಲೇಜುಗಳನ್ನು ಆಸ್ತಿ ತೆರಿಗೆಯಿಂದ ಮುಕ್ತಗೊಳಿಸುವುದು; ಶಿಕ್ಷಣ ಕ್ಷೇತ್ರದ ವಸತಿ ಶಾಲೆಗಳ ಪ್ರಾರಂಭ ಮತ್ತು ನಿರ್ವಹಣೆಗೆ ಸೂಕ್ತ ನಿಯಮಗಳನ್ನು ರಾಜ್ಯ ಸರ್ಕಾರ ರಚಿಸುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಪ್ರತಿಭಟನೆಯಲ್ಲಿ ತಮ್ಮ ಸಮಸ್ಯೆಗಳನ್ನು ತೋಡಿಕೊಂಡಿದ್ದಾರೆ.

ಅಲ್ಲದೆ ಚುನಾವಣೆ ಮತ್ತು ಇತರೆ ಸರ್ಕಾರಿ ಕಾರ್ಯಕ್ರಮಗಳಿಗೆ ಖಾಸಗಿ ಶಿಕ್ಷಣ ಸಂಸ್ಥೆಯ ಬಸ್ಸುಗಳನ್ನು ಬಳಕೆ ಮಾಡಲಾಗುತ್ತಿದೆ. ಆದರೆ, ಅದರ ವೆಚ್ಚವನ್ನು ಖಾಸಗಿ ಶಿಕ್ಷಣ ಸಂಸ್ಥೆಗಳೇ ಭರಿಸುತ್ತಿವೆ. ಆದ್ದರಿಂದ ಸಾರಿಗೆ ನಿಗಮಕ್ಕೆ ನೀಡಿದಂತೆ ವಾಹನದ ಇಂಧನ ವೆಚ್ಚ ಮತ್ತು ಚಾಲಕರ ಭತ್ಯೆಯನ್ನು ಸರ್ಕಾರದಿಂದ ನೀಡುವ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ವಿವಿಧ ಸಮಸ್ಯೆಗಳ ಪರಿಹಾರಕ್ಕಾಗಿ ಬೇಡಿಕೆ ಇಟ್ಟು ಪ್ರತಿಭಟನೆ ಮಾಡಿದ್ದಾರೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಂತಹ ಸಮಸ್ಯೆಗಳು ಕೇವಲ ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಿಗೆ ಮಾತ್ರವಲ್ಲದೇ ರಾಜ್ಯದ ಇತರೆ ಜಿಲ್ಲೆಗಳ ಖಾಸಗಿ ಮತ್ತು ಅನುದಾನಿತ ಶಿಕ್ಷಣ ಸಂಸ್ಥೆಗಳ ಸಮಸ್ಯೆಗಳಾಗಿದ್ದು, ಈ ಸಮಸ್ಯೆಗಳನ್ನು ಬಗೆಹರಿಸುವಂತೆ ಕ್ರಮಕೈಗೊಳ್ಳಲು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರನ್ನು ಶೂನ್ಯ ವೇಳೆಯಲ್ಲಿ ಒತ್ತಾಯಿಸುತ್ತೇನೆ.

ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):- ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

(ಮುಂದು)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(677) 13.08.2025 01.30 LL-AK (ಸಭಾಪತಿಯವರ ಉಪಸ್ಥಿತಿ)

ಓ) ವಿಷಯ: ಬೆಳಗಾವಿ ಜಿಲ್ಲೆಯಲ್ಲಿ ಜಮೀನುಗಳಿಗೆ ಹೋಗಲು ದಾರಿ ವಿಷಯವಾಗಿ ಪರಿಶಿಷ್ಟ ಯುವಕರಿಗೆ ಮರಕ್ಕೆ ಕಟ್ಟಿ ಹಲ್ಲೆ ಮಾಡಿರುವ ಕುರಿತು

\- - -

ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಬೆಳಗಾವಿ ಜಿಲ್ಲೆಯಲ್ಲಿ ಜಮೀನುಗಳಿಗೆ ಹೋಗುವ ದಾರಿಯ ವಿಷಯವಾಗಿ ಪರಿಶಿಷ್ಟ ಯುವಕರಿಗೆ ಮರಕ್ಕೆ ಕಟ್ಟಿ ಹಲ್ಲೆ ಮಾಡಿರುವ ಕುರಿತು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳು. ಪ್ರತಿಷ್ಠಿತ 'ವಾರ್ತಾಭಾರತಿ' ದಿನಪತ್ರಿಕೆಯಲ್ಲಿ ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲ್ಲೂಕಿನ ಸುಕ್ಷೇತ್ರ ಗೊಡಚಿ ಗ್ರಾಮದಲ್ಲಿ ಪರಿಶಿಷ್ಟ ಪಂಗಡಕ್ಕೆ ಸೇರಿದ ಇಬ್ಬರು ಯುವಕರನ್ನು ಮರಕ್ಕೆ ಕಟ್ಟಿ ಹಾಕಿ ಹಲ್ಲೆ ಮಾಡಿದ ಘಟನೆ ವರದಿಯಾಗಿದೆ. ಈ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ವಿಡಿಯೋ ವೈರಲ್ ಆಗಿದೆ.

ಹಲ್ಲೆ ಮಾಡಿದವರು ಲಿಂಗಾಯತ ಸಮುದಾಯದವರು ಎಂದು ದಾಖಲಾಗಿರುತ್ತದೆ. ಎಸ್‌ಟಿ ಸಮುದಾಯದ ಯುವಕರ ಮೇಲೆ ಹಲ್ಲೆ ಮಾಡಿರುವ ಬಗ್ಗೆ ಕಟಕೋಳ ಪೊಲೀಸ್ ಠಾಣೆಯಲ್ಲಿ ದೂರು, ಪ್ರತಿ ದೂರು ದಾಖಲಾಗಿದೆ.

ಹಲ್ಲೆ ಮಾಡಿರುವ ಆರೋಪದಡಿ ಲಿಂಗಾಯತ ಸಮಾಜದ ಈರಣ ಸಂಗಪ್ಪ, ಪಾಕನಟ್ಟಿ, ಬಸನಗೌಡ ನಿಂಗನಗೌಡ ಪಾಟೀಲ್, ಪುದೀಪ ಈರಣ ಪಾಕನಟ್ಟಿ, ನಿಂಗರಾಜ ಈರಪ್ಪ ಪಾಕನಟ್ಟಿ, ಸಚಿನ್ ದಾನಪ್ಪ ಪಾಕನಟ್ಟಿ, ಎಂಬುವವರ ವಿರುದ್ಧ ಕೊಲೆಯತ್ನ, ಮಾರಣಾಂತಿಕ ಹಲ್ಲೆ ಹಾಗೂ ಜಾತಿ ನಿಂದನೆ ದೂರು ದಾಖಲಾಗಿದೆ.

ಹಲ್ಲೆಗೊಳದಾದವರನ್ನು ಈರಣ್ಯ ವಿಠ್ಠಲ ನಾಯ್ಕರ ಹಾಗೂ ಲಕ್ಷ್ಮಣ ಮಲ್ಲಪ್ಪ ಚಿಪ್ಪಲಕಟ್ಟಿ ಎಂದು ಗುರುತಿಸಲಾಗಿದೆ. ಆಗಸ್ಟ್ 5 ರಂದೇ ಹಲ್ಲೆಗೊಳಗಾಗಿದ್ದು, ಇದು ತಡವಾಗಿ ಬೆಳಕಿಗೆ ಬಂದಿರುತ್ತದೆ. ಇದೊಂದು ಉದಾಹರಣೆ ಅಷ್ಟೆ.

ಮುಖ್ಯ ರಸ್ತೆ ಬದಿಯಲ್ಲಿರುವ ಜಮೀನುಗಳ ಮಾಲೀಕರು, ಹಿಂಬದಿ ಹೊಲಕ್ಕೆ ಹೋಗಿ ಉಳಮೆ ಮಾಡಲು ದಾರಿ ಬಿಡದೆ ಇರುವುದು ರಾಜ್ಯದಲ್ಲಿ ಇಂತಹ ಪ್ರಕರಣಗಳು ಹೆಚ್ಚಾಗಿ ಕಂಡು ಬಂದಿರುತ್ತಿವೆ.

ಜಮೀನುಗಳಿಗೆ ಹೋಗಲು ದಾರಿ ಸಮಸ್ಯೆಗಳನ್ನು ಸ್ಥಳೀಯ ತಹಶೀಲ್ದಾರ್ ನೇತೃತ್ವದಲ್ಲಿ ಬಗೆಹರಿಸಬೇಕು. ಇಲ್ಲವೇ ಸರ್ಕಾರವೇ ಇದಕ್ಕೆ ಹೊಲದ ದಾರಿ ನಕ್ಷೆಯ ಮೂಲಕ ಹಿಂಬದಿ ಹೊಲಗಳ ದಾರಿಯನ್ನು ತೋರಿಸಲು ಆದೇಶಿಸಬೇಕೆಂದು ತಮ್ಮ ಮೂಲಕ ಶೂನ್ಯ ವೇಳೆಯಲ್ಲಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಪಟ್ಟ ಸಚಿವರಿಂದ ನಂತರ ಉತ್ತರ ಒದಗಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಔ) ವಿಷಯ:- ಮಂಗಳೂರಿನ ಕೇಂದ್ರ ಕಾರಾಗೃಹಕ್ಕೆ ಅಳವಡಿಸಿರುವ ಜಾಮರ್ ನಿಂದ ಉಂಟಾಗಿರುವ ಸಮಸ್ಯೆಗಳ ಬಗ್ಗೆ

\- - -

ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಮಂಗಳೂರಿನ ಕೇಂದ್ರ ಕಾರಾಗೃಹಕ್ಕೆ ಅಳವಡಿಸಿರುವ ಜಾಮರ್ ನಿಂದ ಉಂಟಾಗಿರುವ ಸಮಸ್ಯೆಗಳ ಬಗ್ಗೆ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಅನುಮತಿ ನೀಡಿದ್ದಕ್ಕಾಗಿ ಧನ್ಯವಾದಗಳು.

ಮಂಗಳೂರಿನ ಕೋಟಿಯಾಲಬೈಲ ಪ್ರದೇಶದಲ್ಲಿ ಜಿಲ್ಲಾ ಕೇಂದ್ರ ಕಾರಾಗೃಹಕ್ಕೆ ಕಳೆದ 5 ತಿಂಗಳ ಹಿಂದೆ ಅಳವಡಿಸಿರುವ ಜಾಮರ್ ನಿಂದ ನೆಟ್‌ವರ್ಕ್ ಸಮಸ್ಯೆಗಳು ಇನ್ನೂ ಪರಿಹಾರವಾಗಿಲ್ಲ. ನಗರದ ಮುಖ್ಯ ಭಾಗದಲ್ಲಿ ಜೈಲು ಇದ್ದು ಸುತ್ತಮುತ್ತ ಹಲವಾರು ವಸತಿ ಸಮುಚ್ಚಯಗಳು, ಶಿಕ್ಷಣ ಸಂಸ್ಥೆಗಳು, ವಾಪಾರ ಕೇಂದ್ರಗಳಿವೆ . ಸುಮಾರು 1 ಕಿ.ಮೀ ದೂರದಲ್ಲಿ ಜಿಲ್ಲಾ ನ್ಯಾಯಾಲಯವಿದೆ, ಕಾರಾಗೃಹದಿಂದ 2 ಕಿ.ಮೀ ವ್ಯಾಪ್ತಿಯಲ್ಲಿ ವ್ಯಾಪಾರ ವಹಿವಾಟು, ಆನ್‌ಲೈನ್ ಶಿಕ್ಷಣ, ಯು.ಪಿ.ಐ. ನಿಂದ ಹಣ ಪಾವತಿಗೆ ತೊಂದರೆ ಹಾಗೂ ಕೋರ್ಟ್ ಕಲಾಪಗಳಿಗೂ ತುಂಬಾ ತೊಂದರೆಯಾಗಿರುವ ಬಗ್ಗೆ ಉದಯವಾಣಿ ದಿನಪತ್ರಿಕೆಯಲ್ಲಿ ಪ್ರಕಟಗೊಂಡ ವರದಿಯನ್ನು ಈ ಪತ್ರದೋಂದಿಗೆ ಲಗತ್ತಿಸಿದೆ.

ಈ ಬಗ್ಗೆ ಗೃಹ ಸಚಿವರ ಗಮನಕ್ಕೆ ತಂದಾಗ ಅವರು ಜೈಲಿನ ಅಧಿಕಾರಿಗಳಿಗೆ ಕಾರಾಗೃಹಕ್ಕೆ ಮಾತ್ರ ಜಾಮರ್ ಅನ್ನು ಸೀಮಿತಗೋಳಿಸಲು ಸೂಚಿಸಿದ್ದರು. ಆದರೆ, ಅಧಿಕಾರಿಗಳು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಆದ್ದರಿಂದ ವಕೀಲರ ಸಂಘವು ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ದೂರು ದಾಖಲಿಸಿರುತ್ತಾರೆ

ಮಂಗಳೂರಿನ ಜಿಲ್ಲಾ ಕಾರಾಗೃಹವನ್ನು ಬಂಟ್ವಾಳ ತಾಲ್ಲೂಕಿನ ಬಾಳೆ ಪುಣಿಗೆ ವರ್ಗಾಯಿಸಲು ಕಳೆದ 06 ವರ್ಷಗಳಿಂದ ಕಾಮಗಾರಿಗಳು ನಡೆಯುತ್ತಿದ್ದು, ಒಂದು ಸಾವಿರ ಖೈದಿಗಳನ್ನು ಇಡಬಹುದಾದ ಮತ್ತು ಆಡಳಿತ ಕಛೇರಿಯು ಅಡುಗೆ ಕೋಣೆಗಳು ಪೂರ್ಣಗೊಂಡಿದ್ದು ಸದರಿ ಜೈಲಿನ ವರ್ಗಾವಣೆಗೆ ಬೇಕಾದ ಅವಶ್ಯವಾಗಿರುವ ಆವರಣ ಗೋಡೆ ಹಾಗೂ ರಸ್ತೆಯನ್ನು ಪೂರ್ಣಗೊಳಿಸದೆ ಜೈಲು ಅನಾಥವಾಗಿರುವ ವಿಷಯವನ್ನು ಗೃಹ ಸಚಿವರ ಗಮನಕ್ಕೆ ತರಲಾಗಿದೆ.

ಮಾನ್ಯ ಗೃಹ ಸಚಿವರು ಅಪೂರ್ಣಗೊಂಡಿರುವ ಸದರಿ ಕಾಮಗಾರಿಗಳನ್ನು, ಪೂರ್ಣಗೊಳಿಸಲು ರೂ.70/- ಕೋಟಿಗಳ ಅವಶ್ಯಕತೆ ಇದ್ದು, ಇದನ್ನು ಬಿಡುಗಡೆಗೊಳಿಸುವುದಾಗಿ ಆಶ್ವಾಸನೆ ನೀಡಿದ್ದರು. ಇದುವರೆಗೂ ಆಶ್ವಾಸನೆ ಈಡೇರಿರುವುದಿಲ್ಲ. ಪ್ರಸ್ತುತ ಇರುವ ಜೈಲಿನ ಖೈದಿಗಳ ಸಂಖ್ಯೆ ಎರಡು ಪಟ್ಟು ಹೆಚ್ಚಾಗಿದ್ದು, ಪ್ರತಿದಿನ ಗಲಾಟೆ ಹೊಡೆದಾಟ ನಡೆಯುತ್ತಿರುತ್ತದೆ. ಜೈಲಿನಲ್ಲಿನ ಖೈದಿಗಳ ಹೊಡೆದಾಟದ ಈ ಸುದ್ದಿ ಪ್ರಮುಖವಾಗಿದೆ. ಆದುದರಿಂದ ಇದೊಂದು ಸಾರ್ವಜನಿಕ ಮಹತ್ವವುಳ್ಳ ವಿಷಯವಾಗಿರುವುದರಿಂದ ಸದನದ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಬಯಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಡಾ॥ ಜಿ. ಪರಮೇಶ್ವರ (ಗೃಹ ಮಂತ್ರಿಗಳು):- ಮಾನ್ಯ ಸಭಾಪತಿಯವರೇ, ಈ ವಿಷಯ ನನ್ನ ಗಮನಕ್ಕೆ ಬಂದ ನಂತರ ನಾನೇ ಖುದ್ದಾಗಿ ದಿನಾಂಕ 13.06.2025ರಂದು ಮಂಗಳೂರಿನ ಕೇಂದ್ರ ಕಾರಾಗೃಹಕ್ಕೆ ಭೇಟಿ ನೀಡಿ ಪರಿಶೀಲಿಸಿರುತ್ತೇನೆ. ನಂತರ, M/s. Telecommunications Consultants India Ltd., ಅವರಿಗೆ ಜಾಮರ್‌ನಿಂದ ಪಕ್ಕದ ಮನೆಗಳಿಗೆ, ಕಛೇರಿಗಳಿಗೆ, ಹತ್ತಿರದಲ್ಲಿರತಕ್ಕಂತಹ ಕಟ್ಟಡಗಳಿಗೆ ತೊಂದರೆಯಾಗುತ್ತಿದೆ. ಆದುದರಿಂದ, frequency ಯನ್ನು recalibration ಮಾಡಿ ಎಂದು ಸೂಚನೆ ಕೊಟ್ಟು ಬಂದಿರುತ್ತೇನೆ. ಆದರೆ, ಅದು ಇಲ್ಲಿಯವರೆಗೂ ಆಗಿರುವುದಿಲ್ಲವೆಂದು ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದಿದ್ದಾರೆ. ಅದನ್ನು ಆದಷ್ಟು ಶೀಘ್ರವಾಗಿ ಮಾಡಿಸುವುದಕ್ಕೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ. ಈ ಕಾರಾಗೃಹ ಮಂಗಳೂರು ಸಿಟಿಯ ಮಧ್ಯಭಾಗದಲ್ಲಿ ಇದೆ. ಇದರಿಂದಾಗಿ, ತೊಂದರೆ ಏನಾಗುತ್ತಿದೆಯೆಂದರೆ, ಅಲ್ಲಿ ಕಾರಾಗೃಹದ ಕಾಂಪೌಂಡ್ ಕೂಡ ಬಹಳ ಎತ್ತರ ಇರುವುದಿಲ್ಲ. ಇದರಿಂದಾಗಿ, ಬಹಳಷ್ಟು ಸಮಯದಲ್ಲಿ ಕೆಲವರು ಕಾರಾಗೃಹದೊಳಗೆ ಮಾರಕಾಸ್ತ್ರಗಳನ್ನು ಹಾಗೂ ಡ್ರಗ್ಸ್‌ಗಳನ್ನು ಹಾಕುತ್ತಾರೆಂಬುದು ನಮ್ಮ ಗಮನಕ್ಕೆ ಬಂದಿರುತ್ತದೆ. ಆ ಉದ್ದೇಶಕ್ಕಾಗಿ ಬಂಟ್ವಾಳ ಹತ್ತಿರ ಸುಮಾರು 63 ಎಕರೆ ಪ್ರದೇಶದಲ್ಲಿ ಹೊಸ ಕೇಂದ್ರ ಕಾರಾಗೃಹವನ್ನು ಕಟ್ಟಬೇಕೆಂದು ತೀರ್ಮಾನ ಮಾಡಿದ್ದು, ಈಗಾಗಲೇ ಸುಮಾರು 120 ಕೋಟಿ ಖರ್ಚು ಮಾಡಿ, ಕಟ್ಟಡಗಳನ್ನು ನಿರ್ಮಿಸಲಾಗಿರುತ್ತದೆ. ಇನ್ನು ರೂ.70/- ರಿಂದ ರೂ.80/- ಕೋಟಿ ರೂಪಾಯಿ ಖರ್ಚು ಮಾಡಿದರೆ, ಆ ಕಾರಾಗೃಹಕ್ಕೆ ಬೇಕಾದಂತಹ ಕಾಂಪೌಂಡ್ ಮತ್ತು ಇದಕ್ಕೆ ಬೇಕಾದಂತಹ towers ಹಾಕಿದ ನಂತರ, ಕೇಂದ್ರ ಕಾರಾಗೃಹವನ್ನು ಅಲ್ಲಿಗೆ ಶಿಫ್ಟ್ ಮಾಡಿಸುತ್ತೇವೆ. ಈ ವಿಷಯದ ಬಗ್ಗೆ ನಾನು ಈಗಾಗಲೇ ಮಾನ್ಯ ಲೋಕೋಪಯೋಗಿ ಇಲಾಖೆಯ ಮಂತ್ರಿಗಳ ಜೊತೆ ಮಾತನಾಡಿರುತ್ತೇನೆ. ಏಕೆಂದರೆ, ಅವರ ಇಲಾಖೆಯ ವತಿಯಿಂದ ಆ ಕಟ್ಟಡವನ್ನು ನಿರ್ಮಾಣ ಮಾಡುತ್ತಿದ್ದಾರೆ. ಆದುದರಿಂದ, ಅವರು ಕೂಡ ಅಗತ್ಯ ಹಣ ಬಿಡುಗಡೆ ಮಾಡಿದರೆ, ಆ ಕಟ್ಟಡ ಕಾಮಗಾರಿಯನ್ನು ಸಂಪೂರ್ಣ ಮಾಡುತ್ತೇವೆಂದು ತಿಳಿಸಿರುತ್ತಾರೆ. ಅದರಿಂದಾಗಿ, ಮಾನ್ಯ ಮುಖ್ಯಮಂತ್ರಿಗಳಿಗೆ ಈ ಬಾರಿಯ ಬಜೆಟ್‌ನಲ್ಲಿ ಪ್ರಾವಿಷನ್ ಮಾಡಿಕೊಡಬೇಕೆಂದು ವಿನಂತಿ ಮಾಡಿರುತ್ತೇನೆ. ಆದಷ್ಟು ಶೀಘ್ರವಾಗಿ ಕಾಂಪೌಂಡ್ ಅನ್ನು ಮಾಡಿ ಆ ಕಾರಾಗೃಹವನ್ನು ಅಲ್ಲಿಗೆ ಶಿಫ್ಟ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಸಭಾಪತಿಯವರು:- ಮುಂದಿನ ವಿಷಯ ಶ್ರೀಮತಿ ಹೇಮಲತಾ ನಾಯಕ್‌ರವರದ್ದು.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀಮತಿ ಹೇಮಲತಾ ನಾಯಕ್ ಕೆ. ರವರು ಸದನದಲ್ಲಿ ಗೈರು ಹಾಜರಾಗಿದ್ದರು)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಂ) ವಿಷಯ:– ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿ ರಸ್ತೆಗಳು ಹಾಳಾಗಿರುವ ಬಗ್ಗೆ.

– – –

ಶ್ರೀ ಮಂಜುನಾಥ ಭಂಡಾರಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳು.

"ರಸ್ತೆ ಮಾಯಾ ಗ್ರಾಮಸ್ಥರು ಹೈರಾಣ?" ಎಂಬ ಶೀರ್ಷಿಕೆಯಡಿ ದಿನಾಂಕ 14/06/2025ರ 'ವಿಜಯ ಕರ್ನಾಟಕ' ದಿನಪತ್ರಿಕೆಯಲ್ಲಿ ವರದಿಯಾಗಿರುತ್ತದೆ.

ಜನ, ಮನೆ ನಿಬಿಡತೆ ಹೊಂದಿರುವ ಹತ್ತಾರು ಹಳ್ಳಿಗಳ ಸಮುಚ್ಚಯ ಸಂದಿಸುವ ಸಂಪರ್ಕ ರಸ್ತೆಯೊಂದು ಮಾಯವಾಗಿಬಿಟ್ಟಿದೆ. ಜನ ಬೆಳಗ್ಗೆ ಮನೆಯಿಂದ ಹೊರಡಲು ಯೋಚಿಸುವಂತಾಗಿದೆ. ಶಾಲಾ ವಾಹನಗಳು ರಸ್ತೆಯಲ್ಲಿ ಪಯಣಿಸಲು ಭಯಪಡುವಂತಾಗಿದೆ. ಅಂಪಾರು ಗ್ರಾಮ ಪಂಚಾಯಿತಿಯ ಕೊರಾಳಕಡು ಬಲಾಡಿ ಸಂಪರ್ಕ ರಸ್ತೆಯ ದುರವಸ್ಥೆಯಿದು.

ದಶಕದ ಹಿಂದೆ ಗ್ರಾಮಸಡಕ್ ಯೋಜನೆಯಡಿ ನಿರ್ಮಿತ ರಸ್ತೆಯನ್ನು ಈಗ ದುರ್ಬಿನ್ ಹಾಕಿ ಹುಡುಕುವಂತಾಗಿದೆ. ಡಾಂಬರು ಮಾಯವಾಗಿ ಜಲ್ಲಿಕಲ್ಲುಗಳು ಮಾತ್ರ ಉಳಿದುಕೊಂಡಿದೆ. ಅದೇ ರೀತಿ ಕುಂದಾಪುರ ತಾಲೂಕಿನ ಅಂಪಾರು ಮುಳ್ಳುಗುಡ್ಡೆ ಹಾಡಾಳಿ ರಸ್ತೆ, ಅಡಿಕೆಕೊಡ್ಲು ನೂಜಾಡಿ ರಸ್ತೆ, ಕೋಟೇಶ್ವರ ಚಿಟಬೆಟ್ಟುರಸ್ತೆ, ಕಂದಾವರದಿಂದ ಬಸೂರು ಸಂಪರ್ಕಿಸುವ ರಸ್ತೆ, ಆನಗಳ್ಳಿ ಆಚಾರ್ ಕೊಡ್ಲು ರಸ್ತೆಗಳೂ ಸೇರಿದಂತೆ ಉಡುಪಿ ಜಿಲ್ಲೆಯ ಬಹುತೇಕ ರಸ್ತೆಗಳು ತೀವ್ರ ರೀತಿಯಲ್ಲಿ ಹದಗೆಟ್ಟು ಹೋಗಿದ್ದು, ರಸ್ತೆಯ ಅಲ್ಲಲ್ಲಿ ಬಿದ್ದಿರುವ ಆಳವಾದ ಹೊಂಡಗಳು ನಾಗರಿಕರ ದೃತಿಗೆಡಿಸಿದೆ.

ಕೊರಾಳಕಡು ಬಲಾಡಿ ಸಂಪರ್ಕ ರಸ್ತೆಗೆ ಹೊಂದಿಕೊಂಡು 10 ಪರಿಶಿಷ್ಟ ಜಾತಿ ಕುಟುಂಬ, 1 ಕೊರಗ ಕುಟುಂಬ, ಇತರೆ ವರ್ಗದ 209 ಕುಟುಂಬಗಳು ನೆಲೆಸಿವೆ. 1000 ಮೇಲ್ಪಟ್ಟು ಜನಸಂಖ್ಯೆ ಹೊಂದಿದ್ದು 900 ಮತದಾರರು ಇದ್ದಾರೆ. ಯಾವುದೇ ಹಾಕುವಂತಾಗಿದೆ. ಅನೇಕ ಬೈಕ್ ಸವಾರರು ಬಿದ್ದು ಗಾಯಗೊಂಡಿದ್ದಾರೆ. ಅನಾರೋಗ್ಯ ಪೀಡಿತರು, ವಾಹನ ರಸ್ತೆಗಿಳಯಲು ಹಿಂದೇಟು. ಗರ್ಭಿಣಿಯರು ಸಂಚರಿಸಲಾಗದ ಸ್ಥಿತಿ ಉದ್ಭವಿಸಿದೆ.

2010ರಲ್ಲಿ ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆಯಡಿ ನಿರ್ಮಿತವಾದ ರಸ್ತೆಗಳು ಈವರೆಗೂ ದುರಸ್ತಿ ಕಂಡಿಲ್ಲ. ಡಾಂಬರು ಕಿತ್ತುಹೋಗಿ ಜಲ್ಲಿಕಲ್ಲು, ಮಣ್ಣು ಮಾತ್ರ ಉಳಿದಿದೆ. ವಾಹನ ಹೊಂದಿರುವವರು ವಾಹನ ಮನೆಯಿಂದ ಹೊರತೆಗೆಯದೇ, ಬಾಡಿಗೆ ವಾಹನಗಳು ಊರಿಗೆ ಬಾರದ ಸ್ಥಿತಿ ತಲೆದೋರಿದೆ. ಶಾಲಾ ವಾಹನಗಳು ಭೀತಿಯಲ್ಲಿ ಪಯಣಿಸುತ್ತಿವೆ. ಸಾರ್ವಜನಿಕ ಹಿತದೃಷ್ಟಿಯಿಂದ ರಸ್ತೆಗಳನ್ನು ತುರ್ತಾಗಿ ನಿರ್ಮಾಣ ಮಾಡಿ ಸಮಸ್ಯೆಗೆ ಶಾಶ್ವತ ಪರಿಹಾರ ನೀಡಬೇಕಾಗಿ ಶೂನ್ಯವೇಳೆಯಲ್ಲಿ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರನ್ನು ಒತ್ತಾಯಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಪಟ್ಟ ಸಚಿವರಿಂದ ನಂತರ ಉತ್ತರ ಒದಗಿಸಲಾಗುವುದು.

ಆಃ) ವಿಷಯ:- ಕಲಬುರಗಿ ಜಿಲ್ಲೆ, ಚಿತ್ತಾಪುರ ತಾಲ್ಲೂಕಿನ ವಾಡಿ ಪಟ್ಟಣದ ಬಸವಮಣಿ ನಿವಾಸಿಗಳಿಗೆ ಹಕ್ಕು ಪತ್ರ ನೀಡುವ ಬಗ್ಗೆ

\- - -

ಡಾ. ಬಿ.ಜಿ. ಪಾಟೀಲ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳು.

ದಿನಾಂಕ: 12/08/2025ರಂದು 'ಪ್ರಜಾವಾಣಿ'ಯಲ್ಲಿ ಪ್ರಕಟವಾದ "ಹಕ್ಕು ಪತ್ರ ಇಲ್ಲದೆ ಕಳೆಯಿತು 60 ವರ್ಷ` ಕಲಬುರಗಿ ಜಿಲ್ಲೆ, ಚಿತ್ತಾಪುರ ತಾಲ್ಲೂಕು, ವಾಡಿ ಪಟ್ಟಣದ ಬಸವನಖಣಿ, ನಿವಾಸಿಗಳು ಆರ್ಥಿಕವಾಗಿ ಹಿಂದುಳಿದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಜಾತಿಗೆ ಸೇರಿದವರಾಗಿದ್ದು, ಸುಮಾರು 400ಕ್ಕೂ ಅಧಿಕ ಮನೆಗಳದ್ದು ಸುಮಾರು 1,088 ಜನಸಂಖ್ಯೆ ಹೊಂದಿರುವ 60ಕ್ಕೂ ಅಧಿಕ ಈ ವರ್ಷಗಳಿಂದ ವಾಸ್ತವ್ಯ ಮಾಡುತ್ತಿರುವ ಕುಟುಂಬಗಳಿಗೆ ಇಲ್ಲಿಯವರೆಗೂ ಹಕ್ಕು ಪತ್ರ ವಿತರಣೆಯಾಗಿರುವುದಿಲ್ಲ. ನಿತ್ಯ ಬೆಳಗ್ಗೆ ಎದ್ದು ಕೂಲಿ ಕೆಲಸಕ್ಕೆ ತೆರಳುವ ಇಲ್ಲಿನ ಜನರ ಪುರಕಲ್ಲು ಮನೆ. ಮನೆ ಮುಂದೆಯೇ ಹರಿಯುವ ಕೊಳಚೆ ನೀರು, ಬಯಲು ಶೌಚಕ್ಕೆ ಹೋಗುವ ದುಸ್ಥಿತಿ. ಪಹಣಿಯಲ್ಲಿ ಸರ್ಕಾರಿ ಜಮೀನು ಎಂಬುದಾಗಿ ನಮೂದಾಗಿರುವುದರಿಂದ ಯಾವುದೇ ಸರ್ಕಾರಿ ಸೌಲಭ್ಯ ಹಾಗೂ ಸಾಲ ಸೌಲಭ್ಯಗಳಿಂದ ವಂಚಿತರಾಗಿರುವುದರ ಜೊತೆಗೆ ಇಲ್ಲಿನ ನಿವಾಸಿಗಳಿಗೆ ಇಲ್ಲಿಯವರೆಗೂ ಹಕ್ಕುಪತ್ರ ವಿತರಣೆಯಾಗಿರುವುದಿಲ್ಲ, ಹಕ್ಕುಪತ್ರಕ್ಕಾಗಿ ಹಲವು ದಶಕಗಳ ಬೇಡಿಕೆ ಇದ್ದು, ಅನಧಿಕೃತ ಮನೆಗಳನ್ನು ಸಕ್ರಮಗೊಳಿಸಲು ಕಳೆದ 10 ವರ್ಷಗಳ ಹಿಂದೆಯೇ ಚಲನ್ ತುಂಬಿ ಅರ್ಜಿ ಸಲ್ಲಿಸಿ ಜಾತಕ ಪಕ್ಷಿಯಂತೆ ಕಾದು ಕುಳಿತಿದ್ದರೂ ಕೂಡಾ ಇಂದಿನವರೆಗೂ ಹಕ್ಕುಪತ್ರ ಭಾಗ್ಯ ಮಾತ್ರ ಸಿಕ್ಕಿಲ್ಲ.

ಆದ ಕಾರಣ, ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ, ಬಸವನಖಣಿ ನಿವಾಸಿಗಳಿಗೆ ಹಕ್ಕು ಪತ್ರ ನೀಡುವಂತೆ ಮಾನ್ಯ ಸಚಿವರನ್ನು ಶೂನ್ಯ ವೇಳೆಯಲ್ಲಿ ಆಗ್ರಹಿಸುತ್ತೇನೆ.

ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಪಟ್ಟ ಸಚಿವರಿಂದ ನಂತರ ಉತ್ತರ ಒದಗಿಸಲಾಗುವುದು.

(ಮುಂದು)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(678) 13.08.2025 1.40 ವೈಎಲ್-ಆರ್ಎನ್ (ಸಭಾಪತಿಯವರ ಉಪಸ್ಥಿತಿ)

ಕ) ವಿಷಯ:- ಮೈಸೂರು ವಿಶ್ವವಿದ್ಯಾಲಯದಲ್ಲಿ ಖಾಯಂ ಬೋಧಕರ ಕೊರತೆ, ಸಮರ್ಪಕವಾಗಿ ನಡೆಯದ ಕ್ಯಾಂಪಸ್ ಸೆಲೆಕ್ಷನ್ ಖಾಸಗೀ ಶಿಕ್ಷಣಗಳ ಪೈಪೋಟಿ ಮತ್ತು ಜಾತಿ ರಾಜಕಾರಣದಿಂದ ವಿದ್ಯಾರ್ಥಿಗಳ ಪ್ರವೇಶಾತಿ ಕುಸಿದಿರುವ ಬಗ್ಗೆ

ಶ್ರೀ ಚಿದಾನಂದ್ ಎಂ.ಗೌಡ (ಪದವೀಧರರ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಇಂದಿನ 'ವಿಜಯ ಕರ್ನಾಟಕ' ದಿನಪತ್ರಿಕೆಯಲ್ಲಿ 'ಮೈಸೂರು ವಿವಿಯ 9 ವಿಭಾಗಗಳಿಗೆ ವಿದ್ಯಾರ್ಥಿಗಳೇ ಇಲ್ಲ, 20 ವಿಷಯಗಳಿಗೆ ಸಿಇಟಿ ರದ್ದು, ಪ್ರವೇಶ ಬಯಸಿ ಕಳೆದ ವರ್ಷ ಬಂದ ಅರ್ಜಿಗಳು 9,000, ಈ ವರ್ಷ ಕೇವಲ 5,119, ಪಿ.ಜಿ.ಗೆ ವಿದ್ಯಾರ್ಥಿಗಳ ಬರ! ಈ ತಲೆಬರಹ ಅಡಿ ಪ್ರಕಟಗೊಂಡಿರುವಂಥ ವಿಚಾರಕ್ಕೆ ಸಂಬಂಧಿಸಿದಂತೆ, ಶತಮಾನ ಕಂಡಿರುವ ಮೈಸೂರು ವಿಶ್ವವಿದ್ಯಾಲಯದಲ್ಲಿ ಪ್ರವೇಶ ಪಡೆಯಲು ವಿದ್ಯಾರ್ಥಿಗಳು ಹಿಂದೇಟು ಹಾಕಿದ ಪರಿಣಾಮ ಈ ವರ್ಷ 9 ವಿಭಾಗಗಳು ಮುಚ್ಚುವ ಭೀತಿ ಎದುರಿಸುತ್ತಿವೆ. ಮೈಸೂರು ವಿವಿಯ ಸ್ನಾತಕೋತ್ತರ ಪದವೀಧರ ಎಂದರೆ ಹಿಂದೆ ಬಹಳ ಬೆಲೆಯಿತ್ತು. ರಾಜ್ಯದ ಇತರೆ ವಿವಿಗಳಿಗಿಂತ ಹೆಚ್ಚು ತಾರಾ ಮೌಲ್ಯವಿತ್ತು. ಒಂದೊಳ್ಳೆ ಬ್ರಾಂಡ್ ಕೂಡಾ ಇತ್ತು. ಆದರೆ, ಇಂದು ವಿವಿ ತನ್ನ ತಾರಾ ಆಕರ್ಷಣೆಯನ್ನೇ ಕಳೆದುಕೊಳ್ಳುತ್ತಿದೆ. 9 ವಿಭಾಗಗಳಿಗೆ ವಿದ್ಯಾರ್ಥಿಗಳೇ ಇಲ್ಲ, 20 ವಿಷಯಗಳಿಗೆ ಸಿಇಟಿ ರದ್ದು ಮಾಡಲಾಗಿದೆ. ಕಳೆದ ವರ್ಷ ಪ್ರವೇಶ ಬಯಸಿ ಬಂದ ಅರ್ಜಿಗಳು 9000 ಆಗಿದ್ದು, ಈ ವರ್ಷ ಕೇವಲ 5,119 ಅರ್ಜಿಗಳು ಬಂದಿವೆ. ಅದರಲ್ಲಿ 4833 ವಿದ್ಯಾರ್ಥಿಗಳು ಮಾತ್ರ ಸಾಮಾನ್ಯ ಪ್ರವೇಶ ಪರೀಕ್ಷೆ ಎದುರಿಸಿದ್ದಾರೆ. ಮೈಸೂರು ವಿವಿಯಲ್ಲಿ 58 ವಿಷಯಗಳನ್ನು ವಿದ್ಯಾರ್ಥಿಗಳು ವ್ಯಾಸಂಗ ಮಾಡಲು ಅವಕಾಶವಿದೆ, ಇದರಲ್ಲಿ 20 ವಿಭಾಗಗಳಿಗೆ ಕಡಿಮೆ ಅರ್ಜಿಗಳು ಬಂದಿವೆ.

ಎಂಎ ಸಂಸ್ಕೃತ-02; ಎಂಎಸ್ಸಿ ಮಾಹಿತಿ ತಂತ್ರಜ್ಞಾನ-02; ಎಂಎ ಹಿಂದಿ-02; ಎಂಎಸ್ಸಿ ಅನಿಮೇಶನ್-03; ಎಂಎಸ್ಸಿ ಹೂಮನ್ ಡೆವಲಪ್ಮೆಂಟ್-09; ಎಂಟೆಕ್ ಮೆಟರಿಯಲ್ ಸೈನ್ಸ್-II; ಎಂಎ ಸಾರ್ವಜನಿಕ ಆಡಳಿತ ಮಾನವ-ಶಾಸ್ತ್ರ-12 ಅರ್ಜಿಗಳು ಬಂದಿವೆ. ಯಾವುದೇ ವಿಭಾಗವನ್ನು ನಡೆಸಬೇಕಾದರೆ ಕನಿಷ್ಠ-15 ವಿದ್ಯಾರ್ಥಿಗಳು ದಾಖಲಾಗಿರಬೇಕು. ಹೀಗಾಗಿ 15 ಕ್ಕಿಂತ ಕಡಿಮೆ ಅರ್ಜಿ ಬಂದಿರುವ 9 ವಿಭಾಗಗಳಿಗೆ ಮುಚ್ಚುವ ಆತಂಕ ಎದುರಾಗಿದೆ.

ಕೇಂದ್ರ ಸರ್ಕಾರ ಸೆಂಟ್ರಲ್ ಆಫ್ ಎಕ್ಸಲೆನ್ಸ್ ಎಂಬ ಅಭಿಯಾನದಡಿಯಲ್ಲಿ ಮೈಸೂರು ವಿವಿಗೆ ಭರಪೂರವಾದ, ಅನುದಾನವನ್ನು ಸಹ ನೀಡಿತ್ತು. ಆದರೆ ಖಾಯಂ ಬೋಧಕರ ಕೊರತೆ, ಖಾಸಗಿ ಶಿಕ್ಷಣ ಸಂಸ್ಥೆಗಳ ಪೈಪೋಟಿ, ವಿವಿಯಿಂದ ಸಮರ್ಪಕವಾಗಿ ನಡೆಯದ ಕ್ಯಾಂಪಸ್ ಸೆಲಕ್ಷನ್, ಪ್ರಾಧ್ಯಾಪಕರ ಜಾತಿರಾಜಕಾರಣ ಈ ಎಲ್ಲಾ ಕಾರಣಗಳಿಂದ ವಿವಿ ತನ್ನ ತಾರಾಕರ್ಷಣೆಯನ್ನು ಕಳೆದುಕೊಳ್ಳುತ್ತಿದೆ. ವಿವಿಗೆ ಹೆಸರು ತರುವಂತಹ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಾಧ್ಯಾಪಕರನ್ನು ನೇಮಕ ಮಾಡಿ ವಿದ್ಯಾರ್ಥಿಗಳನ್ನು ಆಕರ್ಷಿಸಿ ಈ ಹಿಂದಿನ ಬ್ರಾಂಡ್ ಅನ್ನು ಉಳಿಸಬೇಕೆಂದು ತಮ್ಮ ಮೂಲಕ ಮಾನ್ಯ ಉನ್ನತ ಶಿಕ್ಷಣ ಸಚಿವರನ್ನು ಒತ್ತಾಯಿಸುತ್ತೇನೆ.

ಡಾ॥ ಎಂ.ಸಿ.ಸುಧಾಕರ್ (ಉನ್ನತ ಶಿಕ್ಷಣ ಸಚಿವರು):- ಮಾನ್ಯ ಸಭಾಪತಿಯವರೇ, ನಾನು ಸಹ ಪತ್ರಿಕೆಯಲ್ಲಿ ಪ್ರಕಟವಾಗಿರುವಂಥ ಮಾಹಿತಿಯನ್ನು ನೋಡಿದ್ದೆನು. ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಯಾವ ರೀತಿಯ ಪರಿಸ್ಥಿತಿ ಇದೆ ಎಂಬುದು ತಮಗೂ ಸಹ ಗೊತ್ತಿದೆ. ಕನಿಷ್ಠ 15 ವಿದ್ಯಾರ್ಥಿಗಳು ದಾಖಲಾಗಿಲ್ಲದ ಪಕ್ಷದಲ್ಲಿ ಅದೊಂದು ವಿಭಾಗ ನಡೆಸಲು ಆಗುವುದಿಲ್ಲ. ಭಾಷಾ ವಿಭಾಗಕ್ಕೆ ಸಂಬಂಧಿಸಿದಂತೆ, 10 ವಿದ್ಯಾರ್ಥಿಗಳಿದ್ದರೆ ಭಾಷಾ ವಿಭಾಗವನ್ನು ನಡೆಸಲಿಕ್ಕೆ ಸಾಧ್ಯ. ಇದು ಕೇವಲ ಮೈಸೂರು ವಿಶ್ವವಿದ್ಯಾಲಯಕ್ಕೆ ಮಾತ್ರ ಸೀಮಿತವಾಗಿಲ್ಲ, ಮಂಗಳೂರು ವಿಶ್ವವಿದ್ಯಾಲಯದಲ್ಲಿ ಕೆಲವೊಂದು ವಿಷಯಗಳ ಬಗ್ಗೆ ಈ ರೀತಿ ಇದೆ. ಆದರೂ ಇವತ್ತು ಮಾನ್ಯ ಸದಸ್ಯರು ಹೇಳಿದ್ದು, ಇದರ ಸಂಪೂರ್ಣ ವರದಿಯನ್ನು ತರಿಸಿಕೊಳ್ಳುತ್ತೇನೆ. ಈಗಾಗಲೇ ಸಂಪುಟದ ಉಪ ಸಮಿತಿ ಈ ಎಲ್ಲಾ ವಿಷಯಗಳ ಬಗ್ಗೆ ಪ್ರಾಧ್ಯಾಪಕರ ಮತ್ತು ಫ್ಯಾಕಲ್ಟಿ ನೇಮಕಾತಿ ಬಗ್ಗೆಯೂ ಸಾಕಷ್ಟು ವಿಸ್ತೃತವಾಗಿ ಚರ್ಚೆ ಮಾಡಿ, ಅದೆಲ್ಲಾ ಮಾಹಿತಿಯನ್ನು ತೆಗೆದುಕೊಂಡಿದ್ದೇವೆ. ಸರ್ಕಾರವು ಮುಂದಿನ ದಿನಗಳಲ್ಲಿ ನೇಮಕಾತಿ ವಿಚಾರವಾಗಿ ಸ್ಪಷ್ಟವಾದ ನಿಲುವನ್ನು ತೆಗೆದುಕೊಳ್ಳುತ್ತದೆ. ಆದರೂ ಸಂಪೂರ್ಣವಾದ ಮಾಹಿತಿಯನ್ನು ಪಡೆದುಕೊಂಡು ಮಾನ್ಯ ಸದಸ್ಯರಿಗೆ ಉತ್ತರ ಕೊಡುತ್ತೇನೆ.

ಸಭಾಪತಿಯವರು:- ಸದನವನ್ನು ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 3-00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

(ಸದನವು ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 01 ಗಂಟೆ 44 ನಿಮಿಷಕ್ಕೆ ಮುಂದೂಡಲ್ಪಟ್ಟು, ಪುನಃ ಮಧ್ಯಾಹ್ನ 3-00 ಗಂಟೆಗೆ ಸೇರಲು ನಿಶ್ಚಯಿಸಿತು)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(679)13.8.2025/3.20/ಎಂ.ಎಂ-ವಿ.ಕೆ

(ಸದನವು ಭೋಜನ ವಿರಾಮದ ನಂತರ ಮಧ್ಯಾಹ್ನ 3 ಗಂಟೆ 28 ನಿಮಿಷಕ್ಕೆ ಪ್ರಾರಂಭವಾಯಿತು)

(ಮಾನ್ಯ ಸಭಾಪತಿಯವರು ಪೀಠವನ್ನಲಂಕರಿಸಿದರು)

ಸಭಾಪತಿಯವರು:– ಈಗ ಶೂನ್ಯವೇಳೆ. ಶ್ರೀ ಎನ್. ರವಿಕುಮಾರ್.

ಶ್ರೀ ಎಸ್.ಎಲ್. ಭೋಜೇಗೌಡ:– ಮಾನ್ಯ ಸಭಾಪತಿಯವರೇ, ...

ಸಭಾಪತಿಯವರು:– ಈಗ ಶೂನ್ಯವೇಳೆ ಪ್ರಸ್ತಾವಕ್ಕೆ ಕರೆದಿದ್ದೇನೆ, ಒಂದು ನಿಮಿಷ ಕುಳಿತುಕೊಳ್ಳಿ. ಇದು ಮುಗಿಯಲಿ.

ಶ್ರೀ ಎಸ್.ಎಲ್. ಭೋಜೇಗೌಡ:– ಶೂನ್ಯವೇಳೆ ಕೇಳುವುದಕ್ಕಾದರೂ ಮಂತ್ರಿಗಳು ಇರಬೇಕಲ್ಲವೇ.

ಸಭಾಪತಿಯವರು:– ನೀವು ಸುಮ್ಮನೆ ಕುಳಿತುಕೊಳ್ಳಿ, ನಾನು ಎಲ್ಲವನ್ನೂ ಮಾಡುತ್ತೇನೆ. ನಿಮಗೇತಕ್ಕೆ ಬೇಕದು, ಅದು ನನ್ನ ಕೆಲಸ. ನನ್ನ ಕೆಲಸವನ್ನು ನೀವೇ ಮಾಡುತ್ತೀರಾ? ಕುಳಿತುಕೊಳ್ಳಿ.

ಶ್ರೀ ಎಸ್.ಎಲ್. ಭೋಜೇಗೌಡ:– ಮಾನ್ಯ ಸಭಾಪತಿಯವರೇ, ಅವರು ಹೇಳಿದ್ದನ್ನು ಕೇಳುವುದಕ್ಕಾದರೂ ಬೇಕಲ್ಲವೇ?

ಸಭಾಪತಿಯವರು:– ಮಾನ್ಯ ಸಭಾನಾಯಕರು ಹಾಗೂ ಮಾನ್ಯ ಗೃಹ ಸಚಿವರಿದ್ದಾರೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಖ)ವಿಷಯ:- ಬೆಂಗಳೂರು ನಗರ ಒಳಗೊಂಡಂತೆ ರಾಜ್ಯದಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿರುವ ಕುರಿತು.

\- - - -

ಶ್ರೀ ಎನ್. ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):- ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ವಂದನೆಗಳನ್ನು ಸಲ್ಲಿಸುತ್ತೇನೆ. ರಾಜ್ಯದಲ್ಲಿ ಈಗಾಗಲೇ ನೂರಾರು ಮಂದಿ ಬೀದಿನಾಯಿಗಳ ಕಡಿತಕ್ಕೆ ಒಳಗಾಗಿ ತೊಂದರೆ ಅನುಭವಿಸುತ್ತಿದ್ದಾರೆ. ಗ್ರೇಟರ್ ಬೆಂಗಳೂರು ಈಗಾಗಲೇ ಬೀದಿನಾಯಿಗಳ ರಾಜಧಾನಿಯಾಗುವತ್ತ ದಾಪುಗಾಲು ಇಡುತ್ತಿದೆ. ಬೆಂಗಳೂರು ನಗರದಲ್ಲಿಯೇ ಸುಮಾರು 2,30,000 ಬೀದಿನಾಯಿಗಳು ಇರುವ ಬಗ್ಗೆ ಅಂಕಿ-ಅಂಶಗಳಿಂದ ವ್ಯಕ್ತವಾಗುತ್ತಿದ್ದು, ಸಾರ್ವಜನಿಕರು ಬೀದಿಗಳಲ್ಲಿ ಸಂಚಾರ ಮಾಡಲು ಭಯಪಡುವ ವಾತಾವರಣ ನಿರ್ಮಾಣವಾಗಿದೆ. ಹೆಚ್ಚಾಗಿ ವೃದ್ಧರು, ಚಿಕ್ಕಮಕ್ಕಳು ಹಾಗೂ ಮಹಿಳೆಯರು ಬೀದಿನಾಯಿಗಳ ದಾಳಿಗೆ ಒಳಗಾಗುತ್ತಿರುವ ಕುರಿತು ದಿನನಿತ್ಯ ಪತ್ರಿಕೆಗಳಲ್ಲಿ, ಟಿ.ವಿ.ಗಳಲ್ಲಿ ವರದಿಗಳು ಬರುತ್ತಲೇ ಇವೆ. ಇತ್ತೀಚೆಗೆ ಬೆಂಗಳೂರಿನ ಸಮೀಪದ ಕೊಡಿಗೇಹಳ್ಳಿಯಲ್ಲಿ ಸುಮಾರು 68 ವರ್ಷದ ಸೀತಪ್ಪ ಎಂಬ ವ್ಯಕ್ತಿ ಬೀದಿನಾಯಿ ಕಡಿತದಿಂದ ಮರಣ ಹೊಂದಿರುವುದು ಪ್ರಕರಣದ ಗಂಭೀರತೆಗೆ ಸಾಕ್ಷಿಯಾಗಿದೆ. ಹಾಗೆಯೇ ಜ್ಞಾನಭಾರತಿಯಲ್ಲಿ ಸೌಜನ್ಯ ಎಂಬ ವಿದ್ಯಾರ್ಥಿನಿ; ಇದನ್ನು ಉದಾಹರಣೆಗೆ ಹೇಳಿದೆ. ಈಗಾಗಲೇ ಜನವರಿ 2025ರಿಂದ ಇಲ್ಲಿಯವರೆಗೆ ರಾಜ್ಯದಲ್ಲಿ 19 ಹಾಗೂ ಬೆಂಗಳೂರಿನಲ್ಲಿ 9 ಮಂದಿ ರೇಬಿಸ್‌ನಿಂದ ಮೃತಪಟ್ಟಿರುವ ಕುರಿತು ಪ್ರಕರಣ ದಾಖಲಾಗಿರುತ್ತದೆ. ಮಾನ್ಯ ಸರ್ವೋಚ್ಚ ನ್ಯಾಯಾಲಯವು ಬೀದಿ ನಾಯಿಗಳ ಕುರಿತು ನೀಡಿರುವ ಆದೇಶದಲ್ಲಿ ನಾಯಿಗಳನ್ನು ಬೀದಿಗಳಲ್ಲಿ ಅಡ್ಡಾಡದಂತೆ ಅವುಗಳಿಗೆ ಪ್ರತ್ಯೇಕ ಶೆಲ್ಟರ್‌ಗಳನ್ನು ನಿರ್ಮಿಸಲು ಆದೇಶ ನೀಡಿರುತ್ತದೆ. ಅದರಂತೆ ಬೆಂಗಳೂರಿನಲ್ಲಿಯೂ ಇಂತಹ ಶೆಲ್ಟರ್‌ಗಳನ್ನು ನಿರ್ಮಿಸಿ ವೃದ್ಧರು, ಚಿಕ್ಕಮಕ್ಕಳು ಹಾಗೂ ಹೆಣ್ಣುಮಕ್ಕಳ ಜೀವ ಉಳಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳುವ ಕುರಿತು ಶೂನ್ಯವೇಳೆಯಲ್ಲಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):- ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

(ಮುಂದು)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(680) 13.08.2025 3.30 ಹೆಚ್‌ವಿ.ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

05. ಬೆಳಗಾವಿ ಅಧಿವೇಶನದಿಂದ ಈ ಅಧಿವೇಶನದವರೆಗೂ ಸದಸ್ಯರುಗಳು ಕೇಳಿದ ಪ್ರಶ್ನೆಗಳಿಗೆ ಮತ್ತು ಶೂನ್ಯ ವೇಳೆ ಪ್ರಸ್ತಾಪಗಳಿಗೆ ಸರ್ಕಾರದಿಂದ ಉತ್ತರ ಬಾರದಿರುವ ಬಗ್ಗೆ

\- - -

ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):- ಸನ್ಮಾನ್ಯ ಸಭಾಪತಿಯವರೇ, ಬೆಳಗಾವಿ ಅಧಿವೇಶನದಿಂದ ಹಿಡಿದು ಇಲ್ಲಿಯವರೆಗೆ ಸರ್ಕಾರ ಉತ್ತರವನ್ನು ಒದಗಿಸಲಾಗುತ್ತದೆಂದು ಕೇಳಿರುವ ಒಟ್ಟು 404 ಪ್ರಶ್ನೆಗಳಿವೆ. 258 ಪ್ರಶ್ನೆಗಳಿಗೆ ಉತ್ತರ ಬಂದಿದೆ. 146 ಪ್ರಶ್ನೆಗಳಿಗೆ ಉತ್ತರ ಬಂದಿಲ್ಲ. ಈಗ ಅಧಿವೇಶನ ಪ್ರಾರಂಭವಾಗಿ ಎರಡನೆಯ ದಿವಸವೇ ಈ ರೀತಿಯಾದರೆ, ಇವೆಲ್ಲಾ ಕ್ರೋಡೀಕರಣಗೊಂಡು 10ನೇ ದಿವಸಕ್ಕೆ ಎಷ್ಟಾಗುತ್ತದೆ ಎನ್ನುವುದನ್ನು ತಾವೇ ಊಹಿಸಿಕೊಳ್ಳಬೇಕಾಗಿದೆ. ಕೊನೆಗೆ ಉತ್ತರವನ್ನೇ ಕೊಡುವುದಿಲ್ಲ. ನಾವು ಬಂದು ಬರಿ ಕೈಯಲ್ಲಿ ಹೋಗಬೇಕಾಗುತ್ತದೆ.

ಸಭಾಪತಿಯವರು:- ಮಾನ್ಯ ಭೋಜೇಗೌಡರೇ ಒಂದು ನಿಮಿಷ ಕುಳಿತುಕೊಳ್ಳಿ. ಮಾನ್ಯ ಸಭಾ ನಾಯಕರೇ, ಹಿಂದಿನ ಬಾರಿ ನಾನು ಸದನದಲ್ಲಿ ತಮಗೊಂದು ಮಾತನ್ನು ಹೇಳಿದ್ದೆ, ಯಾರು ಉತ್ತರವನ್ನು ಕೊಡುವುದಿಲ್ಲ ಅಂತಹ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ನಾನು ತಮಗೆ ಸೂಚನೆಯನ್ನು ಕೊಟ್ಟಿದ್ದೆ. ಈ ತಿಂಗಳೊಳಗಾಗಿ ಹಿಂದಿನ ಅಧಿವೇಶನವನ್ನು ಹೊರತುಪಡಿಸಿ ಎಲ್ಲದಕ್ಕೂ ಉತ್ತರವನ್ನು ಕೊಡಬೇಕಾಗುತ್ತದೆ. ಯಾರೂ ಉತ್ತರವನ್ನು ಕೊಡುವುದಿಲ್ಲ ಎನ್ನುವುದನ್ನು ನನಗೆ ತಿಳಿಸಿ, ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ದೂರವಾಣಿ ಕರೆ ಮಾಡಿ ಮಾತನಾಡುತ್ತೇನೆ.

ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು):- ಸನ್ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ತಾವು ಈ ಹಿಂದೆ ಸದನ ಮುಗಿದ ಮೇಲೆ ಡಿ.ಪಿ.ಎ.ಆರ್. ಕಾರ್ಯದರ್ಶಿಗಳನ್ನು ಕರೆದು ಒಂದು ಸಭೆಯನ್ನು ನಡೆಸಿದ್ದೀರಿ. ಆ ಸಭೆಯಲ್ಲಿ ಕೆಲವು ನ್ಯೂನತೆಗಳನ್ನು ಅವರು ತಮ್ಮ ಗಮನಕ್ಕೆ ತಂದಿದ್ದರು. ಕೆಲವೊಂದು ಉತ್ತರಗಳನ್ನು ಕೊಡುವುದಕ್ಕೆ ಸಾಧ್ಯವಾಗದೇ ಇರುವುದಕ್ಕೆ ಕಾರಣಗಳೇನು ಎನ್ನುವುದನ್ನು ತಮ್ಮ ಗಮನಕ್ಕೆ ತಂದಿದ್ದರು. ಅವುಗಳನ್ನೆಲ್ಲ ಸ್ಕ್ರೂಟಿನಿ ಮಾಡುತ್ತಿದ್ದಾರೆ. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಮಾನ್ಯ ಸಚಿವರುಗಳಿಗೂ ಪತ್ರಗಳನ್ನು ಬರೆದಿದ್ದೇನೆ. ಉತ್ತರ ನೀಡುವುದರಲ್ಲಿ ಬಹಳಷ್ಟು ಪ್ರಗತಿಯಾಗಿದೆ. ಸಾಕಷ್ಟು ಉತ್ತರಗಳು ಬಂದಿವೆ. ಮಾನ್ಯ ಮುಖ್ಯಮಂತ್ರಿಗಳು ಸಹ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಹೇಳಿ ಎಲ್ಲ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳಿಗೆ ಪತ್ರವನ್ನು ಬರೆಯಿಸಿದ್ದೇವೆ. ಈ ಅಧಿವೇಶನ ಮುಗಿಯುವಷ್ಟರಲ್ಲಿ ಪರಿಪೂರ್ಣವಾಗಿ ಉತ್ತರವನ್ನು ಒದಗಿಸುವಂತಹ ಕೆಲಸವನ್ನು ಮಾಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಭಾಪತಿಯವರು:– ಯಾವಯಾವ ಇಲಾಖೆಯಿಂದ ಎಷ್ಟೆಷ್ಟು ಉತ್ತರಗಳು ಬರುವುದು ಬಾಕಿ ಇವೆ ಎನ್ನುವುದನ್ನು ನನಗೆ ತಿಳಿಸಿ, ನಾನು ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ಪತ್ರ ಬರೆಯುತ್ತೇನೆ. ಒಂದು ತಿಂಗಳೊಳಗಾಗಿ ಉತ್ತರವನ್ನು ಒದಗಿಸದಿದ್ದರೆ, ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಲಾಗುತ್ತದೆ.

ಶ್ರೀ ಎನ್.ಎಸ್.ಬೋಸರಾಜು:– ಸನ್ಮಾನ್ಯ ಸಭಾಪತಿಯವರೇ, ತಾವು ಹೇಳಿದಂತೆ ಆಗಲಿ.

ಶ್ರೀ ಗೋವಿಂದ ರಾಜು(ವಿಧಾನಸಭಾ ಕ್ಷೇತ್ರ):– ಸನ್ಮಾನ್ಯ ಸಭಾಪತಿಯವರೇ, …..

ಸಭಾಪತಿಯವರು:– ಮಾನ್ಯ ಗೋವಿಂದರಾಜುರವರೇ, ನಾನು ಹೇಳುವ ಮಾತನ್ನು ಒಂದು ನಿಮಿಷ ಕೇಳಿ. ನಿಮ್ಮ ವಿಷಯ ಮುಗಿದ ಕೂಡಲೇ ಸದನದಿಂದ ಹೊರಗೆ ಹೋಗದೆ ಸದನದಲ್ಲಿಯೇ ಕುಳಿತುಕೊಳ್ಳಿ. ತಮ್ಮ ತಮ್ಮ ವಿಷಯಗಳು ಮುಗಿದ ಕೂಡಲೇ ಎಲ್ಲರೂ ಹೊರಟುಹೋಗುತ್ತೀರಿ, ಸದನದಲ್ಲಿ ಯಾರೂ ಇರುವುದಿಲ್ಲ. ನಮ್ಮ ಮರ್ಯಾದೆಯನ್ನು ಕಳೆಯುತ್ತೀರಿ, ನಿಮ್ಮ ಮರ್ಯಾದೆಯನ್ನು ಕಳೆದುಕೊಳ್ಳುತ್ತೀರಿ.

ಶ್ರೀ ಗೋವಿಂದರಾಜು:– ಸನ್ಮಾನ್ಯ ಸಭಾಪತಿಯವರೇ, ಶೂನ್ಯವೇಳೆಯಲ್ಲಿ ಅತೀ ಜರೂರು ವಿಷಯವನ್ನು ಪ್ರಸ್ತಾಪ ಮಾಡಲಾಗುತ್ತದೆ. ಆ ವಿಚಾರಕ್ಕೆ ಸರ್ಕಾರದಿಂದ ಉತ್ತರವನ್ನು ಬಯಸುತ್ತೇವೆ. ಆದರೆ, ಇಲ್ಲಿಯವರೆವಿಗೂ ನಾನು ಪ್ರಸ್ತಾಪ ಮಾಡಿರುವ ಶೂನ್ಯವೇಳೆಯ ಪ್ರಸ್ತಾಪವೊಂದಕ್ಕೂ ಉತ್ತರ ಬಂದಿಲ್ಲ. ಕ್ರಮ ಜರುಗಿಸಿದ್ದೇವೆಂದು ಮಾಹಿತಿಯನ್ನು ಸಹ ಕೊಟ್ಟಿಲ್ಲ.

ಸಭಾಪತಿಯವರು:– ಮಾನ್ಯ ಸಭಾ ನಾಯಕರೇ, ಇದಕ್ಕೆ ಉತ್ತರವನ್ನು ಹೇಳಿ.

ಶ್ರೀ ಎನ್.ಎಸ್.ಬೋಸ್‌ರಾಜು:– ಸನ್ಮಾನ್ಯ ಸಭಾಪತಿಯವರೇ, ಅವರು ಯಾವುದರ ಬಗ್ಗೆ ಹೇಳಿದ್ದಾರೆ ಅದರ ಬಗ್ಗೆ ಪರಿಶೀಲಿಸಲಾಗುವುದು.

ಶ್ರೀ ಗೋವಿಂದರಾಜು:– ಸನ್ಮಾನ್ಯ ಸಭಾಪತಿಯವರೇ, ಇಲ್ಲಿಯವರೆವಿಗೆ ಒಂದೇ ಒಂದು ಶೂನ್ಯವೇಳೆಯ ಪ್ರಸ್ತಾಪಕ್ಕೆ ಉತ್ತರ ಬಂದಿಲ್ಲ.

ಸಭಾಪತಿಯವರು:– ಮಾನ್ಯ ಸಭಾ ನಾಯಕರೇ, ನಮ್ಮ ಕಾರ್ಯಾಲಯದಲ್ಲಿ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲ್ಪಟ್ಟ ವಿಷಯಗಳ ಪಟ್ಟಿ ದೊರೆಯುತ್ತದೆ. ದನ್ನು ತೆಗಿಸಿ ಉತ್ತರವನ್ನು ತೆಗೆದುಕೊಂಡು ಬನ್ನಿ ಎಷ್ಟು ಶೂನ್ಯವೇಳೆಯ ಪ್ರಸ್ತಾವಗಳಿಗೆ ಉತ್ತರ ಬಂದಿವೆ; ಎಷ್ಟಕ್ಕೆ ಬಂದಿಲ್ಲ ಎನ್ನುವುದನ್ನು ನನ್ನ ಗಮನಕ್ಕೆ ತನ್ನಿ.

ಶ್ರೀ ಎನ್.ಎಸ್.ಬೋಸರಾಜು:– ಸನ್ಮಾನ್ಯ ಸಭಾಪತಿಯವರೇ, ತಾವು ಹೇಳಿದಂತೆ ತಮ್ಮ ಗಮನಕ್ಕೆ ತರುತ್ತೇನೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

06. ಚುನಾವಣಾ ಪ್ರಸ್ತಾವಗಳು

2025-26ನೇ ಸಾಲಿನ ವಿಧಾನ ಮಂಡಲದ ಜಂಟಿ ಸಮಿತಿಗಳು ಹಾಗೂ ವಿಧಾನ ಪರಿಷತ್ತಿನ ಸ್ಥಾಯಿ ಸಮಿತಿಗಳಿಗೆ ಸದಸ್ಯರುಗಳನ್ನು ಚುನಾಯಿಸುವ ಬಗ್ಗೆ.

ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು):- ಸನ್ಮಾನ್ಯ ಸಭಾಪತಿಯವರೇ, 2025-26ನೇ ಸಾಲಿನ ವಿಧಾನ ಮಂಡಲದ ಜಂಟಿ ಸಮಿತಿಗಳು ಹಾಗೂ ವಿಧಾನ ಪರಿಷತ್ತಿನ ಈ ಕೆಳಕಂಡ ಸ್ಥಾಯಿ ಸಮಿತಿಗಳಿಗೆ ಸದಸ್ಯರುಗಳನ್ನು ಚುನಾಯಿಸಬೇಕಾಗಿ ಕೋರುತ್ತೇನೆ.

ಅ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ 259(1)ನೇ ನಿಯಮದ ಅನುಸಾರವಾಗಿ ಈ ಸಭೆ **ಸರ್ಕಾರಿ ಭರವಸೆಗಳ** ಸಮಿತಿಗೆ ಒಂಭತ್ತು ಜನ ಸದಸ್ಯರನ್ನು ದಾಮಾಷಾ ಪ್ರಾತಿನಿಧ್ಯದ ತತ್ವಕ್ಕನುಸಾರವಾಗಿ ವರ್ಗಾಯಿಸಬಹುದಾದ ಏಕಮತದ ಮೂಲಕ ಚುನಾಯಿಸಬೇಕೆಂದು ಸೂಚಿಸುತ್ತಿದ್ದೇನೆ.

ಆ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ 250(1)ನೇ ನಿಯಮದ ಅನುಸಾರವಾಗಿ ಈ ಸಭೆ **ಹಕ್ಕುಬಾಧ್ಯತಾ** ಸಮಿತಿಗೆ ಏಳು ಜನ ಸದಸ್ಯರನ್ನು ದಾಮಾಷಾ ಪ್ರಾತಿನಿಧ್ಯದ ತತ್ವಕ್ಕನುಸಾರವಾಗಿ ವರ್ಗಾಯಿಸಬಹುದಾದ ಏಕಮತದ ಮೂಲಕ ಚುನಾಯಿಸಬೇಕೆಂದು ಸೂಚಿಸುತ್ತಿದ್ದೇನೆ.

ಇ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ 349(1)ನೇ ನಿಯಮದ ಅನುಸಾರವಾಗಿ ಈ ಸಭೆ **ವಸತಿ** ಸಮಿತಿಗೆ ಐದು ಜನ ಸದಸ್ಯರನ್ನು ದಾಮಾಷಾ ಪ್ರಾತಿನಿಧ್ಯದ ತತ್ವಕ್ಕನುಸಾರವಾಗಿ ವರ್ಗಾಯಿಸಬಹುದಾದ ಏಕಮತದ ಮೂಲಕ ಚುನಾಯಿಸಬೇಕೆಂದು ಸೂಚಿಸುತ್ತಿದ್ದೇನೆ.

ಈ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 261(1)ನೇ ನಿಯಮದ ಅನುಸಾರವಾಗಿ ಈ ಸಭೆ ಸದಸ್ಯರುಗಳ **ಖಾಸಗಿ ವಿಧೇಯಕಗಳು ಮತ್ತು ನಿರ್ಣಯಗಳ** ಸಮಿತಿಗೆ ಎಂಟು ಜನ ಸದಸ್ಯರನ್ನು ದಾಮಾಷಾ ಪ್ರಾತಿನಿಧ್ಯದ ತತ್ವಕ್ಕನುಸಾರವಾಗಿ ವರ್ಗಾಯಿಸಬಹುದಾದ ಏಕಮತದ ಮೂಲಕ ಚುನಾಯಿಸಬೇಕೆಂದು ಸೂಚಿಸುತ್ತಿದ್ದೇನೆ.

ಉ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 245(1)ನೇ ನಿಯಮದ ಅನುಸಾರವಾಗಿ ಈ ಸಭೆ **ಸಾರ್ವಜನಿಕ ಲೆಕ್ಕಪತ್ರಗಳ** ಸಮಿತಿಗೆ ಐದು ಜನ ಸದಸ್ಯರನ್ನು ದಾಮಾಷಾ ಪ್ರಾತಿನಿಧ್ಯದ ತತ್ವಕ್ಕನುಸಾರವಾಗಿ ವರ್ಗಾಯಿಸಬಹುದಾದ ಏಕಮತದ ಮೂಲಕ ಚುನಾಯಿಸಬೇಕೆಂದು ಸೂಚಿಸುತ್ತಿದ್ದೇನೆ.

ಊ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 248ನೇ ನಿಯಮದ ಅನುಸಾರವಾಗಿ ಈ ಸಭೆ **ಸಾರ್ವಜನಿಕ ಉದ್ಯಮಗಳ** ಸಮಿತಿಗೆ ಐದು ಜನ ಸದಸ್ಯರನ್ನು ದಾಮಾಷಾ ಪ್ರಾತಿನಿಧ್ಯದ ತತ್ವಕ್ಕನುಸಾರವಾಗಿ ವರ್ಗಾಯಿಸಬಹುದಾದ ಏಕಮತದ ಮೂಲಕ ಚುನಾಯಿಸಬೇಕೆಂದು ಸೂಚಿಸುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಖ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 254(1)ನೇ ನಿಯಮದ ಅನುಸಾರವಾಗಿ ಈ ಸಭೆ **ಅಧೀನ ಶಾಸನ ರಚನಾ** ಸಮಿತಿಗೆ ಐದು ಜನ ಸದಸ್ಯರನ್ನು ದಾಮಾಷಾ ಪ್ರಾತಿನಿಧ್ಯದ ತತ್ವಕ್ಕನುಸಾರವಾಗಿ ವರ್ಗಾಯಿಸಬಹುದಾದ ಏಕಮತದ ಮೂಲಕ ಚುನಾಯಿಸಬೇಕೆಂದು ಸೂಚಿಸುತ್ತಿದ್ದೇನೆ.

ಎ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 264ನೇ ನಿಯಮದ ಅನುಸಾರವಾಗಿ ಈ ಸಭೆ **ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ** ಸಮಿತಿಗೆ ಐದು ಜನ ಸದಸ್ಯರನ್ನು ದಾಮಾಷಾ ಪ್ರಾತಿನಿಧ್ಯದ ತತ್ವಕ್ಕನುಸಾರವಾಗಿ ವರ್ಗಾಯಿಸಬಹುದಾದ ಏಕಮತದ ಮೂಲಕ ಚುನಾಯಿಸಬೇಕೆಂದು ಸೂಚಿಸುತ್ತಿದ್ದೇನೆ.

ಏ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 267ನೇ ನಿಯಮದ ಅನುಸಾರವಾಗಿ ಈ ಸಭೆ **ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ** ಸಮಿತಿಗೆ ಐದು ಜನ ಸದಸ್ಯರನ್ನು ದಾಮಾಷಾ ಪ್ರಾತಿನಿಧ್ಯದ ತತ್ವಕ್ಕನುಸಾರವಾಗಿ ವರ್ಗಾಯಿಸಬಹುದಾದ ಏಕಮತದ ಮೂಲಕ ಚುನಾಯಿಸಬೇಕೆಂದು ಸೂಚಿಸುತ್ತಿದ್ದೇನೆ.

ಚುನಾವಣಾ ಪ್ರಸ್ತಾವಗಳಿಗೆ ಸದನದ ಅನುಮೋದನೆ ದೊರೆಯಿತು

ಸಭಾಪತಿಯವರು:– ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ನೀಡಿರುವ ನಿಲುವಳಿ ಸೂಚನೆಯ ಪ್ರಸ್ತಾವವನ್ನು ನಾನು ಓದಿದ್ದೇನೆ. ತಾವು ನೀಡಿರುವ ವಿಚಾರ ಕಾನೂನು ಸುವ್ಯವಸ್ಥೆಗೆ ಸಂಬಂಧಪಟ್ಟಿರುವುದಾಗಿದೆ. ಇದು ದಿನನಿತ್ಯ ನಡೆಯುವಂತಹ ವಿಚಾರವಾಗಿದೆ. ಈ ವಿಚಾರವನ್ನು **ನಿಯಮ ೩೩೦ರ ಮೇರೆಗೆ ಚರ್ಚೆಗೆ ತೆಗೆದುಕೊಳ್ಳಲು ಪರಿವರ್ತಿಸಲಾಗಿದೆ**. ಇದರಿಂದಾಗಿ ತಮಗೆ ಚರ್ಚೆ ಮಾಡಲು ಸಾಕಷ್ಟು ಸಮಯ ಸಿಗುತ್ತದೆ. ಈಗ ಗಮನಸೆಳೆಯುವ ಸೂಚನೆಗಳು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

07. ಗಮನಸೆಳೆಯುವ ಸೂಚನೆಗಳು

ಅ) ವಿಷಯ: ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿಗಳಿಗೆ ಶೀಘ್ರವಾಗಿ ಚುನಾವಣೆ ನಡೆಸುವ ಕುರಿತು.

ಶ್ರೀ ಮಂಜುನಾಥ್ ಭಂಡಾರಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- ಸನ್ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿ ನಿಯಮ 72ರ ಮೇರೆಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರ ಗಮನ ಸೆಳೆಯುವುದಕ್ಕೆ ಬಯಸುತ್ತಿದ್ದೇನೆ. ಯಾವ ಕಾರ್ಯವನ್ನು ಯಾವ ಹಂತದಲ್ಲಿ ಸಮರ್ಥವಾಗಿ ಮತ್ತು ಪರಿಣಾಮಕಾರಿಯಾಗಿ ನಿರ್ವಹಿಸಲು ಸಾಧ್ಯವಿದೆಯೋ ಆ ಹಂತಕ್ಕೆ ಅಧಿಕಾರವನ್ನು ……..

ಸಭಾಪತಿಯವರು:- ಮಾನ್ಯ ಮಂಜುನಾಥ್ ಭಂಡಾರಿಯವರೇ, ಗಮನಸೆಳೆಯುವ ಸೂಚನೆಯಡಿಯಲ್ಲಿ ತಾವು "ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿಗಳಿಗೆ ಶೀಘ್ರವಾಗಿ ಚುನಾವಣೆ ನಡೆಸುವ ಕುರಿತು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರ ಗಮನ ಸೆಳೆಯುತ್ತಿದ್ದೇನೆ" ಎಂದು ಓದಬೇಕು. ನಂತರ ಮಾನ್ಯ ಸಚಿವರು ಮಾತನಾಡುತ್ತಾರೆ. ಅನಂತರ ತಾವು ಮಾತನಾಡಿ.

ಶ್ರೀ ಪ್ರಿಯಾಂಕ್ ಖರ್ಗೆ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು):- ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವ ಗಮನಸೆಳೆಯುವ ಸೂಚನೆಗೆ ಲಿಖಿತ ರೂಪದಲ್ಲಿ ಉತ್ತರವನ್ನು ಒದಗಿಸಿದ್ದೇನೆ. ಅವರು ಸ್ಪಷ್ಟೀಕರಣವನ್ನು ಕೇಳಬಹುದು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉತ್ತರ: ಅಧಿಕಾರ ವಿಕೇಂದ್ರೀಕರಣ ತತ್ವದಡಿ 3 ಹಂತದ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಅಧಿಕಾರ ವಿಕೇಂದ್ರೀಕರಣಗೊಳಿಸುವ ಉದ್ದೇಶದಿಂದ ಸಂವಿಧಾನದ 73 ನೇ ತಿದ್ದುಪಡಿ ಅನುಸಾರ ರಾಜ್ಯದಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ಅನ್ನು ದಿನಾಂಕ: 10-05-1993 ರಿಂದ ಜಾರಿಗೊಳಿಸಲಾಗಿರುತ್ತದೆ. ಈಅಧಿನಿಯಮದನ್ವಯ ರಚಿಸಲಾಗಿರುವ ಗ್ರಾಮ ಪಂಚಾಯತಿಗಳು, ತಾಲ್ಲೂಕು ಪಂಚಾಯತಿಗಳು ಮತ್ತು ಜಿಲ್ಲಾ ಪಂಚಾಯತಿಗಳು ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳಾಗಿ ಕಾರ್ಯನಿರ್ವಹಿಸಬೇಕೆಂಬುದು ಅಧಿನಿಯಮದ ಆಶಯವಾಗಿರುತ್ತದೆ.

1) **ಗ್ರಾಮ ಪಂಚಾಯತಿ ಚುನಾವಣೆ ಬಗ್ಗೆ.**

1) ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 41 ರ ಪ್ರಕಾರ ಗ್ರಾಮ ಪಂಚಾಯತಿಯ ಸದಸ್ಯರ ಅವಧಿಯು ಐದು ವರ್ಷಗಳಾಗಿರುತ್ತದೆ. ಪ್ರಕರಣ 42 ರ ಪ್ರಕಾರ ಗ್ರಾಮ ಪಂಚಾಯತಿ ಸದಸ್ಯರ ಅವಧಿಯು ಪ್ರಥಮ ಸಭೆ ಗೊತ್ತುಪಡಿಸಿದ ದಿನಾಂಕದಿಂದ ಪ್ರಾರಂಭವಾಗುತ್ತದೆ.

2) ರಾಜ್ಯದ ಗ್ರಾಮ ಪಂಚಾಯತಿಗಳಿಗೆ ಡಿಸೆಂಬರ್ 2020 ರಲ್ಲಿ ಸದಸ್ಯ ಸ್ಥಾನಗಳಿಗೆ ಚುನಾವಣೆ ನಡೆಸಲಾಗಿರುತ್ತದೆ. ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಹುದ್ದೆಗಳಿಗೆ ಜನವರಿ-ಫೆಬ್ರವರಿ 2021 ರಲ್ಲಿ ಚುನಾವಣೆ ನಡೆಸಿ ಆಯ್ಕೆ ಮಾಡಲಾಗಿದ್ದು, ಈ ಅವಧಿಯು ಜನವರಿ- ಫೆಬ್ರವರಿ 2026 ರವರೆಗೆ ಇರುತ್ತದೆ. ಅವಧಿ ಮುಗಿದ ನಂತರ ಚುನಾವಣೆ ನಡೆಸಲು ಕ್ರಮ ವಹಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

2) ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತಿ ಚುನಾವಣೆ ಬಗ್ಗೆ.

ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯಿತಿಗಳ ಅವಧಿಯು ಜೂನ್ 2021ಕ್ಕೆ ಮುಕ್ತಾಯಗೊಂಡಿರುತ್ತದೆ. ಅವಧಿಯು ಮುಗಿದ ನಂತರ ಚುನಾವಣೆಯನ್ನು ನಡೆಸುವ ಸಿದ್ಧತೆಯಲ್ಲಿದ್ದಾಗ ರಾಜ್ಯದಲ್ಲಿ ಕೋವಿಡ್ ಸಾಂಕ್ರಾಮಿಕ ರೋಗ ಹಿನ್ನೆಲೆಯಲ್ಲಿ ಚುನಾವಣೆ ನಡೆಸಲು ಸಾಧ್ಯವಾಗಲಿಲ್ಲ. ತದನಂತರ, ರಾಜ್ಯ ಸರ್ಕಾರ ಹೊಸದಾಗಿ ಜಿಲ್ಲಾ ಹಾಗೂ ತಾಲ್ಲೂಕುಗಳನ್ನು ರಚಿಸಲಾಗಿದ್ದು, ತಾಲ್ಲೂಕು ಪಂಚಾಯತಿ ಹಾಗೂ ಜಿಲ್ಲಾ ಪಂಚಾಯತಿ ಕ್ಷೇತ್ರಗಳ ಭೂ ವ್ಯಾಪ್ತಿಯಲ್ಲಿ ಬದಲಾವಣೆಯಾದ ಕಾರಣ ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯತಿಗಳ ಚುನಾವಣಾ ಕ್ಷೇತ್ರಗಳನ್ನು ಪುನರ್ ರಚಿಸಬೇಕಾದ ಅನಿವಾರ್ಯತೆ ಉಂಟಾಗಿದೆ.

ತದನಂತರ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ಕ್ಕೆ ತಿದ್ದುಪಡಿ ತರಲಾಗಿದೆ.

1. ಸರ್ಕಾರವು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ಅಧಿನಿಯಮ 2021, ದಿನಾಂಕ:18-9-2021ರ ಪ್ರಕರಣ 124, 163 ರಡಿಯಲ್ಲಿ ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಚುನಾವಣಾ ಕ್ಷೇತ್ರಗಳ ಸೀಮಾ ನಿರ್ಣಯ ಹಾಗೂ ಪ್ರಕರಣ 123, 162 ರಡಿಯಲ್ಲಿ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿ ಕ್ಷೇತ್ರಗಳ ಮೀಸಲಾತಿಯನ್ನು ನಿಗದಿಪಡಿಸುವ ಅಧಿಕಾರವನ್ನು ಹೊಂದಿರುತ್ತದೆ.
2. ಈ ತಿದ್ದುಪಡಿಯ ಪ್ರಕಾರ ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗವನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ :ಗ್ರಾಅಪಂರಾ 319 ಜಿಪಸ 2021, ದಿನಾಂಕ: 13-10-2021 ರಂದು ರಚಿಸಲಾಗಿದೆ.
3. ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗದ ಶಿಫಾರಸ್ಸಿನಂತೆ ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಚುನಾವಣಾ ಕ್ಷೇತ್ರಗಳ ಸೀಮಾ/ಗಡಿಯನ್ನು ನಿರ್ಣಯಿಸಿ ಸರ್ಕಾರವು ದಿನಾಂಕ:01-03-2023 ರಂದು ಅಧಿಸೂಚನೆ ಹೊರಡಿಸಿತ್ತು.
4. ನಂತರ ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿಸಂಖ್ಯೆ: 20426/2021ರ ಪ್ರಕರಣದಲ್ಲಿ ದಿನಾಂಕ:28-06-2023ರಂದು ನೀಡಿದ ಆದೇಶದಂತೆ ರಾಜ್ಯದ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳ ಚುನಾವಣಾ ಕ್ಷೇತ್ರಗಳ ಸೀಮಾ/ಗಡಿಯನ್ನು ರೀಡೂ (Redo) ಮಾಡಲು ಸರ್ಕಾರವು ತೀರ್ಮಾನಿಸಿತು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

5. ನಂತರ ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗವನ್ನು ಹೊಸದಾಗಿ ಸರ್ಕಾರದ ಅಧಿಸೂಚನೆ ಸಂಖ್ಯೆ: ಗ್ರಾಅಪಂ 319 ಜಿಪಸ 2021 ದಿನಾಂಕ: 10-07-2023 ರಂದು ರಚಿಸಲಾಗಿದೆ.
6. ಆಯೋಗದ ಶಿಫಾರಸ್ಸಿನಂತೆ ಸರ್ಕಾರವು, ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣಾ ಕ್ಷೇತ್ರಗಳ ಸೀಮಾ/ಗಡಿಯನ್ನು ಶಿವಮೊಗ್ಗ ಜಿಲ್ಲೆ ಹೊರತುಪಡಿಸಿ ಅಧಿಸೂಚನೆ ಹೊರಡಿಸಿದೆ.
7. ಅಧಿಸೂಚನೆ ಸಂಖ್ಯೆ:ಸಂವ್ಯಶಾಇ 26 ಶಾಸನ 2023, ದಿನಾಂಕ:30-01-2024 ರಂದು ಶಿವಮೊಗ್ಗ ಜಿಲ್ಲೆಯ ಮಲೆನಾಡು ಭಾಗದ ತಾಲ್ಲೂಕುಗಳ ಜಿಲ್ಲಾ ಪಂಚಾಯತಿ ಸದಸ್ಯರ ಸಂಖ್ಯೆ ನಿಗಧಿಪಡಿಸುವ ಸಂಬಂಧ ಅಧಿನಿಯಮಕ್ಕೆ ತಿದ್ದುಪಡಿ ತರಲಾಗಿದೆ.
8. ಅಧಿಸೂಚನೆ ಸಂಖ್ಯೆ:ಸಂವ್ಯಶಾಇ 03 ಶಾಸನ 2024, ದಿನಾಂಕ:11-03-2024 ರಂದು ಕೊಡಗು ಜಿಲ್ಲೆಗೆ ಸಂಬಂಧಿಸಿದಂತೆ ಜಿಲ್ಲಾ ಪಂಚಾಯತಿ ಸದಸ್ಯರ ಸಂಖ್ಯೆ ನಿಗಧಿಪಡಿಸುವ ಸಂಬಂಧ ಅಧಿನಿಯಮಕ್ಕೆ ತಿದ್ದುಪಡಿ ತರಲಾಗಿದೆ.
9. ನಂತರ ಶಿವಮೊಗ್ಗ ಮತ್ತು ಕೊಡಗು ಜಿಲ್ಲೆಯ ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಯ ಸೀಮಾ ಗಡಿಯನ್ನು ಗುರುತಿಸಿ ಅಧಿಸೂಚಿಸಲಾಗಿದೆ.

ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಕ್ಷೇತ್ರಗಳಿಗೆ ಮೀಸಲಾತಿ ಪ್ರಕ್ರಿಯೆಯು ಚಾಲ್ತಿಯಲ್ಲಿದ್ದು, ಪ್ರಕ್ರಿಯೆ ಪೂರ್ಣಗೊಂಡ ನಂತರ ಚುನಾವಣೆ ನಡೆಸಲಾಗುವುದು.

ಮುಂದುವರೆದು, ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿ ಹಾಗೂ ತಾಲ್ಲೂಕು ಪಂಚಾಯತಿಗಳಿಗೆ ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪಂರಾ 212 ಜಿಪಸ 2021, ದಿನಾಂಕ:26.04.2021ರಲ್ಲಿ ಆಡಳಿತ ಅಧಿಕಾರಿಯನ್ನು ನೇಮಿಸಲಾಗಿದ್ದು, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 239ರಲ್ಲಿನ ಉಪಬಂಧದನ್ವಯ ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿಗಳ ಆಡಳಿತಾಧಿಕಾರಿಗಳು ಎಲ್ಲಾ ಪ್ರಕಾರ್ಯಗಳು ಮತ್ತು ಜವಾಬ್ದಾರಿಗಳನ್ನು ನಿರ್ವಹಿಸಲು ಅಧಿಕಾರ ಹೊಂದಿರುತ್ತಾರೆ. ಆಡಳಿತಾಧಿಕಾರಿಗಳು ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತಿಗಳಲ್ಲಿ ಕ್ರಿಯಾ ಯೋಜನೆಯನ್ನು ತಯಾರಿಸಿಕೊಂಡು ಯೋಜನೆ/ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಶೀಘ್ರವಾಗಿ ಮೀಸಲಾತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ಚುನಾವಣಾ ಆಯೋಗಕ್ಕೆ ಕಳುಹಿಸಲಾಗುವುದು.

ಶ್ರೀ ಮಂಜುನಾಥ್ ಭಂಡಾರಿ:– ಸನ್ಮಾನ್ಯ ಸಭಾಪತಿಯವರೇ, ಯಾವ ಕಾರ್ಯವನ್ನು ಯಾವ ಹಂತದಲ್ಲಿ ಸಮರ್ಥವಾಗಿ ಮತ್ತು ಪರಿಣಾಮಕಾರಿಯಾಗಿ ನಿರ್ವಹಿಸಲು ಸಾಧ್ಯವಿದೆಯೋ ಆ ಹಂತಕ್ಕೆ ಅಧಿಕಾರವನ್ನು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವರ್ಗಾಯಿಸುವುದಕ್ಕೆ ಅಧಿಕಾರ ವಿಕೇಂದ್ರೀಕರಣವೆಂದು ಹೇಳಲಾಗುತ್ತದೆ. ನಮ್ಮ ರಾಜ್ಯದಲ್ಲಿರುವ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳಿಗೆ ಚುನಾವಣೆಗಳು ನಡೆಯದೇ ಸುಮಾರು 4 ವರ್ಷಗಳು ಕಳೆದು ಹೋಗಿವೆ. ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪಂಚಾಯಿತಿ ವ್ಯವಸ್ಥೆ ತಳಹದಿಯಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆ ಅತಿ ಬಲಿಷ್ಠವಾಗಿರಬೇಕೆನ್ನುವ ಹಿನ್ನೆಲೆಯಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜಾರಿಗೊಳಿಸಲಾಯಿತು. ರಾಜ್ಯ ಮಟ್ಟದಲ್ಲಿ 224 ಜನ ಎಂ.ಎಲ್.ಎ.,ಗಳು ಮತ್ತು 75 ಜನ ಎಂ.ಎಲ್.ಸಿ.,ಗಳು ಇದ್ದೇವೆ. ಅದೇ ರೀತಿಯಲ್ಲಿ ಜಿಲ್ಲಾ ಮಟ್ಟದಲ್ಲಿ ಹೇಳಬೇಕಾದರೆ, 31 ಜಿಲ್ಲೆಗಳಲ್ಲಿ ಸುಮಾರು 1,200 ಜನ ಜಿಲ್ಲಾ ಪಂಚಾಯಿತಿ ಸದಸ್ಯರಿದ್ದಾರೆ. ಅದೇ ರೀತಿ ಸುಮಾರು 239 ತಾಲ್ಲೂಕುಗಳಲ್ಲಿ 3,000 ಜನ ತಾಲ್ಲೂಕು ಪಂಚಾಯಿತಿ ಸದಸ್ಯರಿದ್ದಾರೆ. 6,022 ಗ್ರಾಮ ಪಂಚಾಯಿತಿಗಳಲ್ಲಿ ಸುಮಾರು 95 ಸಾವಿರ ಜನ ಗ್ರಾಮ ಪಂಚಾಯಿತಿ ಸದಸ್ಯರಿದ್ದಾರೆ. ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳಿಗೆ ಚುನಾವಣೆ ನಡೆಯದೇ ಸುಮಾರು 4 ವರ್ಷಗಳು ಕಳೆದು ಹೋಗಿವೆ. ಸರ್ಕಾರದಿಂದ ಜನರಿಗೆ ಸಿಗಬೇಕಾಗಿದ್ದ ಹಲವಾರು ಸವಲತ್ತುಗಳು ಜನ ಪ್ರತಿನಿಧಿಗಳ ಮೂಲಕ ಸಿಗುತ್ತಿಲ್ಲ.

ಸನ್ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಮಂತ್ರಿಗಳ ಗಮನಸೆಳೆಯುವುದೇನೆಂದರೆ, ಮುಂದಿನ 6 ತಿಂಗಳ ಅವಧಿಯಲ್ಲಿ ಗ್ರಾಮ ಪಂಚಾಯಿತಿಗಳ ಅವಧಿ ಮುಗಿಯುತ್ತಿದೆ. ಆದ್ದರಿಂದ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಗಳಿಗೆ ಒಂದು ರಾಜ್ಯದಲ್ಲಿ ಒಂದೇ ಚುನಾವಣೆಯಡಿಯಲ್ಲಿ ಈ ಮೂರಕ್ಕೂ ಚುನಾವಣೆಗಳು ಚಿಹ್ನೆಯ ಮೇಲೆ ನಡೆಯಬೇಕೆನ್ನುವುದು ನನ್ನ ಒತ್ತಾಯವಾಗಿದೆ. ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳಿಗೆ ಚುನಾವಣೆಗಳು ನಡೆಯುತ್ತದೆ ಎಂದರೆ, ಸುಮಾರು 2-3 ತಿಂಗಳ ಕಾಲ ಯಾವುದೇ ಕೆಲಸ ಕಾರ್ಯಗಳು ನಡೆಯುವುದಿಲ್ಲ.

(ಮುಂದು)

(681) 13.8.2025 3.40 ಪಿಕೆ:ಬಿಎನ್ಎಸ್ (ಸಭಾಪತಿಗಳ ಉಪಸ್ಥಿತಿ)

ಶ್ರೀ ಮಂಜುನಾಥ್ ಭಂಡಾರಿ (ಮುಂದು)

ಆದರೆ ಈಗ ಏನಾಗುತ್ತಿದೆ ಎಂದರೆ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿಗಳಲ್ಲಿ ಚುನಾವಣೆ ನಡೆಯಬೇಕು ಎಂದಾಗ ಸುಮಾರು 3 ತಿಂಗಳುಗಳ ಕಾಲ ಯಾವುದೇ ಕೆಲಸಗಳು ಆಗುವುದಿಲ್ಲ. ಈ ಚುನಾವಣೆ ಮುಗಿದ 2 ತಿಂಗಳ ನಂತರ ಗ್ರಾಮ ಪಂಚಾಯಿತಿ ಚುನಾವಣೆಗಳು ಬರುತ್ತವೆ. ಮತ್ತೆ ಮೂರ್ನಾಲ್ಕು ತಿಂಗಳು ಏನು ನಡೆಯುವುದಿಲ್ಲ. ಹಾಗಾಗಿ ಈ ಎಲ್ಲಾ ಚುನಾವಣೆಗಳು ನಡೆಯಬೇಕು ಎಂದಾಗ ಸುಮಾರು ಒಂದೂವರೆ ವರ್ಷ ನಮ್ಮ ರಾಜ್ಯದ ಆಡಳಿತ ಯಂತ್ರ ಸ್ಥಗಿತವಾಗಿರುತ್ತದೆ. ಅದಕ್ಕೋಸ್ಕರ ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿ ಚುನಾವಣೆಗಳು ಒಂದೇ ಸಲ, ಒಂದೇ ಚಿಹ್ನೆಯ ಅಡಿ ನಡೆಯಬೇಕು. ಕೇರಳ ರಾಜ್ಯದಲ್ಲಿ 5 ವರ್ಷ ಮುಗಿದ ಕೂಡಲೇ ಚುನಾವಣೆ ಮಾಡುತ್ತಾರೆ. ಅಲ್ಲಿ ಚುನಾವಣಾ ಆಯೋಗಕ್ಕೆ ಸಂಪೂರ್ಣ ಅಧಿಕಾರ ಇದೆ. ಅವರೇ ಚುನಾವಣೆಯ ದಿನಾಂಕವನ್ನು ನಿಗದಿಪಡಿಸುತ್ತಾರೆ, ಮತದಾರರ ಪಟ್ಟಿಯನ್ನು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಿಗದಿಪಡಿಸುತ್ತಾರೆ. ಅದೇರೀತಿ ಮೀಸಲಾತಿಗಳನ್ನು ನಿಗದಿಪಡಿಸಿರುತ್ತಾರೆ. ಒಂದು ಜಿಲ್ಲಾ ಪಂಚಾಯಿತಿ ಯಾವಾಗ ಒಳ್ಳೆಯ ರೀತಿಯಲ್ಲಿ ನಡೆಯುತ್ತಿತ್ತು ಎಂದು ಹೇಳುವುದಾದರೆ, 1987 ರಿಂದ 1992ರವರೆಗೆ ಮಂಡಲ ಪಂಚಾಯಿತಿ ಇದ್ದ ಸಂದರ್ಭದಲ್ಲಿ ಅತ್ಯುತ್ತಮವಾಗಿತ್ತು. ಆದರೆ ಹಲವಾರು ಕಾರಣಗಳಿಂದ ಇದು ಬೇರೆ ಬೇರೆಯಾಗಿ, ಚುನಾವಣೆಗಳು ಹಿಂದೆ-ಮುಂದೆ ಆಗುತ್ತಿವೆ. ಈ ರೀತಿ ಆಗಬಾರದು. ಕೇರಳ ರಾಜ್ಯದವರು ಚುನಾವಣೆಗಳನ್ನು ನಿಗದಿತ ಸಮಯದಲ್ಲಿ ಮಾಡುತ್ತಿದ್ದಾರೆ ಎಂದರೆ ಕರ್ನಾಟಕ ರಾಜ್ಯದವರಿಗೆ ಏಕೆ ಮಾಡುವುದಕ್ಕಾಗುವುದಿಲ್ಲ? ಹಿಂದಿನ ಸರ್ಕಾರ, ಚುನಾವಣಾ ಮಂಡಳಿಯ ಅಧಿಕಾರವನ್ನು ಸರ್ಕಾರದ ವ್ಯಾಪ್ತಿಗೆ ತೆಗೆದುಕೊಂಡು ಬಂತು. ಈ ಹಿನ್ನೆಲೆಯಲ್ಲಿ ಚುನಾವಣೆಯನ್ನು ಮುಂದೂಡಲಾಗುತ್ತಿದೆ. ಇದು ಆಗಬಾರದು. ಮಹಾತ್ಮ ಗಾಂಧಿಯವರ, ಪ್ರಧಾನ ಮಂತ್ರಿಗಳಾಗಿದ್ದ ದಿವಂಗತ ರಾಜೀವ್‌ಗಾಂಧಿಯವರ ಏನು ಕನಸಾಗಿತ್ತೋ ಅದನ್ನು ನನಸು ಮಾಡಬೇಕು ಎಂದರೆ, ಜನರ ಕೈಗೆ ಅಧಿಕಾರ ತಲುಪಬೇಕು. ಇದರಿಂದ ಸುಮಾರು ಒಂದು ಲಕ್ಷ ಜನರಿಗೆ ಅಧಿಕಾರ ಸಿಗುತ್ತದೆ. ಅವರಿಗೆ ಸರಿಯಾದ ಸಮಯದಲ್ಲಿ ಅಧಿಕಾರ ಕೊಡಬೇಕು. ಇವತ್ತು ನಾವು ಅವರಿಗೆ ನೀಡುತ್ತಿರುವ ಗೌರವ ಧನದ ಬಗ್ಗೆ ಯೋಚನೆ ಮಾಡಬೇಕು. ನಿಜವಾಗಲೂ ನಾವು ಅವರಿಗೆ ಇವತ್ತು ಗೌರವ ಧನ ಕೊಡುತ್ತಿಲ್ಲ. ಅವರಿಗೆ ಬೇಕಾಬಿಟ್ಟಿಯಾಗಿ ಕೊಡುತ್ತಿದ್ದೇವೆ. ಪಂಚಾಯಿತಿಯ ಪ್ರತಿನಿಧಿಗಳಿಗೆ, ಪಂಚಾಯಿತಿಯ ಸದಸ್ಯರುಗಳಿಗೆ, ಅಂದರೆ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಮತ್ತು ಸ್ಥಳೀಯ ಆಡಳಿತ, ಅದು ಪುರಸಭೆ ಆಗಿರಬಹುದು ಇವರೆಲ್ಲರಿಗೂ ಕೊಡುವ ಗೌರವ ಧನವನ್ನು ಹೆಚ್ಚಿಗೆ ಮಾಡಿಕೊಡಬೇಕು. ಜಿಲ್ಲಾ ಪಂಚಾಯಿತಿಗಳಲ್ಲಿ ಸುಮಾರು 5-6 ಜನ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಯಾವುದೇ ಭದ್ರತೆಗಳಿಲ್ಲ. ಆ ಸಿಬ್ಬಂದಿಗಳಿಗೆ ಭದ್ರತೆಯನ್ನು ನೀಡಬೇಕು ಎಂದು ಹೇಳಬಯಸುತ್ತೇನೆ.

ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- ಮಾನ್ಯ ಸಭಾಪತಿಗಳೆ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಚುನಾವಣೆಗಳನ್ನು ಅತಿ ಶೀಘ್ರದಲ್ಲಿ ಮಾಡಬೇಕು. ಮಾನ್ಯ ಮಂಜುನಾಥ್‌ಭಂಡಾರಿಯವರು ಈ ಕುರಿತು ಪ್ರಸ್ತಾಪ ಮಾಡಿದ್ದಾರೆ. ಭಾರತೀಯ ಜನತಾ ಪಾರ್ಟಿಯ ಸರ್ಕಾರ ಇದ್ದಾಗ, ಈ ಚುನಾವಣೆಗಳನ್ನು ನಡೆಸುವ ಪ್ರಕ್ರಿಯೆಯನ್ನು ಚುನಾವಣಾ ಆಯೋಗದಿಂದ ಸರ್ಕಾರದ ವ್ಯಾಪ್ತಿಗೆ ತರಲಾಯಿತು, ಆ ಕಾರಣದಿಂದ ಚುನಾವಣೆ ಮಾಡುವುದಕ್ಕೆ ಆಗುತ್ತಿಲ್ಲ ಎಂದು ಹೇಳಿದರು. ಆದರೆ ಈ ಸರ್ಕಾರ ಬಂದೂ ಕೂಡ ಎರಡೂವರೆ ವರ್ಷವಾಯಿತು. ಚುನಾವಣೆ ಮಾಡುವ ಪ್ರಕ್ರಿಯೆಯನ್ನು ಚುನಾವಣಾ ಆಯೋಗಕ್ಕೆ ಕೊಟ್ಟರೆ ಬೇಗ ಚುನಾವಣೆ ಆಗುತ್ತದೆ. ಹಾಗಾಗಿ, ದಯಮಾಡಿ ಆದಷ್ಟು ಬೇಗ ಚುನಾವಣಾ ಆಯೋಗಕ್ಕೆ ಪವರ್ ಕೊಡಬೇಕು.

ವಿಕೇಂದ್ರೀಕರಣದ ಬಗ್ಗೆ ನಾವು ಹೆಚ್ಚು ಭಾಷಣ ಮಾಡುತ್ತೇವೆ. ನಾವು ಕಾರ್ಯಕರ್ತರನ್ನು ಬೆಳೆಸುತ್ತೇವೆ. ಲೀಡರ್‌ಶಿಪ್ ಡೆವಲಪ್ ಆಗಬೇಕು ಎಂದು ನಾವು 2ನೇ, 3ನೇ ಮತ್ತು 4ನೇ ಹಂತದ ಕಾರ್ಯಕರ್ತರನ್ನು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬೆಳೆಸುತ್ತೇವೆ. ಈ ಸದನದ ಸಭಾನಾಯಕರು ಆಗಿದ್ದ ಮತ್ತು ಹಿಂದೆ ಮಂತ್ರಿಗಳಾಗಿದ್ದ ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರನ್ನು ನೆನಸಿಕೊಳ್ಳುತ್ತೇನೆ.

(ಈ ಹಂತದಲ್ಲಿ ಮಾನ್ಯ ಭಾರತೀಶೆಟ್ಟಿಯವರು ಸಭಾಪೀಠವನ್ನು ಅಲಂಕರಿಸಿದರು)

ಅವರು ಗ್ರಾಮ ಪಂಚಾಯಿತಿಯ ಸದಸ್ಯರಾಗಿ ಇವತ್ತು ಸಂಸತ್ತಿನ ಸದಸ್ಯರಾಗಿ ಹೋಗಿದ್ದಾರೆ. ಇದು ನಮ್ಮ ದೇಶದ ವಿಕೇಂದ್ರೀಕರಣದ ವ್ಯವಸ್ಥೆಯ ಹಿನ್ನೆಲೆಯಲ್ಲಿ ಅವರು ದೆಹಲಿಯ ತನಕ ಹೋಗಿದ್ದಾರೆ. ಮಾನ್ಯ ಸಭಾಪತಿಗಳೆ, ಈಗ ಸ್ಥಳೀಯ ಸಂಸ್ಥೆಗಳ ಚುನಾವಣೆಗಳು ನಡೆಯಲಿಲ್ಲ. ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿಗಳಿಗೆ 2020ರಲ್ಲಿ ಚುನಾವಣೆ ನಡೆದದ್ದು ಬಿಟ್ಟರೆ ಮತ್ತೆ ಚುನಾವಣೆ ಆಗಲಿಲ್ಲ. ಇದಕ್ಕೆ 5 ವರ್ಷಗಳಾಗಿವೆ. ಬರುವಂತಹ ದಿನಗಳಲ್ಲಿ ಎಲ್ಲಾ ಸ್ಥಳೀಯ ಸಂಸ್ಥೆಗಳು ಖಾಲಿಯಾಗುತ್ತವೆ. ವಿಕೇಂದ್ರೀಕರಣ ಅಥವಾ ಅಲ್ಲಿನ ಸದಸ್ಯರುಗಳ ಅಧಿಕಾರವನ್ನು ಮೊಟಕುಗೊಳಿಸಿ ಅಧಿಕಾರಿಗಳಿಗೆ ಕೊಟ್ಟ ಹಿನ್ನೆಲೆಯಲ್ಲಿ ಸಾಕಷ್ಟು ಸಮಸ್ಯೆಗಳು, ವಿಷಯಗಳು ಅಲ್ಲಲ್ಲಿಗೆ ನಿಲ್ಲುತ್ತಿವೆ. ಲೋಕಲ್ ಬಾಡಿ ಚುನಾವಣೆಗಳನ್ನು ಮಾಡಿ ಎಂದು ಪ್ರತಿ ಸಲ ಕೇಳುವುದು ನಮಗೆ ಅಭ್ಯಾಸವಾಗಿ ಹೋಗಿದೆ. ಚುನಾವಣೆಗಳನ್ನು ಮಾಡಿ ಎಂದು ಕೇಳಿದಾಗ, ಇದು ಹೈಕೋರ್ಟ್‌ನಲ್ಲಿದೆ, ಸುಪ್ರೀಂ ಕೋರ್ಟ್‌ನಲ್ಲಿದೆ ಎಂದು ಹೇಳಿಬಿಡುತ್ತೇವೆ. ನಮ್ಮ ಇಚ್ಛಾಶಕ್ತಿ ಇದ್ದರೆ ಏನಾದರೂ ಮಾಡಬಹುದು. ಅಕ್ಕಪಕ್ಕದ ರಾಜ್ಯಗಳಲ್ಲಿ ಈ ರೀತಿಯ ಚುನಾವಣೆ ಆಗುತ್ತವೆ; ಆದರೆ ನಮ್ಮ ರಾಜ್ಯದಲ್ಲಿ ಆಗುವುದಿಲ್ಲ. ನೀವು ಒಳಮೀಸಲಾತಿ ಎನ್ನುತ್ತೀರೋ ಅಥವಾ ಬೇರೆ ಕ್ಯಾಟಗರಿಗೆ ಸಂಬಂಧಪಟ್ಟಂತೆ ಸಮಸ್ಯೆ ಇದೆ ಎಂದು ಹೇಳುತ್ತೀರೋ ಅವೆಲ್ಲವನ್ನು ಪಕ್ಕಕ್ಕೆ ಇಡಿ. ಯಾವಾಗ ತೀರ್ಮಾನವಾಗುತ್ತದೆಯೋ ಅಲ್ಲಿಂದ ಮುಂದೆ ಪ್ರಾಸ್ಪೆಕ್ಟಿವ್ ಆಗಿ ಆ ಚುನಾವಣೆಗಳನ್ನು ಮಾಡಬಹುದು. ನಾವು ಈ ನಿಟ್ಟಿನಲ್ಲಿ ನಮ್ಮ ಲೀಗಲ್ ಸೆಕ್ಷನ್‌ನಲ್ಲಿ ಕೇಳಿ ಬಲವಾದ ಅಫಿಡೆವಿಟ್ ಹಾಕಬೇಕು ಎನ್ನುವ ಇಚ್ಛಾಶಕ್ತಿ ಇದ್ದರೆ ಏನು ಬೇಕಾದರೂ ಮಾಡಬಹುದು. ಚುನಾವಣಾ ಆಯೋಗದ ಜೊತೆ ಮಾತನಾಡಿದರೆ ಅವರು, ನಮಗೆ ಅಧಿಕಾರ ಕೊಡಿ ನಾಳೆಯೇ ಸ್ಥಳೀಯ ಸಂಸ್ಥೆಗಳ ಚುನಾವಣೆ ಮಾಡುತ್ತೇವೆ ಎಂದು ಹೇಳುತ್ತಾರೆ. ನಾವು ಅವರ ಹತ್ತಿರ ಹೋಗಿ ನಮ್ಮ ಪ್ರಸ್ತಾವಗಳನ್ನು ಕೊಡಬೇಕು. ಆದಷ್ಟು ಬೇಗ ಈ ಕೆಲಸವನ್ನು ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿಗಳಲ್ಲಿ ಏಕೆ ನಮಗೆ ಚುನಾವಣೆ ಬೇಕು, ಒಂದು ಬಾಡಿ ಬೇಕು ಎಂಬುದನ್ನು ಈ ಹಿಂದೆ ಮುಖ್ಯಮಂತ್ರಿಗಳಿಗೂ ಹೇಳಿದ್ದೇನೆ. ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿಗಳ ವ್ಯವಸ್ಥೆ ಇಲ್ಲದೇ ಹೋದರೆ ಕೇಂದ್ರ ಸರ್ಕಾರದಿಂದ ಬರುವ ಅನುದಾನಗಳು ಕಡಿತಗೊಳ್ಳುತ್ತವೆ. ನಮಗೆ ಬೇಕಾಗಿರುವ ಅನುದಾನ ಸಿಗುವುದಿಲ್ಲ. ಆ ಕುರಿತು ಕೂಡ ನೀವು ಹಿಂದೆ ಉತ್ತರ ಕೊಟ್ಟಿದ್ದೀರಿ. ಬಾಡಿ ಇಲ್ಲದೇ ಇರುವ ಕಾರಣಕ್ಕೆ ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿಗಳಲ್ಲಿ ಬಳಕೆಯಾಗದ ನಿಧಿ ಎಲ್ಲಿಗೆ ಹೋಗಿದೆ ಎಂದು ಕೇಳಿದ್ದೆ. ಅದು ಸಂಚಿತ ನಿಧಿಗೆ ಹೋಗಬೇಕಿತ್ತು; ಆದರೆ ಅದು ಹೋಗುತ್ತಿಲ್ಲ. ಈ ಕುರಿತು ಮಾಹಿತಿಯನ್ನು ನಾನು ನಮ್ಮ ರಾಜ್ಯಪಾಲರಿಗೆ ಹೋಗಿ ಕೊಟ್ಟುಬಂದೆ. ಉಳಿಕೆಯಾದ ಹಣ ಈಕಡೆ ಆರ್ಥಿಕ ಇಲಾಖೆಗೆ ಜಮಾ ಆಗಿಲ್ಲ; ಆಕಡೆ ಯಾವುದಕ್ಕೆ ಬಳಕೆಯಾಗಿದೆ ಎನ್ನುವುದೂ ಗೊತ್ತಿಲ್ಲ. ಚುನಾವಣೆಗಳು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಡೆಯದ ಕಾರಣ ಅಲ್ಲಿ ನ್ಯೂನತೆಗಳು ಕಾಣುತ್ತಿವೆ. ಆದಷ್ಟು ಬೇಗ ಗ್ರಾಮ ಪಂಚಾಯಿತಿಗಳಿಗೆ ಶಕ್ತಿ ಕೊಡಬೇಕು. ನಮ್ಮ ಗ್ರಾಮೀಣಾಭಿವೃದ್ಧಿ ಸಚಿವರು ಅದಷ್ಟು ಬೇಗ ಅಲ್ಲಿನ ಸಮಸ್ಯೆಗಳನ್ನು ಪರಿಹಾರಿಸುತ್ತಾರೆ, ಅಲ್ಲಿಗೆ ಬೇಕಾಗಿರುವಂತಹ ಅನುದಾನ ಕೊಡುವ ಮೂಲಕ ಹೆಚ್ಚು ಶಕ್ತಿ ಕೊಡುತ್ತಾರೆ ಎಂದು ಭಾವಿಸಿದ್ದೆವು. ಇವತ್ತು, ಗ್ರಾಮ ಪಂಚಾಯಿತಿ ಸದಸ್ಯರು, ನಾವು ಏಕಾದರೂ ಸದಸ್ಯರಾದೆವೋ ಎಂದು ಹೇಳುತ್ತಿದ್ದಾರೆ. ಮಾನ್ಯ ಸಭಾಪತಿಗಳೆ, ಈ ಸಲ ಒಬ್ಬ ವ್ಯಕ್ತಿ ಗ್ರಾಮ ಪಂಚಾಯಿತಿ ಸದಸ್ಯನಾದರೆ, 5 ವರ್ಷ ಬಿಟ್ಟು ಕೇವಲ 10 ರಿಂದ 20% ಅಷ್ಟೇ ಆತ ವಾಪಸ್ ಗೆಲ್ಲುವುದಕ್ಕೆ ಆಗುತ್ತದೆ. ಏಕೆಂದರೆ, ವಾಪಸ್ಸು ಗೆಲ್ಲುವುದಕ್ಕೆ ಸಾಧ್ಯವಾಗದೇ ಇರುವ ಸ್ಥಿತಿಯಲ್ಲಿ ಒಬ್ಬ ಗ್ರಾಮ ಪಂಚಾಯಿತಿ ಸದಸ್ಯನಿರುತ್ತಾನೆ. ಆತ ಮನೆ-ಮಠ ಬಿಟ್ಟು ಕೆಲಸ ಮಾಡಬೇಕಾಗುತ್ತದೆ. ದಿನನಿತ್ಯ ಅಲ್ಲಿನ ಗ್ರಾಮಸ್ಥರು, ನಮಗೆ ರಸ್ತೆ ಮಾಡಿಕೊಡಿ, ನೀರಿನ ವ್ಯವಸ್ಥೆ ಮಾಡಿ ಎಂದು ಕೇಳುತ್ತಾನೆ. ಅದನ್ನೂ ಕೊಡುವುದಕ್ಕಾಗುತ್ತಿಲ್ಲ. ಆ ಸ್ಥಿತಿಯಲ್ಲಿ ಇವತ್ತು ಗ್ರಾಮ ಪಂಚಾಯಿತಿ ಸದಸ್ಯರು ಇದ್ದು, ತಮ್ಮ ಅಳಲನ್ನು ಹೇಳಿಕೊಳ್ಳುತ್ತಿದ್ದಾರೆ. ಮಾನ್ಯ ಮಂಜುನಾಥ್ ಭಂಡಾರಿಯವರು ಹೇಳಿದ ಹಾಗೆ, ಏಕಕಾಲಕ್ಕೆ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಚುನಾವಣೆಗಳನ್ನು ಮಾಡಬೇಕು. ಅದಕ್ಕೋಸ್ಕರ ಕೇಂದ್ರ ಸರ್ಕಾರ ಇಡೀ ದೇಶಕ್ಕೆ ಸಂಬಂಧಪಟ್ಟಂತೆ "ಒನ್ ನೇಷನ್, ಒನ್ ಎಲೆಕ್ಷನ್" ಎಂದು ಹೇಳುತ್ತಿದೆ. ಈ ಒಂದು ಸಂಪ್ರದಾಯವನ್ನು ನಮ್ಮ ಕರ್ನಾಟಕದಿಂದ ಪ್ರಾರಂಭ ಮಾಡೋಣ. ಲೋಕಲ್ ಬಾಡಿ ಚುನಾವಣೆಗಳನ್ನು 6 ತಿಂಗಳುಗಳಲ್ಲಿ, 3 ತಿಂಗಳುಗಳಲ್ಲಿ ಒಟ್ಟಿಗೆ ಮಾಡಿ ಮುಗಿಸುತ್ತೇವೆ ಎನ್ನುವ ಕಲ್ಪನೆಯಲ್ಲಿ ಮಾನ್ಯ ಸಚಿವರು ಯೋಚನೆ ಮಾಡಬೇಕು. ಅಲ್ಲಿನ ಲೀಡರ್‌ಶಿಪ್ ಅನ್ನು ಡೆವಲಪ್ ಮಾಡುವ ನಿಟ್ಟಿನಲ್ಲಿ ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಹಂತದಲ್ಲಿ ಚುನಾವಣೆಗಳನ್ನು ನಡೆಸಬೇಕು ಎಂದು ಮಾನ್ಯ ಸಚಿವರಲ್ಲಿ ಹೇಳಬಯಸುತ್ತೇನೆ.

ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು):- ಮಾನ್ಯ ಸಭಾಪತಿಗಳೆ, ಮಾನ್ಯ ಮಂಜುನಾಥ್ ಭಂಡಾರಿಯವರು ಮತ್ತು ಮಾನ್ಯ ಅರುಣ್‌ರವರು ವ್ಯಕ್ತಪಡಿಸುತ್ತಿರುವ ಕಾಳಜಿ ನಮಗೆ ಅರ್ಥವಾಗುತ್ತಿದೆ. ನಾವು ಇದನ್ನು ಬೇಗ ಮಾಡಬೇಕಾಗಿತ್ತು. ನಾನೂ ಕೂಡ ಇದನ್ನು ಒಪ್ಪುತ್ತೇನೆ. ಆದರೆ, ನೀವು ಹೇಳಿದ ಹಾಗೆ ಕೆಲವು ಸಮಸ್ಯೆಗಳನ್ನು ಕಾನೂನಾತ್ಮಕವಾಗಿ ನಿವಾರಣೆ ಮಾಡಬೇಕಾಗುತ್ತದೆ.

(ಮುಂದು)

(682) 13-8-2025 3.50 ಡಿಎಸ್-ಕೆಎಸ್ (ವೈಸ್‌ಛೆರ್ಮನ್ ಉಪಸ್ಥಿತಿ)

ಶ್ರೀ ಪ್ರಿಯಾಂಕ್ ಖರ್ಗೆ (ಮುಂದು):-

ನಮ್ಮ ಸರ್ಕಾರ ಬಂದ ಮೇಲೆ ನಾವು ಪ್ರಾಮಾಣಿಕವಾದಂತಹ ಪ್ರಯತ್ನ ಮಾಡಿದ್ದೇವೆ. ಈ ಕಾನೂನಿನ ಕಗ್ಗಂಟು ಏನಿದೆ ಅದನ್ನು ಸರಿಪಡಿಸುವುದಕ್ಕೆ ನಾವು ಪ್ರಯತ್ನ ಮಾಡಿದ್ದೇವೆ. ಮೊದಲನೆಯದಾಗಿ, ಮಂಗಳೂರು ಕಡೆ ಮತ್ತು ಕರಾವಳಿ ಪ್ರದೇಶದಲ್ಲಿ ಕೆಲವು delimitation ಸಮಸ್ಯೆ ಇತ್ತು. ಅದು ಮಾನ್ಯ ಸದಸ್ಯರಿಗೂ ಗೊತ್ತಿದೆ. ಆ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಗ್ಗಂಟನ್ನು ಬಿಚ್ಚಿದಾಗ ಕೊಡಗಿನವರು ಹೋದರು. ಅದಾದ ಮೇಲೆ ಮಲೆನಾಡು ಪ್ರದೇಶದವರು ಕೇಳುವುದಕ್ಕೆ ಪ್ರಾರಂಭ ಮಾಡಿದರು. ಅದನ್ನು ಕೂಡ ನಾವು ಬಗೆಹರಿಸಿದ್ದೇವೆ. ಈಗ ಕೆಲವು ತಿಂಗಳುಗಳಿಂದ delimitation ಪ್ರಕ್ರಿಯೆ ಬಗ್ಗೆ ಯಾವುದೇ ರೀತಿಯಾದಂತಹ ಕಾನೂನಿನ ತೊಡಕು ಇಲ್ಲ. ಮೀಸಲಾತಿ ಪ್ರೋಸಸ್ ಏನಿದೆ ZP (Zilla Panchayat) and TP (Taluk Panchayat) ಅದು ಪ್ರಕ್ರಿಯೆ ಜಾರಿಯಲ್ಲಿದೆ. ಅದಾದ ತಕ್ಷಣ ನಾವು ನೋಟಿಫಿಕೇಶನ್ ಕೊಡುತ್ತೇವೆ. ಆದಷ್ಟು ಬೇಗ ಚುನಾವಣೆ ನಡೆಸುವುದಕ್ಕೆ ಘೋಷಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಏಕೆಂದರೆ, ನೋಟಿಫಿಕೇಶನ್ ಆದ ಮೇಲೂ ಕೂಡ ಬಹಳಷ್ಟು ಜನರು ಕೋರ್ಟ್‌ಗೆ ಹೋಗುತ್ತಾರೆ. ಕಲಂ 3(ಎ) ಹಾಗೂ 3(ಬಿ) ಪ್ರಕಾರ ಸರಿಯಾಗಿ ಆಗಿಲ್ಲ ಎಂದು ಆ ರೀತಿ ಏನಾದರೂ ಹೋಗಬಹುದು. ಮಾನ್ಯ ಸಭಾಪತಿಯವರೆ, ಏಕೆಂದರೆ, ಎಸ್.ಸಿ.-ಎಸ್.ಟಿ. ಮತ್ತು ಮಹಿಳಾ ಮೀಸಲಾತಿಯಲ್ಲಿ, it is purely based on numbers. ಅದರದ್ದೇನು ತೊಂದರೆಯಾಗುವುದಿಲ್ಲ ಎಂದು ನಾನು ಭಾವಿಸುತ್ತೇನೆ. ಮೀಸಲಾತಿ ಏನೇ ಇದ್ದರೂ ಕೂಡ ಪಾರದರ್ಶಕವಾಗಿ ಮಾಡುತ್ತೇವೆಂದು ನಾನು ಆಶ್ವಾಸನೆ ಕೊಡುವುದಕ್ಕೆ ಬಯಸುತ್ತಿದ್ದೇನೆ. ಮಾನ್ಯ ಡಿ.ಎಸ್. ಅರುಣ್‌ರವರು, ಮಾನ್ಯ ಮಂಜುನಾಥ ಭಂಡಾರಿಯವರು ಹೇಳಿರುವುದನ್ನು ನಾನು ಒಪ್ಪುತ್ತೇನೆ. ಸ್ವಲ್ಪ Body ಇರಲಾರದ ಕಾರಣ ಸಮರ್ಪಕವಾಗಿ ಅನುದಾನ ಬಳಕೆಯಾಗುವುದಿಲ್ಲ. ಏಕೆಂದರೆ, ಅಡ್ಮಿನಿಸ್ಟ್ರೇಟರ್‌ಗಳು ಇರುತ್ತಾರೆ. ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿಗಳ ಪ್ರತಿನಿಧಿಗಳೇ ಇರುವುದಿಲ್ಲ. ಅಡ್ಮಿನಿಸ್ಟ್ರೇಟರ್‌ಗಳಿಗೆ ನೇರವಾಗಿ ಜನರ ಜೊತೆ ಸಂಬಂಧ ಇರುವುದಿಲ್ಲ. ಜನರು ಏನಾದರೂ ಸಮಸ್ಯೆಗಳನ್ನು ತೆಗೆದುಕೊಂಡು ಬಂದರೆ ಅವುಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡುವುದಕ್ಕಾಗುವುದಿಲ್ಲ, ಸಮಸ್ಯೆಗೆ ಪರಿಹಾರ ಕೂಡ ಕೊಡುವುದಕ್ಕಾಗುವುದಿಲ್ಲ. The body is important, regardless of whether it is ULBs (Urban Local Bodies), ZP, or TP. ಮಾನ್ಯ ಸದಸ್ಯರು ವಿಕೇಂದ್ರೀಕರಣದ ಬಗ್ಗೆ ಮಾತನಾಡಿದ್ದಾರೆ, ನಾನು ಬಹಳ ಹೆಮ್ಮೆಯಿಂದ ಹೇಳುವುದಕ್ಕೆ ಬಯಸುತ್ತಿದ್ದೇನೆ. ಪಂಚಾಯತ್ ವಿಕೇಂದ್ರೀಕರಣದಲ್ಲಿ ರಾಷ್ಟ್ರ ಮಟ್ಟದಲ್ಲಿ ಕೇಂದ್ರ ಸರ್ಕಾರ ಎಲ್ಲಾ ರಾಜ್ಯಗಳಲ್ಲಿ ಒಂದು ಸಮೀಕ್ಷೆ ನಡೆಸಿದಾಗ, ಒಂದು ಅಧ್ಯಯನ ನಡೆಸಿದಾಗ, 'ಕರ್ನಾಟಕ ಪಂಚಾಯತ್ ರಾಜ್ ಇಲಾಖೆ ನಂಬರ್-1' ಎಂದು ಇವತ್ತು ಕೇಂದ್ರ ಸರ್ಕಾರ ಹೇಳಿದೆ. ನನಗೆ ಸಂತೋಷವೇನೆಂದರೆ, ಈ ಎರಡು ನಮ್ಮ ಇಲಾಖೆ. ಐಟಿ-ಬಿಟಿ ಇರಬಹುದು, ಎಲೆಕ್ಟ್ರಾನಿಕ್ಸ್ ಇರಬಹುದು ಮತ್ತು ಪಂಚಾಯತ್ ರಾಜ್ ಇಲಾಖೆ ಇರಬಹುದು, ಇವತ್ತು ಈ ಎರಡು ಇಲಾಖೆಗಳಿಗೆ ನಂಬರ್-1 ಇದೆ ಎಂದು ಕೇಂದ್ರ ಸರ್ಕಾರವೇ ಸರ್ಟಿಫಿಕೇಟ್ ಕೊಟ್ಟಿದೆ. ಆದರೆ ಹೆಚ್ಚು ಮಾಡಬಹುದು. ಇಲ್ಲಿ ವಿಕೇಂದ್ರೀಕರಣಕ್ಕೆ ಸಾಕಷ್ಟು ಸದಸ್ಯರುಗಳು ಕಾಳಜಿ ವಹಿಸಿ ಸಲಹೆಗಳನ್ನು ಕೊಟ್ಟಿದ್ದಾರೆ. ಅದನ್ನು ನಾವು ಹಂತ ಹಂತವಾಗಿ ಸಲಹೆಗಳನ್ನು ಪಡೆದು ಮಾಡುತ್ತಿದ್ದೇವೆ. ವಿಶೇಷವಾಗಿ ಮಾನ್ಯ ಮಂಜುನಾಥ ಭಂಡಾರಿಯವರು ಸಲಹೆಯನ್ನು ನೀಡಿದ್ದಾರೆ. ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿಯ ಚುನಾವಣೆಗಳು ಒಂದೇ ಸಮಯದಲ್ಲಿ ಆಗಬೇಕು, 'One Nation, One Election' ಎಂದು ಹೇಳಿದ್ದಾರೆ. ಗ್ರಾಮ ಪಂಚಾಯಿತಿ ಚುನಾವಣೆ ಈಗ ಜನವರಿ 2025-26 ಗೆ ಆಗಬೇಕು. ತಾಲ್ಲೂಕು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಚುನಾವಣೆಯನ್ನು ಈಗಲೇ ಮಾಡಿ ಎಂದು ಹೇಳುತ್ತಿದ್ದಾರೆ. ಈಗ ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಚುನಾವಣೆಯನ್ನು ಮಾಡುವುದೇ ಅಥವಾ ಜನವರಿಯಲ್ಲಿ ಮಾಡುವುದೇ?

ಶ್ರೀ ಕೆ.ಎಸ್.ನವೀನ್:- ಮಾನ್ಯ ಸಭಾಪತಿಯವರೇ,.....

ಶ್ರೀ ಪ್ರಿಯಾಂಕ್ ಖರ್ಗೆ:- ಮಾನ್ಯ ನವೀನ್‌ರವರೇ, I am explaining why it is not possible. ಏಕೆಂದರೆ, ಕಾನೂನಿನ ತೊಡಕು ಇದೆ.

ಶ್ರೀ ಕೆ.ಎಸ್.ನವೀನ್:- ಮಾನ್ಯ ಸಭಾಪತಿಯವರೇ, ನನಗೆ ಮಾತನಾಡುವುದಕ್ಕೆ ಒಂದು ನಿಮಿಷ ಅವಕಾಶ ಕೊಡಿ.

ಶ್ರೀ ಪ್ರಿಯಾಂಕ್ ಖರ್ಗೆ:- ಮಾನ್ಯ ನವೀನ್‌ರವರೇ, ದಯವಿಟ್ಟು ತಾವು ಆಮೇಲೆ ಮಾತನಾಡಿ. ನಾನು ಹೇಳಬಿಡುತ್ತೇನೆ.

ಮಾನ್ಯ ಸಭಾಪತಿಯವರೇ, ಬಹಳ ಆಳವಾಗಿ ಎಲ್ಲರೂ ಸೇರಿ ವಿಚಾರ ಮಾಡುವಂತಹ ಮತ್ತೊಂದು ವಿಷಯವೇನೆಂದರೆ, ಕೇರಳ ಮಾದರಿಯಲ್ಲಿ ಅಥವಾ ಕೆಲವು ರಾಜ್ಯಗಳಲ್ಲಿ ಯಾವ ರೀತಿ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿಯನ್ನು political party symbol based ಮಾಡಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಕಳೆದ ಬಾರಿ ಕೂಡ ಸಾಕಷ್ಟು ನಮ್ಮ ಸದಸ್ಯರುಗಳು ನಗರ ಸ್ಥಳೀಯ ಸಂಸ್ಥೆಯ ಸದಸ್ಯರುಗಳಿರಬಹುದು, ತಾಲ್ಲೂಕು ಪಂಚಾಯಿತಿ ಸದಸ್ಯರುಗಳಿರಬಹುದು, ಜಿಲ್ಲಾ ಪಂಚಾಯಿತಿ ಸದಸ್ಯರುಗಳಿರಬಹುದು, ಅವರುಗಳು ಕೆಲವೊಂದು ಸಲಹೆಗಳನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಕೊಟ್ಟಿದ್ದಾರೆ, ನಗರಾಭಿವೃದ್ಧಿ ಇಲಾಖೆಗೂ ಕೊಟ್ಟಿದ್ದಾರೆ. ಅದನ್ನು ನಾವು ಸಮರ್ಪಕವಾಗಿ ಅಧ್ಯಯನ ಮಾಡಿದಾಗ ಸಮಿತಿಯನ್ನು ರಚನೆ ಮಾಡಬೇಕೆಂದು ಚಿಂತನೆ ನಡೆದಿದೆ. ಗ್ರಾಮ ಪಂಚಾಯಿತಿ ಚುನಾವಣೆ ಚಿಹ್ನೆ ಮೇಲೆ ನಡೆಸಬೇಕೆಂದರೆ ಅದರ ಸಾಧಕ-ಭಾದಕಗಳೇನಿವೆ ಎಂಬುದನ್ನು ನೋಡಬೇಕಾಗುತ್ತದೆ. ಪಂಚಾಯತ್ ರಾಜ್ ಕಾಯ್ದೆಗೆ ತಿದ್ದುಪಡಿ ಮಾಡಬೇಕಾಗುತ್ತದೆಯೇ ಎಂಬುದನ್ನು ನಾವು ನೋಡಬೇಕಾಗುತ್ತದೆ. ಅದಕ್ಕೆ ಸಮಪರ್ಕವಾದಂತಹ ಉತ್ತರ ನನ್ನ ಹತ್ತಿರ ಸದ್ಯಕ್ಕಿಲ್ಲ. ಆದರೆ ನಾವು ಒಂದು ಸಮಿತಿಯನ್ನು ರಚನೆ ಮಾಡಿ, ಮೇಲ್ಮನೆ ಸದಸ್ಯರುಗಳು 18 ರಿಂದ 20 ಸಲಹೆಗಳನ್ನು ಕೊಟ್ಟಿದ್ದಾರೆ. ಅದನ್ನು ಚರ್ಚಿಸಿ ಬೇರೆ ರಾಜ್ಯದಲ್ಲಿ ಹೇಗಿದೆ, ಕಾನೂನಿನ ತೊಡಕು ಏನಿದೆ, ನಾವು ಸಂವಿಧಾನದಲ್ಲಿ ಏನಾದರೂ ತಿದ್ದುಪಡಿಯನ್ನು ತರಬೇಕಾಗುತ್ತದೆಯೇ ಎಂಬುದನ್ನೆಲ್ಲಾ ಪರಿಶೀಲನೆ ಮಾಡಿ ವರದಿ ನೀಡುವಂತಹ ಪ್ರಕ್ರಿಯೆಯನ್ನು ನಾವು ಜಾರಿಗೆ ಮಾಡುತ್ತೇವೆ. ಆದರೆ ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿಗಳಿಗೆ ಚುನಾವಣೆ ಮಾಡಬೇಕೆನ್ನುವ ಪ್ರಶ್ನೆ ಏನಿದೆ, ಅದಕ್ಕೆ ಸರ್ಕಾರ ಬದ್ಧವಾಗಿದೆ. ಆದಷ್ಟು ಬೇಗ ಮೀಸಲಾತಿ ಪಟ್ಟಿಯನ್ನು ಬಿಡುಗಡೆ ಮಾಡಿ ನಾವು ಚುನಾವಣೆಯನ್ನು ಮಾಡುತ್ತೇವೆ.

ಶ್ರೀ ಸಿ.ಎನ್.ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಸದನದ ಮೂಲಕ ಮಾನ್ಯ ಸಚಿವರು ಯಾವಾಗ ಚುನಾವಣೆ ನಡೆಸುತ್ತಾರೆ ಎಂದು ದಿನಾಂಕವನ್ನು ಹೇಳಲಿ. ಏಕೆಂದರೆ, ನಾವು ಗ್ರಾಮ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಯಿಂದ ಬಂದಿರುವಂಥದ್ದು. ಸರ್ಕಾರ ಬಂದು ಮೂರು ವರ್ಷಗಳಾಗುತ್ತಾ ಬಂದಿದೆ. ಮಾನ್ಯ ಬಸವರಾಜ ಬೊಮ್ಮಾಯಿಯವರು ಮುಖ್ಯಮಂತ್ರಿಗಳಾಗಿದ್ದಾಗ ಗೌರವಧನವನ್ನು ಜಾಸ್ತಿ ಮಾಡಿ ಕೊಟ್ಟರು. ಆಂಧ್ರ ಪ್ರದೇಶ, ಕೇರಳ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ 7,000 ರೂಪಾಯಿಗಳಿಂದ 8,000 ರೂಪಾಯಿಗಳನ್ನು ಕೊಡುತ್ತಿದ್ದಾರೆ. ಒಬ್ಬ ಗ್ರಾಮ ಪಂಚಾಯಿತಿ ಸದಸ್ಯ ಒಂದು ದೋಸೆ ತಿನ್ನಬೇಕಾದರೆ ಬೈಟು ದೋಸೆ ತಿನ್ನಬೇಕಾದ ಕಾಲ ಬಂದಿದೆ. ಇವತ್ತು ವಿಧಾನಸಭಾ ಚುನಾವಣೆಯನ್ನು ಸಮಯಕ್ಕೆ ಸರಿಯಾಗಿ ಮಾಡಿಕೊಳ್ಳುತ್ತೇವೆ. ಇವತ್ತು ವಿಕೇಂದ್ರೀಕರಣದ ಬಗ್ಗೆ ಮಾತನಾಡುತ್ತೇವೆ. ಗ್ರಾಮ ಪಂಚಾಯಿತಿ ರಾಜಕೀಯದ ಅಡಿಪಾಯ ಎಂದು ಹೇಳುತ್ತೇವೆ. ಆ ಚುನಾವಣೆ ಮಾಡುವುದಕ್ಕೆ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಚುನಾವಣೆಗೆ ಪಕ್ಷದ ಚಿಹ್ನೆ ಮಾಡುತ್ತೀರೋ, ಬಿಡುತ್ತೀರೋ ಅದು ಅವರಿಗೆ ಬಿಟ್ಟದ್ದು. ಆದರೆ, ಈ ಕಾನೂನು ತೊಡಕುಗಳನ್ನು ಹೋಗಲಾಡಿಸಿಕೊಂಡು ನಾವು ಮಾಡುತ್ತೇವೆ ಎಂದು ಹೇಳಿ, ನಾನು ಬಂದು ಮೂರು ವರ್ಷಗಳಿಂದ ಇದೇ ಮಾತನ್ನು ಕೇಳಿಕೊಂಡು ಬರುತ್ತಿದ್ದೇನೆ. ಮಾನ್ಯ ಸಚಿವರು ವಿದ್ಯಾವಂತರು, ಬುದ್ಧಿವಂತರಿದ್ದಾರೆ, ಅವರಿಗೆ ಭಗವಂತ ಎಲ್ಲಾ ಜ್ಞಾನವನ್ನು ಕೊಟ್ಟಿದ್ದಾರೆ. ದಯಮಾಡಿ ಸದನಕ್ಕೆ ಯಾವ ತಿಂಗಳಲ್ಲಿ ಚುನಾವಣೆಯನ್ನು ಮಾಡುತ್ತಾರೆ ಎಂಬುದನ್ನು ಸದನಕ್ಕೆ ತಿಳಿಸಿಕೊಟ್ಟರೆ ಅನುಕೂಲವಾಗುತ್ತದೆ.

ಶ್ರೀ ಸಲೀಂ ಅಹಮದ್:- ಮಾನ್ಯ ಸಭಾಪತಿಯವರೇ,.....

(ಗೊಂದಲ)

ವೈಸ್‌ಛೇರ್ಮನ್:- ಎಲ್ಲರೂ ಮಾತನಾಡುವುದಕ್ಕೆ ಅವಕಾಶವಿಲ್ಲ.

ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):- ಮಾನ್ಯ ಸಭಾಪತಿಯವರೇ, ಗೌರವಧನವನ್ನು ಜಾಸ್ತಿ ಮಾಡಲಿ. ಈಗಾಗಲೇ ಒಕ್ಕೊರಲಿನಿಂದ ಎಲ್ಲಾ ಸದಸ್ಯರುಗಳು ಕಳೆದ ಅಧಿವೇಶನದಲ್ಲೂ ಮನವಿಯನ್ನು ಮಾಡಿದ್ದರು. ದಯವಿಟ್ಟು ಗೌರವಧನವನ್ನು ಜಾಸ್ತಿ ಮಾಡಿ. ಅವರಿಗೆ ಬಹಳ ಕಷ್ಟವಿದೆ. ಅವರಿಗೆ ಸಹಾಯ ಮಾಡುವ ರೀತಿಯಲ್ಲಿ ಮಾಡಬೇಕು.

ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಈಗಿರುವ ಗ್ರಾಮ ಪಂಚಾಯಿತಿ ಸದಸ್ಯರುಗಳ ಅವಧಿ ಮುಗಿಯುತ್ತಾ ಬರುತ್ತಿದೆ, ದಯಮಾಡಿ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ಈ ಮೂರು ಒಟ್ಟಿಗೆ ಸೇರಿಸಿ ಚುನಾವಣೆಯನ್ನು ಮಾಡಿ. ಮಾನ್ಯ ಸಚಿವರಿಗೆ ಒಂದು ಮನವಿ ಏನೆಂದರೆ, ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಯಾಗಿರುವಂತಹ ಸದಸ್ಯರುಗಳಿಗೆ ಸಭೆಯನ್ನು ಕರೆದಿದ್ದೀರಿ. ಆದರೆ, ಆ ಸಭೆಯನ್ನು ಅನಿವಾರ್ಯ ಕಾರಣಗಳಿಂದ ಮುಂದೂಡಿಬಿಟ್ಟಿದ್ದೀರಿ. ದಯಮಾಡಿ ಸಭೆಗೆ ನಮ್ಮೆಲ್ಲರನ್ನು ಕರೆಯಿರಿ.

ಶ್ರೀ ಕೆ.ಎಸ್.ನವೀನ್:- ಮಂಗಳವಾರ ಸಭೆ ನಡೆಸುವುದಕ್ಕೆ ನಮ್ಮೆಲ್ಲರನ್ನು ಕರೆದಿದ್ದಾರೆ.

ಶ್ರೀ ಎಸ್.ರವಿ:- ಸಭೆ ಕರೆದಿದ್ದರೆ ನಾವು ಅಲ್ಲಿ ಹತ್ತು ಹಲವಾರು ಸಮಸ್ಯೆಗಳ ಬಗ್ಗೆ ಚರ್ಚೆ ಮಾಡೋಣ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸಚಿವರ ಗಮನಕ್ಕೆ ತರುವುದೇನೆಂದರೆ, ಈಗಾಗಲೇ ವಿಧೇಯಕ ಮಂಡನೆಯಾಗಿದೆ. ಅದರಲ್ಲಿ Urban Local Bodies (ULBs) ಮತ್ತು Rural Local Bodies (RLBs) ಇವೆರಡರದ್ದು ಚುನಾವಣೆ ಏಕಕಾಲದಲ್ಲಿ ಆಗಬೇಕೆನ್ನುವ ಪ್ರಸ್ತಾವನೆ ಅಲ್ಲಿ ಇದೆ. ನಮ್ಮ ಸರ್ಕಾರದಲ್ಲಿ ಮಾನ್ಯ ಸಚಿವರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್‌ಗೂ ತಿದ್ದುಪಡಿಯನ್ನು ತರಬೇಕೆಂದು ಸಲಹೆಯನ್ನು ಕೊಟ್ಟಿದ್ದಾರೆ. ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳಿಗೆ ಏಕಕಾಲದಲ್ಲಿ ಚುನಾವಣೆಗಳನ್ನು ಮಾಡಬೇಕೆಂದು ನಮ್ಮ ಇಬ್ಬರು ಸದಸ್ಯರುಗಳು ಸಲಹೆಗಳನ್ನು ಕೊಟ್ಟಿದ್ದಾರೆ. ಏಕಕಾಲದಲ್ಲಿ ಚುನಾವಣೆಗಳನ್ನು ನಡೆಸಿದರೆ ಬಹಳ ದೊಡ್ಡ ಪರಿಹಾರ ಈ ಸಮಸ್ಯೆಗೆ ಸಿಕ್ಕ ಹಾಗೆ ಆಗುತ್ತದೆ. ದಯವಿಟ್ಟು ಅದನ್ನು ಪರಿಗಣಿಸಬೇಕೆಂದು ನಾನು ವಿನಂತಿ ಮಾಡುತ್ತಿದ್ದೇನೆ.

ಶ್ರೀ ಪ್ರಿಯಾಂಕ್ ಖರ್ಗೆ:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದಂತೆ, as a Minister and as a Government, I am duty bound to do as soon as the tenure ends. ನಾನು ಇರಬಹುದು, ಯಾವುದೇ ಸರ್ಕಾರ ಇರಬಹುದು, ಅದನ್ನು ಸಂವಿಧಾನಿಕವಾಗಿ ಮಾಡಲೇಬೇಕು. ಮಾನ್ಯ ಸದಸ್ಯರು ಆಗಲೇ ಇರಲಿಲ್ಲ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ನಾನು ಆಗಲೇ ಉತ್ತರ ಕೊಟ್ಟಿದ್ದೆ. ಈಗ delimitation ಬಗ್ಗೆ ಕಾನೂನಿನ ತೊಡಕು ಇತ್ತು, ಈಗ ಅದು ಯಾವುದು ಇಲ್ಲ. Reservation is an ongoing process. ಒಂದೆರಡು ತಿಂಗಳುಗಳಲ್ಲಿ ಅದು ಮುಗಿಯುತ್ತದೆ. ಕೆಲವು ಸದಸ್ಯರುಗಳ ಸಲಹೆ ಏನಿತ್ತು ಎಂದರೆ, ನಮ್ಮ ಕರಾವಳಿ ಭಾಗದವರದ್ದು ಮತ್ತು ಬೇರೆ ಭಾಗದಲ್ಲಿ ಧಾರಾಕಾರವಾಗಿ ಮಳೆ ಸುರಿಯುತ್ತಿದೆ, ಅದಾದ ಮೇಲೆ ಮಾಡಿದರೆ voter turnout ಹೆಚ್ಚಾಗಿ ಆಗುತ್ತದೆ ಎಂದು ಹೇಳಿದ್ದಾರೆ. ಅದು ಬಿಟ್ಟರೆ ಬೇರೆ ಯಾವುದು ಸಮಸ್ಯೆ ಇಲ್ಲ. As of now, the reservation is in process. ಅಷ್ಟೆ.

ಮಾನ್ಯ ಸದಸ್ಯರು ಗೌರವಧನದ ಬಗ್ಗೆ ಮಾತನಾಡಿದ್ದಾರೆ. ಒಂದು ಸಲ ಆರ್ಥಿಕ ಇಲಾಖೆಗೆ ಕಳುಹಿಸಿದ್ದೆವು. ಅದು ವಾಪಸ್ ಬಂದಿದೆ. ನಾವೆಲ್ಲಾ ಚರ್ಚೆ ಮಾಡಿ ಮತ್ತೊಮ್ಮೆ ಮಾನ್ಯ ಮುಖ್ಯಮಂತ್ರಿಯವರ ಜೊತೆ ಮಾತನಾಡುತ್ತೇನೆ.

ವೈಸ್ ಛೇರ್ಮನ್:- ಮಾನ್ಯ ಸಚಿವರೇ, ಮಂಗಳವಾರ ಸಭೆಯನ್ನು ಕರೆದಾಗ ತಾವು ಎಲ್ಲರ ಹತ್ತಿರ ಮಾತನಾಡಿ.

ಶ್ರೀ ಪ್ರಿಯಾಂಕ್ ಖರ್ಗೆ:- ಮಾನ್ಯ ಸಭಾಪತಿಯವರೇ, ನಾವು ಚುನಾವಣೆ ನಡೆಸುವುದಕ್ಕೆ ಬದ್ಧರಾಗಿದ್ದೇವೆ. ಇದೊಂದೇ ಅಲ್ಲ, ಮಾನ್ಯ ಎಸ್.ರವಿ ಯವರು ಹೇಳಿದ ಹಾಗೆ ಸಾಕಷ್ಟು ಸಮಸ್ಯೆಗಳ ಬಗ್ಗೆ ನನಗೆ ಒಂದು ಪಟ್ಟಿಯನ್ನು ಕೊಟ್ಟಿದ್ದರು. ಅದನ್ನು ನಾವು ಬಹಳ ಆಳವಾಗಿ ಮೂರು ಸಭೆಗಳಲ್ಲಿ ಚರ್ಚೆ ಮಾಡಿದ್ದೇವೆ. ಅದಾದ ಮೇಲೆ ನಾವು ಒಂದು ಸಮಿತಿ ರಚನೆ ಮಾಡಬೇಕೆಂದು ನಾನು ನಮ್ಮ ಶಾಸಕರ ಗಮನಕ್ಕೆ ತಂದಿದ್ದೆ. ಮತ್ತೊಮ್ಮೆ ನಾವೆಲ್ಲರೂ ಸೇರಿ ಒಂದೊಂದೇ ಚರ್ಚೆಗೆ ತೆಗೆದುಕೊಂಡು ಸಮಿತಿ ಬೇಕೇ ಬೇಡವೇ ಎಂಬುದನ್ನು ನೋಡೋಣ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದಂತೆ, whether a constitutional amendment is required for our Panchayat Raj Act itself, is something that we will have to study and get back to you.

Sri K.S. NAVEEN (ELECTED BY LOCAL AUTHORITY):– Hon'ble Chairman sir, the State has to make the amendment.

ಶ್ರೀ ಡಿ.ಎಸ್.ಅರುಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):– ಮಾನ್ಯ ಸಭಾಪತಿಯವರೆ, ರಾಜ್ಯವು.....

ವೈಸ್‌ಛೇರ್ಮನ್:– ಮಾನ್ಯ ಸಚಿವರೇ, ಮಂಗಳವಾರ ಸಭೆಯನ್ನು ಕರೆದಾಗ ಇದನ್ನು ಚರ್ಚೆಮಾಡಿ.

(ಮುಂದು)

(683) 13/08/2025 4:00 ಎಸ್‌ಪಿಆರ್/ಕೆಎಸ್ (ವೈಸ್ ಛೇರ್ಮನ್ ಉಪಸ್ಥಿತಿ)

Sri K.S. NAVEEN (ELECTED BY LOCAL AUTHORITY):– Hon'ble Chairman sir, it is within the purview of the State.

(ಗೊಂದಲ)

ಶ್ರೀಮತಿ ಬಲ್ಕೀಸ್ ಬಾನು:– ಮಾನ್ಯ ಸಭಾಪತಿಯವರೆ,...

Sri PRIYANK KHARGE (MINISTER FOR RURAL DEVELOPMENT AND PANCHAYAT RAJ, INFORMATION TECHNOLOGY AND BIOTECHNOLOGY):– Hon'ble Chairman sir, we will form a Committee to study that only. I am not averse to anything that you are saying. ನಮ್ಮ ಕಾಲದಲ್ಲಿ ಈ ಸಂಸ್ಥೆಗಳು ಸರಳೀಕರಣ ಹಾಗೂ ಸಬಲೀಕರಣಗೊಳ್ಳಬೇಕು. ಇವುಗಳನ್ನು ಬಲಪಡಿಸುವುದಕ್ಕೆ ನಾವು ಯಾವುದೇ ರೀತಿಯಾದ ಹಿಂದೇಟು ಹಾಕುವುದಿಲ್ಲ. ಇದರಲ್ಲಿ ಯಾವುದೇ ಪಕ್ಷಪಾತ ಮಾಡುವುದಿಲ್ಲ. ಸದಸ್ಯರುಗಳು ನೀಡುವ ಸಲಹೆಗಳನ್ನು ಸಕಾರಾತ್ಮಕವಾಗಿ ಸ್ವೀಕರಿಸಿ, ಅವುಗಳನ್ನು ಅನುಷ್ಠಾನಗೊಳಿಸುವುದು ನನ್ನ ಜವಾಬ್ದಾರಿಯಾಗಿದೆ. Hon'ble members may be from any party; it does not matter. ನಾವು ಮತ್ತು ನೀವುಗಳೆಲ್ಲರೂ ಜನರಿಗಾಗಿಯೇ ಕೆಲಸಗಳನ್ನು ಮಾಡುತ್ತಿದ್ದೇವೆ. ಅದು ಏನೇ ಇರಲಿ; ಸಭೆಗಳಲ್ಲಿ ಇದರ ಬಗ್ಗೆ ಚರ್ಚಿಸಿ, ನಿರ್ಣಯ ತೆಗೆದುಕೊಳ್ಳೋಣ. ಈ ಸಂಬಂಧ ಸಮಿತಿಯೊಂದನ್ನು ರಚನೆ ಮಾಡೋಣ. ಅದರಲ್ಲಿ ತಜ್ಞರು, think tank,

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಚಿಂತಕರು, ಸಂಸ್ಥೆಗಳು ಹಾಗೂ ವಿಧಾನ ಪರಿಷತ್ತಿನ ಸದಸ್ಯರುಗಳು ಇರಲಿ. ಆ ನಂತರದಲ್ಲಿ ನಾವು ತೀರ್ಮಾನವನ್ನು ತೆಗೆದುಕೊಳ್ಳೋಣ.

ಶ್ರೀ ಡಿ.ಎಸ್.ಅರುಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- ಮಾನ್ಯ ಸಭಾಪತಿಯವರೆ, ಆ ಸಮಿತಿಗಳನ್ನು ರಚನೆ ಮಾಡಿದಾಗ, ನಮ್ಮನ್ನೂ ಸಹ ಸೇರಿಸಿಕೊಳ್ಳಿ.

ಶ್ರೀ ಪ್ರಿಯಾಂಕ್ ಖರ್ಗೆ:- ಮಾನ್ಯ ಸಭಾಪತಿಯವರೆ, ಆ ರೀತಿಯ ಸಮಿತಿಗಳನ್ನು ಇನ್ನೂ ರಚನೆ ಮಾಡಿಲ್ಲ; ಆದರೆ ಈ ಬಗ್ಗೆ ಆಲೋಚನೆ ಮಾಡಿದ್ದೇವೆ. ಅದನ್ನು ತಮ್ಮ ಸಲಹೆಯ ಮೇರೆಗೆ ಮಾಡೋಣ.

ಶ್ರೀ ಡಿ.ಎಸ್.ಅರುಣ:- ಮಾನ್ಯ ಸಭಾಪತಿಯವರೆ, ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿಗಳಿಗೆ ಏನೇನು ಅಧಿಕಾರ ಎನ್ನುವುದನ್ನು ಸ್ಪಷ್ಟವಾಗಿ ಮಾಡಿಲ್ಲವೆಂದಾದರೆ ಬಹಳ ಕಷ್ಟವಾಗುತ್ತದೆ. ಏಕೆಂದರೆ, ಇವತ್ತಿನ ದಿವಸ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ಮಾಡುವುದರಿಂದ ಏನೇನು ಆಗುತ್ತಿದೆ ಎಂದು ಇಲ್ಲಿ ಕುಳಿತಿರುವ ನಮಗೆಲ್ಲರಿಗೂ ಗೊತ್ತಿದೆ. ಸದಸ್ಯನೊಬ್ಬನು ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿ ಇವುಗಳ ಚುನಾವಣೆಗಳನ್ನು ಎದುರಿಸುತ್ತಿರುವ ಸ್ಥಿತಿಯನ್ನು ನಾವು ನೋಡಿದ್ದೇವೆ. ಒಟ್ಟಾರೆಯಾಗಿ ಹೇಳುವುದಾದರೆ, ಇವತ್ತಿನ ದಿವಸದ ಚುನಾವಣೆಯ ವ್ಯವಸ್ಥೆಯನ್ನು ನೋಡಿದರೆ ಹೆದರಿಕೆಯಾಗುತ್ತದೆ. ಹೀಗಾಗಿ ತಾಲ್ಲೂಕು ಪಂಚಾಯಿತಿಗಳಿಗೆ ಅಧಿಕಾರವನ್ನು ನೀಡಲಿಲ್ಲವೆಂದಾದರೆ..., ನಾವೇ ನೋಡಿದಂತೆ ಗ್ರಾಮ ಮತ್ತು ಜಿಲ್ಲಾ ಪಂಚಾಯಿತಿಗಳ ನಡುವೆ ತಾಲ್ಲೂಕು ಪಂಚಾಯಿತಿಯು ಬರುತ್ತದೆ. ಈ ತಾಲ್ಲೂಕು ಪಂಚಾಯಿತಿಯ ಸದಸ್ಯರಿಗೆ ಏನು ...,

ಶ್ರೀ ಪ್ರಿಯಾಂಕ್ ಖರ್ಗೆ:- ಮಾನ್ಯ ಸಭಾಪತಿಯವರೆ, ಈ ವಿಚಾರವಾಗಿ ಯಾವ ರೀತಿಯ ಕೌಂಟರ್ ಅರ್ಗ್ಯೂಮೆಂಟ್ ಆಗಿದೆ. ತಾಲ್ಲೂಕು ಪಂಚಾಯಿತಿಯನ್ನೇ ಕೈಬಿಡಿ; ಆಗ ಅದು ಬಲಗೊಳ್ಳುತ್ತದೆ ಎಂದು ಕೆಲವರು ನಮ್ಮ ಬಳಿ ಹೇಳಿದ್ದಾರೆ. ಇದನ್ನು ಸಮಿತಿ ಸಭೆಗಳಲ್ಲಿ ಚರ್ಚಿಸೋಣ.

ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೆ, ನನಗೆ ಬಹಳ ಸಂತೋಷದ ವಿಷಯವೇನೆಂದರೆ, ನಾನೂ ಸಹ ಈ ಪಂಚಾಯತ್ ರಾಜ್ಯ ವ್ಯವಸ್ಥೆಯ ಮುಖಾಂತರವೇ ಇವತ್ತಿನ ದಿವಸ ಈ ಸ್ಥಾನಕ್ಕೆ ಬಂದಿದ್ದೇನೆ. ನಮ್ಮ ಪಕ್ಷ ಹಾಗೂ ಸರ್ಕಾರಕ್ಕೆ ವಂದನೆಗಳನ್ನು ಸಲ್ಲಿಸಲು ಇಷ್ಟಪಡುತ್ತೇನೆ. ಸದಸ್ಯರುಗಳಾದ ಶ್ರೀ ಮಂಜುನಾಥ ಭಂಡಾರಿ ಮತ್ತು ಶ್ರೀ ಡಿ.ಎಸ್.ಅರುಣ್ ರವರುಗಳು ಬಹಳ ಮಹತ್ವದ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ಎಲ್ಲರಿಗೂ ತಿಳಿದಿರುವಂತೆ, 1987 ನೇ ಇಸ್ವಿಯಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯು ಜಾರಿಗೆ ಬಂದಿತು. ಹೆಮ್ಮೆಯ ವಿಚಾರವೇನೆಂದರೆ, ಇಡೀ ರಾಷ್ಟ್ರದಲ್ಲಿಯೇ ನಮ್ಮ ರಾಜ್ಯವು ಪ್ರಥಮ ಸ್ಥಾನಕ್ಕೆ ಬಂದಿತು. ಅಂದರೆ ಪ್ರಥಮವಾಗಿ ನಮ್ಮ ರಾಜ್ಯದಿಂದಲೇ ಪಂಚಾಯತ್ ರಾಜ್ ವ್ಯವಸ್ಥೆಯು ಜಾರಿಗೊಂಡಿತು. ಅಂದರೆ ನಮ್ಮ ದೇಶದ ಬಹಳಷ್ಟು ಪ್ರಗತಿ ಮತ್ತು ಕ್ರಾಂತಿಕಾರಕ ವಿಷಯಗಳ ಬಗ್ಗೆ ಅಡಿಪಾಯವು ನಮ್ಮ ರಾಜ್ಯದಲ್ಲಿಯೇ ಮಾಡುತ್ತಾರೆ. ಈ ವಿಚಾರದಲ್ಲಿ ನನ್ನ ಸಲಹೆ ಏನೆಂದರೆ, ಹಿಂದಿನ ವ್ಯವಸ್ಥೆಯಲ್ಲಿದ್ದ ಅಧಿಕಾರಕ್ಕೂ ಹಾಗೂ ಇಂದಿನ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿರುವ ಅಧಿಕಾರಕ್ಕೂ ಹಾಗೂ ಕಾಯ್ದೆಗೂ ಬಹಳಷ್ಟು ಅಜಗಜಾಂತರವಿದೆ. ಈಗಿನ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವ್ಯವಸ್ಥೆಯಲ್ಲಿ ಕೇವಲ ಚುನಾಯಿತ ಪ್ರತಿನಿಧಿಗಳು ಇರುತ್ತಾರೆಯೇ ವಿನಃ ಅವರಿಗೆ ಯಾವುದೇ ಅಧಿಕಾರ ಇರುವುದಿಲ್ಲ. ಇದು ಹೇಗೆ ಎಂದರೆ, ಒಂದು ತಟ್ಟೆಯಲ್ಲಿ ಊಟವನ್ನು ನೀಡಿದ್ದು, ಅದನ್ನು ಮಾಡಬೇಕೋ ಅಥವಾ ಬಿಡಬೇಕೋ ಎನ್ನುವ ತೀರ್ಮಾನವನ್ನೂ ಸಹ ಬೇರೆಯವರು ಮಾಡಬೇಕು. ಅವರು ಊಟ ಮಾಡಿ ಎಂದು ಹೇಳಿದರೆ ಮಾತ್ರವೇ ಊಟ ಮಾಡಬೇಕು; ಇಲ್ಲವೆಂದಾದರೆ ಇಲ್ಲ ಎನ್ನುವಂತಾಗಿದೆ. ಈ ಸಂದರ್ಭದಲ್ಲಿ ನಾನು ಹೇಳಲಿಚ್ಛಿಸುವುದೇನೆಂದರೆ, ಅವರಿಗೆ ಆಡಳಿತಾತ್ಮಕವಾದ ಅಧಿಕಾರವನ್ನೂ ಸಹ ನೀಡಬೇಕು. ಅವರದ್ದೇ ಆದ ಯೋಜನೆಗಳನ್ನು ರೂಪಿಸುವ ಅಧಿಕಾರವನ್ನೂ ಸಹ ಅವರಿಗೆ ನೀಡಬೇಕು. ಎಲ್ಲಿ ಪ್ರಾಥಮಿಕ ಶಾಲೆಯ ಅಗತ್ಯವಿದೆ ಎನ್ನುವುದನ್ನು ಅವರೇ ತೀರ್ಮಾನ ಮಾಡಬೇಕು. ಆದರೆ ಇವತ್ತಿನ ವ್ಯವಸ್ಥೆಯಲ್ಲಿ ಯಾವ ರೀತಿಯಾಗಿ ಆಗಿದೆ ಎಂದರೆ, ಪ್ರಾಥಮಿಕ ಶಾಲೆಗಳಿಗೆ ಶಿಕ್ಷಕರನ್ನು ನಿಯೋಜಿಸಬೇಕೆಂದರೂ ಸಹ ಸರ್ಕಾರಕ್ಕೆ ಅನುಮತಿ ಕೇಳುವಂತಾಗಿದೆ. ಯಾವುದೋ ಪಕ್ಕದಲ್ಲಿರುವ ಹಳ್ಳಿಗೆ ನೀರಿನ ವ್ಯವಸ್ಥೆಯನ್ನು ಮಾಡಬೇಕೆಂದರೆ, ಅದನ್ನು ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿಗಳು ನೋಡುವುದಕ್ಕಾಗುತ್ತಿಲ್ಲ. ಜಲ್ ಜೀವನ್ ಮಿಷನ್ ಯೋಜನೆಯಡಿ ರಾಜ್ಯ ಸರ್ಕಾರವನ್ನು ಅಥವಾ ನೀರು ಸರಬರಾಜು ಇಲಾಖೆಯನ್ನೇ ಕೇಳಬೇಕು. ಈ ರೀತಿಯ ವ್ಯವಸ್ಥೆಗಳಾಗಿವೆ. ಈ ರೀತಿಯ ವ್ಯವಸ್ಥೆಗಳು ಇಲ್ಲದೇ ಇದ್ದರೆ ಒಳ್ಳೆಯದು ಎನ್ನುವಂತಾಗಿದೆ ಪರಿಸ್ಥಿತಿ. ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆಗಳನ್ನು ನಡೆಸುವುದಕ್ಕೆ ಸರ್ಕಾರವು ಸಿದ್ಧವಿದೆ. ಈ ಬಗ್ಗೆ ಇವತ್ತಿನ ದಿವಸ ಇಲಾಖೆಯ ಮಂತ್ರಿಗಳು ಉತ್ತರವನ್ನೂ ಸಹ ನೀಡಿದ್ದಾರೆ. ಅಧಿಕಾರದ ಜೊತೆಗೆ ಚುನಾವಣೆಯನ್ನು ನಡೆಸಬೇಕೆಂದು ನಾನು ಹೇಳುತ್ತೇನೆ. ಅವರ ಕೈಯನ್ನು ಕಟ್ಟಿ ಕೆಲಸ ಮಾಡಿ ಎಂದು ಹೇಳಿದರೆ ಎಷ್ಟರ ಮಟ್ಟಿಗೆ ಸಮಂಜಸವಾಗುತ್ತದೆ? ಕೇವಲ ಗೌರವ ಧನವನ್ನು ಹೆಚ್ಚಳ ಮಾಡುವುದು ಅಷ್ಟೇ ಅಲ್ಲ, ಜನರಿಗೆ ಸುಲಭವಾಗಿ ಅವರಿಗೆ ಅವಶ್ಯಕವಾಗಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು. ಅವರಿಗೆ ಕುಡಿಯುವ ನೀರು, ಆರೋಗ್ಯಯುತವಾದ ಆಸ್ಪತ್ರೆ ಇವುಗಳ ಅವಶ್ಯಕತೆ ಇದೆ. ಎಲ್ಲೆಲ್ಲಿ ಆಸ್ಪತ್ರೆ ಬೇಕು, ಎಲ್ಲಿ ವೈದ್ಯರುಗಳು ಬೇಕು ಎಂದು ಹೇಳುವ ಅಧಿಕಾರವು ಈ ಹಿಂದಿನ ವ್ಯವಸ್ಥೆಯಲ್ಲಿ ಇತ್ತು. ಆದರೆ, ಆ ಅಧಿಕಾರವನ್ನೆಲ್ಲಾ ಮೊಟಕುಗೊಳಿಸಿರುವುದರಿಂದ ಈ ಪಂಚಾಯತ್ ರಾಜ್ ವ್ಯವಸ್ಥೆಗೆ ಅರ್ಥವೇ ಬೇರೆಯಾಗಿದೆ. ಕನಸಿನಂತೆ ಸಂವಿಧಾನಕ್ಕೆ 73 ನೇ ತಿದ್ದುಪಡಿಯನ್ನು ಮಾಡಿ ಇಡೀ ಭಾರತ ದೇಶದಲ್ಲಿಯೇ ಪಂಚಾಯತ್ ರಾಜ್ಯ ವ್ಯವಸ್ಥೆಯನ್ನು ಜಾರಿಗೆ ತಂದಿರುವ ಗುಟ್ಟು ಏನೆಂದು ಹೇಳಿದರೆ, ಆಡಳಿತ ವ್ಯವಸ್ಥೆಯನ್ನು ಗಟ್ಟಿಗೊಳಿಸಬೇಕು ಮತ್ತು ಗ್ರಾಮ ಪಂಚಾಯಿತಿಗಳ ಪ್ರಗತಿಯಾಗಬೇಕು ಎನ್ನುವುದಾಗಿದೆ. ಈ ರೀತಿಯ ಅಧಿಕಾರ ಹಸ್ತಾಂತರವನ್ನು ಮಾಡಬೇಕು ಎಂದು ಸಚಿವರನ್ನು ಕೇಳಿಕೊಳ್ಳುತ್ತೇನೆ. ಚಿನ್ಹೆ ಆಧಾರಿತ ಚುನಾವಣೆಯನ್ನು ಮಾಡುವುದು ಸೂಕ್ತವೆಂದು ನಾನು ಹೇಳಲು ಬಯಸುತ್ತೇನೆ.

ಶ್ರೀ ಮಂಜುನಾಥ್ ಎಂ.ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- ಮಾನ್ಯ ಸಭಾಪತಿಯವರೆ, Analytics India Magazine (AIM) ನಡೆಸಿದ ಆರ್ಟಿಫಿಷಿಯಲ್ ಇಂಟೆಲಿಜೆನ್ಸಿ (AI) ವಲಯದ ಭಾರತದ ನೂರನೇ ಪ್ರಭಾವಿ ವ್ಯಕ್ತಿಗಳ ಪಟ್ಟಿಯಲ್ಲಿ ರಾಜ್ಯದ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರಾದ ಶ್ರೀ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಿಯಾಂಕ್ ಖರ್ಗೆ ರವರು 9 ನೇ ಸ್ಥಾನವನ್ನು ಪಡೆದಿದ್ದಾರೆ ಎನ್ನುವುದು ಇವತ್ತಿನ ದಿವಸದ ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟಗೊಂಡಿದೆ. ಹೀಗಾಗಿ ಈ ಸದನದ ಮೂಲಕ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದೇನೆ.

(ಈ ಹಂತದಲ್ಲಿ ಸದಸ್ಯರುಗಳೆಲ್ಲರೂ ಮೇಜು ತಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)

ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು):- ಮಾನ್ಯ ಸಭಾಪತಿಯವರೆ, ಸದಸ್ಯರು ಬಹಳ ಪ್ರಮುಖವಾದ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ಅವರು devolution of powers ಬಗ್ಗೆ ಸದಸ್ಯರು ಮಾತನಾಡಿದರು. ಈ ಹಿಂದೆ ಯಾವ ರೀತಿಯ ವ್ಯವಸ್ಥೆಗಳು ಇದ್ದವೋ ಅಂದರೆ ಅಂಗನವಾಡಿ, ಆಸ್ಪತ್ರೆ, ಶಾಲೆ ಇವುಗಳಲ್ಲಿ ಗ್ರಾಮ ಪಂಚಾಯತಿಯ involvement ಇತ್ತು; ಕೆಲವು ಅಧಿಕಾರಗಳೂ ಸಹ ಇದ್ದವು. ಕಾಲ ಕಾಲಕ್ಕೆ ಇದು ಡೈಲ್ಯೂಟ್ ಆಗುತ್ತಾ ಬಂದಿತು. ಈಗ ಇಲಾಖೆಯವರು ಇದನ್ನು ಸಂಪೂರ್ಣವಾಗಿ ಕೇಂದ್ರೀಕರಣ ಮಾಡಿದ್ದಾರೆ ಎಂಬುದಾಗಿ ಅವರು ಹೇಳುತ್ತಿದ್ದಾರೆ. ನಮ್ಮ ಪಕ್ಷದ ಸರ್ಕಾರವು ಅಧಿಕಾರಕ್ಕೆ ಬಂದ ಮೇಲೆ, ಕಳೆದ ಒಂದೂವರೆ ವರ್ಷದ ಅವಧಿಯಿಂದ ಅಧಿಕಾರ ವಿಕೇಂದ್ರೀಕರಣದ ಬಗ್ಗೆ ಬಹಳ ಆಳವಾದ ಚರ್ಚೆಯನ್ನು ನಡೆಸಿ, ಇದರ ಬಗ್ಗೆ ಮುಖ್ಯಮಂತ್ರಿಗಳ ಗಮನಕ್ಕೂ ಸಹ ತಂದು, ಅವರಿಂದಲೇ ಎರಡು ಸಭೆಗಳನ್ನು ನಡೆಸಿದ್ದೇವೆ. ಶ್ರೀ ಡಿ.ಆರ್.ಪಾಟೀಲ್, ಶ್ರೀ ಘೋರ್ಪಡೆ ಮತ್ತು ಶ್ರೀ ಪ್ರಮೋದ್ ರವರುಗಳು ಇರಬಹುದು. ಪಂಚಾಯತ್ ರಾಜ್ ಸಂಘಟನೆಯಲ್ಲಿ ಯಾರು ಇದ್ದಾರೆ ಅವರುಗಳೆಲ್ಲರೂ ಬಹಳ ಆಸಕ್ತಿಯಿಂದ ಇದನ್ನು ಫಾಲೋ-ಅಪ್ ಮಾಡುತ್ತಿದ್ದಾರೆ. ಈಗಾಗಲೇ 8-9 ಇಲಾಖೆಗಳು ಕೆಲವು ಅಧಿಕಾರಗಳನ್ನು ಗ್ರಾಮ ಪಂಚಾಯಿತಿಗಳಿಗೆ ವಾಪಸ್ಸು ನೀಡುವ ಬಗ್ಗೆ ಅನುಮೋದನೆ ನೀಡಿರುವುದಿರಂದ ಈ ಸಂಬಂಧಿತ ಆದೇಶಗಳನ್ನೂ ಸಹ ನಾವು ಹೊರಡಿಸಿದ್ದೇವೆ. ಇದರ ಬಗ್ಗೆ ಇನ್ನೂ ಕೆಲವು ಇಲಾಖೆಗಳೊಂದಿಗೆ ಚರ್ಚೆ ನಡೆಯುತ್ತಿದೆ. ಏಕೆಂದರೆ, ನಾವು ಅವರ ಅಧಿಕಾರದ ಹಕ್ಕನ್ನು ಕಸಿದುಕೊಳ್ಳುತ್ತಿದ್ದೇವೆ ಎಂದು ಅವರುಗಳು ಅಂದುಕೊಳ್ಳುತ್ತಿದ್ದಾರೆ. ಸಂವಿಧಾನದ 73 ಮತ್ತು 74 ನೇ ತಿದ್ದುಪಡಿಗಳನ್ನು ನಮ್ಮ ಅಧಿಕಾರಿ ವರ್ಗದವರು ಯಾರೂ ಸಹ ಆಳವಾಗಿ ಅರ್ಥಮಾಡಿಕೊಂಡಿಲ್ಲ. ಹೀಗಾಗಿ ಇದರಲ್ಲಿ ಸ್ವಲ್ಪ ವಿಳಂಬವಾಗುತ್ತಿದೆ. ಕಳೆದ ಒಂದೂವರೆ ತಿಂಗಳ ಹಿಂದೆಯೂ ಸಹ ಮುಖ್ಯಮಂತ್ರಿಗಳು ಇದರ ಬಗ್ಗೆ ಶ್ರೀ ಬಿ.ಆರ್.ಪಾಟೀಲ್ ರವರ ನೇತೃತ್ವದಲ್ಲಿ ಒಂದು ಸಭೆಯನ್ನು ಮಾಡಿದ್ದಾರೆ. We are duty bound to the original amendment. We will 100% do that.

(ಈ ಹಂತದಲ್ಲಿ ಆಡಳಿತ ಸದಸ್ಯರುಗಳು ಮೇಜು ತಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆ) ವಿಷಯ:– ಕೋಲಾರ ತಾಲ್ಲೂಕಿನ ಕೆಂದಟ್ಟಿಯಲ್ಲಿ ಘನತ್ಯಾಜ್ಯ ವಿಲೇವಾರಿ ಘಟಕ ನಿರ್ಮಿಸಲಾಗಿದ್ದರೂ ನಗರಸಭೆ ವ್ಯಾಪ್ತಿಯಲ್ಲಿ ಸಂಗ್ರಹಿಸುತ್ತಿರುವ ತ್ಯಾಜ್ಯವನ್ನು ಅವೈಜ್ಞಾನಿಕ ಹಾಗೂ ಅನಧಿಕೃತವಾಗಿ ಸುತ್ತಮುತ್ತಲಿನ ಕೆರೆ, ಕಾಲುವೆ ಹಾಗೂ ತಗ್ಗಿನ ಪ್ರದೇಶಕ್ಕೆ ತ್ಯಾಜ್ಯ ಸುರಿದು ಬಿಲ್ ಮಾಡುತ್ತಿರುವ ಬಗ್ಗೆ

* * *

ಶ್ರೀ ಗೋವಿಂದರಾಜು (ವಿಧಾನಸಭಾ ಕ್ಷೇತ್ರ):– ಮಾನ್ಯ ಸಭಾಪತಿಯವರೆ, ಕೋಲಾರ ನಗರಸಭೆ ವ್ಯಾಪ್ತಿಯಲ್ಲಿ ಸಂಗ್ರಹಿಸುತ್ತಿರುವ ತ್ಯಾಜ್ಯವನ್ನು ಅವೈಜ್ಞಾನಿಕ ಹಾಗೂ ಅನಧಿಕೃತವಾಗಿ ನಗರದ ಸುತ್ತಮುತ್ತ ಹಳ್ಳಿಗಳು, ಅರಣ್ಯ ಪ್ರದೇಶ ಕೆರೆ ಸುತ್ತಮುತ್ತಲಿನ ಪ್ರದೇಶ, ರಸ್ತೆ ಬದಿ, ರೈತರ ಜಮೀನು, ಬಯಲು ಪ್ರದೇಶಕ್ಕೆ ಕೊಂಡೊಯ್ದು ಎಸೆಯುತ್ತಿದ್ದಾರೆ. ವೈಜ್ಞಾನಿಕವಾಗಿ ಕಸವಿಲೇವಾರಿ ಮಾಡಲೆಂದೇ ಕೋಲಾರ ತಾಲ್ಲೂಕಿನ ಕೆಂದಟ್ಟಿಯಲ್ಲಿ 10 ಎಕರೆ ಪ್ರದೇಶದಲ್ಲಿ ಘನತ್ಯಾಜ್ಯ ವಿಲೇವಾರಿ ಘಟಕ ನಿರ್ಮಿಸಲಾಗಿದೆ. ಆದರೆ 10 ಕಿ.ಮೀ. ದೂರದಲ್ಲಿದೆ. ಆದರೆ ಅಲ್ಲಿಗೆ ನಗರಸಭೆಯ ಕಸದ ವಾಹನಗಳು ಹೋಗುವುದೇ ಇಲ್ಲ. ಬದಲಾಗಿ ಸುತ್ತಲಿನ ಪ್ರದೇಶದ ಕೆರೆ, ಕಾಲುವೆ, ತಗ್ಗಿನ ಪ್ರದೇಶಕ್ಕೆ ತ್ಯಾಜ್ಯ ಸುರಿದು ಬಿಲ್ ಮಾಡುತ್ತಿರುವ ವಿಷಯವನ್ನು ಪೌರಾಡಳಿತ ಸಚಿವರ ಗಮನ ಸೆಳೆಯಲು ಬಯಸುತ್ತೇನೆ.

ಶ್ರೀ ರಹೀಂ ಖಾನ್ (ಪೌರಾಡಳಿತ ಹಾಗೂ ಹಜ್ ಸಚಿವರು):– ಮಾನ್ಯ ಸಭಾಪತಿಯವರೆ, ಸದಸ್ಯರು ಗಮನ ಸೆಳೆದಿರುವ ವಿಷಯಕ್ಕೆ ಸಂಬಂಧಪಟ್ಟಂತೆ ಉತ್ತರವನ್ನು ಒದಗಿಸಲಾಗಿದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೋಲಾರ ನಗರಸಭೆಯ ಘನತ್ಯಾಜ್ಯ ನಿರ್ವಹಣೆಯ ಮೂಲಭೂತ ಸೌಕರ್ಯಗಳ ಅಭಿವೃಧ್ಧಿಗಾಗಿ ರೂ. 283.80 ಲಕ್ಷಗಳ ಮೊತ್ತದ ವಿಸ್ತೃತ ಯೋಜನಾ ವರದಿಯನ್ನು ಅನುಮೋದಿಸಿದ್ದು, ಅದರಂತೆ, ಕಾಮಗಾರಿಗಳನ್ನುಅನುಷ್ಠಾನಗೊಳಿಸಲಾಗುತ್ತಿದೆ.

ಕೋಲಾರ ನಗರಸಭೆಯು ಸುಮಾರು 1.86 ಲಕ್ಷಗಳಷ್ಟು ಜನಸಂಖ್ಯೆ ಹೊಂದಿದ್ದು, ಒಟ್ಟು 35 ವಾರ್ಡ್ ಗಳನ್ನು ಒಳಗೊಂಡಿರುತ್ತದೆ. ನಗರಸಭೆ ವ್ಯಾಪ್ತಿಯಲ್ಲಿ ಪ್ರತಿನಿತ್ಯ ಸುಮಾರು 80 ಟನ್ ತ್ಯಾಜ್ಯ ಉತ್ಪತ್ತಿಯಾಗುತ್ತಿದ್ದು. ನಗರಸಭೆಯಲ್ಲಿ ಪ್ರಸ್ತುತ 25 ಸಂಖ್ಯೆಯ ಆಟೋಟಿಪ್ಪರ್ ಗಳಿದ್ದು ಸದರಿ ವಾಹನಗಳಿಂದ ಮನೆ ಮನೆಯಲ್ಲಿ ಉತ್ಪತ್ತಿಯಾಗುತ್ತಿರುವ ವಿಂಗಡಿಸಿದ ತ್ಯಾಜ್ಯವನ್ನು ಪ್ರತ್ಯೇಕವಾಗಿ ಸಂಗ್ರಹಿಸಲಾಗುತ್ತಿದ್ದು, 07 ಸಂಖ್ಯೆ ಟ್ರಾಕ್ಟರ್ ಟ್ರೈಲರ್ ವಾಹನಗಳಿಂದ Black spot ಗಳಿಂದ ಮತ್ತು ವಾಣಿಜ್ಯ ಮಳಿಗೆಗಳಿಂದ ತ್ಯಾಜ್ಯವನ್ನು ಸಂಗ್ರಹಿಸಲಾಗುತ್ತಿದೆ. ನಗರಾದ್ಯಂತ ಆಟೋಟಿಪ್ಪರ್ ಮತ್ತು ಟ್ರಾಕ್ಟರ್ ಗಳಲ್ಲಿ ಸಂಗ್ರಹಣೆ ಮಾಡಿದ ತ್ಯಾಜ್ಯವನ್ನು ದ್ವಿತೀಯ ಹಂತದಲ್ಲಿ ನಗರದ ಲಾರಿ ಸ್ಟಾಂಡ್ ನಲ್ಲಿ 03 ಕಾಂಪ್ಯಾಕ್ಟರ್ ಗಳಿಗೆ ಲೋಡ್ ಮಾಡಿ ಘನತ್ಯಾಜ್ಯ ನಿರ್ವಹಣೆಗೆ ಮಂಜೂರಾಗಿರುವ ಕೆಂದಟ್ಟಿ ಗ್ರಾಮದ 10 ಎಕರೆ ಜಮೀನಿನಲ್ಲಿ ಸ್ವಚ್ಛ ಭಾರತ ಮಿಷನ್-1.0ರ ಯೋಜನೆಯಡಿ ಈಗಾಗಲೇ ನಿರ್ಮಾಣ ಮಾಡಿರುವ ಘನತ್ಯಾಜ್ಯ ನಿರ್ವಹಣಾ ಘಟಕಕ್ಕೆ ರವಾನಿಸಲಾಗುತ್ತಿದೆ.

ಪ್ರತಿನಿತ್ಯ ಸುಮಾರು 35 ಟನ್ (87.5%) ಹಸಿತ್ಯಾಜ್ಯವನ್ನು ಸಂಸ್ಕರಿಸಿ ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರಿನಲ್ಲಿ ಗೊಬ್ಬರದ ಗುಣಮಟ್ಟವನ್ನು ಪರೀಕ್ಷಿಸಿ ಕೋಲಾರ ಅಗ್ರಿಗೋಲ್ಡ್ ಬ್ರಾಂಡ್ ಹೆಸರಿನಲ್ಲಿ ಗೊಬ್ಬರವನ್ನು ಮಾರಾಟ ಮಾಡಲಾಗುತ್ತಿದೆ.

ಕೋಲಾರ ನಗರದ ಎಂ.ಜಿ ರಸ್ತೆಯ ನಗರಸಭೆ ವಾಣಿಜ್ಯ ಮಳಿಗೆಗಳ ಸಂಕೀರ್ಣದಲ್ಲಿ ದಿನಾಂಕ: 30-06-2025 ರಂದು ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ಗೊಬ್ಬರ ಮಾರಾಟ ಮಳಿಗೆಯನ್ನು ಉದ್ಘಾಟನೆ ಮಾಡಿ ಪ್ರಾರಂಭಿಸಿದ್ದು ಈವರೆಗೂ ಸುಮಾರು 20 ಟನ್ ಗಳಷ್ಟು ಗೊಬ್ಬರವನ್ನು ಮಾರಾಟ ಮಾಡಿ ರೂ.75,000/- ಗಳನ್ನು ನಗರಸಭೆಗೆ ಪಾವತಿಸಿಕೊಳ್ಳಲಾಗಿರುತ್ತದೆ.

ದಿನನಿತ್ಯ ಸುಮಾರು 07 ಟನ್ (21.87%) ಒಣ ತ್ಯಾಜ್ಯವನ್ನು ಪ್ರತ್ಯೇಕವಾಗಿ ಸಂಗ್ರಹಿಸಿ ನಗರಸಭೆಯ ಮಣಿಘಟ್ಟ ರಸ್ತೆಯ ಬಳಿ ಹಾಗೂ ಕೆಂದಟ್ಟಿಯ ಒಣತ್ಯಾಜ್ಯ ಸಂಗ್ರಹಣಾ ಘಟಕದಲ್ಲಿ ಸಂಗ್ರಹಿಸಿ ಮರುಬಳಕೆದಾರರಿಗೆ ಮಾರಾಟ ಮಾಡಿ ಕಳೆದ ಒಂದು ವರ್ಷದಿಂದ ಒಟ್ಟು ರೂ.1,36,000/-ಗಳನ್ನು ನಗರಸಭೆಗೆ ಪಾವತಿಸಿಕೊಳ್ಳಲಾಗಿರುತ್ತದೆ.

ನಗರಸಭೆ ವ್ಯಾಪ್ತಿಯಲ್ಲಿ ಸಂಜೆ ಸಮಯದಲ್ಲಿ ಮಾಂಸ ತ್ಯಾಜ್ಯ ಮತ್ತು ರಸ್ತೆ ಬದಿ ವ್ಯಾಪಾರಸ್ಥರ ತ್ಯಾಜ್ಯವನ್ನು ಸಂಗ್ರಹಿಸಲು ಪ್ರತ್ಯೇಕವಾಗಿ ವಾಹನಗಳನ್ನು ನಿಯೋಜಿಸಲಾಗಿರುತ್ತದೆ ಹಾಗೂ ಪ್ರಸ್ತುತ 18 ಕಮ್ಯೂನಿಟಿ ಮೊಬಲೈಜರ್ಸ್ ಗಳನ್ನು IEC ಕಾರ್ಯಕ್ರಮದಡಿ ನೇಮಕ ಮಾಡಿಕೊಂಡಿದ್ದು ಹಂತ ಹಂತವಾಗಿ ಮನೆ-ಮನೆಗೆ ಭೇಟಿ ನೀಡಿ ಮನೆಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ಎಲ್ಲೆಂದರಲ್ಲಿ ಎಸೆಯದೇ ಹಸಿಕಸ ಮತ್ತು ಒಣಕಸವಾಗಿ ವಿಂಗಡಿಸಿ ನಗರಸಭೆ ವಾಹನಗಳಿಗೆ ನೀಡುವಂತೆ ಸಾರ್ವಜನಿಕರಿಗೆ ಅರಿವು ಮೂಡಿಸಲಾಗುತ್ತಿದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಾರ್ವಜನಿಕರು ಅನಧಿಕೃತವಾಗಿ ಹೆಚ್ಚು ತ್ಯಾಜ್ಯ ಸುರಿಯುತ್ತಿರುವ 20 ಸ್ಥಳಗಳನ್ನು (Black spot) ಗುರುತಿಸಿ ಅಲ್ಲಿ ಸಿಸಿ ಕ್ಯಾಮರಾಗಳನ್ನು ಅಳವಡಿಸಿದ್ದು ಅದರ ಮೇಲ್ವಿಚಾರಣೆಯನ್ನು ಆಯಾ ವಾರ್ಡ್ ಸೂಪರ್‌ವೈಸರ್‌ಗಳಿಗೆ ನೀಡಿದ್ದು ಅನಧಿಕೃತವಾಗಿ ತ್ಯಾಜ್ಯ ಎಸೆಯುವವರನ್ನು ಗುರುತಿಸಿ ದಂಡ ವಿಧಿಸಲಾಗುತ್ತಿದ್ದು ಅಂತಹಪರ ವಿರುದ್ಧ ಸ್ಥಳೀಯ ಪೋಲೀಸ್ ಸ್ಟೇಷನ್ ನಲ್ಲಿ ಮೊಕದ್ದಮೆಗಳನ್ನು ದಾಖಲಿಸಲು ಕ್ರಮ ವಹಿಸಲಾಗುತ್ತಿದೆ.

ತ್ಯಾಜ್ಯ ವಿಲೇವಾರಿ ಘಟಕದಲ್ಲಿ ಈಗಾಗಲೇ ಶೇಖರಣೆಯಾಗಿರುವ ಪಾರಂಪರಿಕ ತ್ಯಾಜ್ಯವನ್ನು ಸಂಸ್ಕರಣೆ ಮಾಡಲು ನಿಯಮಾನುಸಾರ ಟೆಂಡರ್ ಕರೆದು ದಿನಾಂಕ: 04-04-2025 ರಂದು ಕಾರ್ಯಾದೇಶ ನೀಡಲಾಗಿದ್ದು ಸಂಸ್ಕರಣೆ ಕಾರ್ಯ ಪ್ರಗತಿ ಹಂತದಲ್ಲಿರುತ್ತದೆ.

ಶ್ರೀ ಗೋವಿಂದರಾಜು:- ಮಾನ್ಯ ಸಭಾಪತಿಯವರೆ, ನಾನು ಗಮನ ಸೆಳೆದಿರುವ ವಿಷಯದ ಬಗ್ಗೆ ಸಚಿವರು ಉತ್ತರಿಸಿದ್ದಾರೆ. ಪ್ರಜಾವಾಣಿ, ವಿಜಯ ಕರ್ನಾಟಕ ಮತ್ತು ವಿಜಯವಾಣಿ ಪತ್ರಿಕೆಗಳಲ್ಲಿ ಪ್ರಕಟಗೊಂಡಿರುವ ಎಲ್ಲಾ ವಿವರವಾದ ವರದಿಗಳನ್ನು ಸಚಿವರಿಗೆ ನೀಡಿದ್ದೇನೆ. ಪತ್ರಿಕೆಯಲ್ಲಿ ನನ್ನ ವಿಷಯ ಬಂದಿದ್ದರಿಂದ ಇವತ್ತಿನ ಬೆಳಗ್ಗೆ ನಾನೇ ಖುದ್ದಾಗಿ ಕಸದ ಬ್ಲ್ಯಾಕ್‌ಸ್ಪಾಟ್ಸ್ (black spots) ಎಂದು ಕರೆಯುವ ಸ್ಥಳಕ್ಕೆ ಭೇಟಿ ನೀಡಿ, ಅದರ ಫೋಟೋಗಳನ್ನೂ ಸಹ ಸಚಿವರಿಗೆ ನೀಡಿದ್ದೇನೆ. ಅಲ್ಲಿನ ಸಮಸ್ಯೆ ಏನಾಗಿದೆ ಎಂದರೆ...., ಕೋಲಾರ ಜಿಲ್ಲೆಯು 1.86 ಲಕ್ಷ ಜನಸಂಖ್ಯೆಯನ್ನು ಹೊಂದಿದೆ ಎಂಬುದಾಗಿ ಹೇಳಿದ್ದೀರಿ. ಅಲ್ಲಿ 35 ವಾರ್ಡ್‌ಗಳಿವೆ. ಇದರ ಜೊತೆಗೆ ಅಲ್ಲಿನ ಪಕ್ಕದ ಗ್ರಾಮಗಳನ್ನೂ ಸಹ ಕೋಲಾರ ನಗರಸಭೆಗೆ ಸೇರಿಸಿಕೊಂಡಿದ್ದಾರೆ. ಈ ಎರಡಕ್ಕೂ ಸೇರಿಸಿ 7 ಟ್ರ್ಯಾಕ್ಟರ್ ಟ್ರೈಲರ್ ವಾಹನಗಳು ಹಾಗೂ 3 ಕಾಂಪ್ಯಾಕ್ಟರ್‌ಗಳನ್ನು ತೆಗೆದುಕೊಳ್ಳಲಾಗಿದೆ ಎಂದು ತಿಳಿಸಿದ್ದಾರೆ. ಒಟ್ಟು 10 ವಾಹನಗಳು. 35 ವಾರ್ಡ್ ಮತ್ತು ಪಕ್ಕದ ಹಳ್ಳಿಗಳ ಕಸ ವಿಲೇವಾರಿಯನ್ನು ಮಾಡಬೇಕು. ಇದರಲ್ಲಿ ಹಸಿ ಮತ್ತು ಒಣ ಕಸಕ್ಕಾಗಿ ಪ್ರತ್ಯೇಕವಾದ ಪ್ಲ್ಯಾಸ್ಟಿಕ್ ಬಿನ್‌ಗಳನ್ನು ನೀಡಿ, ತ್ಯಾಜ್ಯವನ್ನು ಸಂಗ್ರಹಣೆ ಮಾಡಲು ತಿಳಿಸಲಾಗಿದೆ. ವಾಹನದ ವ್ಯವಸ್ಥೆಯು ಸರಿಯಾಗಿ ಇರದೇ ಇದ್ದರೆ, ದಿನನಿತ್ಯ ಕಸ ಸಂಗ್ರಹಣೆ ಮಾಡದೇ ಇರುವುದರಿಂದ 10 ವಾಹನಗಳು ಎಲ್ಲಾ ಕಡೆಗಳಲ್ಲಿ ಹೋಗುವುದಕ್ಕಾಗುವುದಿಲ್ಲ.

(ಮುಂದು)

(684)13-08-2025/4-10-/bkp-md (ವೈಸ್ ಛೇರ್ಮನ್ ರವರ ಉಪಸ್ಥಿತಿ)

ಶ್ರೀ ಗೋವಿಂದ ರಾಜು(ಮುಂದು)

ಬೆಳಗ್ಗೆ ಕಸವನ್ನು ಸಂಗ್ರಹಣೆ ಮಾಡುವಲ್ಲಿ ಈ ಮುನಿಸಿಪಲ್ ಸಿಬ್ಬಂದಿ ಏನು ಮಾಡುತ್ತಾರೆಂದರೆ ಬೆಳಗ್ಗೆ ಸಮಯದಲ್ಲಿ ಕಸ ಸಂಗ್ರಹ ಮಾಡುತ್ತಾರೆ. ಕಸ ಸಂಗ್ರಹಣೆ ಮಾಡಿದಾಗ ಸರಿಯಾದ ಸಮಯಕ್ಕೆ ಅಲ್ಲಿಗೆ ವಾಹನಗಳು ಅಂದರೆ ಟ್ರಾಕ್ಟರ್ ಆಗಲಿ, Compactor Vehicle ಆಗಲಿ ಅಲ್ಲಿಗೆ ಬಾರದೇ ಹೋದಾಗ ಅವರನ್ನು ಕಾಯಲಿಕ್ಕೆ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೋಗುವುದಿಲ್ಲ. ನಮ್ಮ ನಗರ ಸಭೆಯ ಸಿಬ್ಬಂದಿ ಏನು ಕಸವನ್ನು ಸಂಗ್ರಹಣೆ ಮಾಡುತ್ತಾರೆ, ಅವರು ಸಹ ಕಸವನ್ನು ತಂದು ರಸ್ತೆ ಬದಿಯಲ್ಲಿ ಕಸವನ್ನು ಎಸೆದು ಹೋಗುವಂತಹ ಪರಿಸ್ಥಿತಿ ಇವತ್ತಿನ ದಿವಸ ಅಲ್ಲಿ ನಿರ್ಮಾಣವಾಗಿದೆ. ಇದು ಕೋಲಾರದ ಜಿಲ್ಲಾ ಕೇಂದ್ರವಾಗಿದ್ದು, ಸ್ವಾತಂತ್ರ್ಯ ಪೂರ್ವದಲ್ಲಿಯೇ ಕೋಲಾರ ಜಿಲ್ಲಾ ಕೇಂದ್ರವಾಗಿದ್ದು, ಅದು ಇವತ್ತಿಗೂ ಸಹ ಹಳ್ಳಿಗೂ ಸಹ ತಪ್ಪಿ ಹೋಗಿದೆ, ಪೇಟೆಗೂ ಸಹ ತಪ್ಪಿ ಹೋಗಿದೆ. ಇದಲ್ಲದೆ, stormwater drain ಎಂದು ಏನು ಮಾಡಿದ್ದಾರೆ, ಅದನ್ನು ಅವರು ಸರಿಯಾಗಿ, ವ್ಯವಸ್ಥಿತವಾಗಿ ಅದಕ್ಕೆ ಒಂದು gradient ಕೊಡದೇ ಮಾಡಿಬಿಟ್ಟು, ಕಸವನ್ನು ವಿಲೇವಾರಿ ಯಾರು ಮಾಡುತ್ತಾರೆ, ಅವರು ಕಸವನ್ನು ತಂದು ಆ ಒಂದು drain ನಲ್ಲಿ ಹಾಕಿ, ಅದರಲ್ಲಿ ಎಲ್ಲಾ ಕಸವನ್ನು ತುಂಬಿ ಹಾಕಿರುತ್ತಾರೆ. ಇದರ ಸಲುವಾಗಿ ನೀವು ಬೆಂಗಳೂರಿನಿಂದ ಸಿಬ್ಬಂದಿಯನ್ನು ಅಲ್ಲಿ ಕಳುಹಿಸಿ ಒಂದು ಬಾರಿ ತನಿಖೆಯನ್ನು ಮಾಡಿದರೆ ವಾಸ್ತವಾಂಶದ ವಿವರ ನಿಮಗೆ ಗೊತ್ತಾಗುತ್ತದೆ. ಈ ವಿಚಾರವಾಗಿ ನನ್ನ ಒತ್ತಾಯ ಇಷ್ಟೆ. ಈಗ ಮಳೆಗಾಲ ಆಗಿರುವುದರಿಂದ ಇವತ್ತು ಕೋಲಾರದಲ್ಲಿ ಹಾಕಿರುವಂತಹ ಕಸದ ಫೋಟೋಗಳನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ಕೊಟ್ಟಿರುತ್ತೇನೆ. ಆ ರೀತಿಯಲ್ಲಿ ಕಸ ಇದ್ದು, ಅಲ್ಲಿ ಸೊಳ್ಳೆಗಳ ಮೊಟ್ಟೆಯ ಉತ್ಪಾದನಾ ಕೇಂದ್ರವಾಗಿದೆ. ನಮ್ಮ ನಗರ ಸಭೆಯ ಸಿಬ್ಬಂದಿಯೇ ಕಸವನ್ನು ತಂದು ರಸ್ತೆ ಬದಿಗೆ ಹಾಕುವುದು ಮತ್ತು ಇದರ ಜೊತೆಗೆ ಹಳೆಯ ಕಟ್ಟಡಗಳನ್ನು ಏನು ಕೆಡವುತ್ತಾರೆ, ಅದರಿಂದ ಬರುವ debris, ಮಣ್ಣು ಕಲ್ಲುಗಳನ್ನು ತೆಗೆದುಕೊಂಡು ಬಂದು ರಸ್ತೆ ಬದಿಗೆ ಸುರಿಯುತ್ತಾರೆ. ಈ ರೀತಿಯಲ್ಲಿ ಯಾವುದೇ ಒಂದು ನಿಯಂತ್ರಣ ನಮ್ಮ ಕೋಲಾರ ನಗರದಲ್ಲಿ ಇರುವುದಿಲ್ಲ. ಇದರ ಜೊತೆಗೆ stormwater drain ನಲ್ಲಿ ಮಳೆ ನೀರು ಏನು ಹರಿಯಬೇಕಾಗಿತ್ತು, ಅಲ್ಲಿ ಅವೈಜ್ಞಾನಿಕವಾದ ವ್ಯವಸ್ಥೆ ಇರುವುದರಿಂದ ಅಲ್ಲಿ ಕಸ ತುಂಬಿಕೊಂಡಿರುವಂತಹ ತೊಟ್ಟಿಗಳಾಗಿ ಮಾರ್ಪಟ್ಟಿವೆ. ಫೋಟೋಗಳನ್ನು ನಾನು ಮಂತ್ರಿಗಳಿಗೆ ಕೊಟ್ಟಿದ್ದೇನೆ. ಇದಕ್ಕೆ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಒತ್ತಾಯಿಸುತ್ತೇನೆ.

ಶ್ರೀ ರಹೀಂ ಖಾನ್(ಪೌರಾಡಳಿತ ಹಾಗೂ ಹಜ್ ಸಚಿವರು):- ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಶ್ರೀ ಗೋವಿಂದ ರಾಜುರವರು ಎರಡು-ಮೂರು ಪ್ರಶ್ನೆಗಳನ್ನು ಕೇಳಿದ್ದಾರೆ. ನಾನು ವಿವರವಾಗಿ ಉತ್ತರವನ್ನು ಕೊಟ್ಟಿದ್ದೇನೆ. ಅದರೂ ಸಹ 2-3 paper cuttings and photos ಗಳನ್ನು ನನಗೆ ಈಗ ಕೊಟ್ಟಿದ್ದಾರೆ. ಕೆಲವು ವಾರ್ಡ್‌ಗಳಲ್ಲಿ ಮತ್ತು ಕೆಲವು ಏರಿಯಾಗಳಲ್ಲಿ ಈ ರೀತಿಯಲ್ಲಿ ತೊಂದರೆಯಾಗಿದೆ ಎನ್ನುವ ಮಾಹಿತಿ ಬಂದಿದೆ. ಅದರ ಸಲುವಾಗಿ ನಾನು ಒಂದು ವಾರದೊಳಗೆ ನಮ್ಮ ನಿರ್ದೇಶಕರು ಮತ್ತು ಆ ಆಯುಕ್ತರುಗಳೂ ಹಾಗೂ ಪಿ.ಡಿ.ಓ.ಗಳು ಮತ್ತು ಕೋಲಾರ ಜಿಲ್ಲಾಧಿಕಾರಿಗಳನ್ನು ಕರೆಸಿ, ಅವರ ಜೊತೆಗೆ ಒಂದು ಸಭೆಯನ್ನು ಮಾಡಿ ನಾನು ಈ ಸಮಸ್ಯೆಯನ್ನು ಪರಿಹಾರ ಮಾಡುತ್ತೇನೆ.

ಶ್ರೀ ಗೋವಿಂದ ರಾಜು:- ಮಾನ್ಯ ಸಭಾಪತಿಯವರೆ, ಅಲ್ಲಿ ಕಸ ವಿಲೇವಾರಿ ಮಾಡಲು ಸರಿಯಾದ ವಾಹನ ವ್ಯವಸ್ಥೆ ಇರುವುದಿಲ್ಲ. ಅದನ್ನು ಸರಿ ಮಾಡಬೇಕೆನ್ನುವುದು ನನ್ನ ಒತ್ತಾಯವಾಗಿದೆ. 35 ವಾರ್ಡ್‌ಗಳಿಗೆ ಮತ್ತು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಷ್ಟೊಂದು ದೊಡ್ಡ ನಗರಕ್ಕೆ ಹಳ್ಳಿಗಳನ್ನು ಸೇರಿಸಿಕೊಂಡು ಮಾಡಿರುವುದರಿಂದ 35 ವಾಹನಗಳಲ್ಲಿ ಕಸ ವಿಲೇವಾರಿ ಆಗುತ್ತಿಲ್ಲ. ಏಕೆಂದರೆ, ನೀವು ಈಗ ಏನು ಕಸ ಗುರುತಿಸುವುದಕ್ಕೆ ಸ್ಥಳ ಪರಿಶೀಲನೆಗೆ ಕೊಟ್ಟಿದ್ದೀರಿ, ಅದು ಕೋಲಾರದಿಂದ ಸುಮಾರು 14 ಕಿ.ಮೀ ದೂರದಲ್ಲಿದೆ. ಅಲ್ಲಿಗೆ ಕಸವನ್ನು ತೆಗೆದುಕೊಂಡು ಹೋಗಿ ಹಾಕಿ ಬರಬೇಕೆಂದರೆ ಸಮಯ ಸಾಕಾಗುವುದಿಲ್ಲ. ಆ ಸಮಯಕ್ಕೆ ಈ ನಗರ ಸಭೆಯ ಸಿಬ್ಬಂದಿಯೂ ಕೂಡ ಕಾಯುವುದಿಲ್ಲ. ಹಾಗಾಗಿ, ಕಸವನ್ನೆಲ್ಲಾ ರಸ್ತೆಗೆ ಹಾಕುತ್ತಿದ್ದಾರೆ. ಮತ್ತೊಂದು ಸಮಸ್ಯೆ ಎಂದರೆ ಹಸಿ ಕಸ ಮತ್ತು ಒಣ ಕಸವನ್ನು ಹಾಕುವಂತಹ ಸಂದರ್ಭದಲ್ಲಿ ವಾಹನ ಇಲ್ಲದೇ ಹೋದಾಗ ಅವರು ವಾಹನಕ್ಕೋಸ್ಕರ ಕಾಯದೇ ಅವರೆಲ್ಲರೂ ಅದನ್ನು ರಸ್ತೆಗೆ ಹಾಕಿ ಹೋಗುತ್ತಾರೆ. ಆದ್ದರಿಂದ, ದಯವಿಟ್ಟು ಇದಕ್ಕೆ ಸೂಕ್ತವಾದ ವಾಹನ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳಿ ನಾನು ಒತ್ತಾಯ ಮಾಡುತ್ತೇನೆ.

ಶ್ರೀ ರಹೀಂ ಖಾನ್:- ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಶ್ರೀಮಾನ್ ಗೋವಿಂದ ರಾಜು ರವರು ಕೆಲವು ಸಮಸ್ಯೆಗಳನ್ನು ಹೇಳಿದ್ದಾರೆ. ಈ ಸಮಸ್ಯೆಗಳನ್ನು ಮೀಟಿಂಗ್‌ನಲ್ಲಿ ಚರ್ಚೆ ಮಾಡಿ ಪರಿಹಾರ ಮಾಡುತ್ತೇನೆ. ಹೆಚ್ಚುವರಿ ವಾಹನ ಬೇಕೆಂದರೆ, ಅ ಒಂದು ಮೀಟಿಂಗ್‌ನಲ್ಲಿ ತೀರ್ಮಾನ ಮಾಡಿ, ಆಯುಕ್ತರು ಮತ್ತು ನಿರ್ದೇಶಕರಿಗೆ ಹೇಳಿ ಎಷ್ಟು ಹೆಚ್ಚುವರಿ ವಾಹನಗಳು ಬೇಕಾಗುತ್ತದೆ, ಅದನ್ನು ಮಾಡಬೇಕಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

08. ಪ್ರಕಟಣೆ

ವೈಸ್ ಛೇರ್ಮನ್:- ಮಾನ್ಯ ಸಭಾಧ್ಯಕ್ಷರವರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ:-

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನ ಸಭೆಯು ಅಂಗೀಕರಿಸಿರುತ್ತದೆಂದು ಮತ್ತು ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

1. ಬಸವ ಕಲ್ಯಾಣ ಅಭಿವೃದ್ಧಿ ಮಂಡಳಿ (ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂ.35)
2. ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂ.36)
3. ನಾಡಪ್ರಭು ಕೆಂಪೇಗೌಡ ಪಾರಂಪರಿಕ ತಾಣದ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂ.37)
4. ಕಿತ್ತೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂ.38)
5. ಕೂಡಲ ಸಂಗಮ ಅಭಿವೃದ್ಧಿ ಮಂಡಳಿ (ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂ.39)
6. ಬನವಾಸಿ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂ.40)
7. ಸರ್ವಜ್ಞ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂ.41)
8. ನೋಂದಣಿ (ಕರ್ನಾಟಕ ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂ.48)
9. ಕರ್ನಾಟಕ ಭೂ ಸುಧಾರಣೆಗಳು ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂ.51)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

09. ಗಮನ ಸೆಳೆಯುವ ಸೂಚನೆ (ಮುಂದುವರೆದುದ್ದು)

ಇ) ವಿಷಯ: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರ್ಕಾರಿ ವೆನ್‌ಲಾಕ್ ಆಸ್ಪತ್ರೆಯ ಅಧೀನದಲ್ಲಿರುವ ಮೂಡುಶೆಡ್ಡೆಯಲ್ಲಿ ಕ್ಷಯ ಮತ್ತು ಎದೆರೋಗ ಆಸ್ಪತ್ರೆಯ 8 ಎಕರೆ ಸ್ಥಳದಲ್ಲಿ ಜಯದೇವ ಹೃದ್ರೋಗ ಹಾಗೂ ಕಿದ್ವಾಯಿ ಕ್ಯಾನ್ಸರ್ ಸಂಸ್ಥೆಯ ಸ್ಯಾಟ್‌ಲೈಟ್ ಸೆಂಟರ್‌ಗಳನ್ನು ಮೈಸೂರು ಹಾಗೂ ಕಲ್ಬುರ್ಗಿ ಮಾದರಿಯಲ್ಲಿ ಪ್ರಾರಂಭಿಸಬೇಕೆನ್ನುವ ಬಗ್ಗೆ.

ಶ್ರೀ ಐವನ್ ಡಿ'ಸೋಜಾ(ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರ್ಕಾರಿ ವೆನ್‌ಲಾಕ್ ಆಸ್ಪತ್ರೆಯ ಅಧೀನದಲ್ಲಿರುವ ಮೂಡುಶೆಡ್ಡೆಯಲ್ಲಿ ಕ್ಷಯ ಮತ್ತು ಎದೆರೋಗ ಅಸ್ಪತ್ರೆಯ 8 ಎಕರೆ ಸ್ಥಳದಲ್ಲಿ ಜಯದೇವ ಹೃದ್ರೋಗ ಹಾಗೂ ಕಿದ್ವಾಯಿ ಕ್ಯಾನ್ಸರ್ ಸಂಸ್ಥೆಯ Satellite Centre ಗಳನ್ನು ಮೈಸೂರು ಮತ್ತು ಗುಲ್ಬರ್ಗ ಮಾದರಿಯಲ್ಲಿ ಪ್ರಾರಂಭಿಸಬೇಕೆಂದು ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಗಮನಸೆಳೆಯ ಬಯಸುತ್ತೇನೆ.

ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು)(ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಉದ್ಯಮ ಶೀಲತೆ ಹಾಗೂ ಜೀವನೋಪಾಯ ಸಚಿವರ ಪರವಾಗಿ):- ಸನ್ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಕೇಳಿರುವಂತಹ ವಿಷಯ ಏನೆಂದರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ....

ಹೇಳಿಕೆ :-

ದಕ್ಷಿಣ ಕನ್ನಡ ಜಿಲ್ಲೆಯ ಸರ್ಕಾರಿ ವೆನ್‌ಲಾಕ್ ಆಸ್ಪತ್ರೆಯು ಇದರ ಅಧೀನದಲ್ಲಿರುವ ಮೂಡಶೆಡ್ಡೆಯಲ್ಲಿ ಕ್ಷಯ ಮತ್ತು ಎದೆ ರೋಗಗಳ ಆಸ್ಪತ್ರೆ 8 ಎಕರೆ ಸ್ಥಳದಲ್ಲಿ ಜಯದೇವ ಹೃದ್ರೋಗ ಸಂಸ್ಥೆಯ ಒಂದು ಸ್ಯಾಟಲೈಟ್ ಸೆಂಟರ್ ಮತ್ತು ಕಿದ್ವಾಯಿ ಕ್ಯಾನ್ಸರ್ ಸಂಸ್ಥೆಯು ಸ್ಯಾಟಲೈಟ್ ಸೆಂಟರ್ ಸ್ಥಾಪಿಸುವ ಸಂಬಂಧ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಶ್ರೀ ಐವನ್ ಡಿ'ಸೋಜಾ:- ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ನಾನು ಈ ಬಗ್ಗೆ ವಿವರಿಸಿ ಹೇಳಿದ ಮೇಲೆ ಉತ್ತರ ಕೊಡಲಿ. ಮಾನ್ಯ ಸಭಾಪತಿಯವರೆ, ಇವತ್ತು ಈ ಬಗ್ಗೆ ಉತ್ತರ ಈಗ ನನ್ನ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೈಸೇರಿದೆ. ಮಂತ್ರಿಗಳು ಉತ್ತರದಲ್ಲಿ ಏನು ಹೇಳಿದ್ದಾರೆಂದರೆ, ನಮ್ಮ Government Wenlock Hospital ನ ಅಧೀನದಲ್ಲಿರುವ ಮೂಡುಶೆಡ್ಡೆಯ ಕ್ಷಯ ಮತ್ತು ಹೃದಯ ರೋಗಗಳ 8 ಎಕರೆ ಸ್ಥಳದಲ್ಲಿ ಜಯದೇವ, ಹೃದಯರೋಗ, ಕಿದ್ವಾಯಿ ಕ್ಯಾನ್ಸರ್ ಸಂಸ್ಥೆಯ Satellite Centre ನ್ನು ಮೈಸೂರು ಮತ್ತು ಗುಲ್ಬರ್ಗ ಮಾದರಿಯಲ್ಲಿ ಪ್ರಾರಂಭಿಸಲು ನಮ್ಮ ಮುಂದೆ ಪ್ರಸ್ತಾವನೆ ಇಲ್ಲವೆನ್ನುವ ಮಾತನ್ನು ಹೇಳಿದ್ದಾರೆ. ನನ್ನ ಉದ್ದೇಶ ಇರುವುದು ಈಗ ಪ್ರಸ್ತಾವನೆ ಇಲ್ಲವೆಂದು ನನಗೆ ಗೊತ್ತಿದ್ದೇ ನಾನು ಈ ಸದನದಲ್ಲಿ ಈ ಒಂದು ಗಮನಸೆಳೆಯುವ ಪ್ರಶ್ನೆಯನ್ನು ಕೇಳಿದ್ದೇನೆ. ಗಮನಸೆಳೆಯುವುದು ಏತಕ್ಕೆಂದರೆ ಮಾನ್ಯ ಮಂತ್ರಿಗಳಿಗೆ ಮತ್ತು ಸಚಿವರುಗಳಿಗೆ ಹಾಗೂ ಅಧಿಕಾರಿಗಳಿಗೆ ಅಲ್ಲಿ ಏನು ವ್ಯವಸ್ಥೆ ಇದೆ ಎನ್ನುವುದು ಗೊತ್ತಿರಬೇಕು, ಈಗ ನಾವು ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರನ್ನು ನೋಡಿದರೆ ಒಂದು ತಿಂಗಳಿಗೆ heart attack cases 500 ರಿಂದ 600 ಕೇಸ್‌ಗಳು ಬರುತ್ತವೆ. Government Wenlock Hospital ಇದ್ದು ಅದು ಸರ್ಕಾರಿ ಆಸ್ಪತ್ರೆಯಾಗಿದ್ದು, 1,100 ಬೆಡ್‌ಗಳ ಆಸ್ಪತ್ರೆಯಾಗಿದೆ. ಆ ಆಸ್ಪತ್ರೆ ಸೂಪರ್ ಸ್ಪೆಷಾಲಿಟಿ ಚಿಕಿತ್ಸೆ ಮಾಡತಕ್ಕಂತಹ ವೈದ್ಯರು ಸಹ ಇಲ್ಲ, ಆ ಆಸ್ಪತ್ರೆಯಲ್ಲಿ ಇದು ಆಗುವುದೂ ಸಹ ಇಲ್ಲ. ಅಂದರೆ, ಅಲ್ಲಿಗೆ ಬಂದಂತಹ ರೋಗಿಗಳನ್ನು ಖಾಸಗಿ ಆಸ್ಪತ್ರೆಗೆ refer ಮಾಡಬೇಕು. ಅಲ್ಲಿಗೆ ಹೋದಾಗ ಯಾರು ಬಡವರು ಇದ್ದಾರೆ ಅಂದರೆ ಯಾರು ಬಿ.ಪಿ.ಎಲ್ ಕಾರ್ಡ್ ಹೊಂದಿರುತ್ತಾರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶೇಕಡ 70ರಷ್ಟು ಮಂದಿ ಬಿ.ಪಿ.ಎಲ್.ಕಾರ್ಡ್‌ದಾರರು ಇದ್ದಾರೆ. ಅವರುಗಳು ಅಲ್ಲಿಗೆ ಚಿಕಿತ್ಸೆಗೆಂದು ಹೋದಾಗ ಆಯುಷ್ಮಾನ್ ಕರ್ನಾಟಕದಲ್ಲಿ ಅವರು ಬೇರೆ ಅಸ್ಪತ್ರೆಗೆ refer ಮಾಡಿದರೆ ಹೃದಯದ ತೊಂದರೆ ಇದ್ದಲ್ಲಿ stent ಹಾಕಲಿಕ್ಕೆ ಮತ್ತೊಂದಕ್ಕೆ ಅಲ್ಲಿ ಇರುವಂತಹ ಖರ್ಚು 2 ಲಕ್ಷ ರಿಂದ 8 ಲಕ್ಷದವರೆಗೆ ತೆಗೆದುಕೊಳ್ಳುತ್ತಾರೆ. ಅದೇ ರೀತಿಯಲ್ಲಿ ಕ್ಯಾನ್ಸರ್‌ಗೆ ಬಂದಾಗ Open Heart Surgery ಗೆ 59 ರಿಂದ 60 ಲಕ್ಷ ರೂಪಾಯಿಗಳು ಬರುತ್ತದೆ. ಅದು referral from the Government Wenlock Hospital ನಿಂದ ಬೇರೆ ಬೇರೆ Yenepoya Medical College Hospital ಇರಬಹುದು, Father Muller Medical College Hospital ಇರಬಹುದು ಅಥವಾ K.S.Hegde Hospital ಇರಬಹುದು, ಅವುಗಳಿಗೆ ಕಳುಹಿಸಿಕೊಡುವಂತಹದ್ದು ಇರುತ್ತದೆ. ಅದೇ ರೀತಿಯಲ್ಲಿ ಕ್ಯಾನ್ಸರ್ ರೋಗಿ ಅಲ್ಲಿಗೆ ಒಂದು ತಿಂಗಳಿಗೆ 500 ರಿಂದ 600 ಜನ ಬರುತ್ತಾರೆ. ಅವರಿಗೆ ಹೊರಗಡೆ ಚಿಕಿತ್ಸೆ ಪಡೆಯಲು referral ಮಾಡಬೇಕು. ನನ್ನ ಪ್ರಶ್ನೆ ಇರುವಂತಹದ್ದು ಏನೆಂದರೆ, ನೀವು ಬೇರೆ ಬೇರೆ ನಗರಗಳಲ್ಲಿ ನಿಮ್ಮ Satellite Centre ಗಳನ್ನು ಮಾಡಿದ್ದೀರಿ. ಗುಲ್ಬರ್ಗದಲ್ಲಿ ಈಗಾಗಲೇ ಕಾರ್ಯ ಪ್ರಾರಂಭ ಮಾಡಿದ್ದೀರಿ, ತುಮಕೂರು, ಮೈಸೂರು, ಶಿವಮೊಗ್ಗ ಜಿಲ್ಲೆಗಳಲ್ಲಿ ಈ ವಿಚಾರದ ಕಾಮಗಾರಿ ಪ್ರಗತಿಯಲ್ಲಿದೆ. ಮತ್ತೆ ಇದನ್ನು ಬೆಳಗಾವಿಯಲ್ಲಿ ಪ್ರಾರಂಭಿಸುವ ಪ್ರಸ್ತಾವನೆ ಇದೆ. ಜಯದೇವ ಮತ್ತು ಕಿದ್ವಾಯಿ ಈ ಎರಡು ಸಂಸ್ಥೆಗಳು ವೈದ್ಯಕೀಯ ಶಿಕ್ಷಣ ಸಂಸ್ಥೆಗಳ ವ್ಯಾಪ್ತಿಗೆ ಬರುವುದರಿಂದ, ಮೈಸೂರು ಮತ್ತು ಗುಲ್ಬರ್ಗದಲ್ಲಿ ನೀವು ಹೇಗೆ Satellite Centre ಗಳನ್ನು ಮಾಡಿದ್ದೀರೋ ಅದೇ ರೀತಿಯಲ್ಲಿ ಮಂಗಳೂರಿನಲ್ಲಿ ಸಹ ಅಲ್ಲಿನ ರೋಗಿಗಳ ಹಿತದೃಷ್ಟಿಯಿಂದ ಮಾಡಬೇಕೆನ್ನುವುದು ನನ್ನ ಪ್ರಶ್ನೆಯಾಗಿದೆ. ಇವತ್ತು ನೀವು referral

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುವಾಗ ಅವರುಗಳಿಗೆ ಶನಿವಾರ, ಅದಿತ್ಯವಾರವರೆಗೆ ನೀವು ತುರ್ತಾಗಿ ಅಪರೇಷನ್ ಮಾಡಲಿಕ್ಕೆ ಹೇಳಿದರೆ ಅವರು ಮಾಡಲಿಕ್ಕೆ ಕೇಳುವುದಿಲ್ಲ.ಏತಕ್ಕೆ ಅವರು ಕೇಳುವುದಿಲ್ಲವೆಂದರೆ, ನಿಮ್ಮ code approve ಆಗಿ ಬರಬೇಕು. ಈ code ನಲ್ಲಿ ನೀವು ಬರುವುದಿಲ್ಲ ಎಂದು ಹೇಳುವಂತಹ ಸಮಸ್ಯೆಗಳನ್ನು ಅವರು ಹೇಳುತ್ತಾರೆ. ಅವರು ಆ ಆಸ್ಪತ್ರೆಯಲ್ಲಿ ಎರಡು ದಿವಸಗಳ ಕಾಲ ಐ.ಸಿ.ಯು ನಲ್ಲಿ ಇದ್ದರೆ ಅದರ ಹಣವನ್ನು ಆಗಲೇ partly payment ಮಾಡಬೇಕು. ಆ ಹಣವನ್ನು ಸರ್ಕಾರದವರು ಮಾಡುತ್ತಾರೆಯೇ? ಅವರು ಏನು ಹೇಳುತ್ತಾರೆಂದರೆ ಇದಕ್ಕೆ ಅಪ್ರೂವಲ್ ಬರಲಿಲ್ಲ, ಬರುವವವರೆಗೆ ನಾವು ಅಪರೇಟ್ ಮಾಡುವುದಿಲ್ಲವೆಂದು ಹೇಳುತ್ತಾರೆ. ಅಲ್ಲಿಯವರೆವಿಗೂ patient dead ಆಗುತ್ತಾರೆ. ಈ ರೀತಿಯಲ್ಲಿ ಸೌಕರ್ಯಗಳು ಇಲ್ಲದೇ ಇರುವುದರಿಂದ ಎಷ್ಟೋ ರೋಗಿಗಳು ಅವರುಗಳು ಚಿಕಿತ್ಸೆಯಿಲ್ಲದೆ ಸತ್ತು ಹೋಗಿರುವುದು ಬಹಳಷ್ಟು ದೊಡ್ಡ ಸಂಖ್ಯೆಯಲ್ಲಿದೆ.

(ಮುಂದು)

(685) 13.08.2025 04.20 ಎಸ್‌ವಿ-ಎಂಡಿ (ವೈಸ್ ಛೇರ್ಮನ್‌ರವರ ಉಪಸ್ಥಿತಿ)

ಶ್ರೀ ಐವನ್ ಡಿಸೋಜ (ಮುಂದು):-

ಹಾಗಾಗಿ ಸರ್ಕಾರವು ನಮ್ಮಲ್ಲಿ ಪ್ರಸ್ತಾವನೆಯೇ ಇಲ್ಲ ಎಂದು ಹೇಳುವುದು ಸರಿಯಲ್ಲ. ಮಂಗಳೂರಿನ ವೆನ್ಲಾಕ್ ಆಸ್ಪತ್ರೆಯ ಬದಿಯಲ್ಲಿಯೇ ಆಮಂತ್ರಣ ಹೋಟೆಲ್ ಬಳಿ 2 ಎಕರೆ 89 ಸೆಂಟ್ ಜಾಗವಿದೆ. ಮೂಡಶೆಡ್ಡೆಯಲ್ಲಿ 8 ಎಕರೆ ಜಾಗವಿದೆ. ಆ ಜಾಗವು ಪಾಳು ಬಿದ್ದಿದೆ. ಸಾಕಷ್ಟು ಮೂಲಭೂತ ಸೌಕರ್ಯಗಳಿವೆ. ವೆನ್ಲಾಕ್ ಆಸ್ಪತ್ರೆಯಲ್ಲಿ 1100 ಹಾಸಿಗೆ ಸಾಮರ್ಥ್ಯವಿದೆ. ಅಲ್ಲಿ ಬೇಕಾದಷ್ಟು ರೋಗಿಗಳು 7-8 ಜಿಲ್ಲೆಗಳಿಂದ ಬರುತ್ತಾರೆ. ಶಿವಮೊಗ್ಗ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು, ಕೊಡಗು ಜಿಲ್ಲೆಗಳಷ್ಟೇ ಅಲ್ಲದೆ ನೆರೆಯ ಕಾಸರಗೋಡಿನಿಂದಲೂ ಬರುತ್ತಾರೆ. ಇಷ್ಟು ದೊಡ್ಡ ಆಸ್ಪತ್ರೆಗೆ ಒಂದು ಹೃದ್ರೋಗ ಹಾಗೂ ಕ್ಯಾನ್ಸರ್ ಚಿಕಿತ್ಸಾ ಕೇಂದ್ರ ಮಾಡಬೇಕಾಗಿರುವುದು ಬಹಳ ಮೂಲಭೂತ ಹಾಗೂ ಅವಶ್ಯಕ ಬೇಡಿಕೆಯಾಗಿದೆ.

ಇಂದು ನಾವು ಪ್ರತಿದಿನ ಕೇಳುವಂಥ ನ್ಯೂಸ್ ಏನು? ಹಾರ್ಟ್ ಅಟ್ಯಾಕ್ ಆಯಿತು, ಹಾರ್ಟ್ ಸಮಸ್ಯೆ ಆಯಿತು. ಎಲ್ಲಿಯಾದರೂ ಎದೆ ನೋವು ಬಂದಿತು ಎಂದರೆ ತಕ್ಷಣವೇ ಡಾಕ್ಟರ ಬಳಿ ಕಳುಹಿಸುತ್ತಾರೆ. ಅವರು ಸ್ಟಂಟ್ ಹಾಕಬೇಕು, ಓಪನ್ ಹಾರ್ಟ್ ಸರ್ಜರಿ ಮಾಡಬೇಕೆಂದು ಹೇಳುತ್ತಾರೆ.

ನಾನು ಒಂದು ಅಂಕಿ-ಅಂಶಗಳನ್ನು ಕೊಡುತ್ತೇನೆ. ನಮ್ಮ ಜಿಲ್ಲೆಯಲ್ಲಿ ಏಪ್ರಿಲ್ 2024 ರಿಂದ ಮಾರ್ಚ್ 2025ರವರೆಗೆ ರೆಫರಲ್ ಕೇಸ್‌ಗಳ ವಿವರ ಹೀಗಿದೆ. ಎಜೆ ಆಸ್ಪತ್ರೆಯಲ್ಲಿ 422 ಕಾರ್ಡಿಯೋ ಸರ್ಜರಿಯಾಗಿದೆ. ಅವು ಜಿಲ್ಲಾ ಆಸ್ಪತ್ರೆಯಿಂದ ರೆಫರ್ ಆಗಿ ಹೋಗಿವೆ. ಖಾಸಗಿಯವರು ಎಷ್ಟು ಖರ್ಚು ಮಾಡುತ್ತಾರೆಂಬುದು ಪ್ರಶ್ನೆಯಲ್ಲ. ನಾವು ಕಳುಹಿಸಿಕೊಟ್ಟಿರುವಂಥದ್ದು. ಮೆಡಿಕೋ ಆಂಕೋ ಕೇಸ್‌ಗಳು 250 ಆಗಿವೆ. ರೇಡಿಯೇಷನ್ ಆಂಕೋ ಕೇಸ್‌ಗಳು 119 ಆಗಿವೆ. ಹೀಗೆ ಎಲ್ಲಾ ಆಸ್ಪತ್ರೆಗಳನ್ನು ತೆಗೆದುಕೊಂಡರೆ ಒಂದು ವರ್ಷಕ್ಕೆ 3,471

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾರ್ಡಿಯೋ ಕೇಸ್‌ಗಳು ಸರ್ಕಾರಿ ಆಸ್ಪತ್ರೆಯಿಂದ ರೆಫರ್ ಆಗಿ ಬೇರೆ ಬೇರೆ ಪ್ರೈವೇಟ್ ಆಸ್ಪತ್ರೆಗಳಿಗೆ ಕಳುಹಿಸಲಾಗಿದೆ. ಅದೇ ರೀತಿ ಮೆಡಿಕೋ ಆಂಕೋ ಕೇಸ್‌ಗಳು 3081 ಕೇಸ್ ಕಳುಹಿಸಿಕೊಡಲಾಗಿದೆ. ರೇಡಿಯೇಷನ್‌ಗೆ 2,144 ಕೇಸ್‌ಗಳನ್ನು ಕೊಡಲಾಗಿದೆ. ಹಾಗಾಗಿ ಮೆಡಿಕೋ ಆಂಕೋ ಆಯುಷ್ಮಾನ್ ಪ್ಯಾಕೇಜ್ ರೂ.1 ಲಕ್ಷ ಇದೆ. ರೇಡಿಯೇಷನ್ ಆಂಕೋ ಆಯುಷ್ಮಾನ್ ಪ್ಯಾಕೇಜ್ ರೂ.75,000 ಇದೆ. ನಮ್ಮದೇ Satellite Centre ಇದ್ದರೆ ಈ ದುಡ್ಡನ್ನು ನಾವೇ ಉಳಿಸಿಕೊಳ್ಳಬಹುದು. ವರ್ಷಕ್ಕೆ ಸುಮಾರು 10,000 ಪೇಷಂಟ್‌ಗಳನ್ನು ಸರ್ಕಾರಿ ಆಸ್ಪತ್ರೆಯಿಂದ ಖಾಸಗಿ ಆಸ್ಪತ್ರೆಗೆ ಕಳುಹಿಸುವುದನ್ನು ಉಳಿಸಬಹುದು. ಇದೆಲ್ಲಾ ಬಡವರಿಗೆ ಸಹಾಯವಾಗುವಂಥದ್ದು. ಹಾಗಾಗಿ ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ. ಬೇರೆ ಬೇರೆ ಜಿಲ್ಲೆಗಳಲ್ಲಿ ಮಾಡಲಿಕ್ಕೆ ಪ್ರಸ್ತಾವನೆಯಿದೆ. ನಮ್ಮ ಜಿಲ್ಲೆಗೆ ಮಾಡಲಿಕ್ಕೆ ಇಲ್ಲ ಎಂದು ಹೇಳುವಂಥದ್ದು ಸರಿಯಾದ ಕ್ರಮವಲ್ಲ. I am not ready to accept the answer given by the Government. ಮಾನ್ಯ ಸಚಿವರೊಂದಿಗೆ ಚರ್ಚಿಸಿದರೂ ಆಗಬಹುದು. This answer is a pervert answer. ಯಾರಾದರೂ ಕೊಡುತ್ತಾರೆಯೇ? ಗಮನ ಸೆಳೆಯುವ ಸೂಚನೆಗೆ "ಅಂತಹ ಪ್ರಸ್ತಾವನೆಯಿಲ್ಲ" ಎಂದು ನೀವು ಉತ್ತರ ಕೊಟ್ಟರೆ, ಅದರ ಉದ್ದೇಶ ಈಡೇರುವುದಿಲ್ಲ. ಅಲ್ಲಿ ಅವಶ್ಯಕತೆ ಇದೆ, ಅಲ್ಲಿಗೆ ಬೇಕು ಎಂದು ಹೇಳಲಿಕ್ಕಾಗಿ ನಾವು ಸರ್ಕಾರದ ಗಮನ ಸೆಳೆದಿರುತ್ತೇವೆ. ನೀವು ಮೊದಲೇ ಇಲ್ಲ ಎಂದು ಹೇಳಿದರೆ that is not the answer ಎಂದು ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಎನ್. ಎಸ್. ಬೋಸರಾಜು (ಸಭಾನಾಯಕರು):- ಮಾನ್ಯ ಸಭಾಪತಿಯವರೆ, ಗಮನ ಸೆಳೆಯುವ ಸೂಚನೆ ಹಾಗೂ ಅದಕ್ಕೆ ಸರ್ಕಾರ ನೀಡಿರುವ ಉತ್ತರವನ್ನು ತಾವು ಗಮನಿಸಿದ್ದೀರಿ. ಅವರ ಪ್ರಸ್ತಾವನೆಗೆ ಸರ್ಕಾರದ ಉತ್ತರ ಏನಿದೆಯೆಂಬುದನ್ನು ಹೇಳಿರುತ್ತಾರೆ. ಅಲ್ಲಿರುವಂತಹ ಪರಿಸ್ಥಿತಿಯನ್ನು ಅವಲೋಕನ ಮಾಡಿ ಕಿದ್ವಾಯಿ ಹಾಗೂ ಜಯದೇವ ಆಸ್ಪತ್ರೆಯ ಅವಶ್ಯಕತೆಯ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪಿಸಿದ್ದಾರೆ. ಸರ್ಕಾರ ಈ ಬಜೆಟ್‌ನಲ್ಲಿ ಏನೇನು ಪ್ರಾವಿಷನ್ ಮಾಡಿದೆ, ಯಾವ ಯಾವ ಜಿಲ್ಲೆಗಳಲ್ಲಿ ಏನೇನು ಮಾಡಬೇಕು ಎಂಬುದು ಸಹಜವಾಗಿ ಎಲ್ಲಾ ಇಲಾಖೆಗಳ ಮುಂದಿರುತ್ತದೆ. ಅವರು ಹಿರಿಯ ಸದಸ್ಯರಾಗಿದ್ದು, ಅವರಿಗೂ ಪರಿಸ್ಥಿತಿ ಗೊತ್ತಿದೆ. ವೈದ್ಯಕೀಯ ಶಿಕ್ಷಣ ಸಚಿವರು ಹಾಗೂ ಅವರೊಡನೆ ಚರ್ಚೆ ಮಾಡಿ ಮುಂಬರುವ ದಿನಗಳಲ್ಲಿ ಯಾವ ರೀತಿ ಇದನ್ನು ಆದ್ಯತೆಯ ಮೇಲೆ ತೆಗೆದುಕೊಳ್ಳಬೇಕು ಎಂದು ಪ್ರಯತ್ನ ಮಾಡಲಾಗುವುದು.

ಶ್ರೀ ಐವನ್ ಡಿಸೋಜ:- ಮಾನ್ಯ ಸಭಾಪತಿಯವರೆ. ಕನಿಷ್ಟ ಪಕ್ಷ ಮಾನ್ಯ ಸಚಿವರು ಈ ಬಗ್ಗೆ ವರದಿಯನ್ನು ತರಿಸಿಕೊಂಡು ಪರಿಶೀಲನೆ ಮಾಡಲಾಗುವುದು ಎಂದು ಉತ್ತರವನ್ನು ನೀಡಬಹುದಿತ್ತು.

ವೈಸ್ ಛೇರ್ಮನ್:- ಮಾನ್ಯ ಸಭಾನಾಯಕರೆ, ಮಲೆನಾಡು, ಕರಾವಳಿ ಎರಡೂ ಭಾಗಗಳಿಂದ ಚಿಕಿತ್ಸೆಗಾಗಿ ಜನರು ಅಲ್ಲಿಗೆ ಬರುತ್ತಾರೆ.

ಶ್ರೀ ಐವನ್ ಡಿ'ಸೋಜ:- ಹೌದು ಮಾನ್ಯ ಸಭಾಪತಿಯವರೆ, ಆದ್ದರಿಂದ ಮಾನ್ಯ ಸಚಿವರು ಇದನ್ನು consider ಮಾಡಬೇಕು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಎನ್. ಎಸ್. ಬೋಸರಾಜು:– ಮಾನ್ಯ ಸಭಾಪತಿಯವರೆ, ಪ್ರಸ್ತಾವನೆ ಇಲ್ಲ ಎಂದರೆ ಪ್ರಸ್ತುತ ಸರ್ಕಾರದ ಮುಂದೆ ಆಗಲೀ ಅಥವಾ ಸಂಬಂಧಪಟ್ಟ ಇಲಾಖೆಯ ಮುಂದಾಗಲೀ ಇಲ್ಲ ಎಂದು ನಾನು ಹೇಳಿದ್ದೇನೆ.

ಶ್ರೀ ಐವನ್ ಡಿಸೋಜ:– ನನ್ನ ಕಳಕಳಿ ಇರುವುದು ನೀವು ಇದನ್ನು consider ಮಾಡಬೇಕು. ನಾನು ನಿಮ್ಮನ್ನು ಈ ಮೂಲಕ ಒತ್ತಾಯ ಮಾಡುತ್ತೇನೆ.

ಶ್ರೀ ಎನ್. ಎಸ್. ಬೋಸರಾಜು:– ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರ ಜೊತೆಯಲ್ಲಿ ಮಾತನಾಡಿ ಮಾಡಿಕೊಡುವ ಒಂದು ಪ್ರಯತ್ನವನ್ನು ಮಾಡೋಣ.

ವೈಸ್ ಛೇರ್ಮನ್:– ಮುಂದೆ ನಿಯಮ ೩೩೦ರ ಅಡಿಯ ವಿಷಯಗಳನ್ನು ತೆಗೆದುಕೊಳ್ಳೋಣ.

ಶ್ರೀ ಎನ್.ಎಸ್.ಬೋಸರಾಜು:– ಮಾನ್ಯ ಸಭಾಪತಿಯವರೆ, ಅದಕ್ಕೂ ಮುಂಚೆ ಮಾನ್ಯ ಶಾಂತಾರಾಮ ಬುಡ್ನ ಸಿದ್ದಿಯವರ ವಿಷಯವೊಂದಿದೆ.

ಶ್ರೀ ಶಾಂತಾರಾಮ ಬುಡ್ನ ಸಿದ್ದಿ:– ಮಾನ್ಯ ಸಭಾಪತಿಯವರೆ, ಅದರಲ್ಲಿ ಎರಡು ವಿಷಯಗಳಿಗೆ ಉತ್ತರ ಸಿಕ್ಕಿದೆ.

ವೈಸ್ ಛೇರ್ಮನ್:– ಮಾನ್ಯ ಶಾಂತಾರಾಮ್ ಅವರೇ, ನೀವು ಸರ್ಕಾರದ ಗಮನ ಸೆಳೆಯಿರಿ.

ಶ್ರೀ ಎನ್. ಎಸ್. ಬೋಸರಾಜು:– ಮಾನ್ಯ ಸಭಾಪತಿಯವರೆ, ಅವರು ಪ್ರಶ್ನೋತ್ತರ ವೇಳೆಯಲ್ಲಿ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ ಎಂದು ಹೇಳುತ್ತಿದ್ದಾರೆ.

ಶ್ರೀ ಶಾಂತಾರಾಮ ಬುಡ್ನ ಸಿದ್ದಿ:– ಮಾನ್ಯ ಸಭಾಪತಿಯವರೆ, ಎರಡೂ ಒಂದೇ ವಿಷಯವಿತ್ತು. ಸರ್ಕಾರ ಉತ್ತರ ಕೊಟ್ಟಿದೆ.

ವೈಸ್ ಛೇರ್ಮನ್:– ಮತ್ತೆ ಮಾತನಾಡುತ್ತೇನೆ ಎಂದರೆ ಆಗುವುದಿಲ್ಲ. ಗಮನ ಸೆಳೆಯುವುದರಲ್ಲಿ ನಿಮ್ಮ ಹೆಸರಿದೆ.

ಶ್ರೀ ಎನ್. ಎಸ್. ಬೋಸರಾಜು:– ಪುನಃ ಅದೇ ಉತ್ತರವನ್ನು ನೀಡಬೇಕು.

ವೈಸ್ ಛೇರ್ಮನ್:– ಮಾನ್ಯ ಶಾಂತಾರಾಮ ಅವರೆ, ನೀವು ಗಮನ ಸೆಳೆಯಿರಿ. ಅವರು ಉತ್ತರ ಕೊಡುತ್ತಾರೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ) ವಿಷಯ: ರಾಜ್ಯದಲ್ಲಿ ಬುಡಕಟ್ಟು ಮತ್ತು ವನವಾಸಿ ಜನಾಂಗಗಳು ವಾಸಿಸುವ ಸ್ಥಳಗಳಲ್ಲಿ ದೇವಸ್ಥಾನಗಳ ನಿರ್ಮಾಣಕ್ಕಾಗಿ ಅನುದಾನ ಮಂಜೂರು ಮಾಡುವ ಬಗ್ಗೆ

***

ಶ್ರೀ ಶಾಂತಾರಾಮ ಬುಡ್ನ ಸಿದ್ದಿ:- ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. ರಾಜ್ಯದಲ್ಲಿ ಬುಡಕಟ್ಟು ಮತ್ತು ವನವಾಸಿ ಜನಾಂಗಗಳು ವಾಸಿಸುವ ಸ್ಥಳಗಳಲ್ಲಿ ದೇವಸ್ಥಾನಗಳ ನಿರ್ಮಾಣಕ್ಕಾಗಿ ಅನುದಾನವನ್ನು ಮಂಜೂರು ಮಾಡುವ ಬಗ್ಗೆ ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರ ಮುಂದೆ ಬೆಳಗ್ಗೆ ಪ್ರಸ್ತಾಪ ಮಾಡಿದ್ದೆನು. ನಾನು ಎಲ್ಲಾ ವಿಷಯಗಳನ್ನು ಉಲ್ಲೇಖ ಮಾಡಿದ್ದೇನೆ. ಒಂದು ವಿಷಯ ಬಿಟ್ಟು ಹೋಗಿರುವುದನ್ನು ಈಗ ಹೇಳಬಯಸುತ್ತೇನೆ. ನಾನು ಪೂಜಾ ಸ್ಥಳಗಳ ಬಗ್ಗೆ ಮಾತನಾಡಿದ್ದೇನೆ. ಸ್ಮಶಾನಗಳ ಬಗ್ಗೆ ಮಾತನಾಡಿದ್ದೇನೆ.

ಬುಡಕಟ್ಟು ಜನಾಂಗದವರ ಹಾಡು, ಕುಣಿತಗಳು ಇವೆಲ್ಲವೂ ಅವರ ಜೀವನವನ್ನು ಬಿಂಬಿಸುವ ಕಲೆಗಳಾಗಿವೆ. ಅದನ್ನು ಉಳಿಸುವುದಕ್ಕಾಗಿ ಸರ್ಕಾರ ಯೋಜನೆ ಇತ್ಯಾದಿಗಳನ್ನು ರೂಪಿಸಬೇಕೆಂದು ಹಾಗೂ ಅನುದಾನ ಬಿಡುಗಡೆ ಮಾಡಬೇಕೆಂದು ಅದಕ್ಕೆ ಸೇರಿಸಬಯಸುತ್ತೇನೆ. ಉಳಿದ ಎಲ್ಲಾ ವಿಚಾರಗಳಿಗೆ ಸರ್ಕಾರದಿಂದ ಉತ್ತರ ಸಿಕ್ಕಿದೆ.

ಶ್ರೀ ಎನ್. ಎಸ್. ಬೋಸರಾಜು:- ಮಾನ್ಯ ಸಭಾಪತಿಯವರೆ. ಅವರು ಪ್ರಸ್ತಾವ ಮಾಡಿರುವ ವಿಷಯಗಳು ಸರ್ಕಾರದ ಗಮನದಲ್ಲಿವೆ. ಬರುವ ದಿನಗಳಲ್ಲಿ ಅಗತ್ಯ ಕ್ರಮ ಕೈಗೊಳ್ಳುತ್ತೇವೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿ 2011-12ನೇ ಸಾಲಿನಿಂದ ಗಿರಿಜನ ಉಪಯೋಜನೆ ಜಾರಿಗೊಳಿಸಿದ್ದು, ಸದರಿ ಕಾರ್ಯಕ್ರಮದಡಿ ಗಿರಿಜನ/ಪರಿಶಿಷ್ಟ ಪಂಗಡದವರು ವಾಸಿಸುವ ಸ್ಥಳಗಳಲ್ಲಿನ ದೇವಾಲಯ, ಪ್ರಾರ್ಥನಾ ಮಂದಿರಗಳ ನವ ನಿರ್ಮಾಣ/ಜೀರ್ಣೋದ್ಧಾರಕ್ಕಾಗಿ ವಿಧಾನ ಸಭಾ ಕ್ಷೇತ್ರವಾರು ಅನುದಾನವನ್ನು ಸರ್ಕಾರದ ಆದೇಶ ಸಂಖ್ಯೆ:ಕಂಇ 189 ಮುಅಬಿ 2011, ದಿನಾಂಕ:19.09.2011ರಲ್ಲಿನ ಮಾರ್ಗಸೂಚಿಗಳನ್ವಯ ಬಿಡುಗಡೆ ಮಾಡಲಾಗುತ್ತಿದೆ.

ಧಾರ್ಮಿಕ ದತ್ತಿ ಇಲಾಖೆಯಿಂದ ಬುಡಕಟ್ಟು ಮತ್ತು ವನವಾಸಿ ಜನಾಂಗಗಳ ಪರಂಪರೆ, ಸಂಸ್ಕೃತಿ, ಆಚಾರ, ವಿಚಾರ ಮತ್ತು ಧಾರ್ಮಿಕತೆ ಉಳಿಸಲು ದಿನಾಂಕ:19.09.2011ರ ಸರ್ಕಾರದ ಆದೇಶದನ್ವಯ ಗಿರಿಜನ ಉಪಯೋಜನೆಯಡಿ ಒದಗಿಸಲಾಗುವ ಅನುದಾನವನ್ನು ಗಿರಿಜನ / ಪರಿಶಿಷ್ಟ ಪಂಗಡದವರು ವಾಸಿಸುವ ಸ್ಥಳಗಳಲ್ಲಿ ಅಥವಾ ಸದರಿ ಸಮುದಾಯದವರು ವಾಸಿಸುವ ಸ್ಥಳಕ್ಕೆ ಸಮೀಪದಲ್ಲಿ ದೇವಾಲಯ, ಪ್ರಾರ್ಥನಾ ಮಂದಿರ ಅಥವಾ ಕಲ್ಯಾಣ ಮಂಟಪ/ಸಮುದಾಯ ಭವನವನ್ನು ನಿರ್ಮಿಸಲು ಅಥವಾ ಅವುಗಳ ಜೀರ್ಣೋದ್ಧಾರಕ್ಕಾಗಿ ಬಳಸಲು ಬಿಡುಗಡೆ ಮಾಡಲು ಅವಕಾಶ ಕಲ್ಪಿಸಲಾಗಿದೆ.

ಗಿರಿಜನ/ಪರಿಶಿಷ್ಟ ಪಂಗಡದವರು ವಾಸಿಸುವ ಸ್ಥಳಗಳಲ್ಲಿ ದೇವಾಲಯಗಳು ಅರಣ್ಯ ವ್ಯಾಪ್ತಿಯಲ್ಲಿದ್ದಲ್ಲಿ ಅರಣ್ಯ ಇಲಾಖೆಯ ಅನುಮತಿ ಪಡೆಯಬೇಕಾಗಿರುತ್ತದೆ.

ಗಿರಿಜನ ಉಪ ಯೋಜನೆಯಡಿ ಕಳೆದ 02 ವರ್ಷಗಳಲ್ಲಿ ಈ ಯೋಜನೆಯಡಿ ಬಿಡುಗಡೆ ಮಾಡಲಾದ ಅನುದಾನದ ವಿವರ ಕೆಳಕಂಡಂತಿದೆ.

(ರೂ.ಲಕ್ಷಗಳಲ್ಲಿ)

ಕ್ರಸ	ಯೋಜನೆ	2023-24	2024-25
1.	ಗಿರಿಜನ ಉಪ ಯೋಜನೆ	119.97	119.97
2.	ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ 2013ರಡಿ ಬಳಕೆಯಾಗದೇ ಇರುವ ಮೊತ್ತ ಇದರಡಿ ಗಿರಿಜನ ಉಪ ಯೋಜನೆಗೆ	712.64	116.99
	ಒಟ್ಟು	**832.61**	**236.96**

ಸದರಿ ಯೋಜನೆಯಡಿ ವಿಧಾನ ಸಭಾ ಕ್ಷೇತ್ರವಾರು ಅನುದಾನ ಬಿಡುಗಡೆ ಮಾಡಲಾಗಿದ್ದು, ಕಳೆದ 02 ವರ್ಷಗಳಲ್ಲಿ ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ಬಿಡುಗಡೆ ಮಾಡಲಾದ ಅನುದಾನದ ವಿವರ ಕೆಳಕಂಡಂತಿದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ರೂ.ಲಕ್ಷಗಳಲ್ಲಿ)

ಕ್ರಸ	ಯೋಜನೆ	2023-24	2024-25
1.	ಗಿರಿಜನ ಉಪ ಯೋಜನೆ	0.53	0.53
2.	ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ 2013ರಡಿ ಬಳಕೆಯಾಗದೇ ಇರುವ ಮೊತ್ತ ಇದರಡಿ ಗಿರಿಜನ ಉಪ ಯೋಜನೆಗೆ ಲೆಕ್ಕ ಶೀರ್ಷಿಕೆ "2053-00-800-0-12 (423)	3.18	0.52
	ಒಟ್ಟು	3.71	1.05

ಮೇಲ್ಕಂಡಂತೆ ವಿಧಾನಸಭಾ ಕ್ಷೇತ್ರವಾರು ಅನುದಾನವನ್ನು ಹಂಚಿಕೆ ಮಾಡಿ, ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗುತ್ತಿದ್ದು, ಈ ಅನುದಾನದಡಿ ಸದರಿ ಯೋಜನೆಯ ಮಾರ್ಗಸೂಚಿಯನ್ವಯ ಜಿಲ್ಲಾ ಹಂತದಲ್ಲಿರುವ ಜಿಲ್ಲಾ ಸಮಿತಿಗಳಲ್ಲಿ ಕಾಮಗಾರಿಗಳನ್ನು ಆಯ್ಕೆ ಮಾಡಿ ನಿರ್ವಹಿಸಬೇಕಾಗಿದ್ದು, ಅದರನ್ವಯ ವಿಧಾನಸಭಾ ಕ್ಷೇತ್ರವಾರು ಪರಿಶಿಷ್ಟ ಪಂಗಡದವರ ದೇವಾಲಯಗಳ ಅಭಿವೃದ್ಧಿ/ಜೀರ್ಣೋದ್ಧಾರ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿರುತ್ತದೆ.

ವೈಸ್ ಛೇರ್ಮನ್:– ಈಗ ನಿಯಮ ೩೩೦ ತೆಗೆದುಕೊಳ್ಳಲಾಗುವುದು.

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೆ, ಗೃಹ ಇಲಾಖೆಯಲ್ಲಿ ಅನೇಕ ವೈಫಲ್ಯವನ್ನು ನಾವು ಇತ್ತೀಚೆಗೆ ಕಾಣುತ್ತಿದ್ದೇವೆ.

ವೈಸ್ ಛೇರ್ಮನ್:– ಈಗ ತೆಗೆದುಕೊಳ್ಳಲಾಗುವ ವಿಷಯ ಮಾನ್ಯ ರವಿಕುಮಾರ್, ಮಾನ್ಯ ನವೀನ್, ಮಾನ್ಯ ಡಿ.ಎಸ್.ಅರುಣ್‌ರವರು ಪ್ರಸ್ತಾಪ ಮಾಡಿರುವಂಥದ್ದು. ಉತ್ತರ ಕೊಡಲು ಮಂತ್ರಿಗಳಿದ್ದಾರೆ.

ಶ್ರೀ ಕೆ.ಎಸ್.ನವೀನ್:– ಆಗಲಿ ಮಾನ್ಯ ಸಭಾಪತಿಯವರೆ, ನಾವು ಮಾತನಾಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

10. ನಿಯಮ 330ರ ಮೇರೆಗೆ ಸಾರ್ವಜನಿಕ ಮಹತ್ವವುಳ್ಳ ಜರೂರು ವಿಷಯದ ಮೇಲೆ ಚರ್ಚೆ

ವಿಷಯ:- ಕಾರ್ಮಿಕ ಇಲಾಖಾ ವತಿಯಿಂದ ಶಾಲೆಗಳನ್ನು ತೆರೆಯಲು ಮೀಸಲಿಟ್ಟಿರುವ ರೂ.750 ಕೋಟಿಗಳ ಅನುದಾನವನ್ನು ಸರ್ಕಾರಿ ಶಾಲೆಗಳಿಗೆ ಬಳಕೆ ಮಾಡಿಕೊಂಡು ಕಾರ್ಮಿಕರ ಮಕ್ಕಳಿಗೆ ಪ್ರವೇಶಾತಿಯಲ್ಲಿ ಅವಕಾಶ ಕಲ್ಪಿಸುವುದು ಹಾಗೂ ಬಡ, ದಲಿತ, ಹಿಂದುಳಿದ ಮಹಿಳಾ ಕಾರ್ಮಿಕರ ಉನ್ನತಿಗಾಗಿ ಮೀಸಲಿಟ್ಟಿರುವ ಹಣದ ಸದ್ಬಳಕೆ ಮಾಡಿಕೊಳ್ಳುವ ಕುರಿತು

***

ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- ಮಾನ್ಯ ಸಭಾಪತಿಯವರೆ, ನಿಯಮ 330ರಡಿಯಲ್ಲಿ ಕಾರ್ಮಿಕ ಇಲಾಖೆ ವತಿಯಿಂದ ವಿಶೇಷವಾಗಿ ಕಾರ್ಮಿಕರ ಮಕ್ಕಳಿಗಾಗಿ 32 ಶಾಲೆಗಳನ್ನು ಸುಮಾರು ರೂ.750 ಕೋಟಿ ವೆಚ್ಚದಲ್ಲಿ ತೆರೆಯುತ್ತಿರುವ ಬಗ್ಗೆ ಕಾರ್ಮಿಕ ಸಚಿವರಿಗೆ ಕೇಳಿದ್ದೆವು. ಉತ್ತರವನ್ನು ಇಂದು ಒದಗಿಸಿದ್ದಾರೆ. ನಮ್ಮ ಪ್ರಶ್ನೆ ಇರುವುದು ಕಾರ್ಮಿಕ ಇಲಾಖೆ ಮತ್ತು ಇಲಾಖೆಯಲ್ಲಿರುವ ಎಲ್ಲಾ ಯೋಜನೆಗಳು ನಮ್ಮ ರಾಜ್ಯದಲ್ಲಿರುವ ಲಕ್ಷಾಂತರ ಕಾರ್ಮಿಕರಿಗಾಗಿ ಮತ್ತು ಕಾರ್ಮಿಕರ ಬದುಕನ್ನು ಕಷ್ಟದಿಂದ ಮೇಲೆತ್ತುವ ನಿಟ್ಟಿನಲ್ಲಿ ವಿಶೇಷವಾಗಿ ಕಾರ್ಮಿಕ ಸಚಿವಾಲಯ ಕೆಲಸ ಮಾಡಬೇಕಾಗಿದೆ. ಆದರೆ ಕಾರ್ಮಿಕರ ಪರವಾಗಿ ಕೆಲಸ ಮಾಡಬೇಕಾದ ಇಲಾಖೆಯು ಶಿಕ್ಷಣ ಇಲಾಖೆ ಮಾಡಬೇಕಾದ ಕೆಲಸಕ್ಕೆ ಕೈಹಾಕಿದೆ. ರೂ.750 ಕೋಟಿ ವೆಚ್ಚದಲ್ಲಿ ಕಾರ್ಮಿಕರ ಮಕ್ಕಳಿಗಾಗಿ ಜಿಲ್ಲೆಗೊಂದು ಶಾಲೆಯನ್ನು ತೆರೆಯುತ್ತೇವೆ ಎಂದು ಹೇಳಿದ್ದಾರೆ.

ನಾನು ಮಾನ್ಯ ಸಚಿವರಲ್ಲಿ ಕೇಳಬಯಸುವುದೇನೆಂದರೆ, ಈಗಾಗಲೇ ಸರ್ಕಾರ ಅನೇಕ ಶಾಲೆಗಳನ್ನು ನಡೆಸುತ್ತಿದೆ. ನಮ್ಮ ಪ್ರಾಥಮಿಕ ಶಾಲೆಗಳಿಂದ ಪ್ರಾರಂಭಿಸಿ ಮೊರಾರ್ಜಿ ಶಾಲೆಗಳಿರಬಹುದು.

(ಮುಂದು)

(686) 13-08-2025 (4.30) ಕೆಜಿ:ಎಕೆ (ವೈಸ್ ಛೇರ್ಮನ್‌ರವರ ಉಪಸ್ಥಿತಿ)

ಶ್ರೀ ಕೆ.ಎಸ್.ನವೀನ್ (ಮುಂದು):-

ಬೇರೆ ಬೇರೆ ವಸತಿ ಶಾಲೆಗಳು ಇರಬಹುದು, ಈ ತರಹದ ಅನೇಕ ಶಾಲೆಗಳನ್ನು ಸರ್ಕಾರ ನಡೆಸುತ್ತಿದೆ. ವಿಶೇಷವಾಗಿ ಅದರಲ್ಲಿ ಬಡವರು, ರೈತರು ಹಾಗೂ ಕಾರ್ಮಿಕರು ಈ ತರಹದ ಯಾರಿಗೆ ಶಿಕ್ಷಣಕ್ಕೆ ನಾವು ಹೆಚ್ಚು ಒತ್ತನ್ನು ಕೊಡಬೇಕು ಎನ್ನುವಂತಹವರ ಮಕ್ಕಳಿಗೆ ಅಲ್ಲಿ ಬಂದು ಶಿಕ್ಷಣವನ್ನು ಕೊಡಬೇಕೆಂದು ಹೇಳಿ ನಮ್ಮ ರಾಜ್ಯ ಸರ್ಕಾರ ಅನೇಕ ಶಾಲೆಗಳನ್ನು ನಡೆಸುತ್ತಿದೆ. ನಮ್ಮ ಇಡೀ ರಾಜ್ಯದಲ್ಲಿ ಅತಿಹೆಚ್ಚು ಸರ್ಕಾರಿ ಹುದ್ದೆಗಳನ್ನು ಸೃಷ್ಟಿ ಮಾಡಿರುವಂತಹ ಇಲಾಖೆಯಲ್ಲಿ No.1 ಸ್ಥಾನದಲ್ಲಿರುವಂತಹದ್ದು ಶಿಕ್ಷಣ ಇಲಾಖೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೇ, ಅದಲ್ಲದೇ, ಕೇಂದ್ರ ಸರ್ಕಾರ ಸಹ ವಸತಿ ಶಾಲೆಗಳನ್ನು ನಡೆಸುತ್ತಿದೆ. ಈಗಾಗಲೇ ಇಷ್ಟು ಶಾಲೆಗಳು ಇದ್ದು, ಹೊಸದಾಗಿ ಮತ್ತೊಂದು ಪ್ರಸ್ತಾವನೆಯನ್ನು ತಂದು 750 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿ ಜಿಲ್ಲೆಗೊಂದು ಕಾರ್ಮಿಕರ ಮಕ್ಕಳಿಗಾಗಿಯೇ ಒಂದು ಪ್ರತ್ಯೇಕವಾದ ಶಾಲೆಯನ್ನು ಮಾಡುತ್ತೇವೆ ಎನ್ನುವಂತಹ ಯೋಚನೆ ಏಕೆ? ಆ ರೀತಿ ಮಾಡುವುದರಿಂದ ನಮ್ಮ ಇತರೆ ಶಾಲೆಗಳು ಏನಿವೆ, ಇವರು ಕಾರ್ಮಿಕ ಇಲಾಖೆಯಿಂದ ಇತರೆ ಶಾಲೆಗಳನ್ನು ಸಬಲೀಕರಣ ಮಾಡಬಹುದು. ಇತರೆ ಶಾಲೆಗಳಿಗೆ ಕಾರ್ಮಿಕರ ಮಕ್ಕಳನ್ನು ಸೇರಿಸಬಹುದು. ಕಾರ್ಮಿಕರ ಮಕ್ಕಳು ಶಾಲಾ ಶಿಕ್ಷಣದಿಂದ ವಂಚಿತರಾಗದ ರೀತಿಯಲ್ಲಿ ಕಾರ್ಮಿಕ ಇಲಾಖೆ ಒಂದು ವಿಶೇಷವಾದ ಅಭಿಯಾನವನ್ನು ಪ್ರಾರಂಭದಲ್ಲಿಯೇ ರೂಪಿಸಿ ಪ್ರತಿಯೊಬ್ಬ ಕಾರ್ಮಿಕರ ಮಕ್ಕಳು ಸಹ ಶಾಲೆಗೆ ಹೋಗಿ ಸುಶಿಕ್ಷಿತರಾಗುತ್ತಿದ್ದಾರೆ ಎನ್ನುವ ರೀತಿಯಲ್ಲಿ ಅವರು ಅಭಿಯಾನವನ್ನು ನಿರ್ಮಾಣ ಮಾಡಬಹುದು ಎನ್ನುವಂತಹದ್ದು ನಮ್ಮ ಈ ಪ್ರಶ್ನೆಯ ಉದ್ದೇಶವಾಗಿದೆ.

ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಅವರ ಉತ್ತರದಲ್ಲಿ 'ಶ್ರಮಿಕ ವಸತಿ ಶಾಲೆಗಳನ್ನು ಪ್ರಾರಂಭಿಸಲು ಕ್ರಮಗೊಳ್ಳಲಾಗುತ್ತಿದೆ' ಎಂದು ತಿಳಿಸಿದ್ದಾರೆ. Model Welfare Scheme ನ ಸುತ್ತೋಲೆಯನ್ನು ಕೇಂದ್ರ ಸರ್ಕಾರ ಕೊಟ್ಟಿದೆ. ಇದನ್ನು ಆ ಯೋಜನೆಯಡಿಯಲ್ಲಿ ಮಾಡುತ್ತಿದ್ದೇವೆಂದು ಹೇಳಿದ್ದಾರೆ. ಈಗ ನಮ್ಮ ಶಾಲಾ ಶಿಕ್ಷಣ ಇಲಾಖೆಯಲ್ಲಿಯೇ ಸಾಕಷ್ಟು ಶಾಲೆಗಳಿಗೆ ಅನುದಾನದ ಕೊರತೆಯಿಂದಾಗಿ classrooms ಇಲ್ಲ, ಯಾವುದೇ ಮೂಲಭೂತ ಸೌಕರ್ಯದ ವ್ಯವಸ್ಥೆಗಳು ಇಲ್ಲ. ಅನೇಕ ಶಾಲೆಗಳನ್ನು ಮುಚ್ಚುವಂತಹ ಪರಿಸ್ಥಿತಿ ಬಂದಿದೆ. ಏಕೆಂದರೆ, ಅಲ್ಲಿ ಸರಿಯಾದ ರೀತಿಯಲ್ಲಿ ಮೂಲಭೂತ ಸೌಕರ್ಯಗಳು ಇಲ್ಲವೆಂದು ಅಲ್ಲಿನ ಮಕ್ಕಳನ್ನು ಖಾಸಗಿ ಶಾಲೆಗಳಿಗೆ ಕಳುಹಿಸಿದ್ದಾರೆಂದು ಕಳೆದ ಅಧಿವೇಶನದಲ್ಲಿ ನಾನೇ ಮಾತನಾಡಿ ಹೇಳಿದ್ದೇನೆ. ಸರ್ಕಾರಿ ಶಾಲೆಗಳಿಗೆ 15% ರಷ್ಟು ಶಾಲಾ ದಾಖಲಾತಿ ಕೊರತೆ ಆಗುತ್ತಿದೆ ಎಂದು ಹೇಳಿದ್ದೇನೆ. ಅಂದರೆ, ಉದ್ದೇಶ ಕೇಂದ್ರ ಸರ್ಕಾರದ್ದು. ನಮ್ಮ ದೇಶದಲ್ಲಿ ಇವತ್ತು ಸುಮಾರು ಕಾರ್ಮಿಕರು ವಲಸೆ ಹೋಗುವಂತಹವರು ಇದ್ದಾರೆ. ಅವರು ವಲಸೆ ಹೋದಂತಹ ಸಂದರ್ಭದಲ್ಲಿ ಅವರ ಮಕ್ಕಳನ್ನು ವಸತಿ ಶಾಲೆಗೆ ಬಿಟ್ಟು, ಆ ಮಕ್ಕಳು ವಸತಿ ಶಾಲೆಗಳಲ್ಲಿ ಇರಲಿ, ಇವರು ಕಾಲಕಾಲಕ್ಕೆ ಎಲ್ಲಿಗೆ ಹೋದರೆ ಕೆಲಸ ಸಿಗುತ್ತದೆ ಅಲ್ಲಿ ಕೆಲಸ ಮಾಡಿ ವಾಪಸ್ಸು ಹೋಗುವಷ್ಟರಲ್ಲಿ ಮಕ್ಕಳು ಹೊರಗಡೆ ತಮ್ಮ ಜೊತೆಗೆ ಬರದೆ, ಕೊನೆಯ ಪಕ್ಷ ಶಾಲೆಯಲ್ಲಿ ಇರಬಹುದು ಎನ್ನುವ ಕಾರಣಕ್ಕೆ ಶ್ರಮಿಕ ವಸತಿ ಶಾಲೆಗಳನ್ನು ಮಾಡಿರಬಹುದು.

ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯದಿಂದ ಬೇರೆ ಕಡೆಗೆ ವಲಸೆ ಹೋಗುವಂತಹವರ ಸಂಖ್ಯೆಗಿಂತ, ನಮ್ಮ ರಾಜ್ಯಕ್ಕೆ ಹೊರಗಡೆಯಿಂದ ವಲಸೆ ಬರುವಂತಹ ಕಾರ್ಮಿಕರ ಸಂಖ್ಯೆಯೇ ಹೆಚ್ಚಿಗೆ ಇದೆ. ಹೀಗಾಗಿ, ನಮ್ಮ ರಾಜ್ಯದಿಂದ ಹೊರಗಡೆ ಹೋಗುವಂತಹ ಕಾರ್ಮಿಕರ ಸಂಖ್ಯೆ ಬಹಳ ಕಡಿಮೆ ಇದೆ. ಉತ್ತರ ಭಾರತ ಮತ್ತು ಈಶಾನ್ಯ ಭಾರತದ ರಾಜ್ಯಗಳಿಂದ ಹೆಚ್ಚು ಬಿಹಾರ್, ಒರಿಸ್ಸಾ, ವೆಸ್ಟ್‌ಬೆಂಗಾಲ್, ಛತ್ತೀಸ್‌ಗಡ್ ಹಾಗೂ ಜಾರ್ಖಂಡ್‌ದಿಂದ ನಮ್ಮ ರಾಜ್ಯಕ್ಕೆ ಹೆಚ್ಚು ಕಾರ್ಮಿಕರು ವಲಸೆ ಬರುತ್ತಾರೆ. ಅದರಲ್ಲೂ ವಿಶೇಷವಾಗಿ ಈಶಾನ್ಯ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಾಜ್ಯಗಳಿಂದ ವಲಸೆ ಬರುತ್ತಾರೆ. ಆದರೆ, ನಮ್ಮ ರಾಜ್ಯದಲ್ಲಿ ಗೂಳೆ (ವಲಸೆ) ಹೋಗುವಂತಹದ್ದು ಕೇವಲ ತಾತ್ಕಾಲಿಕವಾಗಿರುತ್ತದೆ. ಸುಮಾರು 50 ರಿಂದ 60 ದಿವಸಗಳು ಹೋಗುತ್ತಾರೆ. ನಮ್ಮ ಬಯಲು ಸೀಮೆಯಿಂದ ಮಲೆನಾಡು ಭಾಗಕ್ಕೆ ಕಾಫಿ ಬೀಜ ಕೊಯ್ಯುವಂತಹ ಸಮಯದಲ್ಲಿ ಅಥವಾ ಮಣ್ಣಿನ ಕೆಲಸ ಮಾಡುವಂತಹದ್ದಕ್ಕೆ ಸುಮಾರು 40 ರಿಂದ 50 ದಿವಸಗಳ ಕಾಲ ಹೋಗುತ್ತಾರೆ. ಈ ರೀತಿ ವರ್ಷಾನುಗಟ್ಟಲೇ ವಲಸೆ ಹೋಗುವಂತಹ ಕಾರ್ಮಿಕರು ಬೇರೆ ರಾಜ್ಯಗಳಿಗೆ ಹೋಲಿಕೆ ಮಾಡಿದರೆ, ನಮ್ಮ ರಾಜ್ಯದಲ್ಲಿ ಇಲ್ಲ. ಇವತ್ತು ಸರ್ಕಾರಿ ಶಾಲೆಗಳನ್ನು ಸಬಲೀಕರಣ ಮಾಡುವುದಕ್ಕೆ ಬೇಕಾದರೆ, ಕಾರ್ಮಿಕ ಇಲಾಖೆಯಿಂದ ಹಣವನ್ನು ಪ್ರಾಥಮಿಕ ಶಿಕ್ಷಣ ಇಲಾಖೆಗೆ ಕೊಡಲಿ. ಅವರನ್ನೇ ಇನ್ನೂ ಗಟ್ಟಿಯಾಗಿರುವಂತಹ model ಶಾಲೆಗಳನ್ನು ಮಾಡಲಿ. KPS ಶಾಲೆಗಳನ್ನು ಮಾಡಲಿ. 750 ಕೋಟಿ ರೂಪಾಯಿಗಳ ಮೊತ್ತ ಇದು ಕಡಿಮೆ ಅಲ್ಲ. ಇವತ್ತು ಇಲಾಖೆ, ಇಲಾಖೆಗಳ ಮಧ್ಯೆ coordination ಸಮಸ್ಯೆ ಇದೆಯೋ ಏನೋ ನನಗೆ ಗೊತ್ತಿಲ್ಲ. ತಮ್ಮ ತಮ್ಮ ಇಲಾಖೆಗಳು ತಮಗೆ ಬೇಕಾದಂತಹ ಯೋಜನೆಗಳನ್ನು ತಮ್ಮಲ್ಲಿ ಇರುವಂತಹ ಅನುದಾನವನ್ನು ಬಳಕೆ ಮಾಡಿಕೊಂಡು ನಡೆಸುವಂತಹದಕ್ಕೆ ಮುಂದೆ ಹೋಗಿಬಿಡುತ್ತಾರೆ. ಆದರೆ. ಒಂದು ಇಲಾಖೆಯಲ್ಲಿ ಅನುದಾನದ ಕೊರತೆ ಇರುತ್ತದೆ. ಇನ್ನೊಂದು ಇಲಾಖೆಯಲ್ಲಿ ಅತಿಹೆಚ್ಚಾಗಿ ಅನುದಾನದ availability ಇರುತ್ತದೆ.

ಮಾನ್ಯ ಸಭಾಪತಿಯವರೇ, ನಾನು ತಮ್ಮ ಮೂಲಕ ಈ ಸದನದ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಮಾನ್ಯ ಸಚಿವರು ಅವರ ಇಲಾಖೆ ವತಿಯಿಂದ ಅನೇಕ ಬೇರೆ ಬೇರೆ ಯೋಜನೆಗಳಿಗೆ ಹಣ ಖರ್ಚು ಮಾಡುತ್ತಿದ್ದಾರೆ. ಈ ಹಣವನ್ನು ಖರ್ಚು ಮಾಡುವಂತಹದ್ದಕ್ಕೆ ತಾವು ತಡೆಯುವಂತಹ ಕೆಲಸವನ್ನು ಮಾಡಬೇಕು. ಏಕೆಂದರೆ, ಕಳೆದ ವಾರ ಮಾನ್ಯ ಸಚಿವರು ಕಾರ್ಮಿಕ ಇಲಾಖೆ ವತಿಯಿಂದ ಒಂದು ಸಮುದಾಯ ಭವನಕ್ಕೂ ಶಂಕುಸ್ಥಾಪನೆ ಒಂದು ಹಾಲ್‌ನಲ್ಲಿ ಮಾಡಿದ್ದಾರೆ. ಈಗಾಗಲೇ ಸರ್ಕಾರ ಈ ರೀತಿಯಾದಂತಹ ಯೋಜನೆಗಳಿಗೆ ಮಾಡಿದೆ. ಈ ಇಲಾಖೆಯಲ್ಲಿ ಹಣದ ಪೂರೈಕೆ ಹೆಚ್ಚಿಗೆ ಇದ್ದರೆ, ಅದನ್ನು ಬೇರೆ ಇಲಾಖೆಗೆ coordination ಮಾಡಲಿ. ಹಣವನ್ನು ಸದ್ಬಳಕೆ ಮಾಡಲಿ. ಮತ್ತೆ ಅದಕ್ಕೊಂದು ಹಾಲ್, ಮತ್ತೊಂದು ಶಾಲೆ, ಅಂದರೆ, ನಮ್ಮ Balance Sheet ನಲ್ಲಿ ವಾರ್ಷಿಕವಾಗಿ ನಮ್ಮ ಬಜೆಟ್‌ನಲ್ಲಿರುವಂತಹ ಹಣವನ್ನು ಯಾವ ರೀತಿ ಬೇಕೋ ಆ ರೀತಿ ಖರ್ಚು ಮಾಡಿ ಮುಗಿಸಬೇಕು ಎನ್ನುವಂತಹ ಉದ್ದೇಶಗಳು ಏನಾದರೂ ಇದ್ದರೆ, ದಯವಿಟ್ಟು ಅದನ್ನು ತಪ್ಪಿಸಿದರೆ ತೆರಿಗೆ ಕಟ್ಟಿರುವಂತಹ ಜನರಿಗೆ ನ್ಯಾಯವನ್ನು ಕೊಟ್ಟಂತೆ ಆಗುತ್ತದೆ.

ಮಾನ್ಯ ಸಭಾಪತಿಯವರೇ, ಕಾರ್ಮಿಕರ ಮಕ್ಕಳಿಗೆ ಒಳ್ಳೆಯ ಶಿಕ್ಷಣವನ್ನು ಕೊಡುವಂತಹ ದೃಷ್ಟಿಯಿಂದ ನಮ್ಮ ಸರ್ಕಾರದ ಪ್ರಾಥಮಿಕ ಶಿಕ್ಷಣ ಇಲಾಖೆ ಹಾಗೂ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ವಸತಿ ಶಾಲೆಗಳು ನಡೆಯುತ್ತಿವೆ. ಅದು ಮುರಾರ್ಜಿ ದೇಸಾಯಿ ವಸತಿ ಶಾಲೆ ಇರಬಹುದು, ಸಮಾಜ ಕಲ್ಯಾಣ ಇಲಾಖೆಯಿಂದ ನಡೆಯುತ್ತಿರುವ ಡಾ। ಬಾಬಾ ಸಾಹೇಬ್ ಅಂಬೇಡ್ಕರ್ ವಸತಿ ಶಾಲೆಗಳು ಇರಬಹುದು, ತಾವು ಅಲ್ಲಿಗೆ ಕಾರ್ಮಿಕರ ಮಕ್ಕಳನ್ನು ಕಳುಹಿಸುವಂತಹ ವ್ಯವಸ್ಥೆಯನ್ನು ಮಾಡಬಹುದಾಗಿದ್ದು, ತಾವು ಅವರಿಗೆ ಶುಲ್ಕವನ್ನು ಕಟ್ಟಿ, ಅವರಿಗೆ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬೇಕಾದ ಎಲ್ಲಾ ವ್ಯವಸ್ಥೆಗಳನ್ನು ಮಾಡಿಕೊಡಿ. ಅಲ್ಲಿ ಮಕ್ಕಳಿಗೆ ಅಭಿಯಾನವನ್ನು ಮಾಡಲಿ. ಈ ಎಲ್ಲವನ್ನೂ ಮಾಡುವುದರ ಮೂಲಕ ಈ ರಾಜ್ಯದ ಯಾವುದೇ ಒಬ್ಬ ಬಡ ಕಾರ್ಮಿಕನ ಮಗ ಅಥವಾ ಮಗಳು ಶಿಕ್ಷಣದಿಂದ ವಂಚಿತರಾಗದಿರುವ ರೀತಿಯಲ್ಲಿ ತಮ್ಮ ಇಲಾಖೆ ವತಿಯಿಂದ ಅದನ್ನು ಗಮನಿಸಿದರೆ ಖಂಡಿತವಾಗಿ ಇವತ್ತು ಈ ರಾಜ್ಯದಲ್ಲಿ ಶ್ರಮ ಜೀವಿಗಳಾಗಿರುವಂತಹ ಕಾರ್ಮಿಕರು ಸರ್ಕಾರಕ್ಕೆ ಶ್ಲಾಘನೆಯನ್ನು ಮಾಡುತ್ತಾರೆ. ಆದರೆ, ಮತ್ತೊಂದು ಯೋಜನೆಯನ್ನು ತಂದು ಅದಕ್ಕೆ ನೂರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಅದರಲ್ಲಿ ಮತ್ತೆ ಸೋರಿಕೆಯಾಗುವಂತಹದ್ದು ಅಥವಾ ಭ್ರಷ್ಟಾಚಾರ ನಡೆಯುವಂತಹದ್ದಕ್ಕೆ ಅವಕಾಶವನ್ನು ಕೊಡಬಾರದು. ಇದು ಮಾಡಿರುವಂತಹ ನೀತಿ ಸರಿ ಇಲ್ಲ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಮಾನ್ಯ ಸಭಾಪತಿಯವರೇ, ಕಾರ್ಮಿಕ ಇಲಾಖೆಗೆ ಸಂಬಂಧಪಟ್ಟಂತೆ ನಮ್ಮದ್ದು ಮತ್ತೊಂದು ಪ್ರಶ್ನೆ ಇದೆ. ನಾನು ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಈಗಾಗಲೇ ನಾವು ಕೇಳಿರುವಂತಹ ಪ್ರಶ್ನೆಗೆ ಸೀಮಿತವಾಗಿರುವಂತಹ ವಿಷಯವನ್ನು ಮಾತ್ರ ಮಾತನಾಡುತ್ತೇನೆ. ಏಕೆಂದರೆ, ಮತ್ತೆ ಅದಕ್ಕೆ ಬೇರೆ ರೀತಿಯಾದಂತಹದ್ದನ್ನು ಹೇಳಿ ಸದನದ ದಾರಿಯನ್ನು ತಪ್ಪಿಸುವಂತಹ ಕೆಲಸವನ್ನು ನಾನು ಮಾಡುವುದಿಲ್ಲ. ಆದರೆ, ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ಸಚಿವರು ವಸತಿ ಶಾಲೆಯನ್ನು ಕಾರ್ಮಿಕರ ವಸತಿ ಶಾಲೆಯನ್ನಾಗಿ ನಿರ್ಮಾಣ ಮಾಡುವುದಕ್ಕೆ ಹೊರಟಿದ್ದಾರೆ. ತಾವು ಕೇಂದ್ರ ಸರ್ಕಾರದ ಆದೇಶವನ್ನು ಉಲ್ಲೇಖ ಮಾಡಿದ್ದರೂ ಸಹ, ಇದನ್ನು ಶಾಲಾ ಶಿಕ್ಷಣ ಸಚಿವರ ಜೊತೆಗೆ ಸೇರಿ ವಸತಿ ಶಾಲೆಯನ್ನು ಒಳ್ಳೆಯ ಭವ್ಯವಾಗಿರುವಂತಹ ಶಾಲೆಯನ್ನು ಮಾಡಬೇಕು. ತಮ್ಮ ಅಕ್ಕಪಕ್ಕದಲ್ಲಿ ಉನ್ನತ ಶಿಕ್ಷಣ ಸಚಿವರು ಹಾಗೂ ಶಾಲಾ ಶಿಕ್ಷಣ ಸಚಿವರು ಇದ್ದಾರೆ. ನಮ್ಮ ಸರ್ಕಾರದ ಹಣ ಇದು. ದಯವಿಟ್ಟು, ತಾವು ಒಂದು ಜೇಬಿನಿಂದ ಅವರಿಗೆ ಕೊಡಿ. ಇನ್ನೊಂದು ಜೇಬಿನಿಂದ ಇವರಿಗೆ ಕೊಟ್ಟು ಆ ಶಾಲಾ-ಕಾಲೇಜುಗಳನ್ನು ಚೆನ್ನಾಗಿ ಮಾಡಿ. ಅಲ್ಲಿಗೆ ಕಾರ್ಮಿಕರ ಮಕ್ಕಳು ಹೋಗಿ ಶಿಕ್ಷಣವನ್ನು ಚೆನ್ನಾಗಿ ಪಡೆಯುವಂತಹ ರೀತಿಯಲ್ಲಿ ಆಗಲಿ ಎನ್ನುವಂತಹ ವಿನಂತಿಯನ್ನು ಈ ಸಂದರ್ಭದಲ್ಲಿ ನಾನು ತಮ್ಮ ಮೂಲಕ ಮಾಡಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು. ಈ ಹಿಂದೆ ಕಟ್ಟಡ ಕಾರ್ಮಿಕರ ಮಕ್ಕಳಿಗಾಗಿ ಅಂಗನವಾಡಿ ಶಾಲೆ ಅಥವಾ moving schools ಅಂದರೆ, ಸಂಚಾರಿ ಶಾಲೆ ಎನ್ನುವಂತಹ ಶಾಲೆಗಳು ಇದ್ದವು. ಮಾನ್ಯ ಸಚಿವರು ಅವರು ಸಚಿವರಾದ ಮೇಲೆ ಆ ಶಾಲೆಗಳನ್ನು ಮುಚ್ಚುವಂತಹ ಕೆಲಸ ಆಯಿತು. ಆಗ ಆ ಶಾಲೆಗಳು ಸಾಕಾಗಿದೆ, ಬೇಡ. ನಮ್ಮ ಸರ್ಕಾರಿ ವ್ಯವಸ್ಥೆಯಲ್ಲಿ ಇರುವಂತಹ ಅಂಗನವಾಡಿ ಶಾಲೆ ಮತ್ತು ನಮ್ಮ ಸರ್ಕಾರಿ ಶಾಲೆಗಳಿಗೆ ಆ ಮಕ್ಕಳು ಹೋಗುವಂತಹದ್ದು ಆಗಲಿ ಎನ್ನುವ ದೃಷ್ಟಿಯಿಂದ ಆ ಶಾಲೆಗಳನ್ನು ಮುಚ್ಚಿದರು. ಶಿವಮೊಗ್ಗದಲ್ಲಿ ಈ ತರಹದ ಶಾಲೆ ಇದ್ದು, ಅದನ್ನು ಮುಚ್ಚಿತ್ತಿದ್ದೀರಿ, ಆ ಶಾಲೆಗಳಲ್ಲಿ ಚೆನ್ನಾಗಿ ಪಾಠವನ್ನು ಹೇಳಿಕೊಡುತ್ತಿದ್ದು, ಈ ಶಾಲೆಗಳನ್ನು ತಮ್ಮ ಇಲಾಖೆಯಿಂದ ನಡೆಸುತ್ತಿದ್ದೀರಿ, ಈಗ ಆ ಮಕ್ಕಳು ಬೀದಿಗೆ ಬರುತ್ತಿದ್ದು, ಆ ಮಕ್ಕಳು ಎಲ್ಲಿಗೆ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೋಗಬೇಕು ಎಂದು ಕೇಳಿದಾಗ, ಅಕ್ಕಪಕ್ಕದಲ್ಲಿರುವಂತಹ ಸರ್ಕಾರಿ ಶಾಲೆಗಳಿಗೆ ಆ ಮಕ್ಕಳನ್ನು ಸೇರಿಸಿ, ಅವರು ಆ ಸರ್ಕಾರಿ ಶಾಲೆಗಳಲ್ಲಿ ಓದುತ್ತಾರೆಂದು ಹೇಳಿದರು. ಈಗ ಸದನದಲ್ಲಿ ಮಾನ್ಯ ಶಿಕ್ಷಣ ಸಚಿವರು ಇದ್ದಾರೆ.

ಮಾನ್ಯ ಸಭಾಪತಿಯವರೇ, ತಮಗೆ ಗೊತ್ತಿದೆ. Minister for Higher Education, Minister for School Education and Literacy, ಇಬ್ಬರು ಸಚಿವರು ಸದನದಲ್ಲಿ ಇದ್ದಾರೆ. ಅದೇರೀತಿ ಕಾರ್ಮಿಕ ಇಲಾಖೆಯ ಸಚಿವರು ಇದ್ದಾರೆ. ಇವತ್ತಿನ ನಮ್ಮ ಶಾಲೆಗಳ ಸ್ಥಿತಿಗತಿಗಳನ್ನು ನೋಡುವುದಾದರೆ, ನಾನು ತೀರ್ಥಹಳ್ಳಿ ಮತ್ತು ಸಾಗರದ ಭಾಗದಲ್ಲಿದ್ದ ಎರಡು ಶಾಲೆಗಳಿಗೆ ಭೇಟಿ ಕೊಟ್ಟಿದ್ದೆ. ಆ ಸಂದರ್ಭದಲ್ಲಿ ಮಳೆ ಬರುತ್ತಿದ್ದುದರಿಂದ ಆ ಶಾಲೆಗಳಲ್ಲಿ ಮೇಲಿಂದ ಮಳೆ ನೀರು ಕೆಳಕ್ಕೆ ಸೋರುತ್ತಿತ್ತು. ಈ ರೀತಿ ಸುಮಾರು ಶಾಲೆಗಳಲ್ಲಿ ಸೋರುತ್ತದೆ. ಕೆಳಗಡೆಯಿಂದಲೂ ನೀರು ಬರುತ್ತದೆ. ಅಂತಹ ಶಾಲೆಗಳಲ್ಲಿ ಮಕ್ಕಳು ಮರದ ಪೀಸ್‌ಗಳನ್ನು ಇಟ್ಟುಕೊಂಡು ಅವುಗಳ ಮೇಲೆ ಕುಳಿತಿರುವುದನ್ನು ಸಹ ನಾವು ನೋಡಿದ್ದೇವೆ.

(ಮುಂದು)

(687) 13-08-2025/4.40/ಎಂವಿ-ಎಕೆ (ವೈಸ್ ಛೇರ್ಮನ್‌ರವರ ಉಪಸ್ಥಿತಿ)

ಶ್ರೀ ಡಿ.ಎಸ್.ಅರುಣ್ (ಮುಂದು):-

ಅಂತಹ ಶಾಲೆಗಳಲ್ಲಿ ಮಕ್ಕಳು ಹೇಗೆ ಕುಳಿತುಕೊಂಡಿರುತ್ತಾರೆಂದರೆ, ಅದರ ಮೇಲೆ ನಾಲ್ಕು ಪೀಸ್‌ಗಳನ್ನು ಇಟ್ಟು ಅದರ ಮೇಲೆ ಕೂರುವಂಥದ್ದನ್ನು ಕೂಡ ನೋಡುತ್ತಿದ್ದೇವೆ. ಅಂದರೆ, ಶಾಲೆಗಳಿಗೆ ಶಕ್ತಿ ಕೊಡುವಂಥದ್ದು ಸರ್ಕಾರಗಳಿಂದ ಆಗುತ್ತಿಲ್ಲ ಎಂಬುದು. ಮತ್ತೆ ಸುಮಾರು ಕಡೆ ಶಾಲೆಗಳಲ್ಲಿ ಮಕ್ಕಳು ಇಲ್ಲ. ಅಲ್ಲಿ ನಾಲ್ಕು ಜನ ಮಕ್ಕಳು ಮತ್ತು ನಾಲ್ಕು ಜನ ಶಿಕ್ಷಕರು ಇರುತ್ತಾರೆ. ಇದರ ಬಗ್ಗೆಯೂ ಸಹ revolution ಆಗಬೇಕು. ನಾವು ಏನಾದರೂ ಒಟ್ಟಿಗೆ ಸೇರಿಕೊಂಡು ಎಲ್ಲರೂ ಯೋಚನೆ ಮಾಡಿ, ಒಟ್ಟಾರೆ ಇವತ್ತಿನ ಶಿಕ್ಷಣ ವ್ಯವಸ್ಥೆ ಮತ್ತು ಪದ್ಧತಿಗೆ ನಾವೆಲ್ಲರೂ ಒಟ್ಟುಗೂಡಿ ಕೆಲಸ ಮಾಡಬೇಕು. ಈಗ ನಾಳೆಯ ದಿವಸ ಬೇರೆ ಶಾಲೆ, ಬೇರೆ ಕಟ್ಟಡ ಎಂದು ಒಂದೊಂದು ಇಲಾಖೆಯವರು ಪ್ರಾರಂಭ ಮಾಡಿಬಿಟ್ಟರೆ, ಇದಕ್ಕೆಂದು ಪ್ರಾಥಮಿಕ ಶಿಕ್ಷಣ ಸಚಿವರು ಇದ್ದಾರೆ. ಆಗ ಅವರಿಗೆ ಕೆಲಸವೇ ಇರುವುದಿಲ್ಲ. ಇಡೀ ದೇಶದಲ್ಲಿ ಶ್ರಮಿಕ ಕಾರ್ಮಿಕರೆ ಇರುವುದು. ಅವರಿಗೆ ಎಂದು ಪ್ರತ್ಯೇಕ ಶಾಲೆಗಳನ್ನು ಮಾಡುತ್ತಾ ಹೋದರೆ, ಆಗ ನಮ್ಮ ಸರ್ಕಾರಿ ಶಾಲೆಗಳಲ್ಲಿ ಏನು ನೋಡುವುದು. ಸರ್ಕಾರಿ ಶಾಲೆಗಳಿಗೆ ಅನುದಾನ ಎಲ್ಲಿದೆ? ಈ ಶಾಲೆಗಳಿಗೆ ಅನುದಾನಗಳೇ ಬರುತ್ತಿಲ್ಲ. ಕಾರ್ಪೋರೇಷನ್ ಶಾಲೆಗಳಿಗೆ ಒಂದು ರೂಪಾಯಿ ಅನುದಾನವಿಲ್ಲ. ಈಗ ಶಾಲೆಗಳಲ್ಲಿ ಲೈಟ್ ಹಾಕಿದರೆ, ಅದರ ವಿದ್ಯುತ್ ಬಿಲ್ ಕಟ್ಟುವುದಕ್ಕೆ ಇವರ ಹತ್ತಿರ ಹಣವಿಲ್ಲ. ನಾವು ಆ ಶಾಲೆಗಳಿಗೆ smart boards ಅನ್ನು ಮಾಡಿಸಿಕೊಟ್ಟಿದ್ದೇವೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು):- ಮಾನ್ಯ ಸಭಾಪತಿಯವರೇ, ಮಾನ್ಯ ಡಿ.ಎಸ್.ಅರುಣ್‌ರವರು ಹೇಳಿದಂತೆ ಇಲ್ಲ. ಈಗ ಲೈಟ್ ಹಾಕಿ ಕರೆಂಟ್ ಬಂದರೆ, ಅದಕ್ಕೆ ಏನು ಬಿಲ್ ಕಟ್ಟುವುದು ಬೇಡ. 2023ರಿಂದ ಉಚಿತ ವಿದ್ಯುತ್ ಮಾಡಿರುವುದರಿಂದ ಗುಣಮಟ್ಟದ special class ತೆಗೆದುಕೊಳ್ಳುವಂತಹ ವ್ಯವಸ್ಥೆಯಾಗಿದೆ. ಏಕೆಂದರೆ, wrong message ಹೋಗಬಾರದು. 2023 ನವೆಂಬರ್ 1ನೇ ತಾರೀಖಿನಂದ ಮಾನ್ಯ ಮುಖ್ಯಮಂತ್ರಿಗಳಿಂದ announce ಆದಮೇಲೆ ಕೆಲವು ಹಳೆಯ ಬಾಕಿಯನ್ನು ಸಹ ಮನ್ನಾ ಮಾಡುತ್ತಿದ್ದೇವೆ. ಈಗ progress ನಡೆಯುತ್ತಿದೆ. ಅದು ಇಲ್ಲವೆಂದು ಹೇಳುವುದಿಲ್ಲ. ಈಗ ಸುಮ್ಮನೆ ಏನೋ ಹೇಳಿಬಿಟ್ಟರೆ ಅದು ತಪ್ಪಾಗುತ್ತದೆ.

ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಅವರು ಒಂದು ಹಂತದವರೆಗೆ ಮಾತ್ರ ಕೊಡುತ್ತಾರೆ.

ಶ್ರೀ ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು):- ಮಾನ್ಯ ಸಭಾಪತಿಯವರೇ, ಈಗ ಎಷ್ಟಾದರೂ ಸಹ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ನೀರು ಮತ್ತು ವಿದ್ಯುತ್ ಅನ್ನು ಉಚಿತವೆಂದು ಮಾಡಿದ್ದೇವೆ.

ಶ್ರೀ ಡಿ.ಎಸ್.ಅರುಣ್:- ಮಾನ್ಯ ಸಭಾಪತಿಯವರೇ, ಸರ್ಕಾರಿ ಶಾಲೆಗಳ ಸ್ಥಿತಿಗತಿ ಇಲ್ಲಿ ಕುಳಿತಿರುವ ಎಲ್ಲರಿಗೂ ಸಹ ಗೊತ್ತಿದೆ. ನಾನು ಬೇರೆ ಏನನ್ನು ಹೇಳುತ್ತಿಲ್ಲ. ಇವತ್ತು ಎಲ್ಲಾ ಕಡೆಗಳಲ್ಲಿ ಕ್ರೀಡಾಕೂಟಗಳು ನಡೆಯುತ್ತಿವೆ. ಆ ಕ್ರೀಡಾಕೂಟಗಳ ಬಗ್ಗೆ ಒಂದು ಬಾರಿ ಕೇಳಲಿ. ನಮ್ಮ ಕಡೆಗಳಲ್ಲಿ ಕ್ರೀಡಾಕೂಟಗಳನ್ನು ನಡೆಸುವುದಕ್ಕೆ ಸಹ ಆಗುತ್ತಿಲ್ಲ. ಸುಮ್ಮನೆ ಕ್ರೀಡಾಕೂಟವನ್ನು ಮಾಡಿ ಎಂದು ಅವರ ಮೇಲೆ ಒತ್ತಡ ಹಾಕುವಂಥದ್ದು ನಡೆಯುತ್ತಿದೆ. ಈಗ ನಾನು ಆ ವಿಷಯವನ್ನು ತೆಗೆದುಕೊಳ್ಳುವುದಿಲ್ಲ. ಮಾನ್ಯ ಸಚಿವರು ಕೊಟ್ಟಿರುವಂತಹ ಉತ್ತರದಲ್ಲಿ ಮುಂದುವರೆದು, ಈ 31 ಶಾಲೆಗಳನ್ನು ಸರ್ಕಾರದ ಕಾಯಿದೆ ಮತ್ತು ನಿಯಮಗಳನ್ವಯ ಪಾರದರ್ಶಕವಾಗಿ ಯಾವುದೇ ಭ್ರಷ್ಟಾಚಾರಕ್ಕೆ ಅವಕಾಶ ಮಾಡದೇ ನಿರ್ಮಿಸಲಾಗುವುದು ಎಂದು ಇದೆ. ಅಂದರೆ, ಈ ಹಿಂದೆ ನಡೆಯುತ್ತಿತ್ತೆ?

ಶ್ರೀ ಸಂತೋಷ್ ಎಸ್. ಲಾಡ್ (ಕಾರ್ಮಿಕ ಸಚಿವರು):- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಶ್ನೆಯನ್ನು ಓದಲಿ. ಭ್ರಷ್ಟಾಚಾರ ಆಗುವ ಸಂಭವವಿದೆ ಎಂದು ಹೇಳಿದ್ದೇವೆ.

ಶ್ರೀ ಡಿ.ಎಸ್.ಅರುಣ್:- ಮಾನ್ಯ ಸಭಾಪತಿಯವರೇ, ಆ ಪದ ಬಳಸಿದ್ದೇನೆ. ಈಗ ಉತ್ತರ ಕೊಡಬೇಕಾದರೆ ನಾವು ಮಾಡುತ್ತೇವೆಂದು ಹೇಳಿದ್ದರೆ ಆಗುತ್ತಿತ್ತು. ಹಾಗಾಗಿ, ನಾನು ಹೇಳುತ್ತಿರುವುದು ಇವತ್ತು ಈ 750 ಕೋಟಿ ರೂಪಾಯಿ ಬಹಳ ದೊಡ್ಡದು. ಈಗ ಒಂದೇ ಒಂದು ಅಭಿವೃದ್ಧಿ ಕಾರ್ಯಗಳಿಗೆ ಅನುದಾನಗಳು ಸಿಗುತ್ತಿಲ್ಲ. ನಾವು ಶಾಸಕರಾಗಿ ಐದರಿಂದ ಆರು ವರ್ಷಗಳವರೆಗೆ ಇರುತ್ತೇವೆ. ಆದರೆ, ಈ ರೀತಿಯ ಸ್ಥಿತಿಗತಿಗಳು ಬರುತ್ತಿವೆ. ಈ 750 ಕೋಟಿ ರೂಪಾಯಿಗಳನ್ನು ಶಾಲೆಗಳ ಅಭಿವೃದ್ಧಿಗೋಸ್ಕರ ಜಿಲ್ಲೆಗಳಿಗೆ ಕೊಡಲಿ. ಆಗ ಅಲ್ಲಿ ನಾನಾ ರೀತಿಯಾದಂತಹ ಸಮಸ್ಯೆಗಳನ್ನು ಬಗೆಹರಿಸಬಹುದು. ಆ ನಿಟ್ಟಿನಲ್ಲಿ ದಯಮಾಡಿ ಮಾನ್ಯ ಕಾರ್ಮಿಕ ಸಚಿವರು ಹಲವಾರು ರೀತಿಯ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯೋಜನೆಗಳನ್ನು ತಂದಿದ್ದಾರೆ. ಅವರು ಒಳ್ಳೊಳ್ಳೆ ಯೋಜನೆಗಳನ್ನು ತಂದಿದ್ದೀರಿ ಎಂದು ನಾವು ಅವರಿಗೆ ಸುಮಾರು ಬಾರಿ ಹೇಳಿದ್ದೇವೆ. ಆದರೆ, ಈ ಶಾಲೆಗಳನ್ನು ದಯಮಾಡಿ ಕೈ ಬಿಡಲಿ. ಇದನ್ನು ಪ್ರಾಥಮಿಕ ಶಿಕ್ಷಣಕ್ಕೆ ಕೊಟ್ಟರೆ ಅನುಕೂಲವಾಗುತ್ತದೆ ಎಂದು ತಮ್ಮ ಮೂಲಕ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇದರಿಂದ ತುಂಬಾ ಕಟ್ಟಡಗಳನ್ನು ಕಟ್ಟಬಹುದು. ಈಗ ಕಟ್ಟಡಗಳು ಇಲ್ಲ. ಇದರಿಂದ ಕಟ್ಟಡಗಳನ್ನು ಕಟ್ಟಲಿ.

ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಸದಸ್ಯರುಗಳಾದ ಶ್ರೀ ಕೆ.ಎಸ್.ನವೀನ್ ಮತ್ತು ಶ್ರೀ ಡಿ.ಎಸ್.ಅರುಣ್ ರವರು ಇದರ ಬಗ್ಗೆ ಮಾತನಾಡಿದ್ದಾರೆ. ನಾನು ಕೆಲವು ಸಂಗತಿಗಳನ್ನು ಮಾತ್ರ ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ. ಮಾನ್ಯ ಮಂತ್ರಿಗಳು ಹಾಸನ ಜಿಲ್ಲೆಯಲ್ಲಿ ಒಂದು statement ಮಾಡಿದ್ದಾರೆ. ಅದು ಏನೆಂದರೆ, "Labour Minister Santhosh Lad mooted residential schools for the children of labourers, in Hassan on Monday" ಎಂದು statement ಕೊಟ್ಟಿದ್ದಾರೆ. ಈಗ 31 ಶಾಲೆಗಳನ್ನು ಪ್ರತಿ ಜಿಲ್ಲೆಯಲ್ಲಿ ತೆರೆಯುವುದಾದರೆ, ಈಗ ಎಲ್ಲೆಲ್ಲಿ ಶಾಲೆಗಳನ್ನು ತೆರೆಯುತ್ತಾರೆ. ಅಲ್ಲಿ ಸಾಕಷ್ಟು ಸರ್ಕಾರಿ ಶಾಲೆಗಳಿವೆ. ಉದಾಹರಣೆಗೆ; full-fledged government school ಗಳು ಎಲ್ಲಿವೆ? ಈಗ ಬಹಳಷ್ಟು ಸರ್ಕಾರಿ ಶಾಲೆಗಳು ಮಕ್ಕಳ ಪ್ರವೇಶದ ಕೊರತೆಯಿಂದ ಬಳಲುತ್ತಿವೆ. ಇವತ್ತಿನ ಯುಗ ಎನ್ನುವಂಥದ್ದು ಸ್ಪರ್ಧಾತ್ಮಕ ಯುಗವಾಗಿದೆ. ಇವತ್ತಿನ ದಿವಸ ಪೋಷಕರು ಸ್ವಲ್ಪ ಆರ್ಥಿಕವಾಗಿ ಬಲಿಷ್ಠರಾದರೆ ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ಕಳುಹಿಸುವುದಿಲ್ಲ. ಅವರು ತಮ್ಮ ಮಕ್ಕಳನ್ನು ಖಾಸಗಿ ಶಾಲೆಗಳಿಗೆ ಕಳುಹಿಸುತ್ತಾರೆ. ಅವರು ಮಕ್ಕಳನ್ನು ಏಕೆ ಕಳುಹಿಸುತ್ತಾರೆ ಎಂದು ಇಲ್ಲಿ ಕುಳಿತುಕೊಂಡಿರುವವರಿಗೆ ಹೇಳುವಂತಹ ಅವಶ್ಯಕತೆ ಇಲ್ಲ. ಅಲ್ಲಿಗೆ ಏಕೆ ಕಳುಹಿಸುತ್ತಾರೆಂದರೆ, ಅಲ್ಲಿ accountability ಇದೆ. ಅಲ್ಲಿ ಶಿಕ್ಷಕರು ಚೆನ್ನಾಗಿ ಪಾಠ ಮಾಡುತ್ತಾರೆ. ಅಲ್ಲಿ monthly examination ಮಾಡುತ್ತಾರೆ. ಅವರು ಪೋಷಕರಿಗೂ ಸಹ ಕೆಲಸ ಕೊಡುತ್ತಾರೆ. ಅಂದರೆ, ಅಲ್ಲಿ ಪೋಷಕರು ಸಹ ಮಕ್ಕಳನ್ನು attend ಮಾಡುತ್ತಾರೆ. ಆ ಕಾರಣಕ್ಕೆ ಸರ್ಕಾರಿ ಶಾಲೆಗಳಿಗೆ ಮಕ್ಕಳನ್ನು ಅಡ್ಮಿಷನ್ ಮಾಡುವಂತಹ ಪ್ರಮಾಣ ಕಡಿಮೆಯಾಗಿದೆ. ಈಗ ಸದನದಲ್ಲಿ ಸಂಬಂಧಪಟ್ಟ ಮೂರು ಜನ ಸಚಿವರು ಉಪಸ್ಥಿತರಿದ್ದಾರೆ. ಹಾಗಾಗಿ, ಇದು ಒಂದು ಒಳ್ಳೆಯ ಸುಸಮಯವಾಗಿದೆ. ಅಂದರೆ, ಶಿಕ್ಷಣ ಮತ್ತು ಶಿಕ್ಷಣದ ಗುಣಮಟ್ಟದ ಬಗ್ಗೆ ಚರ್ಚೆಯಾಗುವುದಕ್ಕೆ ಒಂದು ಒಳ್ಳೆಯ ಅವಕಾಶ ಸಿಕ್ಕಿದೆ. ನಾನು ಮಾನ್ಯ ಕಾರ್ಮಿಕ ಸಚಿವರಿಗೆ ವಿನಂತಿ ಮಾಡಿಕೊಳ್ಳುವುದೇನೆಂದರೆ, ಈಗ school dropouts ಹೆಚ್ಚಾಗಿದೆಯೋ ಕಡಿಮೆಯಾಗಿದೆಯೋ? ಇವತ್ತು school dropouts ಎನ್ನುವುದು ಕಡಿಮೆಯಾಗಿದೆ. ಇದಕ್ಕೆ ಕಾರಣವೇನೆಂದರೆ, ದಿವಂಗತ ಎಸ್.ಎಸ್.ಕೃಷ್ಣರವರ ಕಾಲದಿಂದ ಹಿಡಿದುಕೊಂಡು ಮಕ್ಕಳಿಗೆ ಮಧ್ಯಾಹ್ನದ ಊಟವನ್ನು ಕೊಡತಕ್ಕಂಥದ್ದು, ಮೊಟ್ಟೆ ಕೊಡತಕ್ಕಂಥದ್ದು, ಬಾಳೆಹಣ್ಣು ಕೊಡತಕ್ಕಂಥದ್ದು, ಪೌಷ್ಟಿಕ ಆಹಾರವನ್ನು ಕೊಡತಕ್ಕಂಥದ್ದು, ಹಾಲು ಕೊಡತಕ್ಕಂಥದ್ದು, ಯೂನಿಫಾರಂ ಕೊಡತಕ್ಕಂಥದ್ದು, ಶೂ ಕೊಡತಕ್ಕಂಥದ್ದು. ಈ ರೀತಿ ಆನೇಕ ಪ್ರಯೋಗಗಳನ್ನು ಈ ಸರ್ಕಾರಿ ಶಾಲೆಗಳಲ್ಲಿ ಮಾಡುತ್ತಿದ್ದೇವೆ. ಹಾಗಾದರೆ, ಕಾರ್ಮಿಕ ಇಲಾಖೆ ಪ್ರತಿ ಜಿಲ್ಲೆಯಲ್ಲಿ ಕಾರ್ಮಿಕ ಮಕ್ಕಳಿಗೋಸ್ಕರವೇ ಒಂದು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

residential school ಅನ್ನು ತೆರೆಯುವುದಾದರೆ, ಅಲ್ಲಿನ ಸರ್ಕಾರಿ ಶಾಲೆಗಳ ಕಥೆ ಏನಾಗಬೇಕು? ಆಗ ಅಲ್ಲಿನ ಸರ್ಕಾರಿ ಶಾಲೆಗಳನ್ನು ಬಿಟ್ಟು ಇಲ್ಲಿಗೆ ಬರುತ್ತಾರೆ. ಈಗ ಮೊರಾರ್ಜಿ ದೇಸಾಯಿ ವಸತಿ ಶಾಲೆಯನ್ನು ತೆರೆದಿರುವ ಉದ್ದೇಶವೇನು? ಡಾ:ಬಿ.ಆರ್.ಅಂಬೇಡ್ಕರ್ ವಸತಿ ಶಾಲೆಯನ್ನು ತೆರೆದಿರುವ ಉದ್ದೇಶವೇನು? ಶ್ರೀಮತಿ ಇಂದಿರಾಗಾಂಧಿ ವಸತಿ ಶಾಲೆಯನ್ನು ತೆರೆದಿರುವ ಉದ್ದೇಶವೇನು? ವಾಲ್ಮೀಕಿ ವಸತಿ ಶಾಲೆಯನ್ನು ತೆಗೆದುಕೊಂಡು ಬಂದಿರುವ ಉದ್ದೇಶವೇನು? ಏಕಲವ್ಯ ವಸತಿ ಶಾಲೆಯನ್ನು ತೆಗೆದುಕೊಂಡು ಬಂದಿರುವ ಉದ್ದೇಶವೇನು? ಒಂದೊಂದು ಜಿಲ್ಲೆಯಲ್ಲಿ ಸರ್ಕಾರ ಬೇರೆ ಬೇರೆ ರೀತಿ ಶಾಲೆಗಳನ್ನು ನಡೆಸುತ್ತಿದೆ. ಈಗ ಅಲ್ಲಿಯೇ ಸರಿಯಾಗಿ ದಾಖಲಾತಿ ಆಗುತ್ತಿಲ್ಲ. ಅಂದರೆ, ಈಗಿನ ಉದೇಶವೇನೆಂದರೆ, ಕಾರ್ಮಿಕ ಇಲಾಖೆಯಲ್ಲಿ ಸಾವಿರಾರು ಕೋಟಿ ರೂಪಾಯಿ ಹಣ ಇದೆ ಎಂದು. ಅದನ್ನು ಏನಾದರೂ ಮಾಡಿ ಉಪಯೋಗ ಮಾಡಬೇಕು ಎನ್ನುವ ಕಾರಣಕ್ಕೋಸ್ಕರ ಪ್ರತಿ ಜಿಲ್ಲೆಗೆ ಒಂದು ವಸತಿ ಶಾಲೆಯನ್ನು ತೆರೆಯಬೇಕು ಎಂಬ ಉದ್ದೇಶ ಏಕೆ?

ಡಾ: ಎಂ.ಸಿ.ಸುಧಾಕರ್ (ಉನ್ನತ ಶಿಕ್ಷಣ ಸಚಿವರು):- ಮಾನ್ಯ ಸಭಾಪತಿಯವರೇ, ಇವತ್ತು ವಸತಿ ಶಾಲೆಗಳಿಗೆ ಸಿಕ್ಕಾಪಟ್ಟೆ ಬೇಡಿಕೆ ಇದೆ. ಇವತ್ತು ಇದಕ್ಕೆ ಗ್ರಾಮೀಣ ಪ್ರದೇಶಲ್ಲಿ ಎಷ್ಟು ಒತ್ತಡ ಇದೆ ಎಂದರೆ, ಈಗ ಇರುವಂತಹ ವಸತಿ ಶಾಲೆಗಳಲ್ಲಿ ನಾವು ಆ demand ಅನ್ನು meet ಮಾಡುವುದಕ್ಕೆ ಆಗುತ್ತಿಲ್ಲ. ಇವತ್ತು ಜನರಿಗೆ residential school ಗಳ ಬಗ್ಗೆ ಬಹಳಷ್ಟು ದೊಡ್ಡಮಟ್ಟದ ವಿಶ್ವಾಸವಿದೆ. ಇವತ್ತಿನ ದಿವಸ ಅದಕ್ಕೆ ಕೆ.ಇ.ಎ. ಮುಖಾಂತರವೇ examination ಅನ್ನು conduct ಮಾಡುವುದು. ಇದು ತಮಗೆ ಗೊತ್ತಿದೆ. ನಮ್ಮ ಮೇಲೆ ಎಷ್ಟು ಒತ್ತಡ ಬರುತ್ತದೆಂದರೆ, ಪೋಷಕರು ನಮ್ಮ ಬಳಗೆ ಬಂದು ಅಳುತ್ತಾರೆ. ಅವರು ಆರನೇ ತರಗತಿಯ ಮಕ್ಕಳನ್ನು ನಮ್ಮ ಮುಂದೆ ಕರೆದುಕೊಂಡು ಬಂದು ಹೇಗಾದರೂ ಮಾಡಿ ಸೀಟ್ ಕೊಡಿಸಿ ಎಂದು ಒದ್ದಾಡುತ್ತಾರೆ. ಆ ರೀತಿಯ ಒತ್ತಡವಿದೆ. ಜನರು ಒಂದು ರೀತಿಯ ಬದಲಾವಣೆ ಬಯಸುತ್ತಿದ್ದಾರೆ. ಇಲ್ಲಿ ಗುಣಮಟ್ಟ ಕಾಯ್ದುಕೊಳ್ಳುವುದಕ್ಕೆ ಅವಕಾಶವಿದೆ ಎಂದು ಇದಕ್ಕೆ ಒತ್ತಡವಿದೆ. ಅದಕ್ಕೆ residential schools ಹೆಚ್ಚಿಗೆ ಆಗಬೇಕು. ಆ residential school ಗಳಲ್ಲಿ ಇರತಕ್ಕಂತಹ ವಾತಾವರಣ ಇರಬಹುದು, ಅಲ್ಲಿರತಕ್ಕಂತಹ ಮೂಲಭೂತ ಸೌಲಭ್ಯ ಇರಬಹುದು, ಅಲ್ಲಿ ಕೊಡತಕ್ಕಂತಹ ಗುಣಮಟ್ಟದ ಶಿಕ್ಷಣ ಇರಬಹುದು. ಇವುಗಳನ್ನೆಲ್ಲಾ ನಾವು ಮೆಚ್ಚಿಕೊಳ್ಳಬೇಕಾಗುತ್ತದೆ. ಅಲ್ಲಿ ಒಂದು ಒಳ್ಳೆಯ ರೀತಿಯಲ್ಲಿ ಫಲಿತಾಂಶ ಕೂಡ ಬರುತ್ತಿದೆ. ಆದ್ದರಿಂದ ನಾನು ಹೇಳುವುದು ರಾಜ್ಯದಲ್ಲಿ ಹೆಚ್ಚು residential schools ಆಗುವಂತಹ ಅವಶ್ಯಕತೆ ಇದೆ. ದಯವಿಟ್ಟು ಅಲ್ಲಿ admission ಆಗುತ್ತಿಲ್ಲ ಎಂದು ಹೇಳುವುದು ಸರಿಯಲ್ಲ.

(ಗೊಂದಲ)

ಶ್ರೀ ಎನ್.ರವಿಕುಮಾರ್:- ಮಾನ್ಯ ಸಭಾಪತಿಯವರೇ, ಸರ್ಕಾರಿ ಶಾಲೆಗಳಲ್ಲಿ admission ಆಗುತ್ತಿಲ್ಲ.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಈಗ ಶಿಕ್ಷಕರು ಮತ್ತು ಲೆಕ್ಚರರ್‌ಗಳು competent ಆಗಿ ಇದ್ದಾರೆಯೇ? ಅವರ ಇಲಾಖೆಯಿಂದ ಹಣ ತೆಗೆದುಕೊಂಡು ತಮ್ಮ ಇಲಾಖೆಯ ವತಿಯಿಂದ ಮಾಡಿ. ಅದರ ಅವಶ್ಯಕತೆ ಇದೆ ಎಂದು ನಮಗೂ ಸಹ ಗೊತ್ತಿದೆ. ನಾವು ಅವಶ್ಯಕತೆ ಇಲ್ಲವೆಂದು ಎಲ್ಲಿ ಹೇಳಿದ್ದೇವೆ.

ಡಾ: ಎಂ.ಸಿ.ಸುಧಾಕರ್:- ಮಾನ್ಯ ಸಭಾಪತಿಯವರೇ, ಅವರು ಹೇಳುತ್ತಿರುವಂತಹ ವಿಚಾರದ ಬಗ್ಗೆ ನಾನು ಎರಡು ವರ್ಷಗಳ ಹಿಂದೆಯೇ ಮಾತನಾಡಿದ್ದೇನೆ. ನಾನು ಅವರ ಜೊತೆಯಲ್ಲಿ ಪ್ರತ್ಯೇಕವಾಗಿ ಕುಳಿತುಕೊಂಡು ಕಾರ್ಮಿಕರ ಮಕ್ಕಳು ನಮ್ಮ ಇಲಾಖೆಯಲ್ಲಿ ಓದುತ್ತಿದ್ದಾರೆ, ಇದರಿಂದ ಅವರಿಗೆ ಅನುಕೂಲವಾಗುತ್ತದೆ, ದಯವಿಟ್ಟು ನಿಮ್ಮ ಇಲಾಖೆಯಲ್ಲಿ ದುಡ್ಡು ಇದೆ. ಆದರೆ, ಅವರ ಇಲಾಖೆಯ ನಿಯಮಗಳಲ್ಲಿ ಆ ರೀತಿ ಕೊಡುವುದಕ್ಕೆ ಅವಕಾಶವಿಲ್ಲವೆಂದು ನಾನು ಅವರ ಬಳಿ ಸುಮಾರು ಬಾರಿ ಚರ್ಚೆ ಮಾಡಿದಾಗ, ಅವಕಾಶವಿಲ್ಲದೇ ಇರುವ ಕಾರಣದಿಂದ ನಾವು ಅದನ್ನು ಮಾಡಲಿಲ್ಲ. ಅವರು ಹೇಳುವಂತಹ ವಿಚಾರವನ್ನು ಎರಡು ವರ್ಷಗಳ ಹಿಂದೆಯೇ ಮಾನ್ಯ ಕಾರ್ಮಿಕ ಸಚಿವರ ಜೊತೆಯಲ್ಲಿ ಪ್ರಸ್ತಾಪ ಮಾಡಿದ್ದೇನೆ. ಇದಕ್ಕೆ ಅವಕಾಶ ಇಲ್ಲದೇ ಇರುವುದರಿಂದ ಅದಕ್ಕೆ ಸಂಬಂಧಪಟ್ಟಂತೆ ಮಾನ್ಯ ಸಚಿವರು ಅದಕ್ಕೆ ಏನೇನು ಕಾನೂನು ತೊಡಕು ಇದೆ ಎಂದು ಉತ್ತರ ಕೊಡುತ್ತಾರೆ.

(ಮುಂದು)

(688) 13.08.2025 4.50 ವೈಎಲ್-ಆರ್‌ಎನ್ (ವೈಸ್ ಛೇರ್ಮನ್‌ರವರ ಉಪಸ್ಥಿತಿ)

ಶ್ರೀ ಎನ್.ರವಿಕುಮಾರ್ (ಸರ್ಕಾರದ ಮುಖ್ಯ ಸಚೇತಕರು):- ಮಾನ್ಯ ಸಭಾಪತಿಯವರೇ, ಈ 3 ಸಚಿವರು ಈ ಸದನದೊಳಗೆ ಇರುವುದರಿಂದ ಈ 3 ಸಚಿವರಿಗೂ ಈ ವಿಷಯ ಸಂಬಂಧಪಟ್ಟಿದ್ದು, ಅವರು ಮಾತನಾಡುವುದು ತಪ್ಪು ಎಂದು ನಾನು ಹೇಳುವುದಿಲ್ಲ. ಆದರೆ, ಸರ್ಕಾರಿ ಶಾಲೆಗಳ ಪರಿಸ್ಥಿತಿ ಏನಾಗುತ್ತದೆ? ಉದಾಹರಣೆಗೆ ಹೇಳುವುದಾದರೆ, ವಸತಿ ಶಾಲೆಗಳನ್ನು ತೆರೆಯುವುದರಿಂದ ಗುಣಮಟ್ಟದ ವಿದ್ಯಾಭ್ಯಾಸ ಸಿಗುತ್ತದೆ ಎಂಬ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಹಾಗೆಯೇ ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ವಿದ್ಯಾಭ್ಯಾಸವನ್ನು ಕೊಡಲು ಸಾಧ್ಯವಿಲ್ಲ ಎಂಬ ತೀರ್ಮಾನಕ್ಕೆ ನಾವು ಬರುತ್ತೇವೆಯೇ?

ಶ್ರೀ ಸಂತೋಷ್ ಎಸ್. ಲಾಡ್ (ಕಾರ್ಮಿಕ ಸಚಿವರು):- ಮಾನ್ಯ ಸಭಾಪತಿಯವರೇ, ಮಾನ್ಯ ರವಿಕುಮಾರ್‌ರವರೇ ಒಂದು ನಿಮಿಷ. ಈಗ ಸರ್ಕಾರಿ ವಸತಿ ಶಾಲೆಯನ್ನು ಸಹ ತೆರೆಯುತ್ತೇವೆ ಅಲ್ಲವೇ? ಎಲ್ಲಾ ಇಲಾಖೆಯವರು ಸರ್ಕಾರಿ ವಸತಿ ಶಾಲೆಯನ್ನು ತೆರೆಯುವುದಿಲ್ಲವೇ? ಬಿ.ಜೆ.ಪಿ. ಸರ್ಕಾರ ಅಸ್ತಿತ್ವದಲ್ಲಿದ್ದಾಗ ಸಹ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರ್ಕಾರಿ ವಸತಿ ಶಾಲೆಯನ್ನು ತೆರೆದಿದ್ದಾರೆ, ಬಿ.ಸಿ.ಎಂ. ಶ್ರೀ ಮಹರ್ಷಿ ವಾಲ್ಮೀಕಿ ವಸತಿ ಶಾಲೆ ಇದೆ. ಎಲ್ಲಾ ಇಲಾಖೆಯಿಂದ ವಸತಿ ಶಾಲೆಯನ್ನು ತೆರೆದಿದ್ದಾರೆಯೇ, ಇಲ್ಲವೇ?

ಶ್ರೀ ಎನ್.ರವಿಕುಮಾರ್:- ಮಾನ್ಯ ಸಭಾಪತಿಯವರೇ, ವಸತಿ ಶಾಲೆಯನ್ನು ತೆಗೆದಿದ್ದಾರೆ. ಅದಕ್ಕಾಗಿಯೇ ನಾನು ಹೇಳುತ್ತಿರುವುದು. ಶ್ರೀ ಮೊರಾರ್ಜಿ ದೇಸಾಯಿಯವರ ಹೆಸರಿನಲ್ಲಿ, ಡಾ॥ ಬಿ.ಆರ್. ಅಂಬೇಡ್ಕರ್‌ರವರ ಹೆಸರಿನಲ್ಲಿ, ಶ್ರೀ ಮಹರ್ಷಿ ವಾಲ್ಮೀಕಿರವರ ಹೆಸರಿನಲ್ಲಿ ವಸತಿ ಶಾಲೆಗಳನ್ನು ತೆರೆದಿರುವ ಸಲುವಾಗಿಯೇ ನಾನು ಹೇಳುತ್ತಿರುವುದು, ಆ ಶಾಲೆಗಳ ಕಥೆ ಏನಾಗುತ್ತದೆ?

ಶ್ರೀ ಸಂತೋಷ್ ಎಸ್. ಲಾಡ್:- ಮಾನ್ಯ ಸಭಾಪತಿಯವರೇ, ಹಾಗಾದರೆ, ಮಾನ್ಯ ರವಿಕುಮಾರ್‌ರವರು ಹೇಳುತ್ತಿರುವುದು ಏನೆಂದರೆ, ವಸತಿ ಶಾಲೆಗಳು ಬಂದ ತಕ್ಷಣ ಯಾವುದೇ ಇಲಾಖೆಯವರು ಸರ್ಕಾರಿ ವಸತಿ ಶಾಲೆಗಳನ್ನು ತೆರೆಯಬಾರದೇ? They mean to say we should not have any government residential schools at all. As per what you are talking now, please be clear on that. Where you are trying to say is... ರೆಸಿಡೆನ್ಸಿಯಲ್ ಸ್ಕೂಲ್‌ಗಳನ್ನು ತೆರೆದರೆ, ಸರ್ಕಾರಿ ಶಾಲೆಗಳ ಗತಿ ಏನೆಂಬುದನ್ನು ಹೇಳಿದ್ದಾರೆ, very valid point. ಹಾಗಾದರೆ, ರೆಸಿಡೆನ್ಸಿಯಲ್ ಸ್ಕೂಲ್‌ಗಳನ್ನು ತೆರೆಯಬಾರದೇ ಎಂಬುದಕ್ಕೆ ಮಾನ್ಯ ರವಿಕುಮಾರ್‌ರವರು ಸ್ಪಷ್ಟೀಕರಣವನ್ನು ಕೊಡಲಿ.

ಶ್ರೀ ಎನ್.ರವಿಕುಮಾರ್:- ಮಾನ್ಯ ಸಭಾಪತಿಯವರೇ, ಆಗಲಿ. ಅದಕ್ಕೆ ಸ್ಪಷ್ಟೀಕರಣವನ್ನು ಬಹಳ ಚೆನ್ನಾಗಿಯೇ ಕೊಡುತ್ತೇನೆ. ಸರ್ಕಾರಿ ಶಾಲಾ ಕಟ್ಟಡಗಳನ್ನು ಏನು ಮಾಡುತ್ತಾರೆ? ಉದಾಹರಣೆಗೆ ಹೇಳುವುದಾದರೆ, ಸುಮಾರು 10 ಜನ, 15 ಜನ ವಿದ್ಯಾರ್ಥಿಗಳಿರುವಂಥ ಶಾಲಾ ಕಟ್ಟಡಗಳ ಫೋಟೋ ಮತ್ತು ವಿಡಿಯೋ ಸಮೇತ ನಾನು ತೆಗೆದುಕೊಂಡು ಬರುತ್ತೇನೆ. ಅನೇಕ ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರಿಗೆ ಕೆಲಸ ಇಲ್ಲದಂತಾಗಿದೆ. 10 ರಿಂದ 12 ವಿದ್ಯಾರ್ಥಿಗಳಿಗೆ ನಾಲ್ಕೈದು ಶಿಕ್ಷಕರಿದ್ದಾರೆ. ಈ ಸಂಬಂಧ ಮಾನ್ಯ ಮಧು ಬಂಗಾರಪ್ಪನವರೊಂದಿಗೆ ಎರಡು-ಮೂರು ಸಲ ಚರ್ಚೆ ಮಾಡಿದ್ದು, ಆ ಕಟ್ಟಡಗಳನ್ನು ಏನು ಮಾಡುತ್ತಾರೆ? ಸರ್ಕಾರದ ಕೆಲಸವೆಂದರೆ, ಕಟ್ಟಡ ಕಟ್ಟುವ ಕೆಲಸವೇ? ನನ್ನ ಪ್ರಕಾರ ಹೇಳುವುದಾದರೆ, ವಿದ್ಯಾರ್ಥಿಗಳನ್ನು ಬಿಲ್ಡಪ್ ಮಾಡಬೇಕಾಗಿದೆ. ವಿದ್ಯಾರ್ಥಿಗಳನ್ನು competitive ಆಗಿ ನಿರ್ಮಿಸಬೇಕಾಗಿದೆ. ನಾವು ಆ ರೀತಿ ಸರ್ಕಾರಿ ಶಾಲೆಗಳನ್ನು ಖಾಸಗಿ ಶಾಲಾ-ಕಾಲೇಜುಗಳಿಗೆ ಹೋಲಿಕೆ ಮಾಡಿದರೆ, ಸರ್ಕಾರಿ ಶಾಲೆಗಳಿಗೂ ಪ್ರವೇಶ ಮಾಡುತ್ತೇವೆ ಎನ್ನುವ ರೀತಿಯಲ್ಲಿ ಬಿಲ್ಡ್ ಮಾಡಬೇಕಾಗಿದೆ. ಅದಕ್ಕಾಗಿ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾನು ಹೇಳುವುದೇನೆಂದರೆ, 31 ರೆಸಿಡೆನ್ಸಿಯಲ್ ಸ್ಕೂಲ್‌ಗಳನ್ನು ತೆರೆಯುವಂಥ ಉದ್ದೇಶ ಚೆನ್ನಾಗಿಯೇ ಇದೆ. ಆದರೆ, ಅನೇಕ ಸರ್ಕಾರಿ ಶಾಲೆಗಳು ಖಾಲಿಯಾಗುತ್ತವೆ. ಈಗಾಗಲೇ ಸರ್ಕಾರಿ ಶಾಲೆಗಳ ಕಟ್ಟಡ ಮಾತ್ರ ಇದ್ದು, ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇವೆ ಮತ್ತು ಗುಣಮಟ್ಟದ ವಿದ್ಯಾಭ್ಯಾಸ ಸಿಗುತ್ತಿಲ್ಲ. ರೂ.750 ಕೋಟಿಗಳನ್ನು ರೆಸಿಡೆನ್ಸಿಯಲ್ ಸ್ಕೂಲ್‌ಗಳಿಗಾಗಿ ಏನು ಬಳಸುತ್ತಿದ್ದಾರೆ, ಅದನ್ನು ಯಾವ ಉದ್ದೇಶಕ್ಕಾಗಿ ಬಳಸುತ್ತಿದ್ದಾರೆ? ಒಳ್ಳೆಯ ಪ್ರಯೋಗಾಲಯ, ಒಳ್ಳೆಯ ಶಿಕ್ಷಕರನ್ನು, ಒಳ್ಳೆಯ ಹಾಸ್ಟೆಲ್‌ಗಳನ್ನು, ಎಲ್ಲಾ ಕ್ವಾಲಿಟಿಯನ್ನು ಕೊಡುತ್ತೇವೆ ಎಂದು ಹೇಳಿದ್ದು, ಅದನ್ನೇ ಸರ್ಕಾರಿ ಶಾಲೆಗಳಿಗೆ ಕೊಡಿ. ರೆಸಿಡೆನ್ಸಿಯಲ್ ಸ್ಕೂಲ್ ಎಂದು ಏನು ಹೇಳುತ್ತೇವೆ, **(ಗೊಂದಲ)** ಕರ್ನಾಟಕ ರಾಜ್ಯದಲ್ಲಿ ಹಾಸ್ಟೆಲ್‌ಗಳ ಪರಿಸ್ಥಿತಿ ಏನಾಗಿದೆ? ಕರ್ನಾಟಕದಲ್ಲಿ ಹಾಸ್ಟೆಲ್‌ಗಳ ಪರಿಸ್ಥಿತಿ ಚಿಂತಾಜನಕವಾಗಿವೆ. ಒಳ್ಳೆಯ ಗುಣಮಟ್ಟದ ಆಹಾರ ಸಿಗುತ್ತಿಲ್ಲ. ಪ್ರಾಥಮಿಕ ಶಾಲೆ, ಯುವ ವಯಸ್ಸಿನ ಪ್ರೌಢಶಾಲೆ, ಮತ್ತು ಕಾಲೇಜಿನ ವಿದ್ಯಾರ್ಥಿಗಳಿಗೆ ಒಳ್ಳೆಯ ಆಹಾರ, ತರಕಾರಿ ಸಿಗದೇ ಸೊರಗುತ್ತಿದ್ದಾರೆ. ನಮ್ಮ ಮಕ್ಕಳನ್ನು ಆ ರೀತಿಯ ಸರ್ಕಾರಿ ಶಾಲಾ-ಕಾಲೇಜು, ಹಾಸ್ಟೆಲ್‌ಗಳಿಗೆ ಕಳುಹಿಸುತ್ತೇವೆಯೇ?

ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಮಾನ್ಯ ಎನ್. ರವಿಕುಮಾರ್‌ರವರು ಒಳ್ಳೆಯ ಆಹಾರ ಸಿಗುತ್ತಿಲ್ಲ ಎಂದು ಹೇಳಿದ ಮಾತನ್ನು ವಾಪಸ್ಸು ತೆಗೆದುಕೊಳ್ಳಲಿ.

ಶ್ರೀ ಐವನ್ ಡಿಸೋಜಾ (ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಹಾಗಾದರೆ ಇಷ್ಟು ವರ್ಷಗಳಿಂದ ಅವರು ಏನು ಮಾಡುತ್ತಿದ್ದರು?

ಶ್ರೀಮತಿ ಬಲ್ಕೀಸ್ ಬಾನು:- ಮಾನ್ಯ ಸಭಾಪತಿಯವರೇ, ನಮ್ಮ ಸರ್ಕಾರವು ಅಸ್ತಿತ್ವಕ್ಕೆ ಬಂದ ಮೇಲೆ ಹೊಸದಾಗಿ ಯೋಜನೆಗಳನ್ನು ಹಾಕಿಕೊಂಡು ಮಕ್ಕಳಿಗೆ ಪೌಷ್ಟಿಕ ಆಹಾರವನ್ನು ಕೊಡುತ್ತಿದ್ದಾರೆ.

(ಗೊಂದಲ)

ಶ್ರೀ ಸಂತೋಷ್ ಎಸ್. ಲಾಡ್:- ಮಾನ್ಯ ಸಭಾಪತಿಯವರೇ, ರೆಸಿಡೆನ್ಸಿಯಲ್ ಸ್ಕೂಲ್‌ಗಳು **(ಗೊಂದಲ)** ನಾವು ಸುಮ್ಮನೆ ಕುಳಿತುಕೊಂಡಿದ್ದೇವೆ ಎಂದು ಏನೇನೋ ಮಾತನಾಡುತ್ತಿದ್ದಾರೆ.

ವೈಸ್ ಛೇರ್ಮನ್:- ಮಾನ್ಯ ಕಾರ್ಮಿಕ ಸಚಿವರೇ, ಮಾನ್ಯ ಉನ್ನತ ಶಿಕ್ಷಣ ಸಚಿವರು ಮಾತನಾಡುತ್ತಾರೆ ತಾವು ಕುಳಿತುಕೊಳ್ಳಿ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಸಂತೋಷ್ ಎಸ್. ಲಾಡ್:- ಮಾನ್ಯ ಸಭಾಪತಿಯವರೇ, ದಯವಿಟ್ಟು ಒಂದು ನಿಮಿಷ ನಾನು ಮಾತನಾಡುತ್ತೇನೆ. ಮಾನ್ಯ ಎನ್.ರವಿಕುಮಾರ್‌ರವರು ಮಾತನಾಡುವಾಗ ನಾವು ಏತಕ್ಕೆ ಎದ್ದು ಮಾತನಾಡುತ್ತಿದ್ದೇವೆ ಎಂದರೆ, ಅವರ ನೋವು ಏನೆಂಬುದು ನಮಗೆ ಅರ್ಥವಾಗುತ್ತದೆ. ಈಗಾಗಲೇ ನಾನು ಅವರೊಂದಿಗೆ ಕ್ರೀಚ್ (creche) ಬಗ್ಗೆ ಸಹ ಮಾತನಾಡಿದ್ದೇನೆ. ನಾನು ಈ ಸದನದೊಳಗೆ ಎದ್ದುನಿಂತು ಮಾತನಾಡುವಾಗ ಯಾವುದೇ ಸುಳ್ಳು ಮಾಹಿತಿಯನ್ನು ಕೊಡಲು ಬರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)

ನಾನೇ ಸ್ವತಃ ಕ್ರೀಚ್‌ಗೆ ಹೋಗಿದ್ದಾಗ ಏನಾಗಿತ್ತೆಂದರೆ, Ragpickers' ಮಕ್ಕಳನ್ನು ಕ್ರೀಚ್‌ಗೆ ಕರೆದುಕೊಂಡು ಬಂದರು. ಕಳೆದ ಸರ್ಕಾರ ಎಲ್ಲಿ ಕ್ರೀಚ್‌ಗಳನ್ನು ಮಾಡಿದರು ಅಲ್ಲಿ Ragpickers' ಮಕ್ಕಳನ್ನು ಕರೆದುಕೊಂಡು ಬಂದು ಬಿಲ್‌ಗಳನ್ನು ಮಾಡುತ್ತಿರುವುದನ್ನು ನಾನು ನೋಡಿದ್ದಕ್ಕಾಗಿ we stopped it. Construction ಕಾರ್ಮಿಕ ಮಕ್ಕಳು ಏನಿರುತ್ತಾರೆ, ಅವರು ಯಾವಾಗಲೂ 'By and large they are only in transit form' ಆಗಿರುತ್ತಾರೆ. 15 ದಿವಸಗಳಿಗೊಮ್ಮೆ temporary ಆಗಿ ಬಂದು 40 ದಿವಸ, 60 ದಿವಸ ಕೆಲಸ ಮಾಡಿ ಹೋಗುತ್ತಾರೆ. ಒಂದನೇ ವಿಚಾರವೇನೆಂದರೆ, ರೆಸಿಡೆನ್ಸಿಯಲ್ ಸ್ಕೂಲ್ ಪ್ರಾರಂಭ ಮಾಡುವುದರಿಂದ ಅವರ ಮಕ್ಕಳನ್ನು residential schools ಗೆ ಕಳುಹಿಸಿ, ಎಲ್ಲಿಯೇ ಕೆಲಸಕ್ಕೆ ಹೋದರೂ ಅನುಕೂಲವಾಗುತ್ತದೆ. Where we started. I will Just, read it to you. ಈ ಮೊದಲು ಕೇಂದ್ರ ಸರ್ಕಾರವು ಇದ್ಯಾವುದೇ ಶಾಲೆಗಳಿಗೆ ಅನುದಾನ ನೀಡಲು ಒಪ್ಪಿಗೆ ನೀಡುತ್ತಿರಲಿಲ್ಲ. ಆದರೆ, ಈ ಹಣ ಏನಿದೆ, as you rightly said, I will be more happy to give it to other Departments. ಬೇರೆ ಬೇರೆ ಇಲಾಖೆಯವರಿಗೆ ಹಣ ಕೊಡಲು ತುಂಬಾ ಖುಷಿ ಇದೆ. ಮಾನ್ಯ ಎನ್.ರವಿಕುಮಾರ್‌ರವರಿಗೆ ಎಷ್ಟು ಕಾಳಜಿ ಇದೆಯೋ, ಅಷ್ಟೇ ಕಾಳಜಿ ನನಗೂ ಇದೆ. ನಮ್ಮಿಬ್ಬರ common sense same ಇದೆ. But the provision does not agree to this. It says it has to be used only for their welfare. Any cess we collect on the labour it has to be specifically spent for them ಎಂಬುದಕ್ಕೆ ಒಂದು ಕಾನೂನು ಇದೆ. ನಾನು ಯಾವುದೇ ಒಂದು ಇಲಾಖೆಯಿಂದ cess ಸಂಗ್ರಹಣೆ ಮಾಡಿದರೆ, ಬೇರೆಯದಕ್ಕೆ ಕೊಡಲಿಕ್ಕೆ ಅವಕಾಶ ಇರುವುದಿಲ್ಲ. ಉದಾಹರಣೆಗೆ, ನಾನು ಸಾರಿಗೆ ಇಲಾಖೆಯಿಂದ cess ಸಂಗ್ರಹಣೆ ಮಾಡಿದರೆ, I cannot give it to any

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

unorganized sector. ಹಾಗಾಗಿ, ಸಂಗ್ರಹಣೆ ಮಾಡುವಂಥ cess ಏನಿದೆ, ಅದನ್ನು ಕೇಂದ್ರ ಸರ್ಕಾರವಾಗಲೀ ಅಥವಾ ಸುಪ್ರೀಂ ಕೋರ್ಟ್ ಆಗಲೀ very specifically states that this money has to used only for such people ಎಂಬುದಕ್ಕಾಗಿ ಮಾಡುತ್ತಿರುವುದು.

ವಿರೋಧ ಪಕ್ಷದ ಸದಸ್ಯರೆಲ್ಲರಿಗಿಂತ ನನಗೆ ಜಾಸ್ತಿ ಒತ್ತಡ ಇದೆ. ಏಕೆಂದರೆ, ನಾನು ಹುಬ್ಬಳ್ಳಿ-ಧಾರವಾಡದಲ್ಲಿಯೇ ವಾಸವಾಗಿರುವುದು. ನನಗೆ ಪರಿಚಯ ಇರತಕ್ಕಂಥ ಎಷ್ಟು ಮಕ್ಕಳು ನನಗೆ ಕರೆ ಮಾಡುತ್ತಾರೆ ಎಂಬುದು ಅವರಿಗೆ ಗೊತ್ತಿದೆಯೇ? ಹಿಂದಿನ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸುತ್ತೇನೆ. ಏಕೆಂದರೆ, ಹುಬ್ಬಳ್ಳಿ-ಧಾರವಾಡದಲ್ಲಿ 20 ಹಾಸ್ಟೆಲ್‌ಗಳನ್ನು ಕೊಟ್ಟಿದ್ದಾರೆ. As of today, I require fifty more hostels. ಸುಮಾರು 8,000 ಗಳಷ್ಟು ಮಕ್ಕಳು ನಮಗೆ ಹಾಸ್ಟೆಲ್ ಬೇಕು ಎಂದು ದುಂಬಾಲು ಬೀಳುತ್ತಾರೆ. ಬೇರೆ ಎಲ್ಲಾ ಜಿಲ್ಲೆಗಳಿಂದ ಇವತ್ತು ಹಾಸ್ಟೆಲ್,... ಹಣವು ಉಪಯೋಗವಾಗಬೇಕು ಎಂಬುದು ಐಡಿಯಾವಾಗಿದೆ. ಕಾರ್ಮಿಕ ಮಕ್ಕಳು boarding ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಬಾರದೇ? ಬಡ ಮಕ್ಕಳು ವಿದ್ಯಾಭ್ಯಾಸ ಮಾಡಬಾರದೇ? ಆಗಲಿ, ಬೋರ್ಡಿಂಗ್ ಸ್ಕೂಲ್‌ನಲ್ಲಿ ಎಲ್ಲಾದರೂ ಕಾರ್ಮಿಕ ಮಕ್ಕಳಿಗೆ ಜಾಗ ಕೊಡಿಸುತ್ತಾರೆಯೇ? What is the priority to get them into boarding school? ಇವತ್ತಿನ ದಿವಸ ಬೋರ್ಡಿಂಗ್ ಸ್ಕೂಲ್‌ನಲ್ಲಿ ಯಾವ ರೀತಿ ಆದ್ಯತೆ ನೀಡಲಾಗುತ್ತದೆ ಎಂದರೆ, 90%, 94% ಗಿಂತ ಹೆಚ್ಚು ಅಂಕಗಳಿಸಿರಬೇಕು. ಒಂದು ವೇಳೆ 90% ಗಿಂತ ಕಡಿಮೆ ಅಂಕ ಗಳಿಸಿದರೆ ಒ.ಬಿ.ಸಿ. ನವರಿಗೆ ಅಂತಹ ಶಾಲೆಗಳಲ್ಲಿ ಸೀಟ್ ಸಿಗುವುದಿಲ್ಲ. ಜೊತೆಗೆ written examination ನಡೆಸಲಾಗುತ್ತದೆ. ಆದರೆ, ಸರ್ಕಾರಿ ಶಾಲೆಗಳಿಗೆ ಯಾರ ಮಕ್ಕಳು ಹೋಗುತ್ತಾರೆ? ಬೆಲ್ದಾರರು, Painter, Carpenter, Tile mason ನವರ ಮಕ್ಕಳೇ ಓದುವುದು. ಮತ್ತೆ ಯಾರು ಸರ್ಕಾರಿ ಶಾಲೆಗಳಿಗೆ ಹೋಗುತ್ತಾರೆ? Who are the students going there? Competition ಇದ್ದರೂ ಅವರೇ ಹೋಗುತ್ತಾರೆ ಅಲ್ಲವೇ? Even though there is competition, still the children of construction labourers only go there. It would benefit them only, because we are collecting cess for them. They are earning the cess us only. They are entitled for this.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ರವಿಕುಮಾರ್‌ರವರು ಹೇಳಿದ valid ಅಂಶಗಳು ಸರಿಯಾಗಿವೆ. I understood, where you are coming from. What you said is... ಬೇರೆ infrastructure, ಬೇರೆ ಇಲಾಖೆಯಡಿ ನಡೆಸುವಂಥ ಶಾಲೆಗಳಿಗೆ ತೊಂದರೆಯಾಗುತ್ತಿದ್ದು, ಆ ಹಣವನ್ನು ಅಂತಹ ಶಾಲೆಗಳಿಗೆ ಕೊಡಿ ಎಂಬುದಾಗಿದೆ. If there was a provision, ನಿಮ್ಮ ಸರ್ಕಾರವೇ ಮೊದಲು ಕೊಟ್ಟುಬಿಡುತ್ತಿತ್ತು. ಎಲ್ಲಾ ಸರ್ಕಾರಗಳು ಕೊಡುತ್ತಿದ್ದವು. ಈ ಹಣ ಏನಿದೆ, ಅದನ್ನು ಬಿ.ಜೆ.ಪಿ. ಸರ್ಕಾರ ಇದ್ದಾಗಲೇ ಸುಮಾರು ರೂ. 6.50 ಕೋಟಿ, ರೂ. 7.00 ಕೋಟಿ ಖರ್ಚು ಮಾಡಿದೆ. I am not blaming you. There is no provision to give. If there was a provision your government also would have given. 2007ನೇ ಇಸವಿಯಲ್ಲಿಯೇ ಈ ಬೋರ್ಡ್ ಪ್ರಾರಂಭವಾಗಿದ್ದು, 2007 ನಿಂದ 2018 ರವರೆಗೆ ಎಷ್ಟು ದುಡ್ಡು ಇತ್ತು ಅದರಲ್ಲಿ? 2013 ರಿಂದ 2022-23 ರವರೆಗೂ I know by heart. I am really respecting your view. Only thing there is no provision to give money to any other department. If not, it would have been given very long back. Any subsequent government would have given it. ಹಾಗಾಗಿ, 6ನೇ ತರಗತಿಯಿಂದ 12ನೇ ತರಗತಿಯವರೆಗೂ ಮಾಡಲಾಗುತ್ತಿದೆ. ಮುಂದಿನ ದಿನಮಾನದಲ್ಲೂ ಕೂಡ. If things go well, ಮೊದಲನೆ ಹಂತದಲ್ಲಿ ಮಾಡುತ್ತಿದ್ದು, ಬಹಳಷ್ಟು ಎಂ.ಎಲ್.ಎ. ಗಳು ನಮಗೆ ಕೊಡಿ ಎಂದು ಕೇಳುವಂಥ ಬೇಡಿಕೆ ಇದೆ. ಅದಕ್ಕಾಗಿ ಮಾಡುತ್ತಿದ್ದೇವೆ. ಅವರು ಏನು ಹೇಳಿದ್ದಾರೆ, this money cannot be diverted. ಯಾರೇ ಕಾರ್ಮಿಕ ಸಚಿವರು ಇರಲೀ, ಯಾವುದೇ ಸರ್ಕಾರ ಅಧಿಕಾರಕ್ಕೆ ಬರಲಿ, ಈ ಹಣವನ್ನು ಬೇರೆ ಇಲಾಖೆಗೆ divert ಮಾಡಲಿಕ್ಕೆ ಬರುವುದಿಲ್ಲ. ಈ cess ಹಣವನ್ನು construction ನವರಿಗೇ ಕೊಡಬೇಕೆಂಬ ಕಾಯ್ದೆ ತಂದಿರುವುದರಿಂದ we are bound by it. That's why, ನಿಮಗೆ ಇರುವ apprehension ಏನೆಂದರೆ ನಾವು ಏಕೆ ಈ ಶಾಲೆಗಳನ್ನು ಕಟ್ಟುತ್ತಿದ್ದೇವೆ? ಇದನ್ನು ಕಟ್ಟಿಬಿಟ್ಟು ಹೇಗೆ ನಡೆಸುತ್ತಾರೆ ಎನ್ನುವುದಲ್ಲವೇ? I will just read it to you. ಅದನ್ನು ಓದಿ ತಮ್ಮ ಗಮನಕ್ಕೆ ತರಬಯಸುತ್ತೇನೆ. ಅದೇನೆಂದರೆ; Government of India vide letter dated:07/06/2016...

ಶ್ರೀ ಎಸ್.ಎಲ್.ಭೋಜೇಗೌಡ:- ಮಾನ್ಯ ಸಭಾಪತಿಯವರೇ, ನಾನು ಮಾತನಾಡಲು ಅವಕಾಶ ಕೇಳಿದ್ದು, ಮಾನ್ಯ ಸಚಿವರು ಅಂತಿಮವಾಗಿ ಉತ್ತರ ನೀಡಿದರೆ ನಾವು ಏನು ಮಾಡುವುದು?

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಸಂತೋಷ್ ಎಸ್. ಲಾಡ್:– ಮಾನ್ಯ ಸಭಾಪತಿಯವರೇ, ಆಗಲಿ. If they have valid point, I am ready to listen. ಮಾನ್ಯ ಭೋಜೇಗೌಡರವರಿಗೆ ನಾವು ಇಲ್ಲ ಎಂದು ಹೇಳಲು ಬರುವುದಿಲ್ಲ. ಅವರು ಏನು ಹೇಳುತ್ತಾರೆ ಎಂಬುದನ್ನು ಮೊದಲು ಹೇಳಲಿ.

ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ಮಾನ್ಯ ಸಂತೋಷ್ ಎಸ್.ಲಾಡ್‌ರವರು ಸಾಕಷ್ಟು ವಿಚಾರಗಳನ್ನು ಹೇಳುತ್ತಿದ್ದಾರೆ. ಇಲ್ಲಿ ಎರಡು ಸಂಗತಿಗಳಿವೆ. ಯಾವಾಗಲೂ ಸಾಮಾಜಿಕ ಮುಖ್ಯವಾಹಿನಿಯೊಳಗೆ ಆ ಮಕ್ಕಳನ್ನು ತರಬೇಕು. ಅದನ್ನು ಬಿಟ್ಟು ನಾವು ಆ ಮಕ್ಕಳನ್ನು isolate ಮಾಡಿ ಇಡುವಂಥ ಉದ್ದೇಶ ಒಳ್ಳೆಯದಾಗುವುದಿಲ್ಲ. ಶಿಕ್ಷಣ ಕೊಡಬೇಕೆಂಬುದು ಮಹತ್ವದ ಉದ್ದೇಶವಾದರೂ ಕೂಡ ಆ ಮಕ್ಕಳನ್ನು ಪ್ರತ್ಯೇಕವಾಗಿಟ್ಟರೆ ಮುಖ್ಯವಾಹಿನಿಯೊಳಗೆ ಬೆರೆಯುವುದು ಹೇಗೆ? ಆ ಮಕ್ಕಳಲ್ಲಿ ಕೀಳರಿಮೆ ಎಂಬುದು ಅವರ ಮನಸ್ಸಿನಲ್ಲಿ ಮೂಡುವುದಿಲ್ಲವೇ? ಕಾರ್ಮಿಕ ಇಲಾಖೆಯ ಮಕ್ಕಳು,...

ಶ್ರೀ ಸಂತೋಷ್ ಎಸ್. ಲಾಡ್:– ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಇದರಲ್ಲಿ ಎಸ್.ಸಿ/ಎಸ್.ಟಿ. ಮಕ್ಕಳು ಎಂಬುದು ಇಲ್ಲ.

ಶ್ರೀ ಸಿ.ಟಿ.ರವಿ:– ಮಾನ್ಯ ಸಭಾಪತಿಯವರೇ, ದಡ್ಡರ ನಡುವೆ ಬುದ್ಧಿವಂತ ಎಂಬುದಲ್ಲ, ಬುದ್ಧಿವಂತರ ನಡುವೆ ಬುದ್ಧಿವಂತರಾಗಬೇಕು.

(ಮುಂದು)

(689) 13.08.2025/5.00/ಎಸ್‌ಕೆ-ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)

ಶ್ರೀ ಸಂತೋಷ್ ಎಸ್. ಲಾಡ್ (ಕಾರ್ಮಿಕ ಸಚಿವರು):– ಮಾನ್ಯ ಸಿ.ಟಿ. ರವಿಯವರೇ, ಇದರ ಬಗ್ಗೆ ತಮಗೆ ವಿವರವಾಗಿ ಹೇಳುತ್ತೇನೆ. ಎಸ್.ಸಿ., ಎಸ್.ಟಿ. ಹಾಸ್ಟೆಲ್ ಅಥವಾ ಓ.ಬಿ.ಸಿ., ಹಾಸ್ಟೆಲ್ ತರ ಇದು ಅಲ್ಲ. ಯಾರು construction workers ಇರುತ್ತಾರೋ, ಅವರ ಮಕ್ಕಳು entitled for this. ಇದನ್ನು ಮಾಡಬೇಕಾಗಿರುವುದು ಕಾರ್ಮಿಕ ಇಲಾಖೆ.

ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶಿತರು):– ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಈ ಶಾಲೆಯಲ್ಲಿ ಆ ಊರಿನಲ್ಲಿ ಬರೀ ಕಾರ್ಮಿಕ ಮಕ್ಕಳಲ್ಲದೇ ಬೇರೆ ಮಕ್ಕಳನ್ನು admission ತೆಗೆದುಕೊಳ್ಳುವುದಿಲ್ಲವೇ?

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಸಂತೋಷ್ ಎಸ್. ಲಾಡ್:– ಬರುವುದಿಲ್ಲ. Construction workers' children ಇರಬೇಕು. ಆಯಿತು ಕುಳಿತುಕೊಳ್ಳಿ.

ಶ್ರೀಮತಿ ಭಾರತಿ ಶೆಟ್ಟಿ:– ತಮ್ಮ ಇಲಾಖೆಯಿಂದ ಶಾಲೆಗಳನ್ನೆಲ್ಲಾ ನಿರ್ಮಾಣ ಮಾಡಿ, ಅದನ್ನು ಕಾರ್ಮಿಕ ಇಲಾಖೆಗೆ ವರ್ಗಾವಣೆ ಮಾಡುತ್ತೀರಾ ಎಂದು ತಾವು ಹೇಳಿದಿರಿ. ಈಗಾಗಲೇ ಇರುವಂತಹ ಹಿಂದುಳಿದ ವರ್ಗಗಳ ಹಾಸ್ಟೆಲ್‌ಗಳನ್ನು ಕಣ್ಣಾರೆ ನೋಡಿ ಬಂದಿದ್ದೇವೆ. ನಾನು ಎರಡು ಬಾರಿ ಉಲ್ಲೇಖ ಮಾಡಿದ್ದೇನೆ.

ಶ್ರೀ ಸಂತೋಷ್ ಎಸ್. ಲಾಡ್:– ಮಾನ್ಯ ಸದಸ್ಯರೇ, ನಾನು ಒಂದು ಬಾರಿ ಓದಿ ಬಿಡುತ್ತೇನೆ. ತಾವು ಅದನ್ನು ಕೇಳಿಸಿಕೊಳ್ಳಿ. ಆಗ ತಾವು ಏನು ಪ್ರಶ್ನೆ ಕೇಳಬೇಕು ಅಂದುಕೊಂಡಿದ್ದೀರೋ, ಕೇಳಿ. ಮಾನ್ಯ ಸಿ.ಟಿ. ರವಿಯವರೇ, ಇಲ್ಲಿ ಏನಾಗಿದೆ, ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ನಾನು ಈ ಹಿಂದೆಯೂ ಕಾರ್ಮಿಕ ಸಚಿವನಾಗಿದ್ದೆ. ಇದಕ್ಕೆ ಸಂಬಂಧಿಸಿದಂತೆ Government of India vide letter dated:07/06/2016 ಅನ್ನು ಓದಬಯಸುತ್ತೇನೆ; *Order under Section 60 of BOCW (RE&CS) Act, 1996 issued a direction to all States. ...not to spend the cess fund for construction of buildings for schools, hospitals, training centres. labour shed-cum night shelter, waiting hall, hostels etc.,* ಅದ್ಯಾವುದೂ ಮಾಡಬಾರದು ಎಂದು ನಮಗೆ ಕೇಂದ್ರ ಸರ್ಕಾರ ಗೈಡ್‌ಲೈನ್ಸ್ ಕೊಟ್ಟಿದೆ. However, subsequently Government of India had issued an amendment to all the State Governments vide its letter dated: 1st of December 2023 ಏನೆಂದರೆ; *wherein provision has been created for education assistance* ಗೆ, *opening of special education, training institutions for the wards of registered BOC Workers. construction of school buildings for the children of BOC Workers may be done from the BOC Welfare Fund. Child Specific Expenditure like uniform, food etc., also may be borne from the cess fund..* ಎಂದು ಈ ತರಹ ಗೈಡ್‌ಲೈನ್ಸ್ ಇದೆ. ಹಾಗಾಗಿ, ತಮಗೆ ಆತಂಕವಿರುವುದೇನೆಂದರೆ, this would be definitely a standard one. ಕೆಲವು ಹಾಸ್ಟೆಲ್‌ಗಳೇನಿವೆ, definitely ಎಲ್ಲಾ ಇಲಾಖೆಗಳಲ್ಲಿ ಸರಿಯಿಲ್ಲದೇ ಹೋದರೂ ಕೂಡ ಕೆಲವು ಹಾಸ್ಟೆಲ್‌ಗಳು ಬಹಳ ಚೆನ್ನಾಗಿದ್ದಾವೆ. ನಮ್ಮ ಹತ್ತಿರ ದುಡ್ಡು ಇರುವುದರಿಂದ, ನಿಮ್ಮ ಹತ್ತಿರ ದುಡ್ಡು ಇದೆಯೇ? ಎಂದು ಅವರು ಕೇಳುತ್ತಿದ್ದಾರೆ. ನಮ್ಮ ಹತ್ತಿರ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದುಡ್ಡು ಇದೆ. ಈಗ ಉದಾಹರಣೆಗೆ ಹೇಳುತ್ತಿದ್ದೇನೆ. ನೀವು ಎಷ್ಟು ದುಡ್ಡು ಕೊಟ್ಟಿದ್ದೀರಾ ಎಂದು ಮಾನ್ಯ ಐವನ್ ಡಿ"ಸೋಜಾರವರು ನಾನು ಬಂದು ತಕ್ಷಣವೇ ಕೇಳಿದರು. ಈಗ ಕಳೆದ ಮೂರು ವರ್ಷಗಳಲ್ಲಿ ಹದಿನಾಲ್ಕು ಲಕ್ಷ ಮಕ್ಕಳಿಗೆ ದುಡ್ಡು ಕೊಟ್ಟಿದ್ದೇವೆ. Again, we are spending more money. Whole idea is... ನಾವು ಕೂಡ ಕಾರ್ಮಿಕರ ಮಕ್ಕಳಿಗೆ ಅನುಕೂಲವಾಗಬೇಕು. ಏಕೆಂದರೆ ಅವರಿಂದಲೇ ನಮಗೆ ಸೆಸ್ ಬರುವುದು. ನಮಗೆ ಸಾವಿರಾರು ಕೋಟಿ ರೂಪಾಯಿಗಳಷ್ಟು ಸೆಸ್ ಬರುವಂತಹ ಕಾರಣ ಅವರಾಗಿದ್ದಾರೆ. ಆ ದುಡ್ಡು ಅವರ ಮಕ್ಕಳಿಗೆ ಅನುಕೂಲವಾಗುವುದಕ್ಕೆ ಕಾರ್ಯಕ್ರಮವನ್ನು ಮಾಡುತ್ತಿದ್ದೇವೆ. Further, if there anything, you please tell. ನೀವು ಕೇಳುವಂತಹ fundamental point. ಬೇರೆ ಇಲಾಖೆಗೆ ದುಡ್ಡು ಕೊಡುವುದಕ್ಕೆ there is no provision. ಹಾಗೇನಾದರೂ ಕೇಂದ್ರ ಸರ್ಕಾರ ಪ್ರಾವಿಷನ್ ಮಾಡಿದರೆ, ನಾಳೆ ಎಲ್ಲರಿಗೂ ಕೊಟ್ಟುಬಿಡಬಹುದು. There is no way that can be done ಎನ್ನುವುದು ನನ್ನ ಅಭಿಪ್ರಾಯ.

ಶ್ರೀ ಎನ್. ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):– ಮಾನ್ಯ ಸಭಾಪತಿಯವರೇ, ಈಗ...

ಶ್ರೀ ಸಿ.ಟಿ. ರವಿ (ವಿಧಾನಸಭಾ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ಒಂದು clarification ಇದೆ. ಮಾನ್ಯ ಸಚಿವರೇ, ತಾವು ಮೂವತ್ತೊಂದು ಜಿಲ್ಲೆಗಳಿಗೆ ವಸತಿ ಶಾಲೆಗಳನ್ನು ನಿರ್ಮಾಣ ಮಾಡಬೇಕೆಂದು ಮೂವತ್ತೊಂದು ಜಿಲ್ಲೆಗಳಲ್ಲಿ ಈ ಶಾಲೆಗೆ ವಸತಿ ಶಾಲೆಗೆ ಬೇಕಾದಂತಹ ಜಾಗ ಗುರುತಿಸಿದ್ದೀರಿ.

ಶ್ರೀ ಸಂತೋಷ್ ಎಸ್. ಲಾಡ್:– ಮಾನ್ಯ ಸದಸ್ಯರೇ, ಎಲ್ಲ ಕಡೆಗಳಲ್ಲಿ ಆಗಿದೆ.

ಶ್ರೀ ಸಿ.ಟಿ. ರವಿ:– ಎಲ್ಲಾ ಕಡೆಗಳಲ್ಲಿ ಜಾಗವನ್ನು ಗುರುತಿಸಿದ್ದೀರಿ. ತಮ್ಮ ಇಲಾಖೆಯಿಂದ ಶಾಲೆಯನ್ನು ನಡೆಸುವುದಿಲ್ಲ. ಇದಕ್ಕೆ ಸಂಬಂಧಪಟ್ಟ ಬೇರೆ ಇಲಾಖೆಗಳಿಗೆ ಇದನ್ನು ವಹಿಸಿಕೊಡುತ್ತೀರಿ. ಇದರೊಳಗಡೆ ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಇಲಾಖೆಯಲ್ಲೂ 70:30 ಎಂದು ಹೀಗೆ blend ಮಾಡಿದ್ದಾರೆ. ಬರೀ ಕಾರ್ಮಿಕರ ಮಕ್ಕಳಿಗೆ ಮಾತ್ರ ಎಂದು ಮಾಡಿದರೆ, ಅವರನ್ನು isolate ಮಾಡಿದಂತಾಗುತ್ತದೆ. ಅವರು ಮುಖ್ಯವಾಹಿನಿಗೆ ಬರುವುದಿಲ್ಲ.

ಶ್ರೀ ಸಂತೋಷ್ ಎಸ್. ಲಾಡ್:– ಮಾನ್ಯ ಸಿ.ಟಿ. ರವಿಯವರೇ, provision of Act ಬರುವುದಿಲ್ಲ ಎಂದು ನಾನು ಅದನ್ನೇ ಹೇಳುತ್ತಿದ್ದೇನೆ. ತಾವು ಹೇಳುತ್ತಿರುವುದು ಸರಿ ಇದೆ. You have got a valid point. ಇದರಲ್ಲಿ ಏನಾಗುತ್ತದೆ ಎಂದರೆ 80:20 ಮಾಡಬಹುದು. 70:30 model depends upon how much other ಇಲಾಖೆಗಳಿಗೆ ದುಡ್ಡು ಕೊಡುತ್ತಾರೆ. ಅದನ್ನು ಮಾಡದೇ ಇದ್ದರೆ...yes there could be a provision. ಆದರೆ, ನಾವು ಇನ್ನೂ ಅದನ್ನು ಮಾಡಿಲ್ಲ.

ಶ್ರೀ ಸಿ.ಟಿ. ರವಿ:– ಅದಕ್ಕೊಂದು ಪ್ರಸ್ತಾವನೆ ತಂದು ತಿದ್ದುಪಡಿ ಮಾಡಿಸಿ. ಎಲ್ಲಾ ತಿದ್ದುಪಡಿ ಮಾಡಬಹುದು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಸಂತೋಷ್ ಎಸ್. ಲಾಡ್:– ಅದನ್ನು ಮಾಡಬಹುದು. ಇದು complete cess ದುಡ್ಡು ಜೊತೆಗೆ ಸರ್ಕಾರದ ಬೇರೆ ಇಲಾಖೆಯ ದುಡ್ಡು ಬಂದರೆ, ಪ್ರಾವಿಷನ್ ಮಾಡಿಕೊಳ್ಳಬಹುದು. Because we are creating infrastructure. Recurring expenditure ಬೇರೆ ಇಲಾಖೆಯಿಂದ ಮಾಡಬಹುದು. ಮಾನ್ಯ ಸಿ.ಟಿ. ರವಿಯವರೇ, ತಾವು ಹೇಳಿರುವುದು valid point ಇದೆ.

ಸಭಾಪತಿಯವರು:– ತಾವು ಏನು ಬೇಕಿದೆ ಅದನ್ನು ಮಾಡಿ.

ಶ್ರೀ ಸಂತೋಷ್ ಎಸ್. ಲಾಡ್:– ಬೇರೆ ಇಲಾಖೆಯಿಂದ recurring expenditure ಇದ್ದರೆ ಅದನ್ನು ಮಾಡಬಹುದು. ..... ಮಾನ್ಯ ಸಿ.ಟಿ. ರವಿಯವರೇ, ಅವರ share ಬಂದರೆ ಮಾಡಬಹುದು.

ಶ್ರೀ ಎನ್. ರವಿಕುಮಾರ್:– ಮಾನ್ಯ ಸಭಾಪತಿಯವರೇ, ನಾವು clarification ತೆಗೆದುಕೊಳ್ಳುತ್ತಿದ್ದೇವೆ. ತಾವು ಹೇಳುವ recurring expenditure ಅನ್ನು ಒಪ್ಪಿಕೊಂಡಿದ್ದೇವೆ. ಅವರಿಗೆ ಉಚಿತವಾಗಿ ಶಿಕ್ಷಣವನ್ನು ಕೊಡುತ್ತೀರಾ. ಅವರಿಗೆ ಯಾವುದೇ ಶುಲ್ಕ ಇರುವುದಿಲ್ಲ. Recurring expenditure....

ಶ್ರೀ ಸಂತೋಷ್ ಎಸ್. ಲಾಡ್:– ಮಾನ್ಯ ಸಭಾಪತಿಯವರೇ, recurring expenditure ಎಂದರೆ ಟೀಚರ್‌ಗಳಿಗೆ ಕೊಡುವಂತಹ ಹಣ, ಅದನ್ನು ಬಿ.ಸಿ.ಎಂ., ಇಲಾಖೆಯಿಂದ ಕೊಡುತ್ತಿದ್ದಾರೆ. ನಾವು ಅವರಿಗೆ ಏಕೆಂದರೆ ಪರ್ಯಾಯವಾಗಿ how many years the schools will run, they have to pay. ನಾವು ನಮ್ಮ ಬೋರ್ಡ್‌ನಿಂದ ಕೊಡಲಾರದಂತಹ ಸಂದರ್ಭದಲ್ಲಿ ...

Sri N.RAVIKUMAR: Who have pay?

ಶ್ರೀ ಸಂತೋಷ್ ಎಸ್. ಲಾಡ್:– ಬೋರ್ಡ್‌ನಿಂದ ಕೊಡಲಾರದಂತಹ ಸಂದರ್ಭದಲ್ಲಿ ಸರ್ಕಾರದ ಬಿ.ಸಿ.ಎಂ., ಇಲಾಖೆಯಿಂದ ಕೊಡುವಂಥದ್ದು. ಬೇರೆ ಇಲಾಖೆಯಿಂದ ಕೊಡತಕ್ಕಂತದ್ದು. ಅಲ್ಲಿಗೆ ಮಾನ್ಯ ಸಿ.ಟಿ. ರವಿಯವರು ಹೇಳಿರುವ ಪಾಯಿಂಟ್ ಸರಿಯಿದೆ. 20:30, 30:70 ratio ಅನ್ನು ಮಾಡಬಹುದು.

ಶ್ರೀ ಎನ್. ರವಿಕುಮಾರ್:– ನನ್ನ ವಾದವೇನೆಂದರೆ, ಮೂವತ್ತೊಂದು ಕಡೆಗಳಲ್ಲಿ ವಸತಿ ಶಾಲೆಗಳನ್ನು ನಿರ್ಮಿಸುವಲ್ಲಿ ಅದೇ ಕೇಂದ್ರಗಳಲ್ಲಿ ಅಡ್ಮಿಷನ್ ಆಗದೇ ಹತ್ತಾರು ಸ್ಕೂಲ್‌ಗಳಿದ್ದಾವೆಯೆಲ್ಲಾ, ಆ ಕಟ್ಟಡಗಳನ್ನು ಉಪಯೋಗಿಸಿ.

ಸಭಾಪತಿಯವರು:– ಮಾನ್ಯ ರವಿಕುಮಾರ್‌ರವರೇ, ಆ ತರಹ ಹೇಗೆ ಮಾಡುತ್ತಾರೆ?

ಶ್ರೀ ಸಂತೋಷ್ ಎಸ್. ಲಾಡ್:– ಮಾನ್ಯ ರವಿಕುಮಾರ್‌ರವರೇ, ತಮ್ಮ concept ಅರ್ಥವಾಗುವುದಿಲ್ಲವಲ್ಲ. ಮಾನ್ಯ ರವಿಕುಮಾರ್‌ರವರೇ, ತಮ್ಮ concept ಏನು? ಇನ್ನು ಮುಂದೆ ಏನೂ ಮಾಡೋಣವೆಂದರೆ, ಇಲ್ಲಿ ಯಾವುದೇ ಹೊಸ ಶಾಲಾ-ಕಾಲೇಜು ಕಟ್ಟಡ ಆಗುವುದು ಬೇಡ. ಹಳೆ ಕಟ್ಟಡಗಳಲ್ಲಿ ನಡೆಸಬೇಕೆಂಬುದರ ಬಗ್ಗೆ ಹೇಳುತ್ತೀರಿ.

ಶ್ರೀಮತಿ ಭಾರತಿ ಶೆಟ್ಟಿ:– ಮಾನ್ಯ ರವಿಕುಮಾರ್ ಹೇಳಿರುವುದು ತಮಗೆ ಅರ್ಥವಾಗಲಿಲ್ಲ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಸಂತೋಷ್ ಎಸ್. ಲಾಡ್:– ಮಾನ್ಯ ಭಾರತಿ ಶೆಟ್ಟಿಯವರೇ, ಮಾನ್ಯ ರವಿಕುಮಾರ್‌ರವರು ಹೇಳಿದ್ದು ನನಗೆ ಅರ್ಥವಾಯಿತು. ತಮಗೆ ಅರ್ಥವಾಗುತ್ತಿಲ್ಲ. ಅವರು buildings ವಿರುದ್ಧವಿದ್ದಾರೆ ಎಂದು ನನಗೆ ಅರ್ಥವಾಯಿತು.

ಶ್ರೀಮತಿ ಭಾರತಿ ಶೆಟ್ಟಿ:–ಮಾನ್ಯ ಸಚಿವರೇ, ಒಂದು ನಿಮಿಷ ಕೇಳಿ. ಶಿವಮೊಗ್ಗದಲ್ಲಿ ಒಂದು ಹಾಸ್ಟೆಲ್ ಇದೆ. ಅಲ್ಲಿ ಮಕ್ಕಳು ಇಲ್ಲ. ಅಲ್ಲಿ ಕಟ್ಟಡ ಇದೆ. ಶಿಕ್ಷಕರು ಕೂಡ ಇದ್ದಾರೆ. ಉದಾಹರಣೆಗೆ ಹೇಳುವುದಾದರೆ..

ಶ್ರೀ ಸಂತೋಷ್ ಎಸ್. ಲಾಡ್:– ಮಾನ್ಯ ಭಾರತಿ ಶೆಟ್ಟಿಯವರೇ, ಅದಕ್ಕೂ ಇದಕ್ಕೂ ಏನು ಲಿಂಕ್?

ಶ್ರೀಮತಿ ಭಾರತಿ ಶೆಟ್ಟಿ:– ಆಗ ತಾವು ಇನ್ನೊಂದು ಕಟ್ಟಡ ಪ್ರಾರಂಭ ಮಾಡಿದರೆ, ಅ ಕಟ್ಟಡದ ವೆಚ್ಚದ ಭಾಗವನ್ನು ತೆಗೆದುಕೊಳ್ಳಬಹುದಲ್ಲವೇ?

ಶ್ರೀ ಸಂತೋಷ್ ಎಸ್. ಲಾಡ್:– ಮಾನ್ಯ ಸದಸ್ಯರೇ, ಅದಕ್ಕೆ ಪ್ರಾವಿಷನ್ ಇಲ್ಲ ಎಂದು ನಾನು ಹೇಳುತ್ತಿದ್ದೇನೆ. ತಾವು ಅದನ್ನೇ ಹೇಳುತ್ತಿದ್ದೀರಿ.

ಡಾ॥ ಎಂ.ಸಿ. ಸುಧಾಕರ್ (ಉನ್ನತ ಶಿಕ್ಷಣ ಸಚಿವರು):– ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ನಮ್ಮ ಇಲಾಖೆಯ ಒಂದು ಉದಾಹರಣೆಯನ್ನು ಕೊಡುತ್ತೇನೆ. ನಮ್ಮ ಇಲಾಖೆಯಲ್ಲಿ ಪಾಲಿಟೆಕ್ನಿಕ್‌ಗೆ ಹಾಸ್ಟೆಲ್ ಕಟ್ಟುವಂತಹ ಒಂದು ಅಭ್ಯಾಸ ಹಿಂದಿನಿಂದಲೂ ಇತ್ತು. ಹಲವಾರು ಪಾಲಿಟೆಕ್ನಿಕ್ ಹಾಸ್ಟೆಲ್‌ಗಳು ಕಟ್ಟಿ ನಿರ್ಮಾಣವಾಗಿ ಹಾಗೇ ಇದೆ. ಈಗ ಅದೆನ್ನೆಲ್ಲಾ ನಾವು ಬಿ.ಸಿ.ಎಂ.ಗೆ ಹಸ್ತಾಂತರ ಮಾಡುತ್ತಿದ್ದೇವೆ. ಕಂಡಿಷನ್ ಏನೆಂದರೆ, ಶೇಕಡಾ 70 ರಷ್ಟು ಪಾಲಿಟೆಕ್ನಿಕ್ ಅಥವಾ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಕೊಡಬೇಕು. ಶೇಕಡಾ 30 ರಷ್ಟು ಬೇರೆಯವರಿಗೆ ಕೊಡಿ. ಕಾರಣವೇನೆಂದರೆ, ಅಲ್ಲಿ ನಮ್ಮ ಮೆಸ್ ಇದೆ.. ಮೆಸ್‌ನಲ್ಲಿ ಒಂದು dividing system ಬರುತ್ತದೆ. ಮಕ್ಕಳು ಆ dividing system ನಲ್ಲಿ ಹಣ ಕೊಡುವುದಕ್ಕೆ ನಮಗೆ ಕಷ್ಟವಾಗುತ್ತದೆ. ಈಗ post-metric hostels ಬರುತ್ತಿರುವುದರಿಂದ ಇವತ್ತು ಎಲ್ಲಾ ಬಡ ಮಕ್ಕಳಿಗೆ ಹಣ ಉಳಿಯಬೇಕು. ಮೆಸ್ ಬಿಲ್ ಉಳಿಯಬೇಕು ಎನ್ನುವ ಮನಸ್ಥಿತಿಯಲ್ಲಿದ್ದಾರೆ. ಅದಕ್ಕೆ ನಾವು ನಮ್ಮ ಇಲಾಖೆಯಿಂದ ಕಳೆದ ವರ್ಷ ಸುಮಾರು 72 ಹಾಸ್ಟೆಲ್‌ಗಳನ್ನು ಹಸ್ತಾಂತರ ಮಾಡಿದ್ದೇವೆ. ಮೊನ್ನೆ ತಾನೇ ಸುಮಾರು 18-20 ಹಾಸ್ಟೆಲ್‌ಗಳನ್ನು ಕೊಡುತ್ತಿದ್ದೇವೆ. ಇನ್ನೂ ಎಲ್ಲೆಲ್ಲಿ ಕೊಡುವುದಕ್ಕೆ ಅವಕಾಶವಿದೆಯೋ, ಸಮಾಜ ಕಲ್ಯಾಣ ಇಲಾಖೆಗೂ ಕೊಡುವುದಕ್ಕೆ ತಯಾರಿದ್ದೇವೆ. ಈಗ ಏನಾಗಿದೆ ಎಂದರೆ ಅದು ನಿರ್ವಹಣೆಯಾಗದೇ ತೊಂದರೆಯಾಗುತ್ತಿದೆ. ಈಗ ಅದನ್ನು ಇಲಾಖೆಗಳಿಗೆ ಕೊಟ್ಟಾಗ ಅವರು ಅದನ್ನು post-metric ಮಕ್ಕಳು ಅಲ್ಲಿ ಸೇರಿಕೊಂಡು ಉನ್ನತ ಶಿಕ್ಷಣ ವ್ಯಾಸಂಗ ಮಾಡುವಂತಹ ಒಂದು ಬದಲಾವಣೆ. ಕಾಲ ಕಾಲಕ್ಕೆ ಕೆಲವು ಬದಲಾವಣೆಗಳು ಆಗುತ್ತಿರುತ್ತವೆ. ತಾವು ಹೇಳುವುದೇನೆಂದರೆ, ಇರುವಂತಹ ಶಾಲೆಗಳ ಕಟ್ಟಡಗಳು, ಈಗ ಎಲ್ಲಾ ಮಕ್ಕಳು ಇಲ್ಲಿಗೆ ಹೋಗಿ ಸೇರಿ ಬಿಟ್ಟರೆ, ನಾಳೆ ಅಲ್ಲ infrastructure ಏನು? ಹಳ್ಳಿಗಳಲ್ಲಿ infrastructure create ಮಾಡಿದ್ದೇವೆ. ಅದೆಲ್ಲವೂ ವ್ಯರ್ಥವಾಗುತ್ತದೆ. ಈಗಾಗಲೇ ತಮಗೆಲ್ಲರಿಗೂ ಗೊತ್ತಿರುವಂತೆ, ಇಂಗ್ಲೀಷ್ ವ್ಯಾಮೋಹ ಯಾವ ರೀತಿ ಆಗಿದೆ? ಇವತ್ತು ಹಳ್ಳಿಗಳಲ್ಲಿ ದಿನ ಬೆಳಗ್ಗೆ ನೋಡಿದರೆ ಎರಡು ಮೂರು ವ್ಯಾನ್ ಪ್ರೈವೆಟ್ ಶಾಲೆಗೆ ಹೋಗುತ್ತಿರುತ್ತವೆ. ಮಕ್ಕಳನ್ನು ವ್ಯಾನ್‌ನಲ್ಲಿ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಳುಹಿಸುತ್ತಾರೆ. ಮಕ್ಕಳು ಸುಮಾರು ಅರ್ಧ-ಮುಕ್ಕಾಲು ಗಂಟೆಗಳ ಕಾಲ ಹಳ್ಳಿಗಳಿಂದ ಟ್ರಾವೆಲ್ ಮಾಡುತ್ತಾರೆ. ಆ ರೀತಿ ಈಗ ಜನರ ಮನಸ್ಥಿತಿಗಳು ಯಾವ ರೀತಿ ಬದಲಾಗುತ್ತದೆ ಕಾಲ ಕಾಲಕ್ಕೆ ನಾವು ಯಾರೂ ನಿರೀಕ್ಷೆ ಮಾಡುವುದಕ್ಕಾಗುವುದಿಲ್ಲ. ಆ ರೀತಿ ಇದೆ. ಅದರಿಂದ ಇವತ್ತು ಹಾಸ್ಟೆಲ್‌ಗೆ ಮಕ್ಕಳು ಹೋಗಬೇಕು. ಗುಣಮಟ್ಟದ ಊಟ ಸಿಗುತ್ತದೆ ಹಾಗೂ ಒಳ್ಳೆಯ ಕೋಚಿಂಗ್ ಸಿಗುತ್ತದೆ ಎಂಬ ಬಗ್ಗೆ ಮಕ್ಕಳಲ್ಲಿ ಮತ್ತು ವಿಶೇಷವಾಗಿ ಪೋಷಕರಲ್ಲಿ ನಂಬಿಕೆ ಬಂದಿದೆ. ಅದರಿಂದ ಇವತ್ತು ವಸತಿ ಶಾಲೆಗೆ ಬಹಳ ಒತ್ತಡ ಬಂದಿದೆ. ಇವೆಲ್ಲಾ ಬಹಳಷ್ಟು ಕಾರಣಗಳಿವೆ. ಅದಕ್ಕೆ ಇವತ್ತು ಸರ್ಕಾರಿ ಹಾಸ್ಟೆಲ್ ಏನು ಈ ತರಹ dividing system ಇರುವಂತಹದ್ದನ್ನು ಯಾರೂ ಒಪ್ಪುವುದಕ್ಕೆ ತಯಾರಿಲ್ಲ. ಅದಕ್ಕೆ ನಾವು ಸಂಬಂಧಪಟ್ಟ ಇಲಾಖೆಗಳ ಮುಖಾಂತರ ಮಕ್ಕಳಿಗೆ ಉಚಿತವಾಗಿ ಊಟ ಕೊಡುವಂತಹ ವ್ಯವಸ್ಥೆ ಇವೆಲ್ಲವನ್ನು ಮಾಡಿರುವುದರಿಂದ ಇವತ್ತು ವಸತಿ ಶಾಲೆಗಳಿಗೆ ಹೆಚ್ಚು ಬೇಡಿಕೆ ಇದೆ. ನಮ್ಮ ತಾಲ್ಲೂಕುಗಳಲ್ಲಿ ಬಹಳಷ್ಟು ಜನರು ಸೀಟು ಕೊಡಿಸಿ ಎಂದು ಒತ್ತಡಗಳನ್ನು ತರುತ್ತಾರೆ. ಈಗ ಖಾಸಗಿ ಕಾಲೇಜು ಮತ್ತು ಡಿಗ್ರಿ ಕಾಲೇಜಿಗೆ ಸೇರುತ್ತಾರೆ. ಆದರೆ ಸರ್ಕಾರಿ post-metric hostel ನಲ್ಲಿ ಬಂದು ಸೀಟು ಕೇಳುತ್ತಾರೆ ಎಂಬುದು ಎಲ್ಲರಿಗೂ ಗೊತ್ತಿದೆ. ಇವತ್ತು ಕಾಲ ಕಾಲಕ್ಕೆ ಬದಲಾವಣೆ ಇರುತ್ತದೆ. ಅದರಿಂದಾಗಿ, ನಾವೆಲ್ಲರೂ ಅರ್ಥ ಮಾಡಿಕೊಳ್ಳಬೇಕಾಗುತ್ತದೆ.

ಶ್ರೀಮತಿ ಭಾರತಿ ಶೆಟ್ಟಿ:- ಮಾನ್ಯ ಸಭಾಪತಿಯವರೇ, ಮಾನ್ಯ ಉನ್ನತ ಶಿಕ್ಷಣ ಸಚಿವರು, ಸಚಿವ ಸ್ಥಾನದಲ್ಲಿದ್ದುಕೊಂಡು, ಹೇಳಿದ್ದು ನನಗೆ ಬಹಳ ನೋವಾಯಿತು. ವಸತಿ ಶಾಲೆಗಳನ್ನು ನಿರ್ಮಿಸುತ್ತಿದ್ದೇವೆ ಮತ್ತು ಒಳ್ಳೆಯ ಗುಣಮಟ್ಟ ಶಿಕ್ಷಣ ಕೊಡುತ್ತೇವೆ. ಅದು ಮಕ್ಕಳಿಗೆ ಬೇಕು ಎಂದು ಕಾರ್ಮಿಕ ಸಚಿವರು ಕೂಡ ಹೇಳುತ್ತಿದ್ದಾರೆ. ಆಯಾ ವರ್ಗಳಿಗೆ ತಮ್ಮದೇ ಆದ ವಸತಿ ಶಾಲೆಗಳು ಇರುತ್ತದೆ. ಬೇರೆ ಖಾಸಗಿ ಪ್ರೈಮರಿ ಶಾಲೆಗಳು. ಅವರು ಬೇರೆ ಶಾಲೆಗಳಿಗೆ ವ್ಯಾನ್‌ನಲ್ಲಿ ಹೋಗುತ್ತಾರೆ ಎಂದು ಸಚಿವರು ಹೇಳುವಾಗ, ಸರ್ಕಾರಿ ಬೇರೆ ವಸತಿ ಶಾಲೆಗಳನ್ನು ಸಹ ಸರಿಯಾಗಿ ಇಟ್ಟುಕೊಳ್ಳಬೇಕೆಂಬ ಬಗ್ಗೆ ನಮಗೆ ಉದ್ದೇಶವಿರಬೇಕು. ಒಬ್ಬ ಮಂತ್ರಿಯಾಗಿ ಆ ರೀತಿ ಹೇಳುತ್ತಿರುವುದು ಬಹಳ ನೋವಾಗುತ್ತದೆ.

ಡಾ॥ ಎಂ.ಸಿ. ಸುಧಾಕರ್:- ಮಾನ್ಯ ಭಾರತಿ ಶೆಟ್ಟಿಯವರೇ, ನಾನು ಹೇಳಿದ್ದನ್ನು ತಾವು ಅರ್ಥ ಮಾಡಿಕೊಳ್ಳಲಿಲ್ಲ. ತಾವು fact ಅನ್ನು ಅರ್ಥ ಮಾಡಿಕೊಳ್ಳಿ. ನೀವು ಹಾಸ್ಟೆಲ್ ....

ಶ್ರೀಮತಿ ಭಾರತಿ ಶೆಟ್ಟಿ:- ಹಾಸ್ಟೆಲ್ ಸ್ಥಿತಿ ಯಾವ ರೀತಿ ಇದೆ ಎಂಬುದನ್ನು ನಾನು ಹೋಗಿ ನೋಡಿದ್ದೇನೆ. ಅಲ್ಲಿ ಕಿಟಕಿಗಳು, ಬಾಗಿಲುಗಳು ಇಲ್ಲ. ವಸತಿ ಶಾಲೆಗಳು ಯಾವ ರೀತಿ ಇದೆ?

ಡಾ॥ ಎಂ.ಸಿ. ಸುಧಾಕರ್:- ಮಾನ್ಯ ಭಾರತಿ ಶೆಟ್ಟಿಯವರೇ, ನಾನು ಹೇಳುವುದನ್ನು ತಾವು ಒಂದು ನಿಮಿಷ ಕೇಳಿ. ತಾವು ಅರ್ಥಮಾಡಿಕೊಂಡಿರುವುದು ಬೇರೆ. ತಾವು ಒಂದು ನಿಮಿಷ ಕೇಳಿ. ನಾನು ಎಂಟನೇ ತರಗತಿಯಿಂದ ಹಾಸ್ಟೆಲ್‌ನಲ್ಲಿದ್ದುಕೊಂಡು ನನ್ನ ಪೂರ್ಣ ವಿದ್ಯಾಭ್ಯಾಸವನ್ನು ಮಾಡಿರುವಂತಹದ್ದು. ನಾನು ಎಲ್ಲಾ ಹಾಸ್ಟೆಲ್‌ಗಳಲ್ಲಿದ್ದುಕೊಂಡು ಓದಿದ್ದೇನೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಭಾಪತಿಯವರು:– ಎಲ್ಲರೂ ಕೂಡ ಹಾಸ್ಟೆಲ್‌ನಲ್ಲಿದ್ದುಕೊಂಡು ಓದಿದವರು.

ಡಾ॥ ಎಂ.ಸಿ. ಸುಧಾಕರ್:– ನಾನು ಹೇಳುತ್ತಿರುವುದೇನೆಂದರೆ, ಊಟದ ವ್ಯವಸ್ಥೆಯಲ್ಲಿ dividing system ಇದೆ.

ಸಭಾಪತಿಯವರು:– ಡಾ॥ ಸುಧಾಕರ್‌ರವರೇ, ತಾವು ಹುಡುಗಾಟಿಕೆ ಮಾಡುತ್ತೀರಾ ಎಂದು ನಿಮ್ಮನ್ನು ಹಾಸ್ಟೆಲ್‌ಗೆ ಹಾಕಿದ್ದಾರೆ.

ಡಾ॥ ಎಂ.ಸಿ. ಸುಧಾಕರ್:– ಮಾನ್ಯ ಸಭಾಪತಿಯವರೇ, ಅದರಿಂದ ನಾವು ಹೇಳುವುದೇನೆಂದರೆ, 2017ರಲ್ಲಿ ಶ್ರೀ ರಾಯರೆಡ್ಡಿಯವರು ಉನ್ನತ ಶಿಕ್ಷಣ ಸಚಿವರಿದ್ದಾಗ, 10-11 residential colleges ಮಾಡಿದರು. ಈಗ ಅಲ್ಲಿ ಏನಾಗಿದೆ ಎಂದರೆ, ಆ ಹಾಸ್ಟೆಲ್‌ಗಳನ್ನು ಬಿ.ಸಿ.ಎಂ., ಗೆ ಕೊಟ್ಟು ಬಿಡಿ. ಅಲ್ಲಿ admissions ಆಗುತ್ತಿಲ್ಲ. ಅಲ್ಲಿ dividing system ಇದೆ. ನಮಗೆ ಸಾವಿರ ರೂಪಾಯಿ ಅಥವಾ ಒಂದೂವರೆ ಸಾವಿರ ರೂಪಾಯಿಗಳು ಮೆಸ್ ಬಿಲ್ ಪ್ರತಿ ತಿಂಗಳು ಬರುತ್ತದೆಯೋ, ಅದನ್ನು ಕಟ್ಟುವುದಕ್ಕಾಗುವುದಿಲ್ಲ. ಅದನ್ನು ಬಿ.ಸಿ.ಎಂ.ಗೆ ಕೊಡಿ. ಈ ತರಹ ಒಂದು ಅವ್ವೊತ್ತಿನ ದಿವಸ ಅಲೋಚನೆ ಮಾಡಿ residential degree college ಮಾಡುವಂತಹದ್ದನ್ನು ಮಾಡಿದ್ದಾರೆ. ಇದರ ಉದ್ದೇಶ ಹೇಳುತ್ತೀರುವುದೇನೆಂದರೆ, ಕಾಲೇಜಿನಲ್ಲಿ ಗುಣಮಟ್ಟವಿಲ್ಲ ಎಂಬುದಲ್ಲ. ಹಾಸ್ಟೆಲ್‌ನ ಊಟದ ಆ ಒಂದು ಮೆಸ್ ಬಿಲ್‌ನ್ನು ತುಂಬುವುದಕ್ಕೆ ಆರ್ಥಿಕವಾಗಿ ನಮಗೆ ಚೈತನ್ಯವಿಲ್ಲ. ಅದೇ ಸರ್ಕಾರದ ಬಿ.ಸಿ.ಎಂ., ಎಸ್.ಸಿ., ಎಸ್.ಟಿ., ಇಲಾಖೆಗಳ ಮುಖಾಂತರವಾದರೆ ನಮಗೆ ಉಚಿತವಾಗುತ್ತದೆ ಎಂಬುದು ಅಲೋಚನೆ. ಅದನ್ನು ತಾವು ಅರ್ಥಮಾಡಿಕೊಳ್ಳಿ. ಬೇರೆ ಏನಿಲ್ಲ.

ಶ್ರೀಮತಿ ಭಾರತಿ ಶೆಟ್ಟಿ:– ಮಾನ್ಯ ಸಭಾಪತಿಯವರೇ, ಹಾಸ್ಟೆಲ್ ಸರಿಯಿಲ್ಲ ಎಂದು ತಾವು ಸರಿಯಾಗಿ ಹೇಳಿದರಿ.

ಶ್ರೀ ಡಿ.ಟಿ. ಶ್ರೀನಿವಾಸ್:– ಮಾನ್ಯ ಸಭಾಪತಿಯವರೇ,..

(ಗೊಂದಲ)

ಶ್ರೀಮತಿ ಭಾರತಿ ಶೆಟ್ಟಿ:– ಮಾನ್ಯ ಸಭಾಪತಿಯವರೇ, ಒಂದು ಹಾಸ್ಟೆಲ್‌ನ್ನು ಸಭಾನಾಯಕರು ಯಾರ ಸೂಚನೇ ಇಲ್ಲದೇ ಅವರೇ ಸರಿಮಾಡಿದ್ದರು. ಅಂತಹದ್ದು ಎಷ್ಟಿದೆ?

ಸಭಾಪತಿಯವರು:– ಶ್ರೀಮತಿ ಭಾರತಿ ಶೆಟ್ಟಿಯವರೇ, ಬೇರೆಯವರು ಮಾತನಾಡಲಿ, ನೀವೇ ಮಾತನಾಡಿದರೆ ಹೇಗೆ? ತಾವು ಕುಳಿತುಕೊಳ್ಳಿ.

(ಮುಂದು)

(690) 13.08.2025 5.10 ಬಿಸಿಹೆಚ್-ವಿಕೆ (ಸಭಾಪತಿಯವರ ಉಪಸ್ಥಿತಿ)

ಶ್ರೀ ಡಿ.ಟಿ. ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ಹಾಸ್ಟೆಲ್ ವಿಚಾರವಾಗಿ 10 ನಿಮಿಷಗಳ ಕಾಲ ಮಾತನಾಡುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ, ನಾನು ಹಿಂದುಳಿದ ವರ್ಗಗಳ ಇಲಾಖೆಯಲ್ಲಿ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸುಮಾರು ಏಳೂವರೆ ವರ್ಷಗಳ ಕಾಲ ಬೆಂಗಳೂರು ನಗರ ಜಿಲ್ಲೆಯಲ್ಲಿ in charge ನಲ್ಲಿ ಕೆಲಸ ಮಾಡಿದ್ದೇನೆ. ಇಲ್ಲಿ ಎರಡು ವಿಚಾರಗಳು merge ಆಗುತ್ತಿವೆ. ಒಂದು ವಸತಿ ಶಾಲೆ, ಇನ್ನೊಂದು regular hostel. ಮಾನ್ಯ ಸದಸ್ಯರಾದ ಶ್ರೀ ಸಿ.ಟಿ ರವಿಯವರು ಮತ್ತು ಶ್ರೀಮತಿ ಭಾರತಿ ಶೆಟ್ಟಿಯವರು regular hostel, SC-ST, Backward Classes and Minority ವಿಚಾರವಾಗಿ ಮಾತನಾಡಿದರು. ಆದರೆ ಕರ್ನಾಟಕ ರಾಜ್ಯದಲ್ಲಿ Residential Schools ನಲ್ಲಿ ಎಲ್ಲಿಯೂ ಕೂಡ ಒಂದು seat ಖಾಲಿ ಇಲ್ಲ. ಏಕೆಂದರೆ application ಎಷ್ಟು ಬರುತ್ತಿವೆಯೋ ಅದರ ನಾಲ್ಕರಷ್ಟು-ಐದರಷ್ಟು selectionಗೆ ಎಂ.ಎಲ್.ಸಿ.ಗಳು, ಎಂ.ಎಲ್.ಎ.ಗಳು ಮತ್ತು ಮಾನ್ಯ ಸಚಿವರುಗಳನ್ನು ದಾಪುಗಾಲು ಹಾಕುತ್ತಾರೆ. ಆದರೆ 1997-98 ರಿಂದ 2006 ರವರೆಗೆ ನಾವು ನೋಡುತ್ತಿದ್ದಂತಹ ಸಂದರ್ಭಕ್ಕೂ, ಇವತ್ತಿಗೂ ಅಜಗಜಾಂತರ ವ್ಯತ್ಯಾಸವಿದೆ. ಇಲಾಖೆಯಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಈಗ ಮಾನ್ಯ ಉನ್ನತ ಶಿಕ್ಷಣ ಸಚಿವರು ಹೇಳುತ್ತಿದ್ದರು. ಅವರಲ್ಲಿರುವಂತಹ ಹಾಸ್ಟೆಲ್‌ಗಳಿಗೆ ಅವರು infrastructure ಕೊಡುತ್ತಾರೆ ಅಷ್ಟೇ. ಏಕೆಂದರೆ BCM ನಲ್ಲಿ infrastructure ಉಳಿಯುತ್ತದೆ. ಈಗಾಗಲೇ Tier-1 and Tier-2 ಸಿಟಿಗಳಲ್ಲಿ BCM ಹಾಸ್ಟೆಲ್‌ಗಳಲ್ಲಿ SC-STಯವರಿಗೆ ಸೀಟುಗಳೇ ಸಿಗುವುದಿಲ್ಲ. ಉದಾಹರಣೆಗೆ ಬೆಂಗಳೂರಿನಲ್ಲಿ ಇನ್ನೂ ಸುಮಾರು 100 ಹಾಸ್ಟೆಲ್‌ಗಳನ್ನು ಮಾಡಿದರೂ ಕೂಡ requirement ಇದೆ. ಆದರೆ ತುಮಕೂರು, ದಾವಣಗೆರೆ ಮತ್ತು ಮಂಗಳೂರಿನಂತಹ ಕಡೆಗಳಲ್ಲಿ ಹಾಸ್ಟೆಲ್‌ಗಳಿಗೆ ಸಾಕಷ್ಟು demand ಇದೆ. ಆದರೆ ಗ್ರಾಮಾಂತರ ಭಾಗದಲ್ಲಿ sharing ನಲ್ಲಿ ಕೂಡ ವ್ಯತ್ಯಾಸ ಮಾಡಿದ್ದಾರೆ. ಆಗಿಂದಾಗ್ಗೆ ಆಗುತ್ತಿರುವಂಥ ಬದಲಾವಣೆಗಳಿಗೆ ಅನುಗುಣವಾಗಿ sharing ನಲ್ಲಿ ಮೊದಲು percentage SC ಗೆ ಇಷ್ಟು percentage, ST ಗೆ ಇಷ್ಟು percentage & BCM ಗೆ ಇಷ್ಟು percentage ಎಂದು ಇತ್ತು. ಪ್ರಸ್ತುತ SC-ST ಹಾಸ್ಟೆಲ್‌ಗಳಲ್ಲಿ BCM ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಿರುವುದರಿಂದ ಪೂರ್ಣ ಪ್ರಮಾಣದಲ್ಲಿ ಸೀಟ್‌ಗಳನ್ನು ತುಂಬುತ್ತಿದ್ದಾರೆ. ಸೀಟ್ ಖಾಲಿ ಇದ್ದಂತಹ ಸಂದರ್ಭದಲ್ಲಿ ಮತ್ತೆ ಪತ್ರ ಬರೆದು concurrence ತೆಗೆದುಕೊಂಡು ತುಂಬುತ್ತಿದ್ದಾರೆ. ಹಾಗಾಗಿ, ಮಾನ್ಯ ಸದಸ್ಯರಾದ ಶ್ರೀ ಸಿ.ಟಿ.ರವಿಯವರು ಹೇಳಿದಂತೆ ಸಾಕಷ್ಟು ಹಾಸ್ಟೆಲ್‌ಗಳು ನಡೆಯುತ್ತಿಲ್ಲ ಎಂಬುದನ್ನು ನಾನು ಒಪ್ಪುವುದಿಲ್ಲ. ಆದರೆ ಕಾರ್ಮಿಕ ಇಲಾಖೆಯಿಂದ ಇದನ್ನು ಮಾಡುತ್ತಿರುವ ವಿಚಾರ ಇದೆಯಲ್ಲಾ, ಅಸಂಘಟಿತ ವಲಯವನ್ನು ಮುಖ್ಯವಾಹಿನಿಗೆ ತರಲು ಇದು ತುಂಬಾ important. ಕೇಂದ್ರ ಸರ್ಕಾರದ ಆದೇಶವನ್ನು ನೀವು ಓದಿದ್ದೀರಿ. ಕಾರ್ಮಿಕ ಇಲಾಖೆಯಿಂದ ಅಸಂಘಟಿತ ವಲಯವನ್ನು ಮುಖ್ಯವಾಹಿನಿಗೆ ತರುವುದಕ್ಕೆ ಮಾಡುತ್ತಿರುವಂತಹ ಪ್ರಯತ್ನ ತುಂಬಾ ಒಳ್ಳೆಯ ವಿಚಾರ. ಖಂಡಿತವಾಗಿಯು ಇದು ಸ್ವಾಗತಾರ್ಹ. ಏಕೆಂದರೆ ಅಸಂಘಟಿತ ವಲಯ ಏನೆಂದು ತಮಗೆಲ್ಲಾ ಗೊತ್ತಿದೆ. ಮಾನ್ಯ ಶಾಸಕರ ವ್ಯಾಪ್ತಿಯಲ್ಲಿ ಅವರಿಗೆಲ್ಲಾ ಓದುವುದಕ್ಕೆ ದುಡ್ಡು ಕೊಡುತ್ತೇವೆ. ಹೆಣ್ಣುಮಕ್ಕಳಿಗೆ ಬೇರೆ ವಿಚಾರಕ್ಕೆ ದುಡ್ಡು ಕೊಡುತ್ತೇವೆ. ಸಾವಿಗೀಡಾದವರ ಕುಟುಂಬದವರಿಗೆ ಪರಿಹಾರಕ್ಕಾಗಿ ದುಡ್ಡು ಕೊಡುತ್ತೇವೆ. Medical Education ಗೆ ದುಡ್ಡು ಕೊಡುತ್ತೇವೆ. ಎಲ್ಲದರಲ್ಲೂ ಕೂಡ ಅವರ ಸಹಾಯಹಸ್ತ ಇದೆ. 14 ಲಕ್ಷ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕೆ ಸಹಾಯ ಮಾಡಿದ್ದಾರೆಂದು ಅದೇ ಲೆಕ್ಕದಲ್ಲಿ ಅವರು ಹೇಳುತ್ತಿದರು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಖಂಡಿತವಾಗಿಯೂ ಅದನ್ನು ಇನ್ನೂ extend ಮಾಡಬೇಕು. ಏಕೆಂದರೆ ಅವರು ನನ್ನ ಕ್ಷೇತ್ರ ವ್ಯಾಪ್ತಿಯಲ್ಲಿರುವುದರಿಂದ ಹೇಳುತ್ತೇನೆ. ಅಸಂಘಟಿತ ವಲಯದ ಮಕ್ಕಳನ್ನು ಸರ್ಕಾರಿ ಶಾಲೆಗಿಂತ ಅನುದಾನಿತ ಶಾಲೆಗಳಲ್ಲಿ strength ತೋರಿಸುವುದಕ್ಕೆ ಇಟ್ಟುಕೊಂಡಿದ್ದಾರೆ. ಅದು ಆಗಬಾರದು. ಇದು ನಮಗೆಲ್ಲರಿಗೂ ಗೊತ್ತಿದೆ. ಕೂಲಿ ಕಾರ್ಮಿಕರ ಮಕ್ಕಳನ್ನು ಕರೆದುಕೊಂಡು ಬಂದು ಸೇರಿಸಿಕೊಂಡು strength ತೋರಿಸುತ್ತಾರೆ. ತದನಂತರದಲ್ಲಿ ಅವರು ಅಲ್ಲಿ ಇರುವುದಿಲ್ಲ. ಹಾಗಾಗಿ, ಖಂಡಿತವಾಗಿಯು ಇದೊಂದು ಸ್ವಾಗತಾರ್ಹ. Residencial Schools ಮಾಡಲೇಬೇಕು. ಅವರು ಮುಖ್ಯವಾಹಿನಿಗೆ ಬಂದಾಗ ಮಾತ್ರ ಸಾಮಾಜಿಕ ನ್ಯಾಯ ಕೊಡುವುದಕ್ಕೆ ಸಾಧ್ಯ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಸಭಾಪತಿಯವರು:– ಶ್ರೀ ಪ್ರತಾಪ್ ಸಿಂಹ ನಾಯಕ್ ರವರೇ, ತಾವು ಮಾತನಾಡಿ.

ಶ್ರೀ ಕೆ.ಎಸ್.ನವೀನ್:– ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ನನ್ನದು clarification ಇದೆ.

ಸಭಾಪತಿಯವರು:– ಶ್ರೀ ಕೆ.ಎಸ್.ನವೀನ್ ರವರೇ, ತಾವು ಮಾತನಾಡಿದ್ದು ಸಾಕು, ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):– ಮಾನ್ಯ ಸಭಾಪತಿಯವರೇ, ನಾನು ಕೂಡ ಈ ವಿಷಯದ ಬಗ್ಗೆ ಎರಡು ನಿಮಿಷ ಮಾತನಾಡಬೇಕು.

ಸಭಾಪತಿಯವರು:– ನಿಯಮ ೩೩೦ ರಲ್ಲಿ ಎಲ್ಲರೂ ಮಾತನಾಡುವುದಕ್ಕೆ ಆಗುತ್ತದೆಯೇ?

ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ:– ಮಾನ್ಯ ಸಭಾಪತಿಯವರೇ, ನನಗೆ ಗೊತ್ತಿರುವ ವಿಷಯದ ಬಗ್ಗೆ ಮಾತ್ರ ತಮ್ಮ ಮುಖಾಂತರ ಮಾನ್ಯ ಕಾರ್ಮಿಕ ಸಚಿವರ ಗಮನಕ್ಕೆ ತರುತ್ತೇನೆ.

ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ಶ್ರೀಮತಿ ಭಾರತಿ ಶೆಟ್ಟಿಯವರು ಆ ಪೀಠದಲ್ಲಿ ಕುಳಿತಿದ್ದಾಗಲೇ ನಾನು ಈ ವಿಷಯದ ಬಗ್ಗೆ ಮಾತನಾಡಬೇಕೆಂದು ಕೈ ಎತ್ತಿದ್ದೆನು. ಕೈಗೆ ನೋವಾಗುತ್ತದೆ ಎಂದು ಕೈ ಕೆಳಗೆ ಇಳಿಸಿದ್ದೇನೆ.

ಸಭಾಪತಿಯವರು:– ಶ್ರೀ ಎಸ್.ಎಲ್.ಭೋಜೇಗೌಡರವರೇ, ನೀವು ಅಷ್ಟೇ ಮಾಡಿ. ಈಗ ಕುಳಿತುಕೊಳ್ಳಿ.

(ಸದನದಲ್ಲಿ ನಗು)

ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ (ವಿಧಾನಸಭಾ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ಕಾರ್ಮಿಕ ಇಲಾಖೆಯಲ್ಲಿ ಕಾರ್ಮಿಕರ ದೃಷ್ಟಿಯಿಂದ ನೂರಾರು ಯೋಜನೆಗಳು ಜಾರಿಗೆ ಬಂದಿವೆ. ಈಗ ಸರ್ಕಾರ ಯಾರನ್ನು ಗಮನದಲ್ಲಿ ಇಟ್ಟುಕೊಂಡು ಹಾಸ್ಟೆಲ್‌ಗಳನ್ನು ಮಾಡಿದ್ದಾರೆಂದರೆ ಕಟ್ಟಡ ಕಾರ್ಮಿಕರ ಮಕ್ಕಳಿಗೆ ಮಾತ್ರ ಉಪಯೋಗ ಆಗುವಂತಹ ರೀತಿಯಲ್ಲಿ ಮಾಡುತ್ತಿದ್ದಾರೆ. ಕಟ್ಟಡ ಕಾರ್ಮಿಕರು ಎಂದರೆ ಅವರಿಗೆ definite identity ಇರುತ್ತದೆ. ಅವರಿಗೆ card ಕೊಟ್ಟಿರುತ್ತಾರೆ. ಅವರಿಂದಲೇ ಈ cess ಗಳನ್ನೆಲ್ಲಾ collect ಮಾಡಿರುವುದನ್ನು ಉಪಯೋಗ ಮಾಡುವಂಥದ್ದು. ಕಟ್ಟಡ ಕಾರ್ಮಿಕರ ಸಂಘಟನೆಗಳ ಅಥವಾ ಕಾರ್ಮಿಕರ ಸಮಸ್ಯೆಗಳ ದೃಷ್ಟಿಯಿಂದ ಸುಮಾರು 14

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಲಕ್ಷ ಜನ ಮಕ್ಕಳಿಗೆ ಬೇರೆ ಬೇರೆ ರೀತಿಯ ಸ್ಕೀಂಗಳಲ್ಲಿ ನಾವು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಆದರೆ ಇವತ್ತಿನ ದಿವಸ ಇಂದಿನ ಸರ್ಕಾರದಲ್ಲಿ ಆ ಮಕ್ಕಳಿಗೆ education ಸಲುವಾಗಿ ಅಥವಾ ಅವರ ಮದುವೆಗೆ ಅಥವಾ ಅವರ ಬೇರೆಬೇರೆ health ದೃಷ್ಟಿಯಲ್ಲಿ ಈಗಾಗಲೇ ನೂರಾರು ಯೋಜನೆಗಳು ಏನಿವೆ, ಕಾರ್ಮಿಕ ಇಲಾಖೆ ಅವರಿಗೆ ಮೊದಲು ರೂ.1,೦೦೦ಗಳು ಕೊಡುತ್ತಿದ್ದರು. ಆದರೆ ಈಗ ಅದನ್ನು . . .

ಶ್ರೀ ಸಂತೋಷ್ ಎಸ್.ಲಾಡ್ (ಕಾರ್ಮಿಕ ಸಚಿವರು):– ಮಾನ್ಯ ಸಭಾಪತಿಯವರೇ, ಬೇಕಾದರೆ ಅದರ ಬಗ್ಗೆ ಚರ್ಚೆ ಮಾಡೋಣ...

ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ:– ಮಾನ್ಯ ಸಭಾಪತಿಯವರೇ, ನಾನು ಪೂರ್ತಿ ಹೇಳಿಬಿಡುತ್ತೇನೆ. ಈ ಹಣವನ್ನು ನೀವು ಅದಕ್ಕೆ ಉಪಯೋಗ ಮಾಡಿದರೆ ಅದು ಇನ್ನೂ ಹೆಚ್ಚಿನ ಮಕ್ಕಳಿಗೆ ತಲುಪುತ್ತದೆ.

ಶ್ರೀ ಸಂತೋಷ್ ಎಸ್.ಲಾಡ್:– ಮಾನ್ಯ ಸಭಾಪತಿಯವರೇ, ದಯವಿಟ್ಟು ಒಂದು ನಿಮಿಷ. ಮಾನ್ಯ ಸದಸ್ಯರು ಹೇಳಿದ್ದು ಅರ್ಥವಾಯಿತು.

ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ:– ಮಾನ್ಯ ಸಭಾಪತಿಯವರೇ, ನೀವು ಹಾಸ್ಟೆಲ್ ಮಾಡಿದರೆ . . . ನನ್ನ ಆತಂಕವನ್ನು ನಾನು ಹೇಳಿಬಿಡುತ್ತೇನೆ. ಮಾನ್ಯ ಸಚಿವರೇ, ತಾವು ಕೂಡಲೇ ಅರ್ಥ ಮಾಡಿಕೊಳ್ಳುವಷ್ಟು ಸಮರ್ಥರು. ನಾನು 'ಸ' ಎಂದು ಹೇಳಿದರೆ, ತಾವು ಸ,ರಿ,ಗ,ಮ ಎಂದು ಹೇಳುತ್ತೀರಿ. ಆದರೂ . . .

ಶ್ರೀ ಸಂತೋಷ್ ಎಸ್.ಲಾಡ್:– ಮಾನ್ಯ ಸಭಾಪತಿಯವರೇ, ಈಗ ನಾನು ಉತ್ತರ ಕೊಡುತ್ತೇನೆ. ಮಾನ್ಯ ಪ್ರತಾಪ್ ಸಿಂಹ ನಾಯಕ್ ರವರೇ, ತಾವು ಕೇಳಿದ್ದು ಒಳ್ಳೆಯದೇ ಆಯಿತು.

ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ:– ಮಾನ್ಯ ಸಚಿವರೇ, ನಾನು ಒಂದು ವಿಷಯವನ್ನು ಹೇಳಿಬಿಡುತ್ತೇನೆ.

ಶ್ರೀ ಸಂತೋಷ್ ಎಸ್.ಲಾಡ್:– ಆಯಿತು ಹೇಳಿ. Please go ahead. ಮಾನ್ಯ ಪ್ರತಾಪ್ ಸಿಂಹ ನಾಯಕ್ ರವರೇ, ತಾವು ಹೇಳಿದ್ದು ಅರ್ಥವಾಯಿತು.

ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ:– ಮಾನ್ಯ ಸಚಿವರೇ, ನಾನು ಹೇಳುವುದನ್ನು ತಾವು ದಯವಿಟ್ಟು ಕೇಳಬೇಕು.

ಶ್ರೀ ಸಂತೋಷ್ ಎಸ್.ಲಾಡ್:– ಮಾನ್ಯ ಪ್ರತಾಪ್ ಸಿಂಹ ನಾಯಕ್ ರವರೇ, ಆಯಿತು ತಾವು ಹೇಳಿ.

ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ:– ಮಾನ್ಯ ಸಭಾಪತಿಯವರೇ, ಇವರು ಅದೇ ಹಣವನ್ನು ಆ ಮಕ್ಕಳಿಗೆ ಕೊಟ್ಟರೆ, ಆ ಮಕ್ಕಳು ಮನೆಯಲ್ಲಿ ಇರುತ್ತಾರೆ. ನೀವು ಒಂದು ಜಿಲ್ಲೆಗೆ ಒಂದು ಹಾಸ್ಟೆಲ್ ಮಾಡಿದರೆ...

ಶ್ರೀ ಸಂತೋಷ್ ಎಸ್.ಲಾಡ್ (ಕಾರ್ಮಿಕ ಸಚಿವರು):– ಮಾನ್ಯ ಪ್ರತಾಪ್ ಸಿಂಹ ನಾಯಕ್ ರವರೇ, ನೀವು ಹೇಳಿದ್ದು ನನಗೆ ಅರ್ಥವಾಯಿತು. ನಾನು ಅದನ್ನೇ explain ಮಾಡಿಬಿಡುತ್ತೇನೆ. ಇದು KG (Kindergarten) to PG (Post Graduation) ಗೆ ದುಡ್ಡು ಕೊಡುವುದಕ್ಕೆ ಪ್ರಾರಂಭ ಮಾಡಿದ್ದೇ ನಾವು. ಎಲ್ಲೆಲ್ಲಿ ಯಾರಿಗೆ ಕೊಡುತ್ತಿದ್ದೇವೆಂದು ಅದರ ಬಗ್ಗೆ ನಾನು ಹೇಳುತ್ತೇನೆ. ಮಾನ್ಯ ಸಭಾಪತಿಯವರೇ, ಈ ಸದನದಲ್ಲಿ ಮಾತನಾಡಲು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವಕಾಶ ಸಿಕ್ಕಿದೆ, ಮಾತನಾಡುತ್ತೇನೆ. Primary Education ಗೆ ಎಷ್ಟು ಕೊಡಬೇಕು? Higher Education ಗೆ ಎಷ್ಟು ಕೊಡಬೇಕು? ಎಸ್.ಎಸ್.ಎಲ್.ಸಿ ಗೆ ಎಷ್ಟು ಕೊಡಬೇಕು? ಪಿ.ಯು.ಸಿಗೆ ಎಷ್ಟು ಕೊಡಬೇಕು ಮತ್ತು degree ಗೆ ಎಷ್ಟು ಕೊಡಬೇಕು ಎಂದು ಸರ್ಕಾರದಲ್ಲಿ ಮಾನದಂಡ ಇದೆ. ನಿಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ಅವರಿಗೆ ರೂ.೩,೦೦೦ ಇರುವುದನ್ನು ರೂ.10,೦೦೦ ಗಳು ಕೊಟ್ಟಿದ್ದಾರೆ. ರೂ.10,೦೦೦ ಇರುವುದನ್ನು ರೂ. 40,೦೦೦ ಕೊಟ್ಟಿದ್ದಾರೆ. ರೂ.40,೦೦೦ ಇರುವುದನ್ನು ರೂ.೫೦,೦೦೦ ಮತ್ತು ೬೦,೦೦೦ ಗಳು ಜಾಸ್ತಿ ಮಾಡಿದರು. ಮಾನ್ಯ ಸಿ.ಟಿ.ರವಿಯವರೇ, ಒಂದು ಸರ್ಕಾರ ಹೋಗಿ ಹೊಸ ಸರ್ಕಾರ ಅಧಿಕಾರಕ್ಕೆ ಬರಬಹುದು. ನಮಗೆ ಸುಮಾರು 13 ಲಕ್ಷ ಅರ್ಜಿಗಳು ಬಂದವು. ನೀವು ಎಷ್ಟು ದುಡ್ಡು ಕೊಟ್ಟಿದ್ದೀರಿ ಎಂದು ಕೇಳುತ್ತಿದ್ದೀರಿ, ಉದಾಹರಣೆ ಕೊಡುತ್ತೇನೆ. ಏತಕ್ಕೆ ಬರುತ್ತದೆ ಎಂದರೆ, just because we increased the number, just because we started giving more money, we have ೫೬ lakh construction workers. ನೀವು ಹೇಳಿದ್ದಕ್ಕೆ ಉತ್ತರ ಕೊಡುತ್ತೇನೆ. When we increased the money, suddenly…. Pragmatic ಯಾವುದು ಇಲ್ಲ. Approach ಮಾಡಿದವರಿಗೆ ಜಾಸ್ತಿ ದುಡ್ಡು ಕೊಟ್ಟ ತಕ್ಷಣವೇ ಪ್ರತಿಯೊಬ್ಬರು Construction Workers Card Members ಆಗಿಬಿಟ್ಟರು. ಒಂದೊಂದು ಜಿಲ್ಲೆಯಲ್ಲಿ ಎರಡೂವರೆ ಲಕ್ಷದಿಂದ ಮೂರು ಲಕ್ಷ ಜನ ಒಟ್ಟು ೫೬ ಲಕ್ಷ ಜನ ಮೆಂಬರ್‌ಗಳಾದರು. ನಮ್ಮ ಸರ್ಕಾರ ಬಂದು ಪ್ರಾರಂಭ ಮಾಡಿದ ತಕ್ಷಣವೇ ೫೬ ಲಕ್ಷ ಜನ ಮೆಂಬರ್‌ಗಳು ಇದ್ದುದನ್ನು ಈಗ ಸುಮಾರು ೩೦ ಲಕ್ಷ ಜನ ಮೆಂಬರ್‌ಗಳಿಗೆ ತಂದಿದ್ದೇವೆ. ಇನ್ನು ಅದರ ಬಗ್ಗೆ ಬೇರೆ ಬೇರೆ ಕಾರ್ಯಕ್ರಮ ಮಾಡಿ, ಈಗ MEB (Mobile Emergency Base) Ambulance ಮಾಡಿದ್ದೇವೆ. ಮುಂದಿನ ದಿನಗಳಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಸೇವಾ ಕೇಂದ್ರಗಳನ್ನು ಮಾಡುತ್ತೇವೆ. ಎಲ್ಲಾ ಫಲಾನುಭವಿಯ ಮನೆಗೆ ಹೋಗಿ check ಮಾಡುತ್ತೇವೆ. But overnight it is not going to change. ದುಡ್ಡು ಬಹಳ ಕಡಿಮೆ ಕೊಡುತ್ತೀರಿ ಎಂದು ನೀವು ಹೇಳಿದ್ದಕ್ಕೆ ನಾನು ಹೇಳುತ್ತಿದ್ದೇನೆ. ನೀವು ಈ ಪ್ರಶ್ನೆ ಎತ್ತಿ ನಾನು ಮಾತನಾಡಲು ಒಳ್ಳೆಯ ಅವಕಾಶ ಮಾಡಿಕೊಟ್ಟಿದ್ದೀರಿ. ಇಲ್ಲಿ . . .

ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ:– ಮಾನ್ಯ ಸಚಿವರೇ, ತಾವು ನನ್ನ ಅವಕಾಶವನ್ನು ಕಡಿತಗೊಳಿಸಿದ್ದೀರಿ.

ಶ್ರೀ ಸಂತೋಷ್ ಎಸ್.ಲಾಡ್:– ಮಾನ್ಯ ಸಭಾಪತಿಯವರೇ, ಆಯಿತು ಮಾನ್ಯ ಪ್ರತಾಪ್ ಸಿಂಹ ನಾಯಕ್‌ರವರು ಮಾತನಾಡಲಿ.

Sri PRATAP SIMHA NAYAK.K:– ಪ್ರಸ್ತುತ Even medical bills ನಲ್ಲಿಯೂ ಕೂಡ ತುಂಬಾ ಕಡಿಮೆ ಹಣ ಕೊಡುತ್ತಿದ್ದಾರೆಂದು ಕಾರ್ಮಿಕರ ದೂರು ಇದೆ. ಈಗ ನೀವು ಸುಮಾರು ೩1 ಹಾಸ್ಟೆಲ್‌ಗಳನ್ನು ಮಾಡಿದ್ದೀರಿ. ಎಷ್ಟು ಮಕ್ಕಳಿಗೆ ಅವಕಾಶ ಮಾಡಿಕೊಡುತ್ತೀರಿ? ಇದೇ ಹಣವನ್ನು ನೀವು ಎಷ್ಟು ಜನರಿಗೆ ತಲುಪಿಸಬಹುದು; ಎಷ್ಟು ಮಕ್ಕಳಿಗೆ ತಲುಪಿಸಬಹುದು ಎಂದು ಆಲೋಚನೆ ಮಾಡಿ ಎಂದು ಹೇಳುತ್ತಿದ್ದೇನೆ. ಮತ್ತೆ ನೀವು ಎಷ್ಟೇ ಹಾಸ್ಟೆಲ್‌ಗಳನ್ನು ತೆರೆಯಿರಿ. ನೀವು ಎಷ್ಟೇ ಹಾಸ್ಟೆಲ್‌ಗಳನ್ನು ತೆರೆದರೂ ಕೂಡ ಬರುತ್ತಾರೆ. ಇದರ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪರಿಣಾಮ ಏನಾಗುತ್ತದೆಂದರೆ ಅವರು ಹೇಳಿದಂತೆ ಆಗುತ್ತದೆ. ಎಲ್ಲರೂ ಮಕ್ಕಳನ್ನು ಮನೆಯಲ್ಲಿ ಇಟ್ಟುಕೊಳ್ಳುವುದಿಲ್ಲವೆಂದು ಹೇಳುತ್ತಿದ್ದೇನೆ. ನಮಗೆ ಬೇಡಿಕೆ ಏಕೆ ಇದೆಯೆಂದು ಕೇಳಿದರೆ ಸಹಜವಾಗಿ ಹಾಸ್ಟೆಲ್ ಇದ್ದರೆ ಮನೆಯಲ್ಲಿರುವ ಮಕ್ಕಳನ್ನು ಹಾಸ್ಟೆಲ್‌ಗೆ ಕಳುಹಿಸುತ್ತಾರೆ. ಏಕೆಂದರೆ ಉಚಿತ ಹಾಸ್ಟೆಲ್ ಎಂಬ ಕಾರಣಕ್ಕೋಸ್ಕರ ಮಕ್ಕಳನ್ನು ಅಲ್ಲಿಗೆ ಕಳುಹಿಸುತ್ತಾರೆ. ನಾವು ಎಲ್ಲೋ ಒಂದುಕಡೆ ನಮ್ಮ ಮನೆಯವರ ನೇರ ನಿಗಾದಿಂದ ಹಾಸ್ಟೆಲ್‌ಗಳಿಗೆ ಮಕ್ಕಳನ್ನು ಕಳುಹಿಸುವಂತಹ ಪರಿಪಾಠವನ್ನೇ ನಾವು ಶುರು ಮಾಡಿದರೆ ಒಳ್ಳೆಯದಲ್ಲ. ಅದರ ಬದಲು ನಿಮ್ಮ ಇಲಾಖೆಯಿಂದ ಒಂದು ಕಾರ್ಯಕ್ರಮ ಆಗಬೇಕೆಂದು ಹೇಳಿಕೊಂಡು, ಒಂದು ಕಾರ್ಯಕ್ರಮ ಮಾಡಿ. ಒಂದು ಹಾಸ್ಟೆಲ್ ಮಾಡುವುದಕ್ಕಿಂತ. ಅದನ್ನೇ ಹಲವಾರು ಮಕ್ಕಳಿಗೆ ಸಿಗುವ ರೀತಿಯಲ್ಲಿ ನೀವು ಪ್ರಮಾಣವನ್ನು ಹೆಚ್ಚಿಗೆ ಮಾಡಿ ಎಂದು ಹೇಳುವಂಥದ್ದು ನನ್ನದು ಒತ್ತಾಯ ಅಷ್ಟೇ.

(ಮುಂದು)

(691)13.8.2025/5.20/ಎಂ.ಎಂ-ವಿ.ಕೆ (ಸಭಾಪತಿಯವರ ಉಪಸ್ಥಿತಿ)

ಶ್ರೀ ಸಂತೋಷ್ ಎಸ್. ಲಾಡ್ (ಕಾರ್ಮಿಕ ಸಚಿವರು):- ಮಾನ್ಯ ಸಭಾಪತಿಯವರೇ, ಈಗ ಇ.ಎಸ್.ಐ. ಆಸ್ಪತ್ರೆಗಳನ್ನು ಹಾಗೆಯೇ ಮಾಡಿಬಿಡೋಣ. ರಾಜ್ಯಸರ್ಕಾರದ ಎಷ್ಟು ಹಣ ಹೋಗುತ್ತದೆ;

ಸಭಾಪತಿಯವರು:- ಮಾನ್ಯ ಸಚಿವರೇ, ಯಾರ್ಯಾರು ಸ್ಪಷ್ಟನೆ ಕೇಳುತ್ತಾರೋ ಕೇಳಿಬಿಡಲಿ.

ಶ್ರೀ ಸಂತೋಷ್ ಎಸ್. ಲಾಡ್:- ನಾನು ಅದಕ್ಕೆ ಒಂದು ಉದಾಹರಣೆ ಕೊಡುತ್ತೇನೆ.

ಶ್ರೀ ಕೆ.ಎಸ್. ನವೀನ್:- ಮಾನ್ಯ ಸಚಿವರೇ, . . .

ಶ್ರೀ ಸಂತೋಷ್ ಎಸ್. ಲಾಡ್:- ಮಾನ್ಯ ನವೀನ್‌ರವರೇ, ಸ್ವಲ್ಪ ಕುಳಿತುಕೊಳ್ಳಿ. ನೀವು ಮಾತನಾಡಿದ್ದನ್ನು ನಾನು ಕೇಳಿಸಿಕೊಂಡಿದ್ದೇನೆ.

ಶ್ರೀ ಕೆ.ಎಸ್. ನವೀನ್:- ಇದನ್ನು ಮುಗಿಸಿ ಉತ್ತರ ಕೊಡಿ ಎಂದು ಕೇಳುತ್ತಿದ್ದೇನೆ. ನಾನು ನೀವು ಹೇಳಿದ್ದಕ್ಕೆ clarification ಕೇಳಬೇಕು.

ಶ್ರೀ ಸಂತೋಷ್ ಎಸ್. ಲಾಡ್:- ಆಯಿತು, clarification ಕೇಳಿ.

ಸಭಾಪತಿಯವರು:- ಮಾನ್ಯ ಸಚಿವರೇ, ಎಲ್ಲರೂ ಹೇಳಿಬಿಡಲಿ. ನಂತರ ಉತ್ತರ ಕೊಡಿ. ಮಾನ್ಯ ಗೋವಿಂದರಾಜುರವರೇ, ಕೇಳಿ.

ಶ್ರೀ ಕೆ.ಎಸ್. ನವೀನ್:- ಮಾನ್ಯ ಸಭಾಪತಿಯವರೇ, . . .

ಸಭಾಪತಿಯವರು:- ಮಾನ್ಯ ನವೀನ್‌ರವರೇ, ಬರೀ ನೀವೇ ಮಾತನಾಡುತ್ತೀರಲ್ಲಾ, ಬೇರೆಯವರೂ ಮಾತನಾಡಲಿ. ನೀವೇ ನಾಲ್ಕು ಜನರು ಗುತ್ತಿಗೆ ಹಿಡಿದುಬಿಟ್ಟಿದ್ದೀರಾ?

ಶ್ರೀ ಗೋವಿಂದರಾಜು (ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಇವರೆಲ್ಲರೂ ಚರ್ಚೆ ಮಾಡಿದ್ದನ್ನು ನಾನು ಆಗಿನಿಂದಲೂ ಕೇಳಿಸಿಕೊಂಡಿದ್ದೇನೆ. 32 ಶಾಲೆಗಳನ್ನು ತೆರೆಯುತ್ತಿರುವ ಬಗ್ಗೆ ಚರ್ಚೆ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುತ್ತಿದ್ದೀರಿ. ಇವತ್ತು ಕಟ್ಟಡ ಕಾರ್ಮಿಕರು ಬಹಳ ಕಷ್ಟದಲ್ಲಿ ಕೆಲಸ ಮಾಡುವಂತಹ ಜನರೆಂದು ಕೇಂದ್ರ ಸರ್ಕಾರವು ಕಟ್ಟಡ ಕಟ್ಟುವವರಿಂದ ಸೆಸ್ ಅನ್ನು ಸಂಗ್ರಹ ಮಾಡಿ ಕಟ್ಟಡ ಕಾರ್ಮಿಕರಿಗೆ ಕೊಡಬೇಕೆನ್ನುವ ಮೂಲ ಉದ್ದೇಶ ಇಟ್ಟುಕೊಂಡಿದೆ. ತಮಗೂ, ಮಂತ್ರಿಗಳಿಗೂ ಹಾಗೂ ಎಲ್ಲರಿಗೂ ಗೊತ್ತಿದೆ, ಕರ್ನಾಟಕದಲ್ಲಿ 56 ಲಕ್ಷ ಕಟ್ಟಡ ಕಾರ್ಮಿಕರಿದ್ದಾರೆಂದು ಮಾನ್ಯ ಸಚಿವರು ಏನು ಹೇಳಿದರು ಇದರಲ್ಲಿ ನಿಜವಾಗಿಯೂ ನೂರಕ್ಕೆ ನೂರರಷ್ಟು ಮೋಸ ನಡೆದಿದೆ. ಇದಕ್ಕೆಲ್ಲಾ ಏಜೆಂಟ್‌ಗಳು ಹುಟ್ಟಿಕೊಂಡು ಏಜೆಂಟ್‌ಗಳು ಒಂದು ಸಂಘ ಮಾಡಿಕೊಂಡು ಎಲ್ಲಾ ಅವರೇ ಸದಸ್ಯತ್ವ ಮಾಡಿಸುತ್ತಿದ್ದಾರೆ. ಯಾವ್ಯಾವುದರಲ್ಲಿ ಹಣ ಬರುತ್ತದೆ ಮೇಜರ್ ಹಣವನ್ನು ಏಜೆಂಟುಗಳೇ ತಿನ್ನುವುದಾಗಿದೆ. ವಾಸ್ತವ ಸಂಗತಿಯನ್ನು ನಾನಿವತ್ತು ಸದನಕ್ಕೆ ತರುವ ಪ್ರಯತ್ನ ಮಾಡುತ್ತಿದ್ದೇನೆ. ಇವತ್ತು ಕರ್ನಾಟಕದಲ್ಲಿ ಕಟ್ಟಡ ಕಾರ್ಮಿಕರು ಏನು ಕೆಲಸ ಮಾಡುತ್ತಿದ್ದಾರೆ ಅದರಲ್ಲಿ ಶೇ.80ಕ್ಕಿಂತಲೂ ಹೆಚ್ಚಿನ ಜನರು ಹೊರರಾಜ್ಯದವರಾಗಿದ್ದಾರೆ. ಬೆಂಗಳೂರು ನಗರದಲ್ಲಿ ಯಾವುದೋ ಅಪಾರ್ಟ್‌ಮೆಂಟ್ ಕಟ್ಟುವ ಕಟ್ಟಡ ಕಾರ್ಮಿಕರನ್ನು ನೋಡಿದರೆ ನಮ್ಮ ಸಣ್ಣ ಊರಿನಲ್ಲಿಯೂ ಕೂಡ carpenters, bar benders, painters, furnishing ಕಾರ್ಮಿಕರಿರಬಹುದು ಅವರೆಲ್ಲರೂ ಉತ್ತರ ಪ್ರದೇಶ, ಬಿಹಾರ ಆ ಕಡೆಯಿಂದ ಬರುತ್ತಿದ್ದಾರೆ. ಅವರ ಹತ್ತಿರ ಆಧಾರ್ ಕಾರ್ಡ್, ಎಂತಹದ್ದೂ ಇರುವುದಿಲ್ಲ. Actually, ಸರ್ಕಾರ ಏನು ಉದ್ದೇಶವನ್ನಿಟ್ಟುಕೊಂಡು ಕಟ್ಟಡ ಕಾರ್ಮಿಕರ ಕಲ್ಯಾಣಕ್ಕೋಸ್ಕರ ಈ ಸೆಸ್ ಅನ್ನು ತಂದರೋ ಇದು ನೂರಕ್ಕೆ ನೂರರಷ್ಟು ದುರುಪಯೋಗವಾಗುತ್ತಿದೆ. ನಾನು ತಮ್ಮ ಮುಖಾಂತರ; ಮಾನ್ಯ ಕಾರ್ಮಿಕ ಸಚಿವರಲ್ಲಿ ಒಂದು ಕಾಳಜಿ ಇದೆ. ಅವರು ನನಗೆ ಹೇಳಿದರು, ಹಿಂದೆ ಎಷ್ಟು ಲಕ್ಷ, ಎಷ್ಟು ಸಾವಿರ ಕೋಟಿ ಹಣ ಇತ್ತು ಆ ಹಣ ಏನಾಗಿದೆ ಎಂದು ಅವರಿಗೆ ಗೊತ್ತಿದೆ. ಏಕೆಂದರೆ ಅದರ ಬಗ್ಗೆ ಮಾತನಾಡುವುದಕ್ಕೆ ನಮ್ಮ ಹತ್ತಿರ ದಾಖಲೆ ಇಲ್ಲ. ಆ ಹಣವೆಲ್ಲಾ ದುರುಪಯೋಗವಾಗಿದೆ.

ಸಭಾಪತಿಯವರು:– ಮಾನ್ಯ ಗೋವಿಂದರಾಜುರವರೇ, ಒಂದು ನಿಮಿಷ. ಮಾನ್ಯ ಸಂತೋಷ್ ಲಾಡ್‌ರವರು ಕಾರ್ಮಿಕ ಮಂತ್ರಿಗಳಾದ ನಂತರ ಇವೆಲ್ಲವನ್ನೂ ಸ್ಟಡಿ ಮಾಡಿ ಅಂತಹ ಜನರಿಗೆ ಏನು ಮಾಡಬೇಕೆಂದು ಹಗಲು ರಾತ್ರಿ ಕೆಲಸ ಮಾಡಿರುವುದನ್ನು ನಾನು ಸಹ ನೋಡಿದ್ದೇನೆ. ಅವರು ಬಹಳ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ.

ಶ್ರೀ ಗೋವಿಂದರಾಜು:– ಮಾನ್ಯ ಸಭಾಪತಿಯವರೇ, ನಾನು ಅವರ ಬಳ ಚರ್ಚೆ ಮಾಡಿದ್ದೇನೆ, with the interest of labours. ನಮ್ಮ ಹತ್ತಿರ ಕೆಲಸ ಮಾಡುತ್ತಿರುವವರು ಕೂಡ ಎಲ್ಲರೂ ಹೊರರಾಜ್ಯದವರೇ. ನಾನು ಹೇಳುತ್ತಿರುವುದೇನೆಂದರೆ, 'ಕೋತಿ ತಿಂದು ಮೇಕೆ ಮೂತಿಗೆ ಉಜ್ಜಿತು' ಎಂದ ಹಾಗೆ ಇವತ್ತು ಜನರ ಹತ್ತಿರ ವಸೂಲಿ ಮಾಡಿದಂತಹ ಹಣ ನೈಜ ಕಾರ್ಮಿಕರಿಗೆ ಸೇರುತ್ತಿಲ್ಲ. ಅದು ನಮ್ಮ ಕಾರ್ಮಿಕ ಸಚಿವರಿಗೂ ಗೊತ್ತು. ಆದ್ದರಿಂದ ದಯವಿಟ್ಟು ಇವತ್ತು ಏನು ಶಾಲೆಗಳನ್ನು ತೆರೆಯುವುದಕ್ಕೆ ಹೊರಟಿದ್ದೀರಿ ಅದನ್ನು ಕಟ್ಟಡ ಕಾರ್ಮಿಕರಿಗೇ ಮಾಡಬೇಕೆನ್ನುವುದು ಕೇಂದ್ರ ಸರ್ಕಾರದ ನಿಯಮ ಎಂದು ಆಗಿನಿಂದಲೂ ಒತ್ತಿ ಒತ್ತಿ ಹೇಳುತ್ತಿದ್ದೀರಿ, ಜೊತೆಗೆ ಕೇಂದ್ರ ಸರ್ಕಾರ ಇ.ಎಸ್.ಐ. ಆಸ್ಪತ್ರೆಗಳನ್ನು ಸ್ಥಾಪನೆ ಮಾಡಿದೆ, ಅವರಿಗೆ ಬಹಳ ಮುಖ್ಯವಾಗಿ ಇರುವುದು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆರೋಗ್ಯದ ಸಮಸ್ಯೆ. ಆ ನಿಟ್ಟಿನಲ್ಲಿಯೂ ಸಹ ತಾವು ಯೋಚನೆ ಮಾಡಿ ಕಟ್ಟಡ ಕಾರ್ಮಿಕರ ನೈಜತೆಗೆ ಸರ್ಕಾರ ಒತ್ತು ಕೊಡಬೇಕೆನ್ನುವುದು ನನ್ನ ಒತ್ತಾಯವಾಗಿದೆ.

ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಧನ್ಯವಾದಗಳು. ಮಾನ್ಯ ಕಾರ್ಮಿಕ ಸಚಿವರು ಮಂಡನೆ;

ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಸುಮ್ಮನೆ ಕುಳಿತಿರುವವರನ್ನೆಲ್ಲಾ ಕರೆದು ಮಾತನಾಡಿ ಎಂದು ಹೇಳಬೇಕಾದರೆ;

ಸಭಾಪತಿಯವರು:- ಮಾನ್ಯ ಬಲ್ಕೀಸ್ ಬಾನುರವರೇ, ತಾವು ಕೈ ಎತ್ತಿದ್ದೀರಲ್ಲವೇ? ಅವರು ಕೈ ಎತ್ತಿದ್ದರು.

ಶ್ರೀಮತಿ ಬಲ್ಕೀಸ್ ಬಾನು:- ಮಾನ್ಯ ಭೋಜೇಗೌಡರೇ, ನಾನು ಆವಾಗಿನಿಂದಲೂ ಕೈ ಎತ್ತಿದ್ದೆ. ನಾನು ಕೈ ಎತ್ತಿದ್ದಕ್ಕೆ ಸಭಾಪತಿಯವರು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಾರೆ.

ಶ್ರೀ ಎಸ್.ಎಲ್. ಭೋಜೇಗೌಡ:- ಮಾನ್ಯ ಸಭಾಪತಿಯವರೇ, ನನ್ನ ಮನಸ್ಸಿಗೆ ಬಂದಿದ್ದೇನೆಂದರೆ, ಸುಮ್ಮನೆ ಕುಳಿತಿರುವವರನ್ನೆಲ್ಲಾ ಕರೆದು ಮಾತನಾಡಿ ಎಂದು ಹೇಳಬೇಕಾದರೆ ತಮಗೆ ಮನೆಗೆ ಹೋಗುವುದಕ್ಕೆ ಇಷ್ಟವಿಲ್ಲವೆಂದು ಕಾಣಿಸುತ್ತಿದೆ.

ಸಭಾಪತಿಯವರು:- ಮಾನ್ಯ ಭೋಜೇಗೌಡರೇ, ಅವರು ಮಾತನಾಡಲು ಅವಕಾಶ ನೀಡಬೇಕೆಂದು ಕೈ ಎತ್ತಿದ್ದರು.

ಶ್ರೀಮತಿ ಬಲ್ಕೀಸ್ ಬಾನು:- ಮಾನ್ಯ ಸಭಾಪತಿಯವರು ಮಹಿಳೆಯರಿಗೆ ಅವಕಾಶ ಕೊಡುತ್ತಿದ್ದಾರೆ. ದೊಡ್ಡ ಮನಸ್ಸಿನಿಂದ ನಮಗೆಲ್ಲಾ importance ಕೊಟ್ಟಿದ್ದಾರೆ. ಮಾನ್ಯ ಕಾರ್ಮಿಕ ಸಚಿವರು ಏನು ಪ್ರಸ್ತಾವನೆ ಇಟ್ಟಿದ್ದಾರೆ ಅದಕ್ಕೆ ಈಗಾಗಲೇ ನಮ್ಮ ರಾಜ್ಯದಲ್ಲಿ ನೋಂದಾಯಿತ ಕಟ್ಟಡ ಕಾರ್ಮಿಕರ ಸಂಖ್ಯೆಯನ್ನು ನೋಡಿದರೆ ಪ್ರಾರಂಭ ಮಾಡುತ್ತಿರುವ 32 Residential Schools, ಅದು ಬಹಳ ಕಡಿಮೆ. ಇನ್ನೂ ಇಡೀ ರಾಜ್ಯಕ್ಕೆ 100 Residential Schools ಬೇಕಾಗುತ್ತವೆ. Construction workers ಮಕ್ಕಳಿಗೆ other than the 31 schools, ಇನ್ನೂ 100 ಶಾಲೆಗಳನ್ನು ಕೊಟ್ಟರೂ ಕಡಿಮೆಯಾಗುತ್ತದೆ. ಕಾರ್ಮಿಕ ಇಲಾಖೆಯಿಂದ ಹಿಂದೆ ಇ.ಎಸ್.ಐ. ಆಸ್ಪತ್ರೆಯನ್ನು ಮಾಡಿ ಆರೋಗ್ಯ ಕಾಪಾಡಿಕೊಳ್ಳುವುದಕ್ಕೆ ದೊಡ್ಡ ಹೆಜ್ಜೆಯನ್ನು ತೆಗೆದುಕೊಂಡಿದ್ದೇವೆ. ಕಡ್ಡಾಯ ಶಿಕ್ಷಣ ನೀತಿಯ ಪ್ರಕಾರ ಕಟ್ಟಡ ನಿರ್ಮಾಣ ಕಾರ್ಮಿಕರ ಮಕ್ಕಳಿಗೆ ಶಿಕ್ಷಣ ದೊರೆಯಬೇಕು. ಎಲ್ಲಾ ಶಾಸಕರಿಗೂ ಗೊತ್ತಿರುವ ಹಾಗೆ ಹೆಣ್ಣುಮಕ್ಕಳು ಮರಕ್ಕೆ ಸೀರೆಯನ್ನು ಕಟ್ಟಿ ಮಕ್ಕಳನ್ನು ಅಲ್ಲಿಯೇ ಮಲಗಿಸುತ್ತಿದ್ದರು, ಸಣ್ಣ ಸಣ್ಣ ಮಕ್ಕಳು ಅಲ್ಲಿಯೇ ಆಟವಾಡಿಕೊಳ್ಳುತ್ತಿದ್ದರು. ಅಂತಹವರಿಗೆ mobile school ಮಾಡಬೇಕು, mobile health checkup ಕೊಡಬೇಕೆಂದು ಕೂಡ ನೀತಿ ಇತ್ತು. ಇದನ್ನು ಹೋಗಲಾಡಿಸಿ ಈ ಸರ್ಕಾರ ಮುಂದೆ ಹೆಜ್ಜೆಯನ್ನಿಟ್ಟು ಇ.ಎಸ್.ಐ. ಆಸ್ಪತ್ರೆಯನ್ನು ತೆಗೆದುಕೊಂಡು ಬಂತು. ಈಗ ನಮ್ಮ ಮಂತ್ರಿಗಳು ಬಹಳ ಮಹತ್ವವಾದ ಚಿಂತನೆಯಿಂದ ಈ ಮಕ್ಕಳು ಶಿಕ್ಷಣ ವಂಚಿತರಾಗಬಾರದು ಅವರಿಗೆ ಶಿಕ್ಷಣವನ್ನು ಕೊಡಬೇಕು, ಎಂದು ಕಟ್ಟಡ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾರ್ಮಿಕರಿಗೆ ಅವಕಾಶ ಮಾಡಿದ್ದಾರೆ. ಇನ್ನೂ 100 ಶಾಲೆಗಳನ್ನು ನೀವು ತೆರೆದರೆ ತಪ್ಪಲ್ಲ ಎಂದು ಹೇಳಿ ನಾನಿದಕ್ಕೆ ಸ್ವಾಗತ ಹೇಳಬಯಸುತ್ತೇನೆ.

ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳಲ್ಲಿ ಎರಡೇ clarification ಕೇಳುತ್ತೇನೆ. ಮಾನ್ಯ ಸಚಿವರು ಉತ್ತರ ಕೊಡುತ್ತಾ ದಿನಾಂಕ 1-12-2023ಕ್ಕೆ ಕೇಂದ್ರ ಸರ್ಕಾರ ಗೈಡ್‌ಲೈನ್ಸ್ ಬದಲಾಯಿಸಿ ಈ ಸೆಸ್ ಹಣವನ್ನು ಬೇರೆ ಯೋಜನೆಗಳಿಗೆ ಬಳಕೆ ಮಾಡಿಕೊಳ್ಳಬಹುದು ಎಂಬ ಮಾಹಿತಿಯನ್ನು ಹೇಳಿದರು. ಅದರಲ್ಲಿ ಶಾಲೆ ಎನ್ನುವುದು one of the provisions. ಈಗಿರುವಂತಹ ಹಣದಲ್ಲಿ ವಸತಿ ಶಾಲೆಗಳನ್ನು ಕಟ್ಟಿ ಎಂದು ಹೇಳಿಲ್ಲ they have given so much of provision, ಇದಕ್ಕೆ ಇಷ್ಟಿಷ್ಟಕ್ಕೆ ಬಳಸಿಕೊಳ್ಳಬಹುದು ಎಂದು ಹೇಳಿದ್ದಾರೆ. ನಾನು ತಮ್ಮಲ್ಲಿ ಕೇಳುವುದೇನೆಂದರೆ, ತಾವೇ ಅಧಿಕೃತವಾಗಿ on record ಹೇಳಿದ್ದೀರಿ, 56 ಲಕ್ಷ ಆಗಿತ್ತು, ಈಗ ಅದನ್ನು 30 ಲಕ್ಷಕ್ಕೆ ಇಳಿಸಿದ್ದೇವೆ. ಅಂದರೆ 26 ಲಕ್ಷ fraudulent ಆಗಿ ಹೆಸರನ್ನು ಮಾಡಿದ್ದರು ಎಂದು. ಮಾಡಿರುವಂತಹವರು ಈ ರಾಜ್ಯದ ಯಾರೋ ಬಡವರು ಎಂದು ಅಂದುಕೊಂಡರೆ ಅವರು ಕಟ್ಟಡ ಕಾರ್ಮಿಕರಲ್ಲದೇ ಇರಬಹುದು. ನಿಮ್ಮ ಸರ್ಕಾರ ಇದ್ದಾಗ ನೀವು 30,000, 40,000/- ಕೊಟ್ಟಿರುವುದರಿಂದ ಬಹಳಷ್ಟು ಜನರು 'ಕಟ್ಟಡ ಕಾರ್ಮಿಕರು' ಎಂದು ನೋಂದಣಿ ಮಾಡಿಕೊಂಡರು ಎಂದು ಹೇಳಿದರು. ನಮ್ಮ ಸರ್ಕಾರ ಇದ್ದಾಗ ಎರಡು ವರ್ಷಗಳ ಕಾಲ ಕೋವಿಡ್ ಇತ್ತು. ಕೋವಿಡ್‌ನಿಂದ ಜನಜೀವನ ನಡೆಸುವುದಕ್ಕೆ ಕಷ್ಟವಾದ ಕಾರಣಕ್ಕೋಸ್ಕರ ಜನರಿಗೆ ಯಾವುದಾದರೂ ರೀತಿಯಿಂದ ಹಣ ಸಿಗಬಹುದೆನ್ನುವ ಕಾರಣಕ್ಕೋಸ್ಕರ ಬಡತನದಲ್ಲಿ ಯಾರು ಬೇರೆ ಬೇರೆ ಕೆಲಸ ಮಾಡುತ್ತಿದ್ದಂತಹವರು ಸಹ ನೋಂದಣಿ ಮಾಡಿಕೊಂಡಿರಬಹುದು. ಆದರೆ ನಾನು ಕೇಳುತ್ತಿರುವುದೇನೆಂದರೆ ತಾವು ಅಧಿಕೃತವಾಗಿ on record ಇದರಲ್ಲಿ fraudulent ಇದೆ ಅದನ್ನು 30 ಲಕ್ಷಕ್ಕೆ ಇಳಿಸಿದ್ದೇವೆ ಎಂದು ಹೇಳುತ್ತಿದ್ದೀರಿ. 30 ಲಕ್ಷಕ್ಕೆ ಇಳಿಸಿರುವುದರಲ್ಲಿ ಕೂಡ ಅನೇಕರು ಕಟ್ಟಡ ಕಾರ್ಮಿಕರಲ್ಲ ಎನ್ನುವುದು ತಮಗೂ ಹಾಗೂ ತಮ್ಮ ಇಲಾಖಾಧಿಕಾರಿಗಳಿಗೂ ಗೊತ್ತಿದೆ. ಆದರೂ ಕೂಡ ನಾನು ಕೇಳುವುದೇನೆಂದರೆ, ಈ ರೀತಿ ತಮಗೆ ಗೊತ್ತಿದ್ದಾಗ ಏತಕ್ಕೆ revision or identification of construction workers ಎನ್ನುವಂತಹದ್ದನ್ನು ಮಾಡುವಂತಹ ಪ್ರಯತ್ನವನ್ನು ಇಲಾಖೆ ವತಿಯಿಂದ entire registry process ಅನ್ನು ಸರಿಯಾಗಿ verification ಮಾಡಿ ಸಂಬಂಧಪಟ್ಟಂತಹ ವ್ಯಕ್ತಿಗಳು ನಿಜವಾಗಿಯೂ ಕಟ್ಟಡ ಕಾರ್ಮಿಕರೋ ಅಲ್ಲವೋ ಎಂದು ಗುರುತಿಸುವ ಪ್ರಯತ್ನವನ್ನು ನೀವು ಇದುವರೆಗೂ ಮಾಡಿಸಿಲ್ಲ. ಕೇವಲ ಅವರಾಗಿಯೇ ಡಿಲೀಟ್ ಆಗಿರುವಂತಹದ್ದು ಇದೆ. ಇನ್ನೊಂದು ವಿಚಾರವನ್ನು ನಾನು ತಮ್ಮಲ್ಲಿ ಕೇಳುವುದೇನೆಂದರೆ, ತಾವು ಏಕಕಾಲದಲ್ಲಿಯೇ 31 ಜಿಲ್ಲೆಯಲ್ಲಿ ವಸತಿ ಶಾಲೆಗಳನ್ನು ಪ್ರಾರಂಭ ಮಾಡುತ್ತೇವೆಂದು ಹೇಳುತ್ತಿದ್ದೀರಿ. ನೀವು 31 ಜಿಲ್ಲೆಗಳಲ್ಲಿ ವಸತಿ ಶಾಲೆಗಳನ್ನು ಪ್ರಾರಂಭ ಮಾಡುವ ಬದಲು ವಿಭಾಗಕ್ಕೊಂದು ಶಾಲೆಯನ್ನು ಪ್ರಾಯೋಗಿಕವಾಗಿ ಮಾಡಿ. Skill training ಮಾಡಿ. ಉದಾಹರಣೆಗೆ bar benders, Karnataka Building and other Construction Workers welfare Board

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಡಿಯಲ್ಲಿಯೇ ಬರುತ್ತಾರೆ. ಎಷ್ಟೋ ಜನ bar benders ಗೆ ಟ್ರೇನಿಂಗ್ ಇಲ್ಲವೆಂದು ನಮ್ಮ ಕರ್ನಾಟಕದ bar bending ರನ್ನು ಕೆಲಸಕ್ಕೇ ತೆಗೆದುಕೊಳ್ಳುವುದಿಲ್ಲ. ಪುಟ್ಟಿಯಲ್ಲಿ ಮರಳು ಹೊರುವುದಕ್ಕೆ ನಮ್ಮ ಕನ್ನಡಿಗರನ್ನು ತೆಗೆದುಕೊಳ್ಳುತ್ತಾರೆ. ಪ್ರತಿ ದಿವಸಕ್ಕೆ 1,000 ರೂಪಾಯಿಗಳನ್ನು ಕೊಡುವಂತಹ trained ಕೆಲಸಕ್ಕೆ ಬಿಹಾರ, ಜಾರ್ಖಂಡ್, ಛತ್ತೀಸ್‌ಘಡದವರನ್ನು ತೆಗೆದುಕೊಳ್ಳುತ್ತಾರೆ. ನಮ್ಮ ಕರ್ನಾಟಕದ ಕಟ್ಟಡ ಕಾರ್ಮಿಕರಿಗೆ ಒಂದು ದಿವಸಕ್ಕೆ ರೂ. 350 ರಿಂದ 500/- ಕೊಡುತ್ತಾರೆ. ಹೊರರಾಜ್ಯದವರಿಗೆ ರೂ. 2,000/- ಕೊಡುತ್ತಾರೆ. ಏತಕ್ಕೆಂದರೆ ನಾವು ಅವರಿಗೆ ತರಬೇತಿ ಕೊಡುತ್ತಿಲ್ಲ. ನಾವು bar bending training, electrification training, plumbing training, shuttering training ಮಾಡಬೇಕು, ನಾವು ಕಟ್ಟಡ ನಿರ್ಮಾಣ ಕೆಲಸದಲ್ಲಿ 25 ತರಹ ಬೇರೆ ಬೇರೆ ಚಟುವಟಿಕೆಗಳಿದ್ದರೆ ಅದಕ್ಕೆ ತರಬೇತಿ ಕೊಡುವಂತಹ ಕೆಲಸವನ್ನು ಇಲಾಖೆ ಮಾಡಬೇಕು. ಇಷ್ಟೊಂದು ಹಣವಿದೆಯಲ್ಲಾ, ಬರೀ ಮಕ್ಕಳ ಬಗ್ಗೆ ಏತಕ್ಕೆ ಯೋಚನೆ ಮಾಡುತ್ತಿದ್ದೀರಿ? ಕಟ್ಟಡ ಕಾರ್ಮಿಕರ ಬಗ್ಗೆ ಏತಕ್ಕೆ ಯೋಚನೆ ಮಾಡುತ್ತಿಲ್ಲ? ನೀವು ಸಮಸ್ಯೆಯನ್ನು ಸರಿಪಡಿಸುವುದಕ್ಕಿಂತ ತಾವು ನಿರ್ಣಯ ಮಾಡಿರುವಂತಹದ್ದರಲ್ಲಿ ಏಕಕಾಲದಲ್ಲಿ 31 ಜಿಲ್ಲೆಗಳಲ್ಲಿ ಒಂದು ಶಾಲೆಗೆ 25 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಶಾಲೆಗಳನ್ನು ನಿರ್ಮಾಣ ಮಾಡುವಂತಹ ದೊಡ್ಡ ಕಾರ್ಯವನ್ನು ಮಾಡುತ್ತಿದ್ದೇವೆ ಎಂದು ನೀವು ಮಾಡುತ್ತಿಲ್ಲ. ಅವರ ಮಕ್ಕಳ ಬದುಕನ್ನು ಸರಿ ಮಾಡುವುದಕ್ಕೆ ಇನ್ನೂ ಹತ್ತು ವರ್ಷ ಬೇಕು.

(ಮುಂದು)

(692) 13.08.2025 5.30 ಹೆಚ್‌ವಿ.ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

ಶ್ರೀ ಕೆ.ಎಸ್.ನವೀನ್(ಮುಂದು):-

ಸನ್ಮಾನ್ಯ ಸಭಾಪತಿಯವರೇ, ನಾವು ಬಹಳ ದೊಡ್ಡ ಕಾರ್ಯ ಮಾಡುತ್ತಿದ್ದೇವೆಂದು ಸರ್ಕಾರ ಈ ಕೆಲಸವನ್ನು ಮಾಡುತ್ತಿದೆ. ಆದರೆ, ಆ ಮಕ್ಕಳ ಬದುಕನ್ನು ಸರಿಪಡಿಸುವುದಕ್ಕೆ ಸುಮಾರು 25 ವರ್ಷಗಳು ಬೇಕಾಗುತ್ತದೆ. ಇದರ ಬದಲಿಗೆ ಇವತ್ತಿನ ದಿನ ಕಷ್ಟಪಡುತ್ತಿರುವವರ ಬದುಕನ್ನು ಸರಿಪಡಿಸುವುದಕ್ಕೆ ಈ ಹಣವನ್ನು ವೆಚ್ಚ ಮಾಡಬೇಕೆನ್ನುವುದು ನನ್ನ ಒತ್ತಾಯವಾಗಿದೆ. ನಾನು ಯಾವತ್ತೂ ವಸತಿ ಶಾಲೆಯನ್ನು ತೆರೆಯಬೇಡಿ ಎಂದು ವಿರೋಧ ಮಾಡುತ್ತಿಲ್ಲ. ಆದರೆ, ಯೋಜನೆ ಮಾಡುತ್ತಿರುವುದರಲ್ಲಿಯೇ ತಪ್ಪಿದೆ. ಒಳಗಡೆ ಏನೇನು ಆಗುತ್ತಿದೆ ಎನ್ನುವುದು ಅವರ ಇಲಾಖೆಯವರಿಗೆ ಗೊತ್ತಿದೆ. ತಾವೂ ಸಹ ಅವರಿಗೆ "ಬಹಳ ಒಳ್ಳೆಯ ಕೆಲಸ ಮಾಡುತ್ತಿದ್ದೀರಿ" ಎಂದು ಸರ್ಟಿಫಿಕೇಟ್ ಕೊಟ್ಟಿದ್ದೀರಿ. ಮಾನ್ಯ ಸಚಿವರಿಗೆ ಕಾಳಜಿ ಇರಬಹುದು. ಆದರೆ, ಅವರ ಕಾಳಜಿಗೆ ತಕ್ಕಂತೆ ಅವರ ಇಲಾಖೆಯ ಅಧಿಕಾರಿಗಳು ಕೆಲಸ ಮಾಡಬೇಕಾಗುತ್ತದೆ. ಈ ಇಲಾಖೆಯಲ್ಲಿರುವಂತಹ ಹುಳುಕನ್ನು ಸರಿಪಡಿಸಿ, ಮಾನ್ಯ ಸಚಿವರ ಮುಂದಿಡಬೇಕಲ್ಲವೇ?

ಶ್ರೀ ಸಂತೋಷ್ ಎಸ್.ಲಾಡ್(ಕಾರ್ಮಿಕ ಸಚಿವರು):- ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ವಿಷಯದ ಬಗ್ಗೆ ಮಾತನಾಡಬೇಕಾಗಿದೆ. ಸುಮ್ಮನೆ ಏನೇನೋ ಕೊರೆದು ಕೊರೆದು ಮಾತನಾಡುವುದು ಬೇಡ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

ಶ್ರೀ ಕೆ.ಎಸ್.ನವೀನ್:– ಸನ್ಮಾನ್ಯ ಸಭಾಪತಿಯವರೇ, ನಾನು ತಪ್ಪೇನೂ ಮಾತನಾಡಿಲ್ಲ.

(ಗೊಂದಲ)

ಶ್ರೀ ಸಂತೋಷ್.ಎಸ್.ಲಾಡ್:– ಸನ್ಮಾನ್ಯ ಸಭಾಪತಿಯವರೇ, ಅವರು ಇಲಾಖೆಯ ಬಗ್ಗೆ ಮಾತನಾಡಲಿ. ಅದನ್ನು ಬಿಟ್ಟು ಸುಮ್ಮನೆ ಕೂಗಾಡುವುದು ಬೇಡ. Why is he shouting unnecessarily?

(ಗೊಂದಲ)

ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು):– ಸನ್ಮಾನ್ಯ ಸಭಾಪತಿಯವರೇ, ಎಲ್ಲರೂ ಒಟ್ಟಿಗೆ ಎದ್ದು ನಿಂತು ಮಾತನಾಡುತ್ತಾರೆ.

(ಗೊಂದಲ)

ಡಾ:ಎಂ.ಸಿ.ಸುಧಾಕರ್(ಉನ್ನತ ಶಿಕ್ಷಣ ಸಚಿವರು):– ಸನ್ಮಾನ್ಯ ಸಭಾಪತಿಯವರೇ, ಅವರು ನಾಲ್ಕು ವರ್ಷಗಳ ಕಾಲ ಏನು ಮಾಡುತ್ತಿದ್ದರು?

(ಗೊಂದಲ)

ಶ್ರೀ ಸಲೀಂ ಅಹಮದ್(ಸರ್ಕಾರದ ಮುಖ್ಯ ಸಚೇತಕರು):– ಸನ್ಮಾನ್ಯ ಸಭಾಪತಿಯವರೇ, ಒಳ್ಳೆಯ ಕೆಲಸ ಮಾಡಿದ್ದೀರಿ ಎಂದು ತಾವೇ ಅಭಿನಂದನೆಗಳನ್ನು ಸಲ್ಲಿಸಿದ್ದೀರಿ. ಒಳ್ಳೆಯ ಕೆಲಸ ಮಾಡಿದರೆ ಅದನ್ನು ಅವರು ಟೀಕೆ ಮಾಡುತ್ತಾರೆ.

(ಗೊಂದಲ)

ಶ್ರೀ ಎನ್.ರವಿಕುಮಾರ್(ವಿರೋಧ ಪಕ್ಷದ ಮುಖ್ಯ ಸಚೇತಕರು):– ಅವರು ಟೀಕೆ ಮಾಡುತ್ತಿಲ್ಲ. ವಿಷಯವನ್ನು ಬಿಟ್ಟು ಮಾತನಾಡುತ್ತಿಲ್ಲ. ಇಲಾಖೆಯ ಬಗ್ಗೆ ಮಾತನಾಡುತ್ತಿದ್ದಾರೆ.

(ಗೊಂದಲ)

ಸಭಾಪತಿಯವರು:– ಎಲ್ಲರೂ ಕುಳಿತುಕೊಳ್ಳಿ, ಶ್ರೀ ಎನ್.ರವಿಕುಮಾರ್‌ರವರೇ, ಕುಳಿತುಕೊಳ್ಳಿ

(ಗೊಂದಲ)

ಶ್ರೀ ಕೆ.ಎಸ್.ನವೀನ್:– ನಾನು ತಪ್ಪೇನು ಮಾತನಾಡಿಲ್ಲ. ವಸತಿ ಶಾಲೆಗಳ ಬಗ್ಗೆ ನನ್ನ ವಿರೋಧವಿಲ್ಲ. ನಾನು ಅವರಿಗೆ ಸಪೋರ್ಟ್ ಮಾಡುವುದಕ್ಕಾಗಿಯೇ ಮಾತನಾಡುತ್ತಿದ್ದೇನೆ.

(ಗೊಂದಲ)

ಶ್ರೀ ಎನ್.ಎಸ್.ಬೋಸರಾಜು:– ಸನ್ಮಾನ್ಯ ಸಭಾಪತಿಯವರೇ, ಈ ಸರ್ಕಾರ ಒಳ್ಳೆಯ ಕೆಲಸ ಮಾಡಿದರೆ, ಅವರಿಗೆ ಅಸೂಯೆ. ಅವರು ಮಾತನಾಡುವ ರೀತಿ ನೋಡಿದರೆ, ಒಳ್ಳೆಯ ಕೆಲಸಗಳನ್ನು ಈ ಸರ್ಕಾರ ಮಾಡಬಾರದು ಎನ್ನುವ ರೀತಿಯಲ್ಲಿದೆ. **(ಗೊಂದಲ)** ಯಾವ ವಿಷಯದ ಬಗ್ಗೆ ಮಾತನಾಡಬೇಕೆನ್ನುವುದು ಗೊತ್ತಿಲ್ಲ. ಒಳ್ಳೆಯ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೆಲಸವಾಗಬಾರದು, ಬಡವರ ಮಕ್ಕಳಿಗೆ ಅನುಕೂಲವಾಗಬಾರದು ಎನ್ನುವುದು ಭಾರತೀಯ ಜನತಾ ಪಕ್ಷದ ಉದ್ದೇಶವಾಗಿದೆ. **(ಗೊಂದಲ)** ಅದು ಇವರ ಮೈಂಡ್‌ಸೆಟ್. ಬಡವರಿಗೆ ಅನುಕೂಲ ಮಾಡಿಕೊಡಬೇಕೆನ್ನುವುದು ನಮ್ಮ ಸರ್ಕಾರದ ಉದ್ದೇಶವಾಗಿದೆ.

(ಗೊಂದಲ)

ಶ್ರೀ ಸಂತೋಷ್ ಎಸ್.ಲಾಡ್:– ಸನ್ಮಾನ್ಯ ಸಭಾಪತಿಯವರೇ, ಇಲಾಖೆಯಲ್ಲಿ ಏನಾದರೂ ತಪ್ಪುಗಳಾಗಿದ್ದರೆ ಅದರ ಬಗ್ಗೆ ಅವರು ಮಾತನಾಡಲಿ.

ಶ್ರೀ ಕೆ.ಎಸ್.ನವೀನ್:– ಸನ್ಮಾನ್ಯ ಸಭಾಪತಿಯವರೇ, ಅದನ್ನೇ ನಾವು ಹೇಳುತ್ತಿರುವುದು.

(ಗೊಂದಲ)

ಶ್ರೀ ಸುನೀಲ್ ವಲ್ಯಾಪುರೆ:– ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಕೆ.ಎಸ್.ನವೀನ್‌ರವರು ಮಾತನಾಡುತ್ತಿರುವುದರಲ್ಲಿ ತಪ್ಪೇನಿದೆ?

(ಗೊಂದಲ)

ಶ್ರೀ ಸಂತೋಷ್ ಎಸ್.ಲಾಡ್:– ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಕೆ.ಎಸ್.ನವೀನ್ ಅವರನ್ನು ಮಾತನಾಡುವುದು ಬೇಡವೆಂದು ನಾವು ಹೇಳುತ್ತಿಲ್ಲ. ಆದರೆ, ಅವರು lame allegation ಮಾಡುವ ಬದಲು ಅದನ್ನು ನಿಖರವಾಗಿ, ನೇರವಾಗಿ ಹೇಳಿದರೆ ಉತ್ತಮ ಎನ್ನುವುದು ನಮ್ಮ ಭಾವನೆಯಾಗಿದೆ.

(ಗೊಂದಲ)

ಶ್ರೀ ಸಲೀಂ ಅಹಮದ್:– ಸನ್ಮಾನ್ಯ ಸಭಾಪತಿಯವರೇ, ಬೆಳಗ್ಗೆ ತಾನೇ ತಾವು " ಮಾನ್ಯ ಸಚಿವರು ಒಳ್ಳೆಯ ಕೆಲಸ ಮಾಡುತ್ತಿದ್ದಾರೆ" ಎಂದು ಹೇಳಿದ್ದೀರಿ.

(ಗೊಂದಲ)

ಸಭಾಪತಿಯವರು:– ನಿಮಗೆಲ್ಲ ಹೇಳುವವರು ಕೇಳುವವರು ಯಾರೂ ಇಲ್ಲವೇ? ಎಲ್ಲರೂ ಎದ್ದು ನಿಂತು ಜಾತ್ರೆಯಲ್ಲಿ ಮಾತನಾಡಿದಂತೆ ಮಾತನಾಡುತ್ತೀರಿ. ಏನು ಬೇಕಾದರೂ ಮಾತನಾಡಬಹುದೇ? ಇದನ್ನು ಸದನವೆನ್ನುತ್ತಾರೆಯೇ? ಕೈ ಎತ್ತಿದವರಿಗೆ ನಾನು ಮಾತನಾಡಲು ಅವಕಾಶವನ್ನು ನೀಡುತ್ತೇನೆ. ಅದನ್ನು ಬಿಟ್ಟು ಎಲ್ಲರೂ ಎದ್ದು ನಿಂತು ಮಾತನಾಡಿದರೆ ಸದನ ನಡೆಸುವುದು ಹೇಗೆ? ಈ ರೀತಿ ಸದನ ನಡೆಸುವುದಕ್ಕೆ ಆಗುವುದಿಲ್ಲವೆಂದು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಯಾರು ಮಾತನಾಡಲು ಬಯಸುತ್ತಾರೆ, ಅವರು ಕೈ ಎತ್ತಬೇಕು. ಆಡಳಿತ ಪಕ್ಷ, ವಿರೋಧ ಪಕ್ಷದ ಸದಸ್ಯರೆಲ್ಲರೂ ಇದೇ ರೀತಿ ಮಾತನಾಡುತ್ತಿದ್ದೀರಿ. ಸದನದಲ್ಲಿ ಮಾತನಾಡುವುದಕ್ಕೆ ಬಯಸುವವರು ಕೈ ಎತ್ತಿದರೆ ಸಭಾಪತಿಯವರು ಅವಕಾಶವನ್ನು ನೀಡುತ್ತಾರೆ. ಇದು ಧರ್ಮಶಾಲೆಯೇ? ಎಲ್ಲರೂ ಒಂದೇ ರೀತಿ ವರ್ತಿಸುತ್ತಿದ್ದೀರಿ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ವಿರೋಧ ಪಕ್ಷದ ನಾಯಕರೇ, ಒಬ್ಬ ಸದಸ್ಯರು ಎದ್ದು ನಿಂತು ಮಾತನಾಡುವಾಗ, ಮತ್ತೊಬ್ಬರು ಎದ್ದು ನಿಲ್ಲಬಾರದೆಂದು ತಮ್ಮ ಸದಸ್ಯರುಗಳಿಗೆ ಹೇಳಿ. ಆ ರೀತಿ ಮಾತನಾಡಿದರೆ, ನಾನು ಬೇರೆ ರೀತಿಯೇ ಮಾತನಾಡಬೇಕಾಗುತ್ತದೆ.

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ(ವಿರೋಧ ಪಕ್ಷದ ನಾಯಕರು):- ಸನ್ಮಾನ್ಯ ಸಭಾಪತಿಯವರೇ, ಈ ವಿಚಾರದ ಬಗ್ಗೆ ಚರ್ಚೆ ಬಹಳ ಚೆನ್ನಾಗಿ ನಡೆದಿದೆ. ಕಾರ್ಮಿಕ ವರ್ಗವೆಂದರೆ, ಸಮಾಜದಲ್ಲಿ ಕನಿಷ್ಠ ಜನರು. ಅನಿಷ್ಟ ಪರಿಸ್ಥಿತಿಯಲ್ಲಿ ಅವರಿರುತ್ತಾರೆ. ಕನಿಷ್ಠ ದರ್ಜೆಯಲ್ಲಿರುವವರ ಮೇಲೆ ಈ ಸರ್ಕಾರಕ್ಕೆ ಪ್ರೀತಿ ವಿಶ್ವಾಸ ಬಂದಿದೆ, ಅದು ಬಹಳ ಸಂತೋಷದ ವಿಚಾರವಾಗಿದೆ. I appreciate it. ದಿವಂಗತ ಎಸ್.ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ, ಕೂಲಿ ಕಾರ್ಮಿಕರ ಮಕ್ಕಳು ಶಾಲೆಗಳಿಗೆ ಹೋಗುವುದಿಲ್ಲ. ಹೇಗಾದರು ಮಾಡಿ ಆ ಮಕ್ಕಳನ್ನು ಶಾಲೆಗೆ ಬರುವಂತೆ ಮಾಡಬೇಕೆಂದು ಕೂಲಿ ಕಾರ್ಮಿಕರು ತಮ್ಮ ಮಕ್ಕಳನ್ನು ಶಾಲೆಗೆ ಕರೆತಂದು ಬಿಟ್ಟು ಹೋದರೆ, ಅವರಿಗೆ ಒಂದು ದಿನಕ್ಕೆ ಒಂದು ರೂಪಾಯಿಯಂತೆ ಪ್ರೋತ್ಸಾಹ ಧನವನ್ನು ನೀಡಲಾಗುತ್ತಿತ್ತು. ಈ ವಿಚಾರ ಮಾನ್ಯ ಸದಸ್ಯರುಗಳಾದ ಶ್ರೀ ನಸೀರ್ ಅಹ್ಮದ್, ಶ್ರೀ ಎಂ.ಆರ್.ಸೀತಾರಾಂ ಮತ್ತು ಶ್ರೀ ಬಿ.ಕೆ.ಹರಿಪ್ರಸಾದ್ ಅವರಿಗೂ ತಿಳಿದಿದೆ. ಆ ಕಾಲದ ಪರಿಸ್ಥಿತಿ ಆ ರೀತಿ ಇತ್ತು. ಆಗ ಆ ಚಿಂತನೆಯನ್ನು ಮಾನ್ಯ ಎಸ್.ಬಂಗಾರಪ್ಪನವರು ಮಾಡಿದ್ದರು. ಈಗ ಮಾನ್ಯ ಸಂತೋಷ್ ಎಸ್.ಲಾಡ್‌ರವರು ಬೇರೊಂದು ರೀತಿಯಲ್ಲಿ ಕಾರ್ಮಿಕರ ಮಕ್ಕಳಿಗೆ ವಸತಿ ಶಾಲೆಗಳನ್ನು ಮಾಡಬೇಕೆನ್ನುವ ಚಿಂತನೆ ಮಾಡಿದ್ದಾರೆ. ಇದು ಸಂತೋಷದ ವಿಚಾರವಾಗಿದೆ. ನಮಗೆ ಅಸ್ಪೃಶ್ಯತೆಯಲ್ಲ ಬೆಂದು ಸಾಕಾಗಿ ಹೋಗಿದೆ. ಅಸ್ಪೃಶ್ಯತೆಯ ನೋವು ಎಂಥಹದು ಎನ್ನುವುದು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ; ಅನುಭವಿಸುವವರಿಗೆ ಮಾತ್ರ ಗೊತ್ತಾಗುತ್ತದೆ. ಈ ಮಾತನ್ನು ನಾನು ಬಹಳ ಸಾರಿ ಹೇಳಿದ್ದೇನೆ. ಉದಾಹರಣೆಗೆ ಹೇಳಬೇಕಾದರೆ, ಹೊಸದೊಂದು ಷೂ ತೆಗೆದುಕೊಂಡು ಬರುತ್ತೇವೆ. ಅದನ್ನು ಕಾಲಿಗೆ ಹಾಕಿಕೊಳ್ಳುತ್ತೇವೆ. ಬಹಳ ಜನರಿಗೆ ಹೊಸ ಷೂ ಕಚ್ಚುತ್ತದೆ. ಕಚ್ಚುವುದು ಎಂದರೆ, ಬೊಬ್ಬೆ ಬರುತ್ತದೆ. ಹೊಸ ಷೂ ಅದನ್ನು ಬಿಚ್ಚಿ ಬಿಸಾಡುವುದಕ್ಕೆ ಆಗುವುದಿಲ್ಲ. ಏಕೆಂದರೆ, ದುಡ್ಡು ಕೊಟ್ಟು ತಂದಿರುತ್ತೇವೆ. ಹೋಗಲಿ, ಆ ಷೂ ಅನ್ನೇ ಹಾಕಿಕೊಂಡು ಓಡಾಡೋಣ ಎಂದರೆ, ಅದು ಕಚ್ಚುತ್ತಲೇ ಇದೆ. ಅದರಿಂದ ನೋವಾಗುತ್ತಿರುತ್ತದೆ. ಆ ನೋವನ್ನು ಅನುಭವಿಸುವವರು ಯಾರು? ಯಾರೂ ಅಲ್ಲ ಆ ಷೂ ಅನ್ನು ಹಾಕಿಕೊಂಡಿರುವವರು ಮಾತ್ರ ಆ ನೋವನ್ನು ಅನುಭವಿಸಬೇಕು ಅಸ್ಪೃಶ್ಯತೆಯ ಬೇಗೆ ಈ ರೀತಿ ಇರುತ್ತದೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಕೂಲಿ ಕಾರ್ಮಿಕರ ಬಗ್ಗೆ ಮತ್ತು ಅವರ ಮಕ್ಕಳ ಬಗ್ಗೆ ಪ್ರೀತಿ ಮತ್ತು ವಿಶ್ವಾಸವಿದೆ. ಅವರಿಗೆ ಹೆಚ್ಚಿನ ವಿದ್ಯಾಭ್ಯಾಸವನ್ನು ಕೊಡಬೇಕಾಗಿದೆ ಎನ್ನುವುದು ಸಂತೋಷದ ವಿಚಾರವಾಗಿದೆ. ಕಟ್ಟಡ ಕಾರ್ಮಿಕರಿಗಾಗಿಯೇ ಒಂದು ವಸತಿ ಶಾಲೆಯನ್ನು ಕಟ್ಟಿದರೆ, ಅವರು ಬೇರೆ ಜನರೊಂದಿಗೆ ಬೆರೆಯುವುದಿಲ್ಲ. It will also become a colony. ಯಾರಾದರು ಇದು ಯಾರ ಶಾಲೆ ಎಂದು ಕೇಳಿದರೆ, "ಅದೇ ....ಅದು ಕಟ್ಟಡ ಕಾರ್ಮಿಕರ ಮಕ್ಕಳದು" ಎಂದು ಒಂದು ರೀತಿ ಕೇವಲವಾಗಿ ಮಾತನಾಡುತ್ತಾರೆ. ಇದೇ ಕಾರಣಕ್ಕಾಗಿ ಈಗ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಹಾಗೂ ಹಿಂದುಳಿದ ವರ್ಗದವರ ಹಾಸ್ಟೆಲ್ ಎನ್ನುವುದನ್ನು ತೆಗೆದು "ಜನರಲ್ ಹಾಸ್ಟೆಲ್" ಎಂದು ಬೋರ್ಡ್ ಹಾಕುತ್ತಿದ್ದಾರೆ. ಎಲ್ಲರೂ ಎಲ್ಲರ ಜೊತೆಗೆ ಬೆರೆಯಬೇಕು ಎನ್ನುವ ದೃಷ್ಟಿಯಿಂದ ಸರ್ಕಾರ ಬಡವ-ಶ್ರೀಮಂತ ಎನ್ನುವ ಬೇಧ ಭಾವವನ್ನು ಬಿಟ್ಟು ಎಲ್ಲರನ್ನು ಎಲ್ಲರೊಡನೆ ಬೆರೆಯಿಸುವಂತಹ ಕೆಲಸವನ್ನು ಮಾಡಬೇಕಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಈಗ ಮಾನ್ಯ ಕಾರ್ಮಿಕ ಸಚಿವರು ಹೊಸದಾಗಿ "ಕಟ್ಟಡ ಕಾರ್ಮಿಕ ಮಕ್ಕಳ ವಸತಿ ಶಾಲೆ" ಎಂದು ತೆರೆಯಲು ಹೊರಟಿದ್ದಾರೆ. ಇದಕ್ಕೆ ತಗಲುವ ವೆಚ್ಚದಲ್ಲಿ ಈ ಮಕ್ಕಳನ್ನು ಬೇರೆ ವಸತಿ ಶಾಲೆಗಳಿಗೆ ಸೇರಿಸುವಂತಹ ಕೆಲಸವನ್ನು ಮಾಡಬೇಕಾಗಿದೆ. ಅದೇ ಹಣವನ್ನು ಅವರಿಗೆ ಖರ್ಚು ಮಾಡಿದರೆ ನಾವು ಬೇಡವೆನ್ನುವುದಿಲ್ಲ. ಹೊಸದಾಗಿ ವಸತಿ ಶಾಲೆಯನ್ನು ನಿರ್ಮಾಣ ಮಾಡಿ ಅದಕ್ಕೆ ಮೂಲಸೌಲಭ್ಯಗಳನ್ನು ಒದಗಿಸಿಕೊಡುವುದಕ್ಕಾಗಿ 10 ವರ್ಷಗಳನ್ನು ತೆಗೆದುಕೊಳ್ಳುವುದರಿಂದ ಆ ವರ್ಗದ ಜನರಿಗೆ ಪ್ರಯೋಜನವೇನಾಗುತ್ತದೆ? ಪುನಃ ಅದು ಪ್ರತ್ಯೇಕವಾಗಿಯೇ ಉಳಿದುಕೊಳ್ಳುತ್ತದೆ.

ಸಭಾಪತಿಯವರು:- ಮಾನ್ಯ ವಿರೋಧ ಪಕ್ಷದ ನಾಯಕರೇ, ಇದಕ್ಕೆ ತಮ್ಮ ಸಲಹೆಯನ್ನು ನೀಡಿ.

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:- ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ದಯವಿಟ್ಟು "ಕಟ್ಟಡ ಕಾರ್ಮಿಕರ ಮಕ್ಕಳ ವಸತಿ ಶಾಲೆ" ಎಂದು ಪ್ರತ್ಯೇಕವಾಗಿ ತೆರೆಯುವುದು ಬೇಡವೆನ್ನುವುದು ನನ್ನ ಸಲಹೆಯಾಗಿದೆ.

ಶ್ರೀ ಎನ್.ರವಿಕುಮಾರ್(ವಿರೋಧ ಪಕ್ಷದ ಮುಖ್ಯ ಸಚೇತಕರು):- ಸನ್ಮಾನ್ಯ ಸಭಾಪತಿಯವರೇ, ಕಟ್ಟಡ ಕಾರ್ಮಿಕರ ಮಕ್ಕಳಿಗಾಗಿ ಮಾಡುತ್ತಿರುವ ವಸತಿ ಶಾಲೆಗಳಿಗೆ ನಾವು ವಿರುದ್ಧವಾಗಿದ್ದೇವೆ ಎನ್ನುವ ಸಂದೇಶ ಹೋಗಬಾರದು. ಕಟ್ಟಡ ಕಾರ್ಮಿಕರ ಮಕ್ಕಳಿಗೆ ಒಳ್ಳೆಯ ವಸತಿ ಶಾಲೆಗಳು ಮತ್ತು ಕಾಲೇಜುಗಳು ಬೇಕಾಗುತ್ತದೆ. ಒಳ್ಳೆಯ ಗುಣಮಟ್ಟದ ಹಾಸ್ಟೆಲ್‌ಗಳನ್ನು, ವಸತಿ ಶಾಲೆಗಳನ್ನು ಮಾಡಿದರೆ ನಾವು ಅದರ ಪರವಾಗಿರುತ್ತೇವೆ. ನನ್ನ ಕಳಕಳಿ ಏನೆಂದರೆ, ಕಾರ್ಮಿಕ ಇಲಾಖೆ ಗುಣಮಟ್ಟದ ಕಾರ್ಮಿಕರನ್ನು ತಯಾರು ಮಾಡುವುದನ್ನು ಬಿಟ್ಟು ಮಕ್ಕಳಿಗೆ ಶಿಕ್ಷಣವನ್ನು ಕೊಡುವಂತಹ ಕೆಲಸವನ್ನು ಮಾಡುತ್ತಿದೆ. ಇಲಾಖೆಯ ಗುರಿ ಮತ್ತು ಉದ್ದೇಶವನ್ನು ಶಿಫ್ಟ್ ಮಾಡಿಕೊಳ್ಳುತ್ತಿದ್ದಾರೆ.

ಸಭಾಪತಿಯವರು:- ಹಾಗಾದರೆ, ಮಕ್ಕಳನ್ನು ಶಾಲೆಗೆ ಕಳುಹಿಸುವಂತಹ ಕೆಲಸವನ್ನು ಯಾರು ಮಾಡುತ್ತಾರೆ?

ಶ್ರೀ ಎನ್.ರವಿಕುಮಾರ್:- ಸನ್ಮಾನ್ಯ ಸಭಾಪತಿಯವರೇ, ಆ ಕೆಲಸವನ್ನು ಮಾಡಲಿ. ಆದರೆ, ಕಾರ್ಮಿಕರನ್ನು ತರಬೇತಿಗೆ ಒಳಪಡಿಸುವಂತಹ ಕೆಲಸವನ್ನು ಯಾರು ಮಾಡುತ್ತಾರೆ?

(ಮುಂದುವರಿದಿದೆ)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(693) 13.8.2025 5.40 ಪಿಕೆ:ಬಿಎನ್ಎಸ್

ಶ್ರೀ ಎನ್.ರವಿಕುಮಾರ್(ಮುಂದು)

ಬಾರ್ ಬೆಂಡಿಂಗ್ ಮಾಡುವಂಥವರಿಗೆ ತರಬೇತಿ ಕೊಡುವ ಕೆಲಸ ಇರಬಹುದು, ಉತ್ತಮ ರೀತಿಯ ಕಟ್ಟಡ ಕಟ್ಟುವಂತಹ ಕೆಲಸ ಇರಬಹುದು. ಇಂತಹ ಕೆಲಸಗಳನ್ನು ನಿರ್ವಹಿಸುವ ಕಾರ್ಮಿಕರಿಗೆ ಉತ್ತಮ ರೀತಿಯಲ್ಲಿ ತರಬೇತಿ ಕೊಡುವ ಕೆಲಸ ಆಗಬೇಕು. Skilled labourers ಕರ್ನಾಟಕ ರಾಜ್ಯದಲ್ಲಿ ಎಷ್ಟು ಜನ ಇದ್ದಾರೆ? ಅವರ ಕೆಲಸದಲ್ಲಿ ಗುಣಮಟ್ಟವನ್ನು ಹೆಚ್ಚು ಮಾಡುವ ನಿಟ್ಟಿನಲ್ಲಿ ಕಾರ್ಮಿಕ ಇಲಾಖೆ ಯಾವ ಯೋಜನೆಗಳನ್ನು ಹಾಕಿಕೊಂಡಿದೆ? ಈ ಇಲಾಖೆಯಲ್ಲಿರುವ ಸಾವಿರಾರು ಕೋಟಿ ರೂಪಾಯಿಗಳ ಹಣವನ್ನು ಈ ರೀತಿ ಹೊಸ ಹೊಸ ಯೋಜನೆಗಳಿಗೆ ತೆಗೆದುಕೊಳ್ಳುವುದು ಅಥವಾ ಅವರಿಗೆ ಕಿಟ್ ಕೊಡುವಂಥದ್ದು ಮಾಡುವುದಕ್ಕಿಂತ ತರಬೇತಿ ಕೊಡುವ ಕೆಲಸ ಆಗಬೇಕು. ಕಟ್ಟಡಗಳನ್ನು ಕಟ್ಟುವಂಥವರಿಗೆ ಸೌಲಭ್ಯಗಳನ್ನು ಕೊಡಿ, ಕಾರ್ಮಿಕರ ಮಕ್ಕಳಿಗೆ ಎಜುಕೇಷನ್ ಕೊಡಿ.

ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಗಳೆ, ನಿಯಮ ೩೩೦ರ ಅಡಿ ಬಹಳ ಗಂಭೀರವಾದ ವಿಚಾರನ್ನು ಚರ್ಚೆಗೆ ತೆಗೆದುಕೊಳ್ಳಲಾಗಿದೆ. ಬಡವರ ಮಕ್ಕಳಿಗೆ ಅವಕಾಶ ಮಾಡಿಕೊಡುವಂಥದ್ದಕ್ಕೆ ಚರ್ಚೆ ನಡೆಯುತ್ತಿದೆ. ಈ ಚರ್ಚೆಯನ್ನು ಕೇಳಿದಾಗ ಗೊಂದಲಮಯವಾದ ಅಂಶಗಳು ಕಂಡುಬಂತು. ಬಡವರ ಮಕ್ಕಳಿಗೆ ಉಚಿತವಾಗಿ ಏಕೆ ಕೊಡಬೇಕು ಎಂದು ಕೇಳಿದರು.

ಶ್ರೀ ಕೆ.ಎಸ್.ನವೀನ್:- ಮಾನ್ಯ ಸಭಾಪತಿಗಳೆ, ಆ ತರಹ ಯಾರೂ ಕೂಡ ಹೇಳಿಲ್ಲ. ಹಾಗೆ ಹೇಳಿದ್ದರೆ ರೆಕಾರ್ಡ್ ತೆಗೆಸಿ ನೋಡಲಿ.

(ಗೊಂದಲ)

ಶ್ರೀ ಎಸ್.ಸಂತೋಷ್ ಲಾಡ್(ಕಾರ್ಮಿಕ ಸಚಿವರು):- ಮಾನ್ಯ ಸಭಾಪತಿಗಳೆ, ರೆಕಾರ್ಡ್ ತೆಗೆಸಿ ನೋಡಲಿ. "ಉಚಿತ" ಎನ್ನುವ ಪದವನ್ನು ಬಳಸಿದ್ದಾರೆ. ಉಚಿತವಾಗಿ ಕೊಟ್ಟರೆ ಮನೆ ಬಿಟ್ಟು ಹೋಗುತ್ತಾರೆ ಎಂದು ಹೇಳಿದಿರಿ. ಬೇಕಾದರೆ ಚೆಕ್ ಮಾಡಿ ನೋಡಿ.

(ಗೊಂದಲ)

ಶ್ರೀ ಬಿ.ಕೆ.ಹರಿಪ್ರಸಾದ್:- ಮಾನ್ಯ ಸಭಾಪತಿಗಳೆ, ಬೇರೆಯವರು ಮಾತನಾಡುತ್ತಿದ್ದಾಗ ನಾನು ಮಧ್ಯದಲ್ಲಿ ಎದ್ದು ನಿಂತು ಮಾತನಾಡಲಿಲ್ಲ. ಮಾನ್ಯ ಸದಸ್ಯರು ಆ ತರಹ ಮಾತನಾಡಲಿಲ್ಲ ಎಂದು ಹೇಳಿರುವುದು ನಿಜವಾದರೆ ನಾನು ರಾಜೀನಾಮೆ ಕೊಟ್ಟು ಹೋಗುತ್ತೇನೆ. "ಉಚಿತವಾಗಿ ಕೊಡಬಾರದು" ಎಂದು ಹೇಳಲಿಲ್ಲ ಎಂದಾದರೆ ನಾನು ರಾಜೀನಾಮೆ ಕೊಟ್ಟು ಹೋಗುತ್ತೇನೆ. ಮಾನ್ಯ ಪ್ರತಾಪ್‌ಸಿಂಹ ನಾಯಕ್‌ರವರೇ ನಾನು ನಿಮ್ಮ ಹೆಸರನ್ನು ತೆಗೆದುಕೊಂಡಿಲ್ಲ. ನಾನು ಇಲ್ಲಿ ಯಾವ ಸದಸ್ಯರ ಹೆಸರನ್ನು ಪ್ರಸ್ತಾಪ ಮಾಡಲಿಲ್ಲ. ನಾನು ಸದನದಲ್ಲಿ ಪ್ರಸ್ತುತ ಚರ್ಚೆ ಆಗುತ್ತಿರುವ ವಿಷಯದ ಬಗ್ಗೆ ಮಾತನಾಡುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

ಶ್ರೀ ಕೆ.ಎಸ್.ನವೀನ್:– ಮಾನ್ಯ ಸಭಾಪತಿಗಳೆ, ದಯವಿಟ್ಟು ಕಡತ ತೆಗೆಸಿ.

ಸಭಾಪತಿಯವರು:– ನಾನು ಕಡತ ತೆಗೆಸಿ ನೋಡುತ್ತೇನೆ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಬಿ.ಕೆ.ಹರಿಪ್ರಸಾದ್:– ಮಾನ್ಯ ಸಭಾಪತಿಗಳೆ, ನಾನು ಯಾವುದೇ ಸದಸ್ಯರ ಹೆಸರನ್ನು ತೆಗೆದುಕೊಳ್ಳುತ್ತಿಲ್ಲ. ಇಲ್ಲಾಗುತ್ತಿರುವ ಚರ್ಚೆಗೆ ಸಂಬಂಧಪಟ್ಟಂತೆ ಮಾತನಾಡುತ್ತಿದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಸದನದಿಂದ ಹೊರಗೆ ಹೋದರು. ಕಟ್ಟಡ ಕಾರ್ಮಿಕರು ಕನಿಷ್ಠ-ಅನಿಷ್ಟ ಎಂದು ಯಾರು ಹೇಳಿದರು? ಈ ದೇಶವನ್ನು ಕಟ್ಟಿರುವವರು ಈ ಕಟ್ಟಡ ಕಾರ್ಮಿಕರು. ಈ ವಿಧಾನಸೌಧವನ್ನು ಕಟ್ಟಿರುವವರೂ ಅವರೇ ಆಗಿದ್ದಾರೆ. ನಾವು ಅವರನ್ನು ಕಾಯಕ ಸಮಾಜದವರು ಎಂದು ಹೇಳುತ್ತೇವೆ. ಉತ್ಪಾದಕ ಸಮಾಜ ಎಂದು ಹೇಳುತ್ತೇವೆ. ಅವರು ಕನಿಷ್ಠ-ಅನಿಷ್ಟ ಎಂದು ಯಾರು ಹೇಳಿದರು? ೨೦% ಜನ ಬೆವರು-ರಕ್ತ ಸುರಿಸಿ ಖಜಾನೆ ತುಂಬಿಸುತ್ತಾರೆ. ಅವರನ್ನು ಕನಿಷ್ಠ-ಅನಿಷ್ಟ ಎಂದು ಹೇಳಿದರೆ ಹೇಗೆ? ಬಡವರಿಗೆ ಅವಕಾಶ ಮಾಡಿ ಕೊಡುವ ಸಂದರ್ಭದಲ್ಲಿ ಅವರಿಗೆ ಉಚಿತವಾಗಿ ಕೊಡಬಾರದು ಎಂದು ಹೇಳುವುದು ಸರಿಯಲ್ಲ.

(ಗೊಂದಲ)

ಶ್ರೀ ಎನ್. ರವಿಕುಮಾರ್ :– ಮಾನ್ಯ ಸದಸ್ಯರು ಹಾಗೆ ಹೇಳಲಿಲ್ಲ. Message should not go in a wrong way.

(ಗೊಂದಲ)

ಶ್ರೀ ಬಿ.ಕೆ.ಹರಿಪ್ರಸಾದ್:– ಹಾಗಾದರೆ ನೀವು ಒಂದು ಸವಾಲನ್ನು ಒಪ್ಪಿಕೊಳ್ಳಿ. ಸದನದಲ್ಲಿ ಆ ಪದ ಬಳಕೆಯಾಗಲಿಲ್ಲ ಎಂದಾದರೆ ಇವತ್ತೇ ನಾನು ರಾಜೀನಾಮೆ ಕೊಟ್ಟು ಹೋಗುತ್ತೇನೆ.

(ಗೊಂದಲ)

ಸಭಾಪತಿಯವರು:– ನಾನು ತೆಗೆಯುತ್ತೇನೆ.

(ಗೊಂದಲ)

ಶ್ರೀ ಬಿ.ಕೆ. ಹರಿಪ್ರಸಾದ್:– ಮಾನ್ಯ ಸಭಾಪತಿಗಳೆ, ಒಂದು ವೇಳೆ ಆ ಪದ ಇದ್ದರೆ ಅವರು ರಾಜೀನಾಮೆ ಕೊಡುತ್ತಾರೆಯೇ ಕೇಳಿ.

(ಗೊಂದಲ)

ಸಭಾಪತಿಯವರು:– ನಾನು ತೆಗೆಸುತ್ತೇನೆ.

(ಗೊಂದಲ)

ಶ್ರೀ ಕೆ.ಎಸ್.ನವೀನ್:– ಮಾನ್ಯ ಸಭಾಪತಿಗಳೆ, ಆ ಪದಗಳನ್ನು . . .(ಗೊಂದಲ) ಪೂರ್ತಿಯಾಗಿ ಓದಿ ಮಾನ್ಯ ಸದಸ್ಯರು ಮಾತನಾಡಬೇಕಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

ಸಭಾಪತಿಯವರು:– ದಯವಿಟ್ಟು ಕುಳಿತುಕೊಳ್ಳಿ. ಹಗಲೆಲ್ಲಾ ಏಕೆ ಮಧ್ಯದಲ್ಲಿ ಎದ್ದುನಿಂತು ಮಾತನಾಡುತ್ತೀರಿ?

ಶ್ರೀ ಬಿ.ಕೆ.ಹರಿಪ್ರಸಾದ್:– ಮಾನ್ಯ ಸಭಾಪತಿಗಳೆ, ಕಾರ್ಮಿಕರ ಬಗ್ಗೆ ಆಗುತ್ತಿರುವ ಚರ್ಚೆ ಎಲ್ಲೆಲ್ಲಿಗೆ ಹೋಗುತ್ತಿದೆ? ತಾವು ಸಭಾಪತಿ ಸ್ಥಾನದಲ್ಲಿ ಕುಳಿತುಕೊಂಡಿದ್ದೀರಿ. ಇದರ ಬಗ್ಗೆ ಗಂಭೀರವಾದ ಚರ್ಚೆ ಆಗಲಿ, ಬೇಡ ಎಂದು ಹೇಳುತ್ತಿಲ್ಲ. ಶಾಲೆಗಳಿಗೆ ಎಲ್ಲಾ ಮಕ್ಕಳನ್ನು ಸೇರಿಸಬೇಕೆಂದು "Right to Education" ಎಂದು ಮಾಡಿದೆವು. ಆದರೆ ನಾವು ಎಷ್ಟು ಜನ ಮಕ್ಕಳಿಗೆ ಅವಕಾಶ ಕೊಡುತ್ತೇವೆ? ಇರತಕ್ಕಂಥ ಸರ್ಕಾರಿ ಶಾಲೆಗಳನ್ನು ರಾಷ್ಟ್ರೀಕರಣ ಮಾಡಿದೆವು. ಬಡವರು ಎಲ್ಲಿ ಹೋಗುತ್ತಾರೆ? ಇವತ್ತೇನಾದರೂ ಸಾಕ್ಷರತೆಯ ಸಂಖ್ಯೆ ಜಾಸ್ತಿಯಾಗಿದೆ; ಶಾಲೆಗೆ ಸೇರುವ ಮಕ್ಕಳ ಸಂಖ್ಯೆ ಜಾಸ್ತಿಯಾಗಿದೆ ಎಂದರೆ ಅದಕ್ಕೆ ಕಾರಣ ಕೊಡುತ್ತಿರುವ ಬಿಸಿಯೂಟ ಎಂದು ಹೇಳಿದರೆ ತಪ್ಪಾಗಲಾರದು. ಊಟ ಇಲ್ಲದೇ ಇರುವವರಿಗೆ ಊಟ ಕೊಟ್ಟರೆ ಅವರು ಶಾಲೆಗೆ ಬಂದು ಸೇರುತ್ತಾರೆ, ಕಲಿಯುತ್ತಾರೆ. ಈ ವಿಚಾರಗಳು ಚರ್ಚೆ ಆಗಬೇಕೇ ವಿನಃ, ಬಡವರು ಕನಿಷ್ಠರು–ಅನಿಷ್ಟರು ಎಂದು ಹೇಳುವಂಥದ್ದು ನಡೆಯುವುದಿಲ್ಲ. ಈ ದೇಶವನ್ನು ಕಟ್ಟುವುದರಲ್ಲಿ ಅವರದು ಬಹಳ ದೊಡ್ಡ ಕೊಡುಗೆ ಇದೆ. ಮಾನ್ಯ ಸಚಿವರು ಕಾರ್ಮಿಕರ ಬಗ್ಗೆ ಕಾಳಜಿ ವಹಿಸುತ್ತಿದ್ದಾರೆ. ಹಿಂದೆ ಆಸ್ಕರ್ ಫರ್ನಾಂಡೀಸ್‌ರವರು ಕಾರ್ಮಿಕ ಮಂತ್ರಿಗಳಾಗಿದ್ದಾಗ, ಇಎಸ್‌ಐ ನಲ್ಲಿ ಕಾರ್ಡ್ ಮಾಡಿಸುವಂತಹ ಕೆಲಸಗಳು ನಡೆಯಿತು. ಈ ಮಕ್ಕಳಿಗೆ ಏನೇನು ಸೌಲಭ್ಯಗಳನ್ನು ಕೊಡಬೇಕೋ ಅವುಗಳನ್ನು ಉಚಿತವಾಗಿ ಕೊಡಬೇಕು ಅಥವಾ ಅದಕ್ಕಿಂತಲೂ ಹೆಚ್ಚಿನ ರೀತಿಯಲ್ಲಿ ಅನುಕೂಲ ಮಾಡಿಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಸಂತೋಷ್ ಲಾಡ್(ಕಾರ್ಮಿಕ ಸಚಿವರು):– ಮಾನ್ಯ ಸಭಾಪತಿಗಳೆ, ಬಹಳಷ್ಟು ಜನ ಈ ಕುರಿತು ಬೆಳಕನ್ನು ಚೆಲ್ಲಿದ್ದಾರೆ, ಮಾತನಾಡಿದ್ದಾರೆ. ಮಾನ್ಯ ನವೀನ್‌ರವರು ಮಾತನಾಡುವಾಗ, ಈ ದುಡ್ಡನ್ನು ಬೇರೆ ಇಲಾಖೆಗೆ ಕೊಡಬೇಕು ಎನ್ನುವ ಸಲಹೆ ಕೊಟ್ಟರು. ಈ ರೀತಿ ಬೇರೆ ಇಲಾಖೆಗೆ ಕೊಡಲು ಸಾಧ್ಯವಿಲ್ಲ ಎಂದು ಹೇಳಿದ ಮೇಲೆ ಅವರು, ಹಾಗಾದರೆ ಅವರಿಗೆ skilling ಹೇಗೆ ಮಾಡುತ್ತೀರಿ ಎಂದು ಕೇಳಿದರು. ಮಾನ್ಯ ಸಭಾಪತಿಗಳೆ, ನಾವು ಮುಂದೆ Centre of Excellence ಮಾಡುತ್ತಿದ್ದೇವೆ. ಒಂದು ಸಂದರ್ಭದಲ್ಲಿ skill development ಖಾತೆ ಕೂಡ ನನ್ನ ಬಳಿ ಇತ್ತು. ನಾವು ಬಹಳಷ್ಟು ಮಕ್ಕಳಿಗೆ skills ಕಲಿಸಿ ಕೊಡುತ್ತೇವೆ; ಪ್ರಮಾಣ ಪತ್ರಗಳನ್ನು ಕೊಡುತ್ತೇವೆ. ಈ ದೇಶದಲ್ಲಿ 40 ಕೋಟಿ ಜನರಿಗೆ ಆ ಪ್ರಮಾಣಪತ್ರಗಳನ್ನು ಕೊಟ್ಟಿದ್ದಾರೆ. ಆದರೆ ಆ ಪ್ರಮಾಣಪತ್ರದಿಂದ ಯಾರಿಗೂ ಕೆಲಸ ಸಿಗುವುದಿಲ್ಲ. Government of India recognized, State Government recognized Institutions ಇವೆ. ಬಹಳಷ್ಟು ಜನ ಅಂತಹ ಪ್ರಮಾಣ ಪತ್ರಗಳನ್ನು ಹೊಂದಿದ್ದಾರೆ. ಬಹುತೇಕ ಎಲ್ಲಾ ಮನೆಗಳಲ್ಲೂ ಅಂತಹ ಪ್ರಮಾಣ ಪತ್ರಗಳು ಸಿಗುತ್ತವೆ. ನಾನು ಮೊದಲನೆ ಸಲ ಕಾರ್ಮಿಕ ಸಚಿವನಾಗಿದ್ದಾಗ ಕೇಂದ್ರ ಸರ್ಕಾರದಲ್ಲಿ ರೂಢಿ ಸಾಹೇಬರು ಇದ್ದರು. ನಾನು ಅವರ ಹತ್ತಿರ ಹೋಗಿದ್ದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೇಂದ್ರ ಸರ್ಕಾರ, ಎಲ್ಲರಿಗೂ ಸರ್ಟಿಫಿಕೇಟ್ ಕೊಡಬೇಕೆಂದು ಟಾರ್ಗೆಟ್ ಇಟ್ಟುಕೊಂಡಿತ್ತು. ಈ Certified training ಎನ್ನುವುದು ಕಾಲಕಾಲಕ್ಕೆ ಬದಲಾವಣೆ ಆಗುತ್ತದೆ. ಸರ್ಟಿಫಿಕೇಟ್ ಯಾರು ಕೊಡಬೇಕು? ಸರ್ಕಾರಗಳು ಸರ್ಟಿಫಿಕೇಟನ್ನು ಕೊಡಬಾರದು. ನಾವು equip ಆಗಿರುವುದಿಲ್ಲ. ತರಬೇತಿ ಕೊಡುವಂಥದ್ದರ ಬಗ್ಗೆ ಇಂಡಸ್ಟ್ರಿಗಳಿಗೆ ಗೊತ್ತಿರುತ್ತದೆ. People in industries will have better know-how as to what sort of trading to be done. Trading ನಲ್ಲಿ training ನೀಡಲು ಹೇಗೆ ಸಿಲಬಸ್ ಸೆಟ್ ಮಾಡಬೇಕೆಂದು ಅವರಿಗೆ ಚೆನ್ನಾಗಿ ಗೊತ್ತಿರುತ್ತದೆ. ಅದಕ್ಕಾಗಿ ನಾವು ಮುಂದಿನ ದಿನಗಳಲ್ಲಿ two Centres of Excellence ಅನ್ನು ತರುತ್ತಿದ್ದೇವೆ. ಯಾರು ನಮ್ಮ construction labourers ಇದ್ದಾರೋ ಅವರಿಗೆ 28 trade ಗಳಲ್ಲಿ international level ನಲ್ಲಿ training ಕೊಡುವಂಥದ್ದನ್ನು ಮಾಡುತ್ತಿದ್ದೇವೆ. It took two years for us to come to that level. ಸುಮ್ಮನೆ, ಈ ರೀತಿ ಕಟ್ಟಡ ಕಟ್ಟಿ ಎಂದು ಹೇಳಿಬಿಟ್ಟರೆ ಅದು ತರಬೇತಿ ಆಗುವುದಿಲ್ಲ. ಯಾರು ತರಬೇತಿ ಕೊಡಬೇಕು? Who has to give training? Is it so easy to give training tomorrow? ಉದಾಹರಣೆಗೆ, automotive space. Automotive space ಇರುವಂತಹ ಎಲ್ಲಾ ಇಂಡಸ್ಟ್ರಿಯವರನ್ನು ಕರೆಸುತ್ತಿದ್ದೇವೆ. Construction ನಲ್ಲಿ CREDAI (Confederation of Real Estate Developers' Association of India) ನಲ್ಲಿ ಇರುವ ಎಲ್ಲಾ ಕೈಗಾರಿಕೆಗಳವರನ್ನು ಕರೆಸುತ್ತಿದ್ದೇವೆ. Electronics ನಲ್ಲಿ ಇರುವಂತಹ ಎಲ್ಲಾ ಕೈಗಾರಿಕೆಗಳವರನ್ನು ಕರೆಸುತ್ತಿದ್ದೇವೆ. ಒಂದು ನೋಡಲ್ ಕಂಪನಿಯವರನ್ನು ಕರೆಸುತ್ತಿದ್ದೇವೆ. ಇಷ್ಟೆಲ್ಲವನ್ನೂ ಮಾಡುವುದಕ್ಕೆ ನಮಗೆ 2 ವರ್ಷ ಬೇಕಾಯಿತು. ಪ್ಲ್ಯಾನ್ ಅಪ್ರೂವಲ್ ಆಗಿದೆ, ಇನ್ನು ಸ್ವಲ್ಪ ದಿವಸದಲ್ಲಿ ಮುಖ್ಯಮಂತ್ರಿಗಳಿಗೆ ಇದರ ಪ್ರೆಸೆಂಟೇಷನ್ ಕೊಡುವವರಿದ್ದೇವೆ. ಒಂದು ತಿಂಗಳಲ್ಲಿ ಪ್ರಾಥಮಿಕವಾಗಿ ಧಾರವಾಡ ಮತ್ತು ಮೈಸೂರು ಜಿಲ್ಲೆಗಳಲ್ಲಿ, 2 ಪ್ರಾರಂಭ ಮಾಡಬೇಕೆಂದು ನಮ್ಮ ಬೋರ್ಡ್ ವತಿಯಿಂದ ಯೋಜನೆ ಮಾಡಿದ್ದೇವೆ. ಮುಂದಿನ ದಿನಗಳಲ್ಲಿ ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗಳಿಗೆ ಉತ್ತರವಿದೆ. It is not that we are not planning. ನೀವು ಪ್ರಾರಂಭದಲ್ಲಿ, ಬೇರೆಯವರಿಗೆ ದುಡ್ಡು ವರ್ಗಾಯಿಸಿ ಎಂದು ಹೇಳಿದಿರಿ. ನಾವು ಬೇರೆಯವರಿಗೆ ದುಡ್ಡು ಕೊಟ್ಟರೆ ಇಂತಹ ಕಾರ್ಯಕ್ರಮಗಳು ಹೇಗಾಗುತ್ತವೆ? ಎಲ್ಲಾ ದುಡ್ಡು ಬೇರೆ ಕಡೆಗೆಯೇ ಹೋಗುತ್ತದೆ. ಮಾನ್ಯ ಸಭಾಪತಿಗಳೆ, ಈ ಎಲ್ಲವನ್ನೂ ನಾವು ಝೋನ್‌ವೈಸ್ ಮಾಡುತ್ತೇವೆ. There will be boarding facility. ಸುಮಾರು ಏಳು ಸಾವಿರ ಜನಕ್ಕೆ ಒಂದೇ ಸಲ ತರಬೇತಿ ಕೊಡುವಂತಹ ವ್ಯವಸ್ಥೆ ಮಾಡುವ ಪ್ರಯತ್ನ ಮಾಡುತ್ತಿದ್ದೇವೆ. Construction labourers ಗೆ ಏನು ಮಾಡುತ್ತಿದ್ದೀರಿ ಎಂದು ಕೇಳಿದ್ದಕ್ಕೆ ನಾನು ಈ ವಿಷಯವನ್ನು ಹೇಳಿದೆ. ಇನ್ನು ಶಿಕ್ಷಣದ ಬಗ್ಗೆ ಹೇಳುವುದಾದರೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ, how much money we have spent on education ಎನ್ನುವುದನ್ನು ನೀವು ನೋಡಿದ್ದೀರಿ. ನಾವು ಮಕ್ಕಳಗೋಸ್ಕರ ಹೆಚ್ಚು ದುಡ್ಡು ಕೊಡುತ್ತಿದ್ದೇವೆ. ಈ ಹಿಂದೆ, ಅಂದರೆ 2006 ರಿಂದ 2023 ಸಾಲಿನವರೆಗೆ 12 ಲಕ್ಷ ಮಕ್ಕಳಿಗೆ ಮಾತ್ರ educational assistance ಕೊಟ್ಟಿದ್ದೇವೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಳೆದ ಮೂರು ವರ್ಷದಲ್ಲಿ 14 ಲಕ್ಷ ಮಕ್ಕಳಿಗೆ educational assistance ಕೊಟ್ಟಿದ್ದೇವೆ. ಹಿಂದೆ pro rata basis ನಲ್ಲಿ ಒಂದು ಸಾವಿರ ಕೋಟಿ ಕೊಟ್ಟಿದ್ದರೆ, ನಾವು ಕಳೆದ ಮೂರು ವರ್ಷದಲ್ಲಿ ಒಂದು ಸಾವಿರ ಕೋಟಿ ಕೊಟ್ಟಿದ್ದೇವೆ. ಒಂದೇ ವರ್ಷಕ್ಕೆ ಅದು ಏಕೆ ಜಂಪ್ ಆಯಿತು ಎನ್ನುವುದರ ಬಗ್ಗೆ ಹೇಳಿದರು; ಅದಕ್ಕೆ valid reason ಇರಬಹುದು. ಕೋವಿಡ್ ಸಮಯದಲ್ಲಿ ಜಾಸ್ತಿ ಕೊಟ್ಟಿದ್ದೇವೆ ಎಂದು ಹೇಳಿದರು. That is O.K. Every Government has prerogative to give more or less money. They gave more money, I never criticized about it. Because they gave more money, disproportionately ಕೊಟ್ಟಿದ್ದರು ಎನ್ನುವ ಕಾರಣಕ್ಕೆ ಬಹಳ ಅರ್ಜಿಗಳು ಬಂತು. I did not ask as to why did they give more money. If somebody has taken a decision to increase the amount from Rs.10,000 to Rs.14,000, then I cannot question it. I can only express my views in front of you. I am not opposing it. ಜಾಸ್ತಿ ದುಡ್ಡು ಕೊಟ್ಟ ತಕ್ಷಣ ನಮಗೆ ಸುಮಾರು ಹದಿಮೂರೂವರೆ ಲಕ್ಷ ಅರ್ಜಿಗಳು ಬಂತು.

(ಮುಂದು)

(694) 13-8-2025 5.50 ಡಿಎಸ್-ಕೆಎಸ್ (ಸಭಾಪತಿಯವರ ಉಪಸ್ಥಿತಿ)

ಶ್ರೀ ಸಂತೋಷ್ ಎಸ್.ಲಾಡ್ (ಮುಂದು):-

ಅದರಲ್ಲಿ ಇವತ್ತು 10 ಲಕ್ಷ ಅಂದರೆ ನಾವು ಬಂದ ಮೇಲೆ ಮೂರು ವರ್ಷಗಳಲ್ಲಿ 14 ಲಕ್ಷ ಮಕ್ಕಳಿಗೆ ಹಣವನ್ನು ಕೊಟ್ಟಿದ್ದೇವೆ. ಹಾಗಾಗಿ ಇದರ ಬಗ್ಗೆ ಸಮರ್ಪಕವಾಗಿ ನಮಗೆ ಅವಕಾಶವಿದೆ. ಇದನ್ನು ಮಾಡತಕ್ಕಂಥ ಉದ್ದೇಶ ಯಾರು ನಮ್ಮ construction labourers ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಸಿಗಬೇಕು. ಬಹಳ ಜನ ಹೊರಗಿನವರು ಬಂದು ರಿಜಿಸ್ಟರ್ ಆಗುತ್ತಿದ್ದಾರೆ ಎಂದು ಅವರು ಹೇಳುತ್ತಿದ್ದಾರೆ. ಹೊರಗಿನವರು ಬಂದು ಯಾರು ರಿಜಿಸ್ಟರ್ ಆಗುವುದಿಲ್ಲ. ಹೊರಗಿನವರು ಬಂದು 15 ದಿವಸ ಕೆಲಸ ಮಾಡಿ ಹೋಗುತ್ತಾರೆ. ನಮ್ಮಲ್ಲಿರುವಂಥವರು 56 ಲಕ್ಷ ಜನರು ರಿಜಿಸ್ಟರ್ ಆಗಿದ್ದಾರೆ. ನಮ್ಮಲ್ಲಿರುವಂಥವರು ಕೇವಲ 500 ಜನರು ಮಾತ್ರ. ನೀವು ಹೋಗುವುದಿಲ್ಲ ಎಂದು ಮಾನ್ಯ ನವೀನ್‌ರವರು ಹೇಳಿದರು. Practically, ನಾನು ಹೋಗುವುದಕ್ಕೆ ಆಗುವುದಿಲ್ಲ. It is really impossible. The Hon'ble member should understand it and get into my shoes. Sometimes, if the hon'ble members have got the information or not and if they have any wrong opinions about me, they can definitely call me as a friend. I will

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

be open to speaking to them as well. ಹೇಗಿದೆ ಎಂದರೆ, ಇಲಾಖೆ ಭ್ರಷ್ಟಾಚಾರದಲ್ಲಿದೆ, ಇಲಾಖೆ ತಪ್ಪು ಮಾಡುತ್ತಿದೆ ಎಂದು ಮಾಹಿತಿ ಬಂದರೆ, they can call me and give me suggestions. We are all friends. ನಾವು ಯಾವ ವ್ಯವಸ್ಥೆಯಲ್ಲಿದ್ದೇವೆ ಎಂದರೆ,... The hon'ble members can guide me as well. I am very open to take any suggestions from you all. I beg to differ on certain things, but it does not mean we are in rivalry. ನಾವೇನು ಒಬ್ಬರಿಗೊಬ್ಬರು ವೈಷಮ್ಯ ಬೆಳಸಿಕೊಳ್ಳುವಂಥದ್ದೇನು ಇಲ್ಲ. I am very open to any suggestions or anything they can call upon me to say. ನಿಮ್ಮ ಇಲಾಖೆಯಲ್ಲಿ ಈ ರೀತಿ ನಡೆಯುತ್ತಿದೆ ಎಂದು ಅವರು ಯಾವಾಗಲಾದರೂ ಹೇಳಿದರೆ ಅದನ್ನು ನಾನು ಗೌರವಿಸುತ್ತೇನೆ. I am not going to oppose it. ಅವರು ಜನರಲ್ ಆಗಿ ಹೇಳುವಂತಹ ಸಂದರ್ಭ ಬಿಟ್ಟರೆ, I am not going to question them, whether they should speak such things or not. ನೀವು ಏನಾದರೂ ಹೇಳಿ, we welcome it. Because in a democracy everyone has got a right to speak.

ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ಗುಣಮಟ್ಟದ ಶಿಕ್ಷಣ ಕೊಡುತ್ತೇವೆಂದು ಮಾನ್ಯ ಸಚಿವರು ಹೇಳಿದ್ದಾರೆ.

ಸಭಾಪತಿಯವರು:– ಮಾನ್ಯ ಸಚಿವರು ಮಾತನಾಡುತ್ತಿದ್ದಾರೆ.

ಶ್ರೀ ಎಸ್.ಎಲ್. ಭೋಜೇಗೌಡ:– ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರ ಅನುಮತಿಯನ್ನು ತೆಗೆದುಕೊಂಡಿದ್ದೇನೆ. ಈಗ ಅವರು ಯೀಲ್ಡ್ ಆಗಿದ್ದಾರೆ, ನಾನು ಮಾತನಾಡುತ್ತೇನೆ. ಮಾನ್ಯ ಸಚಿವರು ನನಗೆ ಅನುಮತಿಯನ್ನು ಕೊಟ್ಟಿದ್ದಾರೆ. ಗುಣಮಟ್ಟದ ಶಿಕ್ಷಣದ ಬಗ್ಗೆ ನಾವು ಮಾತನಾಡುತ್ತಿದ್ದೇವೆ.

ಶ್ರೀ ಸಂತೋಷ್ ಎಸ್.ಲಾಡ್:– ಗುಣಮಟ್ಟದ ಶಿಕ್ಷಣದ ಬಗ್ಗೆ ನಾನು ಮಾತನಾಡಲಿಲ್ಲ. ಒಳ್ಳೆಯ ಗುಣಮಟ್ಟದ ಟ್ರೈನಿಂಗ್ ಬಗ್ಗೆ ಹೇಳಿದ್ದೇನೆ.

ಶ್ರೀ ಎಸ್.ಎಲ್. ಭೋಜೇಗೌಡ:– ಅದರ ಬಗ್ಗೆ ಮಾತನಾಡಿ ಬೇರೆ divert ಮಾಡಿದ್ದೀರಿ.

ಮಾನ್ಯ ಸಭಾಪತಿಯವರೇ, where does the quality of education lie? The State Government is fighting for the SEP (State Education Policy) while the Central Government is fighting for the NEP (National Education Policy). Merely because of naming SEP and NEP, we cannot get the quality of education. What exactly is there inside the textbooks and the infrastructure provided is more important.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಂದು ನಮ್ಮ ಶ್ರೀ ನಾರಾಯಣ ಗುರುಗಳು ಅಕ್ಷರವೇ ಕಲಿಯಲಿಲ್ಲ, ವಿದ್ಯೆಯನ್ನು ಕಲಿಯಲಿಲ್ಲ. ಶ್ರೀ ಡಿ.ವಿ. ಗುಂಡಪ್ಪನವರ ಔಪಚಾರಿಕ ವಿದ್ಯಾಭ್ಯಾಸ ಪ್ರೌಢಶಾಲೆಯವರೆಗೆ ಮಾತ್ರ ಆಗಿತ್ತು. ಅವರಿಗೆ ಮುಂದೆ ಓದುವುದಕ್ಕಾಗಲಿಲ್ಲ, ಬಡತನ ಕಿತ್ತು ತಿನ್ನುತ್ತಿತ್ತು. ಅವರು ಕೊಟ್ಟಿರುವಂತಹ ಗುಣಮಟ್ಟದ ಶಿಕ್ಷಣವನ್ನು ಪಠ್ಯ ಪುಸ್ತಕದಲ್ಲಿ ಇವತ್ತು ಮಾಸ್ಟರ್ ಡಿಗ್ರಿಯಲ್ಲಿ ನಮ್ಮ ಮಕ್ಕಳು ಕಲಿಯುತ್ತಿದ್ದಾರೆ. "ದಿವಸದಿಂ ದಿವಸಕ್ಕೆ, ನಿಮಿಷದಿಂ ನಿಮಿಷಕ್ಕೆ, ಭವಿಷಿಯವ ಚಿಂತಿಸದೆ ಬದುಕ ನೂಕುತಿರು...", ಎಂತಹ ಸುಂದರ ಪದಗಳು.

"ದಿವಸದಿಂ ದಿವಸಕ್ಕೆ, ನಿಮಿಷದಿಂ ನಿಮಿಷಕ್ಕೆ
ಭವಿಷಿಯವ ಚಿಂತಿಸದೆ ಬದುಕ ನೂಕುತಿರು
ವಿವರಗಳ ಜೋಡಿಸುವ ಯಜಮಾನ ಬೇರಿಹನು
ಸವೆಸು ನೀಂ ಜನುಮವನು-ಮಂಕುತಿಮ್ಮ"

"ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು,
ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ.
ಬೆಲ್ಲ-ಸಕ್ಕರೆಯಾಗು ದೀನದುರ್ಬಲರಿಂಗೆ.
ಎಲ್ಲರೊಳಗೊಂದಾಗು ಮಂಕುತಿಮ್ಮ."

ಹಾಗಾಗಿ ಒಳ್ಳೆಯ ಗುಣಮಟ್ಟದ ಶಿಕ್ಷಣ ಎಲ್ಲಿದೆ?

ಶ್ರೀ ಬಿ.ಕೆ.ಹರಿಪ್ರಸಾದ್:- ಕೇಂದ್ರ ಸರ್ಕಾರದ skill development ಕಾರ್ಯಕ್ರಮಗಳಿವೆ. ಅದರಲ್ಲಿ ಶಿಕ್ಷಣ ಅಲ್ಲ, ತರಬೇತಿ ಕೊಡುವಂಥದ್ದು skill development.

ಶ್ರೀ ಎಸ್.ಎಲ್. ಭೋಜೇಗೌಡ:- ಮಾನ್ಯ ಸಭಾಪತಿಯವರೇ, ಈಗ ಶಾಲೆ ಪ್ರಾರಂಭ ಮಾಡುತ್ತಿದ್ದಾರಲ್ಲಾ ಅಲ್ಲಿ ಮೂಲಭೂತ ಸೌಕರ್ಯಗಳನ್ನು ಕೊಡದಿದ್ದರೆ ಒಳ್ಳೆಯ ಗುಣಮಟ್ಟದ ಶಿಕ್ಷಣ ಬರುವುದಿಲ್ಲ. ಪೂರ್ಣ ಪ್ರಮಾಣದಲ್ಲಿ ಶಿಕ್ಷಕರು ಇರಬೇಕು, ಉತ್ತಮವಾದ ಕಟ್ಟಡ ಇರಬೇಕು, ಶೌಚಾಲಯ ಇರಬೇಕು, ಕುಡಿಯುವ ನೀರಿನ ವ್ಯವಸ್ಥೆ ಇರಬೇಕು. ಇವೆಲ್ಲಾ ಇದ್ದಾಗ ಮುದ್ದಣ್ಣ ಮನೋರಮೆ ಸಲ್ಲಾಪ, ಗಂಡ-ಹೆಂಡತಿ ಹೇಗಿರಬೇಕು; ೬೦ ವರ್ಷಗಳ ಹಿಂದೆ ನಾವು ಪ್ರೈಮರಿ ಶಾಲೆಯಲ್ಲಿ ಕಲಿತಿದ್ದೇವೆ. ಇವತ್ತು ಅದೇ ರೀತಿ ಪಿ.ಯು.ಸಿ. ಪಠ್ಯ ಪುಸ್ತಕದಲ್ಲಿ ಇಟ್ಟಿದ್ದಾರೆ. *"ನೀರಿಳಯದ ಗಂಟಲೊಳ್ ಕಡುಬಂ ತುರುಕಿದಂತಾಯ್ತು"* ವೈಶಂಪಾಯನ ಸರೋವರದಲ್ಲಿ ದುರ್ಯೋಧನ ಮುಳುಗಿದಂತಹ ಸಂದರ್ಭದಲ್ಲಿ ಭೀಮ ಬಂದು ಮೇಲಿನಿಂದ ಕೂಗುತ್ತಾನೆ, *"ನೀರೊಳಗಿರ್ದಂ ಬೆಮರ್ತನುರಗಪತಾಕಂ"*. ಇದು ಎಂತಹ ಸುಂದರವಾದ ಕನ್ನಡ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಭಾಪತಿಯವರು:– ಮಾನ್ಯ ಭೋಜೇಗೌಡರವರೇ, ಸಾಕು. ನಮ್ಮ ಕಡೆ ಪಾರಿಜಾತ ನಾಟಕವನ್ನು ಮಾಡುತ್ತಾರೆ.

ಶ್ರೀ ಎಸ್.ಎಲ್.ಭೋಜೇಗೌಡ:– ಮಾನ್ಯ ಸಭಾಪತಿಯವರೇ, ನಾನು ಮೊದಲೇ ಹೇಳಿದ್ದೇನೆ, ವಾಲ್ಮೀಕಿ ರಾಮಾಯಣವನ್ನು 5ನೇ ತರಗತಿಯಲ್ಲಿ ನಮಗೆ ಪಠ್ಯ ಪುಸ್ತಕದಲ್ಲಿ ಇಟ್ಟಿದ್ದರು. ಇವತ್ತು ಅದೇ ವಿಷಯವನ್ನು ಡಿಗ್ರಿಯಲ್ಲಿ ಇಟ್ಟಿದ್ದಾರೆ. ಮಾನ್ಯ ಸಚಿವರು ಗುಣಮಟ್ಟದ ಶಿಕ್ಷಣದ ಬಗ್ಗೆ ಮಾತನಾಡುತ್ತಿದ್ದಾರೆ.

"ಎಲ್ಲಿ ಮುನಿಪೋತ್ತಮರ ಪಾವನದ ವನದೆಡೆಗ
ಳೆಲ್ಲಿ ಸಿದ್ಧಾಶ್ರಮಂಗಳ ಮಂಗಳಸ್ಥಳಗ
ಳೆಲ್ಲಿ ಸುಹವಿಗಳ ಕಂಪೂಗೆದ ಪೊಗೆದಳೆದಗ್ನಿಹೋತ್ರದ ಕುಣೀರಂಗಳು
ಎಲ್ಲಿ ಪರಿಚಿತವಾದ ವೇದಶಾಸ್ತ್ರ ಧ್ವನಿಗ
ಳಲ್ಲಿಗೊಯ್ಯದೆ ದಾರುದಾರುಣದ ಕಟ್ಟಡವಿ
ಗಿಲ್ಲಿಗೇಕೈತಂದೆ ತಂದೆ ಸೌಮಿತ್ರಿ ಹೇಳೆಂದು ಜಾನಕಿ ಸುಯ್ದಳು "

"ದೇವಿ ನಿನಗಿನ್ನೆಗಂ ಪೇಳ್ದುದಿಲ್ಲಪವಾದ
ಮಾವರಿಸೆ ನಿನ್ನನೊಲ್ಲದೆ ರಘುಕುಲೋದ್ಭವಂ
ಸೀವರಿಸಿ ಬಿಟ್ಟು ಕಾಂತಾರಕ್ಕೆ ಕಳುಹಿ ಬಾಯೆಂದೆನಗೆ ನೇಮಿಸಿದೊಡೆ
ಆ ವಿಭುವಿನಾಜ್ಞೆಯಂ ಮೀರಲರಿಯದೆ ಮೆಲ್ಲ
ನೀ ವಿಪಿನಕೊಡಗೊಂಡು ಬಂದೆನಿನ್ನೊಯ್ಯೊಯ್ಯ
ನಾವಲ್ಲಿಗಾದೊಡಂ ಪೋಗೆಂದು ಲಕ್ಷ್ಮಣಂ ಬಾಷ್ಪಲೋಚನನಾದನು"

"ಬಿರುಗಾಳಿ ಪೊಡೆಯಲ್ಕೆ ಕಂಪಿಸಿ ಫಲಿತ ಕದಳಿ
ಮುರಿದಿಳೆಗೊರಗುವಂತೆ ಲಕ್ಷ್ಮಣನ ಮಾತು ಕಿವಿ
ದೆರೆಗೆ ಬೀಳದ ಮುನ್ನ ಹಮ್ಮೈಸಿ ಬಿದ್ದಳಂಗನೆ ಧರೆಗೆ ನಡುನಡುಗುತೆ
ಮರೆದಳಂಗೋಪಾಂಗಮಂ ಬಳಿಕ ಸೌಮಿತ್ರಿ
ಮರುಗಿ ತಣ್ಣೀರ್ದಳೆದು ಪತ್ರದೊಳ್ ಕೊಡೆವಿಡಿದು
ಸೆರಗಿಂದೆ ಬೀಸಿ ರಾಮನ ಸೇವೆ ಸಂದುದೇ ತನಗೆಂದು ರೋದಿಸಿದನು"

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾವು, ನೀವು ಇದನ್ನು 5ನೇ ತರಗತಿಯಲ್ಲಿ ಓದಿದ್ದೇವೆ. ಈ ನಾಡಿನಲ್ಲಿ ಸಾವಿರಾರು ಶಿಕ್ಷಣ ತಜ್ಞರಿದ್ದಾರೆ. ಅವರಿಂದ ಪಠ್ಯ ಪುಸ್ತಕವನ್ನು ಸಿದ್ಧಪಡಿಸಿ ಕೊಡಿ. ಸಚಿವರಿಗೆ ಏನು ಕೆಲಸ ಇದೆ; ಎಂಎಲ್ಎ ಗೆ ಏನು ಕೆಲಸ ಇದೆ? ಉತ್ತಮವಾದ ಕಟ್ಟಡ, ಶೌಚಾಲಯ, ಕುಡಿಯುವ ನೀರು, ಪೂರ್ಣ ಪ್ರಮಾಣದಲ್ಲಿ ಶಿಕ್ಷಕರುಗಳನ್ನು ಕೊಡಿ. ಅದನ್ನು SEP ಅಂತಾದರೂ ಸಹ ಕರೆಯಿರಿ ಅಥವಾ NEP ಅಂತಾದರೂ ಕರೆಯಿರಿ, ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆ. ಈ ಕಾರ್ಮಿಕರ ಮಕ್ಕಳು ಓದಬೇಕು. ಕಾರ್ಮಿಕರ ಮಕ್ಕಳು ಕಾರ್ಮಿಕರಾಗಿಯೇ ಉಳಿಯಬಾರದು. ಬಟ್ಟೆ ತೊಳೆಯುವ ಮಕ್ಕಳು ಬಟ್ಟೆ ತೊಳೆದುಕೊಂಡೇ ಉಳಿಯಬಾರದು, ಪಾತ್ರೆ ತೊಳೆಯುವವರು ಪಾತ್ರೆ ತೊಳೆಯುವವರಾಗಿ ಉಳಿದುಕೊಳ್ಳಬಾರದು. ಅವರು ಕೂಡ ಐ.ಎ.ಎಸ್. ಆಫೀಸರ್ ಆಗಬೇಕೆನ್ನುವ ವಿಚಾರವಾಗಿ ಮಾತನಾಡಿ.

ಸಭಾಪತಿಯವರು:– ಮಾನ್ಯ ಸಚಿವರೇ, ತಾವು ಉತ್ತರ ಹೇಳಿ.

ಶ್ರೀ ಸಂತೋಷ್ ಎಸ್. ಲಾಡ್:– ಮಾನ್ಯ ಸಭಾಪತಿಯವರೇ, ಈಗ ಸದನಕ್ಕೆ ಸಂಪೂರ್ಣವಾದ ಮಾಹಿತಿಯನ್ನು ಕೊಟ್ಟಿದ್ದೇನೆ. ಮಾಡತಕ್ಕಂಥ ಉದ್ದೇಶಕ್ಕೆ ಸ್ಪಷ್ಟೀಕರಣವನ್ನು ಕೊಟ್ಟಿದ್ದೇನೆ. ಮಾನ್ಯ ಸದಸ್ಯರುಗಳ ಸಲಹೆ ಸಮಂಜಸವಾಗಿದೆ. ಮುಂದೆ construction laborers ಗೆ full-fledged training ಕೊಡಿ ಎಂದು ಹೇಳುತ್ತಿದ್ದಾರೆ, ಖಂಡಿತವಾಗಿಯೂ ಮಾಡುತ್ತೇನೆ.

ಸಭಾಪತಿಯವರು:– ಮಾನ್ಯ ಸದಸ್ಯರುಗಳ ಸಲಹೆಗಳನ್ನು ತೆಗೆದುಕೊಂಡು ಮಾಡಿ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

11. ಪ್ರಕಟಣೆ

ದಿನಾಂಕ: 13.08.2025 ರಂದು ನಡೆದ ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆಯಲ್ಲಿ ಈ ಕೆಳಕಂಡಂತೆ ತೀರ್ಮಾನಿಸಲಾಗಿದೆ.

ತಾತ್ಕಾಲಿಕ ಕಾರ್ಯಕ್ರಮದ ಪಟ್ಟಿಯ ರೀತ್ಯಾ ದಿನಾಂಕ: 22.08.2025 ರವರೆಗೆ ಪ್ರತಿ ದಿನ ಬೆಳಗ್ಗೆ 10.00 ಗಂಟೆಯಿಂದ ರಾತ್ರಿ 8.00 ಗಂಟೆಯವರೆಗೆ ಕಾರ್ಯಕಲಾಪಗಳನ್ನು ನಡೆಸುವುದು.

ವಿಧಾನಸಭೆಯಿಂದ ಸ್ವೀಕರಿಸಲಾಗುವ ವಿಧೇಯಕಗಳನ್ನು ಮಂಡಿಸಿ, ಪರ್ಯಾಲೋಚಿಸಿ ಅಂಗೀಕರಿಸುವುದು.

ಹೆಣ್ಣು ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಿರುವುದು, ಪೋಸ್ಕೋ (POSCO) ಕಾಯ್ದೆಯಡಿ ಪ್ರಕರಣಗಳು ಹೆಚ್ಚಿನ ಸಂಖ್ಯೆಯಲ್ಲಿ ದಾಖಲಾಗುತ್ತಿರುವುದರಿಂದ ಮಕ್ಕಳ ಭವಿಷ್ಯದ ಮೇಲೆ ಉಂಟಾಗುತ್ತಿರುವ ದುಷ್ಪರಿಣಾಮಗಳನ್ನು ತಪ್ಪಿಸಲು ಶಾಲೆಗಳಲ್ಲಿ ಹೆಣ್ಣು ಮಕ್ಕಳಿಗೆ ಸೂಕ್ತ ಅರಿವು ಮೂಡಿಸುವ ಶಿಕ್ಷಣ ನೀಡುವ ವ್ಯವಸ್ಥೆ ಜಾರಿಗೆ ತರುವ ಕುರಿತು ಬುಧವಾರ ದಿನಾಂಕ: 20.08.2025 ರಂದು ಮಧ್ಯಾಹ್ನ ಚರ್ಚೆಗೆ ಅವಕಾಶ ಕಲ್ಪಿಸಲಾಗಿದೆ.

ಕಾರ್ಯಕಲಾಪಗಳ ಸಲಹಾ ಸಮಿತಿಯ ಈ ವರದಿಗೆ ಸದನವು ಅನುಮೋದಿಸುವುದೆಂದು ಭಾವಿಸುತ್ತೇನೆ.

ಸಭಾಪತಿಯವರು:– ಮಾನ್ಯ ಪ್ರತಾಪ ಸಿಂಹ ನಾಯಕ್‌ರವರೇ, ತಾವು ಮಾತನಾಡಿ.

ಶ್ರೀ ಪ್ರತಾಪ ಸಿಂಹ ನಾಯಕ್ ಕೆ.:– ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರು ಸದನದಲ್ಲಿ ಇಲ್ಲ.

ಶ್ರೀ ಎಸ್.ಎಲ್.ಭೋಜೇಗೌಡ:– ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಲ್ಲ ಎನ್ನುವ ಕಾರಣಕ್ಕಾಗಿ ಈ ವಿಷಯ ನಿನ್ನೆಯಿಂದ ಮುಂದೂಡಿರುವಂಥದ್ದು. ಈಗಲೂ ಕೂಡ ಸಂಬಂಧಪಟ್ಟ ಸಚಿವರಿಲ್ಲ. ಅವರು ಇಲ್ಲದಿದ್ದರೆ ಸಮಂಜಸವಾದ ಉತ್ತರವೂ ಸಿಗುವುದಿಲ್ಲ. ಅದಕ್ಕೆ ಪರಿಹಾರವೂ ಸಿಗುವುದಿಲ್ಲ. ಮಾನ್ಯ ಪ್ರತಾಪ ಸಿಂಹರವರು ಮಾತನಾಡಿದರೂ, ನಾನು ಮಾತನಾಡಿದರೂ ಅದು ಅರಣ್ಯರೋಧನವಾಗುತ್ತದೆ. ನಿನ್ನೆಯಿಂದಲೂ ಸಂಬಂಧಪಟ್ಟ ಸಚಿವರು ಬಂದಿಲ್ಲ.

ಸಭಾಪತಿಯವರು:– ಈಗ ಸದನವನ್ನು ನಾಳೆ ಬೆಳಗ್ಗೆ 10.00 ಗಂಟೆಯವರೆಗೆ ಮುಂದೂಡಲಾಗಿದೆ.

(ಸದನವು ಸಂಜೆ 5 ಗಂಟೆ 58 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ಗುರುವಾರ, ದಿನಾಂಕ 14ನೇ ಆಗಸ್ಟ್ ಮಾಹೆ 2025 ರಂದು ಬೆಳಗ್ಗೆ 10.00 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು)